UNIVERSAL LIBRARY
OU_198605
UNIVERSAL LIBRARY

ತಿರುಮಲೆಯಾರ್ಯ ಮಹಾಕವಿ ಪ್ರಣೀತಂ

ಚಿಕದೇವರಾಯ ವಂಶಾವಳಿ

ಎಂಬ ಗದ್ಯಕಾವ್ಯಂ

ಪರಿಷ್ಕೃತ ತೃತೀಯ ಮುದ್ರಣಂ

ಕರ್ಣಾಟಕ ಕಾವ್ಯಮಂಜರಿಯ ಮತ್ತು ಕಾವ್ಯಕಲಾನಿಧಿಯ
ಪ್ರವರ್ತಕರೂ ಪ್ರೊಪ್ರೈಟರೂ ಆದ

ಮ॥ ಅ॥ ರಾಮಾನುಜಯ್ಯಂಗಾರ್ಯರಿಂದ

ಕವಿಚರಿತ್ರೆ, ಗ್ರಂಥವಿಷಯ, ಮುಂತಾದುವುಗಳೊಡನೆ

ಮೈಸೂರು
ಜಿ.ಟಿ.ಎ. ಪ್ರೆಸ್ಸಿನಲ್ಲಿ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿದೆ.
೧೯೩೩.

ಬೆಲೆ ೨—೦—೦

COPY RIGHT

First Edition in the Kavyamanjari Series in 1895
Second Edition separately in 1919
Third Edition Revised in 1933

Registered According to Act XXV of 1867

BY

THE PUBLISHER, M. AJI NARASIMHACHAR, B A.,
Kathwadipur Agrahar, MYSORE.

ಉಪೋದ್ಘಾತ

ಈ ಗದ್ಯಕಾವ್ಯವು ನಮ್ಮ ಮೈಸೂರು ಶ್ರೀಮನ್ ಮಹಾರಾಜರವರ ಹಿರಿಯರ ಚರಿತ್ರವನ್ನು ಬಲುಮಟ್ಟಿಗೆ ತಿಳಿಸುತ್ತದೆ. ಇದನ್ನು ಚಿಕದೇವರಾಜ ಒಡೆಯರ ಮುಖ್ಯಮಂತ್ರಿಗಳಾದ ತಿರುಮಲೈಯಂಗಾರ್ಯ ಎಂಬ ನಾಮಾಂಕಿತವುಳ್ಳ ತಿರುಮಲೆಯಾರ್ಯನು ಸುಮಾರು ಕ್ರಿ. ಶ. ೧೬೭೦ರಲ್ಲಿ ಬರೆದಂತೆ ತೋರುತ್ತದೆ. ಇದರಲ್ಲಿ ಕಾವ್ಯಪರಿಪಾಟಿಯ ವರ್ಣನೆಯ ಭಾಗಗಳನ್ನು ಬಿಟ್ಟರೆ, ಉಳಿದ ಭಾಗಗಳೆಲ್ಲವೂ ನಿಜವಾದ ಚರಿತ್ರ ವೃತ್ತಾಂತಗಳೇ ಆಗಿವೆ. ಇದರಲ್ಲಿ ಹೇಳಿರುವ ಚರಿತ್ರಾಂಶಗಳಿಗೂ ಈಗ ಪ್ರಕಟಿತವಾಗಿ ಪ್ರಸಿದ್ಧವಾಗಿರುವ* ಹಲವು ಮೈಸೂರು ದೊರೆಗಳ ಚರಿತ್ರಗಳಲ್ಲಿ ಹೇಳಿರುವ ಚರಿತ್ರಾಂಶಗಳಿಗೂ ಈ ಗ್ರಂಥದಲ್ಲಿ ಹೇಳಿರುವುವುಗಳಿಗೂ ವ್ಯತ್ಯಾಸವಿವೆ. ಮುಖ್ಯವಾಗಿ ರಾಜಒಡೆಯರಿಗೆ ಶ್ರೀರಂಗಪಟ್ಟಣವು ಸೇರಿದ ವಿಚಾರ, ಮಹಾರಾಜರ ವಂಶವೃಕ್ಷ, ಪಟ್ಟದ ಕ್ರಮ, ಮೂಲಪುರುಷರ ವಿಷಯ— ಇವುಗಳಲ್ಲಿ ಭೇದಗಳಿವೆ. ಪ್ರಸಿದ್ಧವಾದ ಚರಿತ್ರೆಗಳಲ್ಲಿ ಹೇಳಿರುವುದಕ್ಕೆ ಅನುಸಾರವಾಗಿರುವುದನ್ನು ನಂಬಿ, ವಿರುದ್ಧವಾಗಿರುವುದನ್ನು ತಪ್ಪೆಂದು ಊಹಿಸುವುದು ಸಹಜವಾಗಿದೆ. ಶಾಸನಗಳ ಮತ್ತು ಇತರ ಆಧಾರಗಳ

---

* 1. ವಿಲ್‌ಕ್ಸ್ ಹಿಸ್ಟರಿ ಆಫ್ ಮೈಸೂರು ; 2. ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಆಸ್ಥಾನ ವಿದ್ವಾಂಸರಿಂದ ಬರೆಯಲ್ಪಟ್ಟು ಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಮುದ್ರಿತವಾದ ವಂಶರತ್ನಾಕರ ; 3. ಮೈಸೂರು ಗೆಸ್ಸಿಟಿಯರ್ ; 4. ಸನ್ 1893ರಲ್ಲಿ ಮುದ್ರಿತವಾದ ಎಂ. ಏ. ಶ್ಯಾಮರಾಯರ ಹಿಸ್ಟರಿ ಇತ್ಯಾದಿ.

ಬಲದಿಂದ ಚೆನ್ನಾಗಿ ವಿಮರ್ಶೆಮಾಡಿ ನೋಡಿದರೆ, ಈ ಗ್ರಂಥದಲ್ಲಿ ಹೇಳಿರುವುದೇ ನಂಬಿಕೆಗೆ ಅರ್ಹವಾದುದೆಂದೂ, ಸಮಂಜಸವೆಂದೂ ಸ್ಥಿರಪಡಿಸಬಹುದು. ಅಂಥ ವಿಮರ್ಶೆಗಳಿಗೆ ಈ ಮುದ್ರಣದಲ್ಲಿ ಅವಕಾಶಕೊಡಲು ಸಾಧ್ಯವಿಲ್ಲವಾದುದರಿಂದ, ಅದನ್ನು ವಿಮರ್ಶಾಕಾರರಿಗೆ ಬಿಟ್ಟಿರುತ್ತೇನೆ.

ಈ ಕಾವ್ಯದ ಮಹತ್ವವನ್ನು ವಿಸ್ತರಿಸಿ ಹೇಳಬೇಕಾಗಿಲ್ಲ. ಸಕೃತ್ಪರಿಚಯದಿಂದಲೇ ಗೊತ್ತಾಗುತ್ತದೆ. ಕವಿತಾಶಕ್ತಿಯ ಮಹತ್ವಕ್ಕೆ ನಿದರ್ಶಕವಾದ ವರ್ಣನಾವೈಖರಿಗಳನ್ನು ಗ್ರಂಥಸ್ಥವಿಷಯಾನುಕ್ರಮಣಿಕೆಯಿಂದ ತಿಳಿಯಬಹುದು. ಮತಸಂಬಂಧಪಟ್ಟ ಗೂಢವಾದ ವಿಷಯಗಳನ್ನು ಸುಲಭವಾಗಿ ಅವಗಾಹನೆಗೆ ತರುವ ದೃಷ್ಟಿಯಿಂದ ಅವುಗಳನ್ನು ಉಚಿತಸ್ಥಾನಗಳಲ್ಲಿ ವರ್ಣನೆಯ ಮೂಲಕ ತಂದು ವ್ಯಕ್ತಗೊಳಿಸಿರುವುದು ಗ್ರಂಥದ ವಿಷಯಕ್ಕೂ, ಸಾಹಿತ್ಯ ಸೌಂದರ್ಯಕ್ಕೂ, ಕವಿಯ ಮಹತ್ವಕ್ಕೂ ಸಾಕಾದ ದೃಷ್ಟಾಂತವಾಗಿದೆ. ನೋಡಿದುದರಲ್ಲಿ ಈ ಕವಿಯಷ್ಟು ಸಂಸ್ಕೃತನೂ ಶಕ್ತನೂ ಬಹುಶಃ ಯಾರೂ ಇಲ್ಲವೆಂದು ನನ್ನ ಅಭಿಪ್ರಾಯ. ಈ ಕವಿಯ ಕಾಲದಲ್ಲಿದ್ದ ಕವಿಗಳಲ್ಲೂ ಈತನೇ ಅಗ್ರಗಣ್ಯನು.

ಈ ಮುದ್ರಣದಲ್ಲಿ ನಾನು ಅಲ್ಲಲ್ಲಿ ವಿಷಯವಿವರಣಗಳನ್ನು ಹೊಸದಾಗಿ ಬರೆದು ಸೇರಿಸಿದ್ದೇನೆ. ಅವು ಮೂಲಮಾತೃಕೆಗಳಲ್ಲಿಲ್ಲ.

15—6—33 ಮಂ. ಆ. ರಾಮಾನುಜಯ್ಯಂಗಾರ್.

ಕವಿಚರಿತ್ರೆ

ಈ ಗ್ರಂಥಕರ್ತನ ಹೆಸರು ತಿರುಮಲಾರ್ಯನು ಅಥವಾ ತಿರುಮಲೆಯಾರ್ಯನು. ಈತನಿಗೆ ತಿರುಮಲೈಯ್ಯಂಗಾರ್ಯನೆಂದೂ ಹೆಸರುಂಟು. ಈತನ ತಂದೆ ಮೈಸೂರು ಮಹಾರಾಜ ದೊಡ್ಡದೇವರಾಜನಿಗೆ ಸ್ನೇಹಿತನಾಗಿಯೂ, ಪೌರಾಣಿಕನಾಗಿಯೂ ಇದ್ದ ಅಳಹಿಯ ಸಿಂಗರಾರ್ಯನು.[1] ಈತನ ತಾಯಿ ಮೈಸೂರು ಮಹಾರಾಜ ಕಂಠೀರವನರಸರಾಜನ ಪ್ರಧಾನಿಯಾದ ಗೋವಿಂದರಾಜಯ್ಯನೆಂದು ನಾಮಾಂತರವುಳ್ಳ ಅಪ್ಪಾಜಯ್ಯನ ಮಗಳು ಸಿಂಗಮ್ಮನು.[2] ಈ ಕವಿಯು ಕ್ರಿ. ಶ. ೧೬೪೫ಕ್ಕೆ ಸರಿಯಾದ ಪಾರ್ಥಿವಸಂವತ್ಸರದ ಆಶ್ವಯುಜದಲ್ಲಿ ಶ್ರೀರಂಗಪಟ್ಟಣದಲ್ಲಿ ಜನಿಸಿದನು.[3] ಈತನು ಚಿಕದೇವಮಹಾರಾಜನೊಡನೆ ಬಳೆದು, ಆತನಿಗೆ ಮಿತ್ರನಾಗಿ ವಿದ್ಯಾಭ್ಯಾಸವನ್ನು ಮಾಡಿದನೆಂದು ತಿಳಿದುಬರುತ್ತದೆ.[4]

ಮೈಸೂರು ಮಹಾರಾಜನಾದ ದೊಡ್ಡದೇವರಾಜನು ಈತನಿಗೂ, ಈತನ ತಂದೆಯಾದ ಅಳಹಿಯ ಸಿಂಗರಾರ್ಯನಿಗೂ ಶಿಂಗಮಾರನಹಳ್ಳಿ ಮೊದಲಾದ ಗ್ರಾಮಗಳನ್ನು ಸರ್ವಮಾನ್ಯನಾಗಿ ಕೊಟ್ಟಂತೆ ತಿಳಿಯುಬರುತ್ತದೆ.[5] ಈ ಕವಿಯು ಮೈಸೂರು ರಾಜ್ಯದ ಮಂತ್ರಿತ್ವವನ್ನು ವಹಿಸುವುದಕ್ಕೆ ಮುಂಚೆ "ಅಶೇಷತಂತ್ರಸ್ವತಂತ್ರನೆನಿಸಿ" ಆಸ್ಥಾನಪಂಡಿತನಾಗಿದ್ದು, ಸಂಸ್ಕೃತ ಕರ್ಣಾಟಕ ಭಾಷೆಗಳಲ್ಲಿ ಅನೇಕ ಕಾವ್ಯಗಳನ್ನು

---

[1] ಚಿಕದೇವರಾಜವಿಜಯ—ಆಶ್ವಾಸ ೩—೭೧, ೧೨೨; ೪—೧೯, ೧೭೦.

[2] ನರಪತಿವಿಜಯ; ಚಿಕದೇವರಾಯ ವಂಶಾವಳಿ—ಪು. ೧೬೩.

[3] ಚಿಕದೇವರಾಯ ವಂಶಾವಳಿ—ಪು. ೧೩೧—೨.

[4] ಚಿಕದೇವರಾಜವಿಜಯಂ—ಆ. ೪—೮೭, ೯೧, ೯೩.

[5] ಶ್ರೀರಂಗಪಟ್ಟಣ—೯೪ನೆಯ ಶಾಸನ; ಮೈಸೂರು ಶಾಸನ—೭.

ರಚಿಸಿದ್ದಾನೆ.[6] ಆ ಗ್ರಂಥಗಳ ವಿವರವು ಮುಂದೆ ತಿಳಿಸಲ್ಪಡುವುದು.

ಚಿಕ್ಕದೇವಮಹಾರಾಜನು ಕ್ರಿ. ಶ. ೧೬೭೨ರಲ್ಲಿ ಪಟ್ಟಾಭಿಷಿಕ್ತನಾಗಿ ಶ್ರೀರಂಗಪಟ್ಟಣದಲ್ಲಿ ರಾಜ್ಯಭಾರವನ್ನು ಮಾಡುತ್ತಿರುವಲ್ಲಿ—ಅವನ ಮಂತ್ರಿಯಾದ ಎಳವಂದೂರು ವಿಶಾಲಾಕ್ಷಪಂಡಿತನನ್ನು ಕ್ರಿ. ಶ. ೧೬೮೪ರಲ್ಲಿ ಲಿಂಗವಂತರು ಕೊಂದುಹಾಕಿದರು. ಆಗ ದೊರೆಯು ಪ್ರಧಾನಿಯಾದ ಅಪ್ಪಾಜಯ್ಯನನ್ನು ಕರೆಯಿಸಿ, ಸಂಸ್ಥಾನದ ಮಂತ್ರಿತ್ವವನ್ನು ವಹಿಸ ಹೇಳಿದನು. ಅದಕ್ಕೆ ಅವನು—ರಾಜನೀತಿವಿಶಾರದನಾಗಿಯೂ ಆಸ್ಥಾನ ಪಂಡಿತನಾಗಿಯೂ ಇರುವ ತನ್ನ ದೌಹಿತ್ರನಾದ ತಿರುಮಲೈಯಂಗಾರ್ಯನು ಆ ಮಂತ್ರಿತ್ವಕ್ಕೆ ಸಮರ್ಥನೆಂದು ಅರಿಕೆ ಮಾಡಲು—ಈತನಿಗೆ ಮಂತ್ರಿತ್ವವನ್ನು ಕೊಟ್ಟಂತೆ ತಿಳಿಯಬರುತ್ತದೆ.[7] ಆಗ ಈತನಿಗೆ ೩೯ ವಯಸ್ಸು. ಈತನು ಕೆಲವು ಕಾಲ ಮಂತ್ರಿಪದವಿಯನ್ನಲಂಕರಿಸಿದ್ದು ಬಳಿಕ ಕ್ರಿ. ಶ. ೧೬೯೫ರಲ್ಲಿ ಮಹಾರಾಜನ ಅಪ್ಪಣೆಯನ್ನು ತೆಗೆದುಕೊಂಡು ಶ್ರೀರಂಗಾದಿ ಸ್ಥಲಕ್ಕೆ ಯಾತ್ರೆಹೋದಂತೆಯೂ, ಆ ಕಾಲದಲ್ಲಿ ಮಧುರೆಯ ನಾಯಕನ ಹೆಂಡತಿ ಮಂಗಮ್ಮನೆಂಬವಳು ಈತನಿಗೆ ಗ್ರಾಮಾದಿಗಳನ್ನು ಕೊಟ್ಟು ತನ್ನಲ್ಲೇ ಇರುವಂತೆ ಕೇಳಿಕೊಂಡುದರಿಂದ ಸ್ವಲ್ಪ ಕಾಲ ಅಲ್ಲೇ ನಿಂತಂತೆಯೂ,[8] ಈ ಸಮಾಚಾರವನ್ನು ತಿಳಿದು ಅಲ್ಲಿನ ಮಂತ್ರಿತ್ವವನ್ನು ವಹಿಸುವನೆಂಬ ಶಂಕೆಯಿಂದ ಚಿಕ್ಕದೇವಮಹಾರಾಜನು ಒಂದು ನಿರೂಪವನ್ನು ಬರೆದು ಕರೆಯಕಳುಹಿಸಲು ; ತಿರುಮಲೈಯಂಗಾರ್ಯನು ಪುನಃ

---

[6] ತಿರುಮಕೂಡ್ಲು ತಾಲ್ಲೋಕು ೨೩ನೆಯ ಶಾಸನವನ್ನು ಶಾ. ಶ. ೧೫೮೬ ರಲ್ಲಿ (ಕ್ರಿ. ಶ. ೧೬೬೪) ತಿರುಮಲೈಯಂಗಾರ್ಯನು ಬರೆದಿರುತ್ತಾನೆ. ಮತ್ತು ಮಿತ್ರವಿಂದಾಗೋವಿಂದ ಪು. ೪, ೫. ಅಪ್ರತಿಮವೀರಚರಿತಂ—ಪು.೩, ಪದ್ಯ—೧೧,.೧೨ಗಳನ್ನು ನೋಡಿ.

[7] ನರಪತಿವಿಜಯಂ.

[8] ಮಧುರೆ ಮಂಗಮ್ಮನ ಭೂದಾನಶಾಸನ—ಶ. ಕ. ೧೬೧೭.

ಶ್ರೀರಂಗಪಟ್ಟಣಕ್ಕೆ ಕ್ರಿ. ಶ. ೧೬೯೮ ರಲ್ಲಿ ಬಂದು ಮಂತ್ರಿತ್ವವನ್ನು ವಹಿಸಿದಂತೆಯೂ[9] ತಿಳಿಯಬರುತ್ತದೆ.

ಚಿಕ್ಕದೇವಮಹಾರಾಜನು ತನ್ನ ಅವಸಾನಕಾಲದಲ್ಲಿ ಎಂದರೆ ಕ್ರಿ.ಶ. ೧೭೦೪ನೆಯ ತಾರಣಸಂವತ್ಸರದಲ್ಲಿ ಮಂತ್ರಿ ತಿರುಮಲೈಯ್ಯಂಗಾರ್ಯನನ್ನೂ, ಪ್ರಧಾನಿ ಅಪ್ಪಾಜೈಯನನ್ನೂ ಬರಿಸಿ ತನ್ನ ಮಗನನ್ನೂ ರಾಜ್ಯವನ್ನೂ ನೋಡಿಕೊಳ್ಳುವಂತೆ ಹೇಳಿ, ಅವರಿಗೆ ರಾಜ್ಯದ ಸರ್ವಾಧಿಕಾರವನ್ನು ಕೊಟ್ಟಂತೆಯೂ, ಬಳಿಕ ಮಂತ್ರಿ ಪ್ರಧಾನಿಗಳು ಕಂಠೀರವ ನರಸರಾಜ ಒಡೆಯನಿಗೆ ಪಟ್ಟವನ್ನು ಕಟ್ಟಿ ತಾವೇ ರಾಜ್ಯದ ಆಡಳಿತವನ್ನು ನೋಡುತ್ತಿದ್ದಂತೆಯೂ[10] ತಿಳಿಯಬರುತ್ತದೆ.

ಕ್ರಿ. ಶ. ೧೭೦೬ ರಲ್ಲಿ ತಿರುಮಲೈಯ್ಯಂಗಾರ್ಯನು ಮೃತನಾದನೆಂದು ಗೊತ್ತಾಗುತ್ತದೆ. ಈತನ ಮಂತ್ರಿತ್ವದ ಶಕ್ತಿಯನ್ನು ಚಿಕ್ಕದೇವಮಹಾರಾಜನ ರಾಜ್ಯಸ್ಥಿತಿಯೇ ತಿಳಿಸುತ್ತದೆ. ಈತನ ರಾಜತಂತ್ರದ ಧುರೀಣತೆಯನ್ನು ಈತನ ಕಾಲದ ಮೈಸೂರು ಚರಿತ್ರೆಯಿಂದ ತಿಳಿಯಬಹುದು. ಚಿಕದೇವರಾಯನ ಆಳ್ವಿಕೆಯ ಮಹತ್ವಕ್ಕೆ ಈತನೇ ಮೂಲಕಾರಣನೆಂದು ಹೇಳಬಹುದು. ಈ ಉಪೋದ್ಘಾತವು ಕವಿಯ ಕವಿತಾಸಾಮರ್ಥ್ಯಪ್ರದರ್ಶಕವಾದುದರಿಂದ ಮಂತ್ರಿತ್ವದ ಮಹಿಮೆಯನ್ನು ವಿಸ್ತರಿಸಿ ಹೇಳಲು ಇಲ್ಲಿ ಅವಕಾಶವನ್ನು ತೆಗೆದುಕೊಳ್ಳಲಿಲ್ಲ.

ಈತನು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಉದ್ದಾಮಪಂಡಿತನೂ ಕವಿಯೂ ಆಗಿದ್ದನು. ಈತನು ರಚಿಸಿದ ಗ್ರಂಥಗಳಲ್ಲಿ ಪ್ರಕೃತದಲ್ಲಿ ದೊರೆತಿರುವುವು ಯಾವುವೆಂದರೆ :—

ಸಂಸ್ಕೃತದಲ್ಲಿ :—೧. ಯದುಗಿರಿನಾರಾಯಣಸ್ತವ, ೨. ಯದುಗಿರಿನಾಯಕೀಸ್ತವ, ೩. ಶ್ರೀ ಲಕ್ಷ್ಮೀನೃಸಿಂಹಸ್ತವ, ೪. ಗೋಪಾಲಸ್ತವ,

---

[9] ಬಹುಧಾನ್ಯ ಸಂ॥ ಚೈತ್ರದಲ್ಲಿ ಬರೆದು ಕಳುಹಿಸಿದ ನಿರೂಪ.

[10] ನರಪತಿವಿಜಯ.

೫. ರಾಜಗೋಪಾಲಸ್ತವ, ೬. ಪರವಾಸುದೇವಸ್ತವ, ೭. ಮಂಜುಳ ಕೇಶವಸ್ತವ, ೮. ಪಶ್ಚಿಮರಂಗರಾಜಸ್ತವ, ೯. ಏಕಾದಶೀನಿರ್ಣಯ. ಇವುಗಳಲ್ಲಿ ೧ನೆಯ ಗ್ರಂಥಕ್ಕೆ ಈತನ ತಮ್ಮ ಮಿತ್ರವಿಂದಾಗೋವಿಂದ ವನ್ನು ರಚಿಸಿದ ಸಿಂಗರಾರ್ಯನು ವ್ಯಾಖ್ಯಾನವನ್ನು ಸಂಸ್ಕೃತದಲ್ಲಿ ಬರೆದಿದ್ದಾನೆ.

ಕನ್ನಡದಲ್ಲಿ:—೧. ಅಪ್ರತಿಮವೀರಚರಿತ, ೨. ಚಿಕದೇವರಾಯವಂಶಾ ವಳಿ, ೩. ಚಿಕದೇವರಾಜವಿಜಯ, ೪. ಚಿಕದೇವರಾಯಶತಕ, ೫. ಕರ್ಣಾ ಟಕ ಕೀರ್ತನೆಗಳು.

ಸಚ್ಛೂದ್ರಾಧಿಕಾರನಿರ್ಣಯ (ಸಂಸ್ಕೃತ), ಗೀತಗೋಪಾಲ, ಚಿಕ ದೇವರಾಯಬಿನ್ನಪ (ಕನ್ನಡ), ಮುಂತಾದ ಕೆಲವು ಗ್ರಂಥಗಳು ಚಿಕದೇವ ರಾಜಾಂಕಿತವಾಗಿದ್ದರೂ ಈತನೇ ಮಾಡಿದುವೆಂದು ಪ್ರವಾದವಿದೆ.

ಈ ಕವಿಯು ಉಭಯಭಾಷೆಯಲ್ಲಿಯೂ ಕವಿತ್ವದಲ್ಲಿ ಉತ್ತಮ ಸ್ಥಾನವನ್ನು ಪಡೆದಿದ್ದನೆಂದು ಈತನ ಗ್ರಂಥಗಳನ್ನು ಪರಿಶೀಲಿಸಿದವರು ನಿಸ್ಸಂದೇಹವಾಗಿ ಹೇಳುವರು. ಈತನೇ ವ್ಯಂಗ್ಯಪ್ರಧಾನವಾಗಿ ಕನ್ನಡ ದಲ್ಲಿ ಕಾವ್ಯವನ್ನು ಬರೆಯಲು ಮೊದಲುಮಾಡಿದನೆಂದು ಕೆಲವರು ಅಭಿಪ್ರಾಯಪಡುವರು.

—ಏತತ್ಕವಿಕೃತ ಕರ್ಣಾಟಕ ಗ್ರಂಥಗಳ ವಿಮರ್ಶೆ—

೧. **ಅಪ್ರತಿಮವೀರಚರಿತ**—ಇದೊಂದು ಅಲಂಕಾರ ಗ್ರಂಥ. ಇದರಲ್ಲಿ ಕವಿಯು ಚಂದ್ರಾಲೋಕ, ವಾಮನವೃತ್ತಿ, ಕಾವ್ಯಪ್ರಕಾಶ ಮೊದಲಾದ ಸಂಸ್ಕೃತ ಗ್ರಂಥಗಳಿಂದ ಲಕ್ಷಣಗಳನ್ನು ತೆಗೆದುಕೊಂಡು, ಅವುಗಳಿಗೆ ಕನ್ನಡದಲ್ಲಿ ಗದ್ಯರೂಪವಾದ ವೃತ್ತಿಗಳನ್ನು ಬರೆದು, ಕನ್ನಡದಲ್ಲಿ ತನ್ನಿಂದ ರಚಿತವಾದ ಪದ್ಯಗಳನ್ನು ಅವಕ್ಕೆ ಉದಾ ಹರಣೆಯಾಗಿ ಕೊಟ್ಟು, ಲಕ್ಷ್ಯ ಲಕ್ಷಣ ಸಮನ್ವಯ ಮಾಡಿದ್ದಾನೆ. ಆ ಲಕ್ಷ್ಯಪದ್ಯಗಳಲ್ಲಿ ವಿವೃತವಾದ ವಿಷಯಗಳು "ಅಪ್ರತಿಮವೀರ" ನೆಂಬ ಅಭಿಧಾನವುಳ್ಳ ಚಿಕದೇವರಾಯನ ಚರಿತ್ರವನ್ನು ಹೇಳುವು

ದರಿಂದ ಈ ಅಲಂಕಾರಗ್ರಂಥಕ್ಕೆ **ಅಪ್ರತಿಮವೀರಚರಿತವೆಂಬ** ಹೆಸರು ಸಮಂಜಸವಾಗಿದೆ. ಲಕ್ಷ್ಯ ಪದ್ಯಗಳಲ್ಲಿ ನಿರೂಪಿಸಿರುವ ಚಿಕದೇವ ರಾಯನ ಜಯಕಾರ್ಯಗಳು ಅತನು ಯುವರಾಜನಾಗಿರುವ ಕಾಲದಲ್ಲಿ ನಡೆದುವಾದುದರಿಂದಲೂ, ಈ ಕವಿಗೆ ಮಂತ್ರಿ ಪದವಿಯು ಬಂದ ಮೇಲೆ ಕಾವ್ಯರಚನೆಗೆ ಅವಕಾಶವು ಲಭಿಸುವುದು ಕಷ್ಟವಾದುದರಿಂದಲೂ ಈ ಗ್ರಂಥವನ್ನು ಕವಿಯು ಆಸ್ಥಾನಕವಿಯಾಗಿದ್ದಾಗಲೇ ರಚಿಸಿರಬೇ ಕೆಂದು ತೋರುತ್ತದೆ. (೧ನೆಯ ಪ್ರಕರಣ ಪದ್ಯ ೧೩).

೨. **ಚಿಕದೇವರಾಯ ವಂಶಾವಳಿ**—ಇದು ಮೈಸೂರು ಮಹಾ ರಾಜರುಗಳ ಚರಿತ್ರರೂಪವಾದ ವಚನಗ್ರಂಥ. ಇದು ಬಹಳ ಪ್ರೌಢವಾ ಗಿಯೂ, ರಸಭರಿತವಾಗಿಯೂ ಇದೆ. ಸಂಸ್ಕೃತದಲ್ಲಿ ಕಾದಂಬರಿಯು ಹೇಗೆ ಉತ್ತಮ ಗದ್ಯಗ್ರಂಥವೆನಿಸಿಕೊಂಡಿದೆಯೋ ಹಾಗೆಯೇ ಇದು ಕನ್ನಡದಲ್ಲಿ ಉತ್ತಮ ಗದ್ಯಗ್ರಂಥವೆನಿಸಿಕೊಂಡಿದೆ.

೩. **ಚಿಕದೇವರಾಜವಿಜಯ**—ಇದು ಮೈಸೂರು ಮಹಾರಾಜರ ಚರಿತ್ರರೂಪವಾದ ಚಂಪೂಪ್ರಬಂಧ. ಇದು ಬಹು ಶ್ಲಾಘ್ಯವಾದ ಕಾವ್ಯ. ಇದರಲ್ಲಿ ೬ ಆಶ್ವಾಸಗಳಿವೆ. ಮೊದಲನೆಯ ಆಶ್ವಾಸದಲ್ಲಿ ಇಷ್ಟದೇವತಾ ಭ್ಯರ್ಥನ, ಕವಿತಾವರ್ಣನ, ಜಗತ್ಸೃಷ್ಟ್ಯಾದಿ ಯದುಪರ್ಯಂತ ವಂಶ ವರ್ಣನವೂ ; ದ್ವಿತೀಯಾಶ್ವಾಸದಲ್ಲಿ ಬೆಟ್ಟದ ಚಾಮರಾಜ, ಚಾಮರಾಜ, ರಾಜರಾಜ, ಚಾಮರಾಜ, ಇಮ್ಮಡಿ ನರಸರಾಜ ಭೂಪಾಲರುಗಳ ಪ್ರಭಾವ ವರ್ಣನವೂ ; ತೃತೀಯಾಶ್ವಾಸದಲ್ಲಿ ದೊಡ್ಡದೇವರಾಜನ ಗುಣವರ್ಣನ, ಪುತ್ರಾಭಿಲಾಷೆ, ಶ್ರೀಕೃಷ್ಣಲೀಲಾಶ್ರವಣ, ಯಾದವಾಚಲಗಮನ, ಶ್ರೀ ನಾರಾಯಣವರಪ್ರದಾನ, ಪ್ರಜಾಪಾಲನಾದಿ ವರ್ಣನವೂ; ತುರೀಯಾಶ್ವಾಸ ದಲ್ಲಿ ಶ್ರೀಮದಮೃತಾಂಬಾದೌಹೃದ, ಕುಮಾರೋದಯ, ಬಾಲಲೀಲಾ, ಲಿಪಿಗ್ರಹಣ, ಶಾಸ್ತ್ರ ಪುರಾಣ ವೀಣಾ ಖುರಳೀಶ್ರಮ, ಯೌವನೋದಯಾದಿ ವರ್ಣನವೂ; ಪಂಚಮಾಶ್ವಾಸದಲ್ಲಿ ದೇವರಾಜದಿಗ್ವಿಜಯ, ಚಿಕದೇವರಾಯ

ದಿನಚರ್ಯಾದಿ ವರ್ಣನವೂ; ಷಷ್ಠಾಶ್ವಾಸದಲ್ಲಿ ರಾತ್ರಿವಿಹಾರವರ್ಣನೆಯೂ ಇವೆ.

ಈ ಗ್ರಂಥದಲ್ಲಿ ಕವಿಯ ಕವಿತಾಸಾಮರ್ಥ್ಯವು ಚೆನ್ನಾಗಿ ಕಾಣಬರುತ್ತದೆ. ಈ ಗ್ರಂಥದ ಅನೇಕ ಪದ್ಯಗಳು ಅಪ್ರತಿಮವೀರಚರಿತದಲ್ಲಿ ಉದಾಹೃತವಾಗಿವೆ.

ಈತನ ಕವಿತ್ವದ ವಿಷಯವಾಗಿ—" ಎನಿತಂದದಮಾಗಿ ಮೆಲ್ಪುವಡೆದ ಸಬುದಂಗಳ ಸೇರುವೆಯಿಂ ಸರಳಮುಂ, ಕರಮೆಸೆವ ಪುರುಳ ಪವಣೆಗೆಯಿಂ ಸರಸಮುಮೆನಿಸಿ ತನಿಸೊದೆಯ ಸೋನೆಯಂತೆ ಇನಿದಂ ಕಿವಿಗಳ್ಗೆ ಕಱಿಗುಮಿಾತಿರುಮಲಾರ್ಯರ ಬಾಯ್ದೆಱೆಯ ಸರಸತಿಯ ಸ್ಪೈಪುವಡೆದ ಸಾಹಿತ್ಯಸೌಂದರ್ಯಂ " ಎಂದೂ,

" ಈಪಂಡಿತಕವಿಮಂಡಲಾಖಂಡಲರ್ ಪಿರಿದಾಗಿ ಶಾಸ್ತ್ರಸ್ಮೃತಿಸ್ತೋತ್ರಗ್ರಂಥಂಗಳಂ ಇವಲ್ಲದಿನ್ನುಂ ಸಕ್ಕದದೊಳಂ ಕನ್ನಡದೊಳಂ ಬೇಱೆವೇಱೆ ಕಿವಿಗಿನಿದಂ ಸೂಸುವ ಪಲವಗೆಯ ಕಾವ್ಯನಾಟಕಾಲಂಕಾರಂ ಮೊದಲಾದ ವಸ್ತುಕ ವರ್ಣಕ ಪ್ರಬಂಧಂಗಳಂ ಗಡಿಯಿಲ್ಲದೆ ನಿರವಿಸಿರ್ದರ್ " ಎಂದೂ.

ವೃ॥ " ಪಿರಿದುಂ ಪ್ರೌಢತ್ವಮಂ ಪೆರ್ಚಳಿಕೆ ಕವಿವರರ್ ಕಬ್ಬದೊಳ್ ಶಾಸ್ತ್ರದೊಳ್ ಮೇಣ್ । ಕರಮಿಾಸಾಹಿತ್ಯದೊಳ್ ಬಿತ್ತರಿಪೊಡೆ ರಸಮಂತಿರ್ಮಲಾರ್ಯರ್ಗೆ ಸಲ್ಗುಂ ॥ ತರಣಿದ್ಯೋತಂಗಳೇನಾಡವೆ ವಿಧುಮಣಿಯೊಳ್ ನೈದಿಲೊಳ್ ಮತ್ತಮಂ ತಾಂ । ಕರಗಿಪ್ಪಂ ಬಿಚ್ಚುವಂ ಚಂದಿರನೆ ಉಱದವರ್ಗೆಂತೊಸರ್ಗುಂ ಮಲರ್ಗುಂ ॥ " ಎಂದೂ ಮಿತ್ರವಿಂದಾಗೋವಿಂದ ನಾಟಕದಲ್ಲಿ ವರ್ಣಿತವಾಗಿದೆ.

ಗ್ರಂಥಸ್ಥ ವಿಷಯಾನುಕ್ರಮಣಿಕೆ

	ಪುಟ ಸಂಖ್ಯೆ
ರಾಜನೃಪಚರಿತಂ—	೧-೪೬
ರಾಜನೃಪನು ತಿರುಮಲೆರಾಜನನ್ನು ಶ್ರೀರಂಗಪಟ್ಟಣದಿಂದ ಓಡಿಸಲು ಯತ್ನಿಸುವುದಕ್ಕೆ ಕಾರಣ ..	೧-೩
ರಾಜನೃಪನು ಬೇಹಿಗರಿಂದ ಅವನ ಸಪ್ತಾಂಗದ ಇರವನ್ನೂ, ಸಂಧಿವಿಗ್ರಹಷಾಡ್ಗುಣ್ಯಾದಿಸಕವನ್ನೂ ತಿಳಿಯುವನು	೩-೯
ರಾಜನೃಪನು ಕಾರುಗಹಳ್ಳಿ, ಕನ್ನಂಬಾಡಿ, ತಲಕಾಡು, ಅಮ್ಮಚವಾಡಿಗಳ ಪ್ರಭುಗಳು ತನ್ನ ವಿಚಾರವಾಗಿ ತಿರುಮಲೆರಾಜನಿಗೆ ತಿಳಿಸಿದ ಅಂಶಗಳನ್ನು ಬೇಹಿಗರಿಂದ ತಿಳಿಯುವನು	೯-೧೫
ರಾಜನೃಪನಿಗೆ ಮೈಸೂರು ನಿಯೋಗಿಯು ಕಳುಹಿದ ಬಿನ್ನವತ್ತಳೆಯ ವಿವರ	೧೫-೨೦
ರಾಜನೃಪನು ತಮ್ಮಂದಿರೊಡನೆ ಮಂತ್ರಾಲೋಚನೆ ಮಾಡುವನು	೨೦-೨೩
ರಾಜನೃಪನು ತಾನೇ ಶ್ರೀರಂಗಪಟ್ಟಣಕ್ಕೆ ಬರುವುದಾಗಿ ಕಳುಹಿಸಿಕೊಟ್ಟ ರಾಯಸದ ವಿಷಯ ..	೨೧-೨೨
ರಾಜನೃಪನೂ, ತಿರುಮಲೆರಾಜನೂ ಶ್ರೀರಂಗಪಟ್ಟಣದಲ್ಲಿ ಸವುದಂಡಿಗೆಗಳಲ್ಲಿ ಬರುತ್ತಿರುವಾಗ ಪರಸ್ಪರ ಮನಸ್ತಾಪ ಉಂಟಾಗಲು ಕಾರಣ	೨೪-೨೫

ಪುಟ ಸಂಖ್ಯೆ

ತಿರುಮಲೆರಾಜನು ರಾಜನೃಪನನ್ನು ಸೆರೆಹಿಡಿಯಬೇಕೆಂದು ಒಳನಾಡ ಪ್ರಭುಗಳನ್ನು ಕೂಡಿಕೊಂಡು ಒಂದು ದೊಡ್ಡಸೇನೆಯನ್ನು ಸೇರಿಸುವನು .. ೨೬

ರಾಜನೃಪನು ದೇವದರ್ಶನಕ್ಕಾಗಿ ದೇವಸ್ಥಾನಕ್ಕೆ ಹೋಗುವವನು ೨೭

ರಂಗನಾಥಸ್ವಾಮಿಯ ವರ್ಣನೆ ಮತ್ತು ಸ್ತುತಿ .. ೨೮-೩೨

ರಾಜನೃಪನು ತಿರುಮಲೆರಾಜನ ದುರಾಲೋಚನೆಯನ್ನು ಕೇಳಿ, ಆ ಪಡೆಯನ್ನು ಲಕ್ಷ್ಯಮಾಡದೆ ಮೈಸೂರನ್ನು ಸೇರುವನು ೩೩

ತಿರುಮಲೆರಾಜನು ಮೈಸೂರನ್ನು ಮುತ್ತಲು ಹೆದರಿ, ಕೆಸರೆಗೆ ಮುತ್ತಿಗೆ ಹಾಕುವನು .. ೩೩-೩೪

ಕೆಸರೆಯ ಕಾಳಗ ೩೪-೩೫

ಅದರ ಫಲಿತಾಂಶ ೩೬-೪೦

ತಿರುಮಲೆರಾಜನಿಗೆ ಸಹಾಯಮಾಡಲು ಬಂದ ಒಳನಾಡ ಪ್ರಭುಗಳನ್ನು ರಾಜನೃಪನ ಮಗನಾದ ನರಸರಾಜನು ಸೋಲಿಸುವನು ೪೦-೪೧

ನರಸರಾಜನು ಶ್ರೀರಂಗಪಟ್ಟಣವನ್ನು ವಶಮಾಡಿಕೊಳ್ಳುವನೆಂಬ ಹೆದರಿಕೆಯಿಂದ ತಿರುಮಲೆರಾಜನು ಊರನ್ನು ಬಿಟ್ಟು ಮಾಲಂಗಿಯ ಮಡುವಿನಲ್ಲಿ ಪ್ರಾಣಬಿಡುವನು ೪೨

ರಾಜನೃಪನು ಶ್ರೀರಂಗಪಟ್ಟಣಕ್ಕೆ ಬಂದು ತಿರುಮಲೆರಾಜನ ಪತ್ನಿಯಾದ ರಂಗಮ್ಮನನ್ನು ಗೌರವದೊಡನೆ ಕಳುಹಿಸಿಕೊಡುವನು ; ಶ್ರೀರಂಗಪಟ್ಟಣದಲ್ಲಿ ರಾಜ್ಯಭಾರಮಾಡಲು ಮೊದಲು ಮಾಡುವನು ೪೨-೪೩

ಪುಟ ಸಂಖ್ಯೆ

ಪದಿನಾಡ ನಂಜರಾಜನ ಪರಾಜಯ .. ೪೬
ಚಾಮರಾಜನಿಗೆ ಪಟ್ಟಾಭಿಷೇಕ ೪೬
ರಾಜನೃಪನ ಮರಣ ೪೬

ಚಾಮರಾಜ ಚರಿತಂ— ೪೭-೪೯
,, ದಿಗ್ವಿಜಯ ೪೭-೪೮

ಇಮ್ಮಡಿರಾಜರಸ ಚರಿತಂ— ೪೯

ಕಂಠೀರವ ನರಸರಾಜ ಚರಿತಂ— .. ೫೦-೫೩
,, ವಿಜಯ ಯಾತ್ರೆ .. ೫೦-೫೨

ದೊಡದೇವರಾಜ ಚರಿತಂ— ೫೩
ಗುಣವರ್ಣನೆ ೫೪-೫೬
ಪುತ್ರಾಭಿಲಾಷೆ—ಶ್ರೀಕೃಷ್ಣಬಾಲಲೀಲಾಶ್ರವಣ .. ೫೬-೬೪
ಅಳಹಿಯ ಸಿಂಗರಾರ್ಯರ ವರ್ಣನೆ .. ೬೫-೭೦
ಪೂಜಾವಸರದಲ್ಲಿದ್ದ ದೊಡದೇವರಾಜನ ವರ್ಣನೆ .. ೭೧-೭೪
ದೊಡದೇವರಾಜನ ಮಾನಸಾರಾಧನ ಪ್ರಕಾರ .. ೭೪-೮೦
ಮಾನಸಾರಾಧನ ವೇಳೆಯಲ್ಲಿ ಪರಮಪದನಾಥನ ವರ್ಣನೆ ೭೭-೮೦
ಈ ವೇಳೆಯಲ್ಲಿ ರಾಜನನ್ನು ನೋಡಿದ ಅಳಹಿಯಸಿಂಗರಾರ್ಯರ ಆಲೋಚನಾ ರೀತಿ ೮೧
ಭಗವದ್ವೈಭವ ವಿವರಣ ೮೨
ಭಗವದ್ಗೀತೆಯ ಮಾಹಾತ್ಮ್ಯ ೮೩-೮೪
,, ಸಮುದಾಯಾರ್ಥ .. ೮೪
,, ಷಟ್ಕಾರ್ಥ ೮೪
,, ಪ್ರತ್ಯಧ್ಯಾಯದ ಸಂಗ್ರಹಾರ್ಥ .. ೮೪-೮೭

ಪುಟ ಸಂಖ್ಯೆ

ಕರ್ಮ ಜ್ಞಾನ ಭಕ್ತಿಯೋಗಗಳ ನಿಷ್ಕೃಷ್ಟಾರ್ಥ .. ೮೭-೮೮

ಯಾದವಾಚಲಗಮನ—ಯಾದವಾಚಲದ ದಾರಿಯು ಮತ್ತು

,, ನೆಲಗಾಡ ವರ್ಣನೆ .. ೮೯-೯೨

ಮೇಲ್ಕೋಟೆಯು ಪ್ರವೇಶ ೯೨

ಯಾದವಾಚಲದ ಸಿರಿವೀದಿಯಲ್ಲಿ ವಾಸಮಾಡುವ ಶ್ರೀವೈಷ್ಣ
ವರ ವರ್ಣನೆ ೯೩-೯೫

ದೇವಸ್ಥಾನದ ಗೋಪುರದ್ವಾರದಲ್ಲಿ ಸೇನಾತವಕಿಗಳ ಸಿರಿ
ನಾತುಗಳು ಮತ್ತು ಅಷ್ಟತೀರ್ಥಗಳ ವರ್ಣನೆ .. ೯೫-೯೭

ದೇವಸ್ಥಾನದ ವರ್ಣನೆ—ಒಳಪ್ರಾಕಾರದಲ್ಲಿ ದರ್ಶನ
ಮಾಡಿದ ದೇವರುಗಳ ವರ್ಣನೆ :—

೧. ಶ್ರೀವತ್ಸಾಂಕರು ೯೭

೨. ಪನ್ನಿರಾಳ್ವಾರುಗಳು .. ೯೮-೯೯

೩. ಸುದರ್ಶನ ಕಾಂಚೀಪೂರ್ಣರು .. ೯೯-೧೦೦

೪. ಯದುಗಿರಿನಾಯಕಿಯು ವರ್ಣನೆ .. ೧೦೦-೧೦೩

,, ಸ್ತುತಿ .. ೧೦೩-೧೦೫

೫. ಗಜೇಂದ್ರವರದರ ವರ್ಣನೆ .. ೧೦೫

೬. ಶ್ರೀರಾಮಾನುಜಾಚಾರ್ಯರ ವರ್ಣನೆ ೧೦೫-೧೦೬

,, ಸ್ತುತಿ .. ೧೦೬-೧೦೭

ದೇವಸ್ಥಾನದ ರಂಗಮಂಟಪದ ವರ್ಣನೆ .. ೧೦೮-೧೦೯

ತಿರುನಾರಾಯಣರ ದಿವ್ಯಾಂಗಗಳ ಸಮುದಾಯ
ಶೋಭೆಯು ವರ್ಣನೆ ೧೦೯-೧೧೨

ತಿರುನಾರಾಯಣರ ಸ್ತುತಿ—ದಿವ್ಯಾವಯವಂಗಳ ಚರಿತ್ರೆ ೧೧೨-೧೧೩

ದಿವ್ಯಾವಯಂಗಳ ಸೌಂದರ್ಯ .. ೧೧೩-೧೧೬

ಶ್ರೀನಾರಾಯಣ ವರಪ್ರದಾನ ೧೧೬

ಪುಟ ಸಂಖ್ಯೆ

ಚೆಲ್ವರಾಯನನ್ನು ದರ್ಶನಮಾಡಿ ಎಣಿಸಿದ ಪ್ರಕಾರ.. ೧೧೬-೧೧೮
ಆಳಹಿಯ ಸಿಂಗರಾರ್‍ಯರ ಮನೆ ಮತ್ತು ಶರೀರ ಮುಂತಾದುವುಗಳ ವರ್ಣನೆ ೧೨೦-೧೨೪
ರಾಜ ಮತ್ತು ಆಳಹಿಯ ಸಿಂಗರಾರ್‍ಯರ ಸಲ್ಲಾಪ, ರಾಯನ ಬಹುಮಾನ ಇತ್ಯಾದಿ .. ೧೨೪-೧೨೭
ಚಿಕದೇವರಾಯನ ಜನನ ೧೨೭-೧೩೬
ಅಮೃತಾಂಬೆಯ ದೌಹೃದದ ವರ್ಣನೆ .. ೧೨೮-೧೩೦
ಕುಮಾರೋದಯ ಮತ್ತು ಪುತ್ರಜನ್ಮಮಹೋತ್ಸವ ವರ್ಣನೆ ೧೩೦-೧೩೨
ಸಾಹಿತ್ಯದ ಪರಿಪಾಟಿಯಿಂದ ಜಾತಕಫಲ .. ೧೩೨-೧೩೪
ಆಳಹಿಯ ಸಿಂಗರಾರ್‍ಯರು ತಿಳಿಸಿದ ಅಂಗಪ್ರತ್ಯಂಗ ಚಕ್ರವರ್ತಿ ಲಕ್ಷಣ ೧೩೪-೧೩೫
ಚಿಕದೇವರಾಯನೆಂಬ ಹೆಸರಿನ ಅವಯವಾರ್ಥ .. ೧೩೬
ಚಿಕದೇವರಾಯನ ಬಾಲಲೀಲೆಯ ವರ್ಣನೆ .. ೧೩೬-೧೩೮
,, ವಿದ್ಯಾಭ್ಯಾಸ :— ,, .. ೧೩೮
,, ಲಿಪಿಗ್ರಹಣ ,, .. ೧೩೮
,, ವಾಚನಾರ್ಥಗ್ರಹಣ ,, .. ೧೩೯
,, ಪುರಾಣಪರಿಶ್ರಮ ,, .. ೧೩೯-೧೪೧
,, ವೀಣಾಪರಿಶ್ರಮ ,, .. ೧೪೧-೧೪೫
,, ಮುರಳೀ ಪರಿಶ್ರಮ ,, .. ೧೪೫-೧೪೭
ಅನಂತರ ರಾಜನ ಆಲೋಚನಾ ಪ್ರಕಾರ .. ೧೪೭-೧೪೮
ಚಿಕದೇವರಾಯನ ಯೌವನೋದಯ .. ೧೪೮
ಮುಂದಣ ಚರಿತ್ರೆ ೧೪೯-೧೫೦

		ಪುಟ ಸಂಖ್ಯೆ
ದೇವರಾಜನಿಗೆ ಪಟ್ಟಾಭಿಷೇಕ, ಉಪದೇಶ	..	೧೫೦-೧೫೧
ದೇವರಾಜ ಚರಿತಂ—	.. ..	೧೫೧
ದೇವರಾಜ ಗುಣವರ್ಣನೆ	.. ..	೧೫೨
ಯುವರಾಜ ಚಿಕದೇವರಾಯನ ವಿಜಯಯಾತ್ರೆ		೧೫೩

॥ ಶ್ರೀರಸ್ತು ॥

ಚಿಕದೇವರಾಯ ವಂಶಾವಳಿ

———o———

ರಾಜನೃಪಚರಿತಂ

ಸ್ವಸ್ತಿ, ಸಮಸ್ತಭೂಮಣ್ಡಲಪುಣ್ಡರೀಕಕರ್ಣಿಕಾಯಮಾನ ಕನಕಾಚಲದಿಶಾಪರ್ಯನ್ತ ಪರಿಕರ್ಮಾಲಂಕರ್ಮೀಣ ಭಾರತವರ್ಷಮಣ್ಡನಾಯಿತ ಭರತಖಣ್ಡೋದ್ದಣ್ಡವೈಭವೋತ್ತಮರ್ಣಾಯಿತ ಕರ್ಣಾಟದೇಶದೊಳ್ ಕಾವೇರೀದಕ್ಷಿಣತೀರದೊಳನತಿದೂರದೊಳೆಸೆವ ಮಹೀಶೂರಪುರದೊಳ್ ಸಕಲ ಸಾಮನ್ತಕೋಟೀರಕೋಟೀಮಣಿಘೃಣಿಚಿತ್ರಿತಪದರಾಜೀವನೆನಿಸಿ ರಾಜಿಸ ಚಾಮರಾಜಂಗೆ ಚತುರತೆಗೊಲ್ದು ಮೆಯ್ವೆತ್ತು ಬಟೆಸಲ್ವ ನಾಲ್ಕುಮುಪಾಯದಂತೆಯುಂ, ತಮ್ಮಿಂ ತಾಮೊಳಸಿ ಬಂದ ಚತುರ್ವರ್ಗದಂತೆಯುಂ, ಈತನ ಸತ್ಯಾದಿಗುಣಂಗಳಿಂದೆ ದಶರಥಂಗೆತ್ತು ಮತ್ತಮೊಗೆದ ನಾರಾಯಣನ ನಾಲ್ಮೆಯ್ಗಳಂತೆಯುಂ, ಈತನ ಸೇನಾಧೂಳಿಗಳ್ಕಿ ಮೆಯ್ಯಿಕ್ಕಲೆಂದೊಡಲ್ವಡೆದೇಟ್ಟಂದ ನಾಲ್ಗಡಲಂತೆಯುಂ, ನೆಗಟ್ತೆವೆತ್ತ ನಾಲ್ವರ್ ಕುವರರೊಳಂ ಪಿರಿಯಂ ಎಲ್ಲಾರಾಯರ್ಗಂ ಪಿರಿಯನೆನಿಪ **ರಾಜನೃಪಂ** ನಿಜಕುಲಕ್ರಮಾಗತಕ್ಷಿತಿಯೊಳನುಜರ್ವೆರಸರಸುಗೆಯ್ಯುತ್ತಿರೆ—

ಅತ್ತಲುತ್ತರದೇಶದೊಳ್ ತುಂಗಭದ್ರಾತೀರದೊಳ್ ವಿದ್ಯಾನಗರಿಯನಾಳ್ದ ಹರಿಹರ ಬುಕ್ಕರ್ ಮೊದಲಾದ ಕುಱುಂಬರಾಯರನನ್ತರದೊಳರಸುಗೆಯ್ದ ತುಳವಕುಳದೀಶ್ವರ ನರಸ ವೀರನರಸಿಂಗ ಕೃಷ್ಣಾಚ್ಯುತರೆಂಬ ರಾಯರ್ಕೈವರ ತಱುವಾಯಿಂ ಮುದದೊಳೆಳೆಯಂ ಪೊಱೆದ ಸದಾಶಿವರಾಯಂಗೆ ಸೇನಾನಿಯೆನಿಸಿದ ಆಂಧ್ರಕುಲದ ರಾಮರಾಜಂ ನಿಜರಾಜಂಗೆ ದ್ರವಿಡಾನ್ಧ್ರಕರ್ಣಾಟಸಾಮ್ರಾಜ್ಯಮಂ ಸಾರ್ಚಿ, ಪತಿಕಾರ್ಯದೊಳರ್ಪಿತಪ್ರಾಣ

ನೆನಿಸಿ, ಒರ್ಮೆಯುತ್ತರದಿಗ್ವಿಜಯದೊಳುದ್ವೃತ್ತಯವನಸೇನಾಚಕ್ರಮನೊಕ್ಕಲಿಕ್ಕಿ ಯಶಶ್ಶೇಷನಪ್ಪಿನಂ ; ಅವನನುಜಂ ಎರೆದಿಮ್ಮರಾಜಂ ಅಂದಿನಾಜಿಯೊಳೞುದುೞಿದರನೊಡಗೊಂಡು ಊರ್ಗೆ ನಡೆತಂದಾಳ್ವನ ಸಿರಿಗೆಳಸಿಯುವನಂ ಭಂಗಿಸಿ, ತಾನೆ ರಾಯನೆನಿಸಿರ್ದೞಿಗಜ್ಜದಿಂದಾವಿದ್ಯಾನಗರಂ ಕಿಱಿದುಂ ದಿನಕ್ಕೆ ತುರುಷ್ಕರಿಂದೞಿಯಲೊಡಂ, ಅಲ್ಲಿಂ ಪೆನಗೊಂಡೆಗೆಯ್ತಂದು ಒಂದೆರಡ್ಬರಿಸಮಿರ್ದು ಪೊಂದಿ ಪೋಪಾಗಳ್—ತನ್ನ ಮೂವರ್ಕುಮರರೊಳ್ ಮೊದಲಿಗನಾದ ಶ್ರೀರಂಗರಾಜನಂ ಪೆನಗೊಂಡೆಯೊಳಿಟ್ಟಾತಂಗೆ ತೆಲುಂಗನಾಡೊಡೆತನಮಂ, ಎರಡನೆಯ ರಾಮರಾಯನಂ ಶ್ರೀರಂಗಪಟ್ಟಣದೊಳಿರಿಸಿಯವಂಗೆ ಕರ್ಣಾಟದೇಶಾಧಿಪತ್ಯಮಂ, ಮೂಱನೆಯ ವೆಂಕಟಪತಿರಾಯನಂ ಚನ್ದ್ರಗಿರಿಯೊಳಿಟ್ಟು ಆತಂಗೆ ತುಂಡೀರ ಚೋಳ ಪಾಂಡ್ಯ ಮಂಡಲೇಶ್ವರತ್ವಮನಿತ್ತಂ. ಇವರೊಳ್ ಶ್ರೀರಂಗರಾಜಂ ಅಪುತ್ರನಾಗಿ ಬರ್ದಿಲಮನ್ನೈದಲೊಡಂ ; ಆವೆಂಕಟಪತಿರಾಯಂ ಪೆನಗೊಂಡೆಯೊಳಿರ್ದೆಳೆಯುಂ ಪರಿಪಾಲಿಸುತ್ತಿರೆ—

ಇತ್ತಲೀರಾಮರಾಜಂ ಕೆಲವುಂ ಕಾಲಕ್ಕೆ ಕಾಲಧರ್ಮಮನೆಯ್ದಿದ ಬೞಿಕ ತಿರುಮಲೆರಾಜಂ ಮೊದಲಾದ ಅವನ ಕುವರರ್ ಶ್ರೀರಂಗಪಟ್ಟಣದಲ್ಲಿ ರೇಮಟಿವೆಂಕಟಯ್ಯನೆಂಬ ತಮ್ಮ ದಳವಾಯನಿರಿಸಿ ತಾವೆಳವರಯದವರಾದುದಱಿಂದೆ ಪೆನಗೊಂಡೆಯುಂ ಪೊರ್ದಿ ಕಿಱಿಯಯ್ಯನ ಬೞಿಯೊಳಿರ್ದು ಬಳೆದರ್.

ಬೞಿಕ್ಕಾವೆಂಕಟಪತಿರಾಯಂ ಮಧುರೆಯ ವೀರಪ್ಪನಾಯಕನೊಳ್ ಮುನಿದು ದಂಡೆತ್ತಿ ನಡೆದು, ಪಾಣ್ಡ್ಯಮಣ್ಡಲದ ಮಧುರಾಪುರಮಂ ಸುತ್ತಿಮುತ್ತಿರ್ಪನಂ ; ಆ ವೀರಪ್ಪನಾಯಕಂ ಭೇದೋಪಾಯಮನವಲಂಬಿಸಿ, ರಾಯನ ಸೇನಾನಾಯಕರ್ಗೆ ದ್ರವ್ಯಭೂಷಣಂಗಳಂ ಕಳುಪಲೊಡಂ; ಈ ತಿರುಮಲೆರಾಜನಾಲಂಚಮಂ ಕೊಂಡುದರ್ಕೆ ವಿವೇಕದೊಡನೆ ತನ್ನುಮಂ ಕೀರ್ತಿಯುಮಂ ಸುಕೃತಮುಮಂ ಮಾಱಿ ತಂದೆಯುಮಾ

ಳ್ದನುಮಪ್ಪ ಕಿಱುಯುಯ್ಯನೊಳ್ ಗೆಂಟುಗೊಂಡು ತನ್ನ ಕರಿತುರಗಪದಾತಿಗೆಳ್ವೆರಸತ್ತಣಿಂ ಶ್ರೀರಂಗಪಟ್ಟಣಕ್ಕೆ ಬಂದನೆಂಬ ವಾರ್ತೆ ಬರಲೊಡಂ ; ಅದಂ ಕೇಳ್ದು ರಾಜನೃಪಂ ತನ್ನನುಜಸೇನಾನಿಮಹಾಮಾತ್ಯಮಿತ್ರರೊಡನಾಳೋಚಿಸಿ ನಿಶ್ಚಯಂಗೆಯ್ದು— ಈ ಪಿತೃಘಾತಿಯನೀಪಟ್ಟಣದಿಂ ಪೊಱಮಡಿಸವೇಳ್ಕುಂ, ಅದರ್ಕಿವನ ಸಪ್ತಾಂಗದಿರವನಾರೆಯ್ವೆನೆಂದು ಗೂಢಚಾರರಂ ಪ್ರಣಿಧಿಗಳುಮಂ ಕಳುಪುವಿನಂ ; ಅವರ್ ಅಲ್ಲಿ ಕೆಲವುಂ ದಿನಮಿರ್ದು ಮಗುಳ್ದಾಳ್ದನೆಡೆಗೆೞ್ತಂದು ಒಳಒಲಗದೊಳ್ ಕೆಯ್ಮುಗಿದು ಬಿನ್ನಪಂಗೆಯ್ದರ್. ಅದೆಂತೆನೆ :—

ದೇವ ! ಚಿತ್ತೈಸು. ಆಪೊೞಲಂ ಬಳಸಿ ಬಲ್ಪೊಱಱ ಕಲ್ಪೋದಧಿಯಂತಿರ್ತಡಿಯಂ ಕೈಗಣ್ಮಿ ಪೊಣ್ಮಿ ಬಪ್ಪೂರ್ಮಿಗಳಿಂ, ಕಟ್ಟುಜದಿಂ ಪರಿವನೀರ್ಪೊನಲೊಳಪೊಯ್ದು ಕೋಲಾಹಲಂಗಳಿಂದೆಡೆಯೆಡೆಯೊಳೊಗೆದು ಸುೞನೆ ಸುತ್ತಿ ಗರ್ತದಂತಿೞವ ಮಹಾವರ್ತಂಗಳಿಂ, ತಿಮಿತಿಮಿಂಗಿಲಂಗಳಂ ಕೆಳೆಗೊಳ್ವ ಪೆರ್ಮೀನ್ಗಳ ಚಾಳಚಳನದಿಂ ಕರೆಗಣ್ಮುವ ಕರ್ಮಡುವಿನೆಡೆಯೊಳ್ದಡದಡಿಸಿ ನಾವೆಯೊಳಿಡಿಕಿಱಿದ ಜನದಾರ್ತನಿನದಕೋಲಾಹಲದಿಂ ದಿತ್ತಣಿನತ್ತಣ್ಗೆ ಪಾಱಲರಿಯದೆಱಂಕೆಯುಲುಂಕಿಯುಳವೞದೆಡೆಯೊಳ್ ಪಡಲ್ವಡುವ ಪಲವಕ್ಕಿಗಳ ಮೊತ್ತಮುಂ ತುತ್ತಲೆಂದು ಸಿಡಿವ ಸೀರ್ಮೀನ್ಗಳಿಂ, ನೀರ್ಗುಡಿಯಲ್ಕಿೞಪುರ್ಕಾನೆಗಳ ಸೊರ್ಕಿನ ಸೊವಡಂ ಸವಿದು ಕನಲ್ದು ಕಾದುವ ನೀರಾನೆಗಳಿಂ, ಮಹಾಹ್ರದಂಗಳಂ ಮುನ್ನೀರ್ಗೆತ್ತು ನೀರನೀಂಟುವ ಕಾರ್ಮುಗಿಲ್ಗಳನಾನೆಯೆಂದು ಬಗೆದು ನುಂಗಲಂಗವಿಪ ನಕ್ರಂಗಳಿಂದತಿಭೀಕರಮೆನಿಸಿಯಲಂಘನೀಯಮಾಗಿರ್ಪುದು. ಅದಱ ಒಳವಳಯದ ಕೋಂಟೆ ಸುರಪುರದ ಸಾಲೌನ್ನತ್ಯಮುಂ ಕೀೞ್ಗಯ್ಯಲೆಂದು ಬಳೆದಿರ್ಪುದು. ಅಲ್ಲಿಯ ಮುಗಿಲಟ್ಟಳೆಗಳೊಳಿರ್ಪ ಕಾವಲವರ್ಗೆ ಸೂರ್ಯಮಣ್ಡಲಂ ಮುಂಡೆದೆಸೆಯೊಳಿರ್ದೊಡಮಡಿಗೋಂಟೆಯುಂ ಪೊಡೆದು ಪೊಡೆದು ಸಿಡಿವ ಪೊೞಱಯ ತೆರೆಯ ಸೀರ್ಪನಿಗಳಿಂ ನನೆದಾಶೀತೋಷ್ಣಂಗಳಂ

ಸರಿಗೆಯ್ದು ಸೊಗದೊಳಿರ್ಪರ್. ಅಳ್ವೇರಿನೆಲಗಟ್ಟಗುಟ್ಟುಗಳ್ ನಾಗಭುವನದಿಂ ನಾಕಲೋಕಂಬರಂ ನಿರಾಜಿಸಿ ಬಳೆದ ಕೋಂಟೆಯುನಳೆನಾಗಳ್ ಬರೆದ ಸ್ವರ್ಗಮರ್ತ್ಯಪಾತಾಳಂಗಳಳತೆಗೆಜಿಃಗಳಂತಿರ್ಪುವು. ಸುತ್ತಣ ಕೊತ್ತಳಂಗಳ್ ಗೋತ್ರಾರಿಯ ವಜ್ರಹತಿಗಳ್ಗಿವಂದು ರಂಗೇಶನಂ ಮಜಿಃವೊಕ್ಕು ಶತಘ್ನೀವ್ಯಾಜದಿಂ ಕೌಮೋದಕೀಮುದ್ರೆಯುಂ ವಹಿಸಿ ನಿರ್ಭಯಂಬೆತ್ತ ಕುಲಾಚಲಂಗಳಂತಿರ್ಪುವು. ಆಚೌವೀಧಿಯೊಳೆಸೆವ ಪೊನ್ನ ರನ್ನದ ನೆಲೆನಾಡಂಗಳ್ ರಂಗೇಶನಂ ಸೇವಿಸಲಿಟಿಂತಂದ ವೈಮಾನಿಕರ ದಿವ್ಯವಿಮಾನಂಗಳಂತಿರ್ಪುವು. ದಿವ್ಯವಿಮಾನ ಮಣ್ಟಪ ಪ್ರಾಕಾರಗೋಪುರಂಗಳಿಂದೆಸೆವ ದೇಗುಲಂ ವೈಕುಣ್ಠದಂತಿರ್ಪುದು. ಅಲ್ಲಿ ಶೇಷತಲ್ಪದೊಳ್ ಪವಡಿಸಿದ ಶ್ರೀರಂಗನಾಥಂ ವೈಕುಣ್ಠಪತಿಯಂತಿರ್ಪಂ. ಅಂತಿರ್ಪ ಪುರವರಮುಂ ಪೊಜಿಃವರಸನಿರವುಂ, ಅವನನುಚರರ ಪರಿಯುಂ, ಅವನ ಸೇನಾನಿಯ ನಯಮುಂ, ಅವನ ಮಿತ್ರರ ಚರಿತ್ರಮುಂ, ಅವನಮಾತ್ಯರ ಕೃತ್ಯಮುಂ ಅತ್ಯಂತ ವಿಚಿತ್ರಮಾಗಿರ್ಪುದು. ಆದಂ ದೇವರಡಿಯೆಡೆಯೊಳ್ ಬಿನ್ನವಿಪೊಡೆ ಮಗೆ ಅಳ್ಕು ತೋಱುತಿರ್ಕುಮೆಂದವರ್ ಪಿಂದೆಗೆಯಲೊಡಂ ;

ಈ ರಾಜನೃಪನವರೊಳ್ ದಯಾವಲೋಕನಮಂ ಸೂಚಿಸಿ— ಅಪ್ರಿಯಮಾದೊಡಂ, ಗ್ರಾಮ್ಯಮಾದೊಡಂ, ಪಟುವಾದೊಡಂ, ಪರಿಹಾಸಮಾದೊಡಂ, ಚುನ್ನವಾದೊಡಂ, ಜುಗುಪ್ಸೆಯಾದೊಡಂ, ಇರ್ದುದನಿರ್ದಂತರಸಂಗೆ ಒಳಓಲಗದೊಳಱುಪುವುದೆ ದೂತರ್ಗೆ ನೀತಿ. ನೀಮು ದಱಿಂ ಬೆರ್ಚದೆ ಬಿತ್ತರಿಪುದೆಂದಾಣತಿಯಿಾವುದುಮವರ್ ಬಿನ್ನವಿಸಿದರದೆಂತೆನೆ :—

ಆರಾಯಂ ಚೆಲ್ವಂ ಪಡೆದ ಕಡುಪಿಂ ಮಡದಿಯರ ಮೆಯ್ಯೊಗ್ಗಟದೊಳೆಡೆವಿಡದಿರ್ದು ಕಂಟಕಶೋಧನ ಪ್ರಜಾಪಾಲನ ದಂಡಯಾತ್ರಾದಿ ಕ್ಷಾತ್ರಸ್ವಭಾವಕರ್ಮಮಂ ತತ್ತದಧಿಕಾರಿಗಳ್ಗೊಪ್ಪಿಸಿರ್ಪಂ. ಅನುಚರರುಂ ಪೆಣ್ಗೊಟದೊಳ್ ನೆರವೆನಿಸಪ್ಪ ವೃಷ್ಯೌಷಧಮಂತ್ರತಂತ್ರಘುಟಿಕಾಮೂಲಿಕಾಸ್ರಕ್ಚಂ

ದನಾದಿ ವಸ್ತುಸಂಪಾದನನಿಪುಣರೆನಿಸಿ ವಿಟವಿದೂಷಕಪ್ರಾಯರಾಗಿ ರ್ಪರ್. ಸೇನಾನಿ ಅನೆಕುದುರೆಕಾಲಾಳ್ಗಳನೊಟ್ಟುಗೆಯ್ದು ದಂಡೆತ್ತುವ ಯತ್ನಮನುೞಿದು ತನ್ನಾಳ್ದನಂ ಬೇಂಟೆಯೊಳ್ ಮೆಚ್ಚಿಸಿ ಬಸಂಗೆಯ್ವೆ ನೆಂದು ದಡಿವಲೆಗಳಂ ಬಡಿಕೋಲ್ಗಳಂ ಅಂಟುಗಳೆಗಳಂ ಕಾಲ್ಗಣ್ಣಿಗಳಂ ಗಿಡುಗಸಾಳುವಜಾಯಿಲಂಗಳಂ ದೀಹದ ಮಿಗವಕ್ಕಿಗಳಂ ತರಿಸಿರಿಸಿ ಪರಿ ಕಿಪ ವ್ಯಾಪಾರದೊಳ್ ಬೇಡವಡೆಯೊಳೊಡವೆರೆದಿರ್ಪಂ. ಮಿತ್ರರೊಳುತ್ತ ಮರ್ ಈಯಿರ್ಕೆ ತಕ್ಕುದಲ್ತೆಂದು ಪಲವರ್ಿ ತಿಳಿಪಿ ತಮ್ಮ ನುಡಿ ಬಱಡಾ ದುದಱಂ ಬಗೆದೆಗೆದಿರ್ಪರ್. ದುರ್ವಿತ್ರರೀವ್ಯಸನಾಸಕ್ತಿಯಂ ಮಚ್ಚಿ ಮಚ್ಚಿ ಮನಂಗೊಂಡು ಕೊಂಡಾಡಿ ತಾಮುಮಿದಱೊಳಟ್ಟು ಮುೞುಂಗಿ ರ್ಪರ್. ಮಂತ್ರಿಗಳೀರಾಜಸೇನಾನಿ ಪರಿಜನಂಗಳಿರವನಾರಯ್ದು ತಾಮುಂ ದಂದುೞಿದಿರ್ಪುದೇ ಪರಮಲಾಭಮೆಂದು ತಮ್ಮಿಷ್ಟದೇವತೆಗಳ್ಗೆ ವಂದಿಸಿ ಅವರೞಗಜ್ಜಮನನುಮೋದನಂಗೆಯ್ಯುತೆ ಹಿತಾಹಿತಚಿನ್ತೆಯನುೞಿದಿ ರ್ಪರ್. ಕಾಯಸ್ಥಪ್ರಾಡ್ವಿನಾಕಾದಿ ವಿವಿಧಾಧಿಕಾರಿಗಳುತ್ಕೋಚವಂಚ ನಾದಿಗಳಿಂದೆಡೆಗೆಡೆಗಿರ್ವಡಿಸುವ ತೆಱಗೆ ಬೇಡಿಗೆ ಬಿರಾಡ ಬಿಟ್ಟಿಗಳಟ್ಟು ಳಿಯಿಂ ಪ್ರಜೆಗಳಂ ಕಿಡಿಪರ್ —ಎಂದು ನುಡಿದು ಒರ್ವಂ ಸುಮ್ಮನಿರೆ ; ಪೆಱತೊರ್ವಂ ಬೇಹಿಗನಿಂತೆಂದಂ :—

ಜೀಯ ! ಚಿತ್ತವಿಸು. ಇವರಿರವಂ ಕೇಳ್ವುದರಿದಾದೊಡಂ ಸ್ವೈರಣೆ ಗೊಂಡಾಲಿಪುದು. ಪೊತ್ತುಱಯುಣಿಸಿಂಗೆಂದು ತೆಲುಂಗರಡಿಗೆವನೆಯೊಳ್ ತುಪ್ಪುೞ್ಗತ್ತು ಕತ್ತರಿಪ ಪಲವಕ್ಕಿಗಳುಲಿಗೇಳ್ದು ಪ್ಪವಡಿಪರ್. ಬೞಕ್ಕೊಲೆ ಗೆಂಡದೊಳ್ ಸುಡುವ ಪಱಗಂಡದ ಪೊಲಸುಗಂಪಿಂಗೆ ಪೇಸಿದಂತೆಡೆಯೆಡೆ ಯೊಳ್ ಮೂಗುವಿಡಿದು ಸಂಧ್ಯಾಜಪಮನೊಡರಿಪರ್. ಉಣ್ಬಗಳ್ ಕೞವೆಯೋಗರಮುಮಂ ಕಾಯ್ಕುಚ್ಚಡಿ ಕಜ್ಜಾಯಂಗಳುಮಂ ಕಳೆದು, ಪಾಲ್ಕೊಸರ್ಗಳಂ ಪೞಿದು ಕರುಳ್ ಬಾಡು ಮಿದುಳ್ಗಳಂ ತಿಂದು ಬಸಿನೆ ತ್ತರನೀಂಟಿ ಬೆಱತು ಬೀಗಿ ತೇಗಿಯುರ್ಕಿ ಸೊರ್ಕಿ ಪೆರ್ಕಳಿಸುವರ್.

ಬಱಿಕ್ಕೆ ಮಿಕ್ಕಪೊಟ್ಟಿಂ ಕೋೞಿತಗರ್ಗಳ ಜೂದುಗಾಳಿಗದೊಳ್ ಕಳೆದು ಅಲ್ಲಿ ಸೋಲ್ತುದಂ ತಂತಮ್ಮಡಿಗೆವನೆಗಂ ತಮ್ಮ ನೇಹಿಗರ ಮನೆಗಂ ತಾಮೆ ಕೊಯ್ದು ಪಚರಿಸುಗುಡುವರ್. ಸಂಜೆಯೊಳ್ ಮಿಗವೇಂಟೆಗಾಱರ್ ಪಂದಿ ಮೊಲ ಪುಲ್ಲೆ ಮಱಿ ಸಾರಂಗಂಗಳ್ ಮೊದಲಾದ ಮಿಗಂಗಳಂ, ಪಕ್ಕಿ ವೇಂಟೆಗಾಱರ್ ಸೋಗೆ ಲಾವುಗೆ ಗವುಜು ಗೀಱುಗ ಗೊರವ ಪಾರಿವ ಗುಬ್ಬಿ ಕರ್ಬಕ್ಕಿ ಬೆಳ್ವಕ್ಕಿಗಳ್ ಮೊದಲಾದ ಪಕ್ಕಿಗಳಂ, ಸೀರ್ವೇಂಟೆಗಾಱರ್ ಮೀನೇಡಿ ಯಾಮೆಗಳ್ ಮೊದಲಾದ ಜಲಚರಪ್ರಾಣಿಗಳಂ, ಕಿಱು ವೇಂಟೆಗಾಱರ್ ಇಲಿ ಬೆಳ್ಳಿಲಿ ಮೊದಲಾದ ಬಿಲಚರಪ್ರಾಣಿಗಳಂ ತಂದು ಮುಂದಿರಿಪುದುಂ—ಅವಂ ನಿಟ್ಟಿಸಿ ಕೈಮುಟ್ಟಿ ಪರಿಕಿಸಿಯುಮಱೊಳ್ ಸಾರಮನಱಿತು ಸಂತಸಂಬಟ್ಟು, ಅವಂ ತಂದವರ್ಗಿಷ್ಟಾರ್ಥಮಂ ಕೊಟ್ಟು ಮನ್ನಿಪರ್. ಮತ್ತಮೇಂ? ಊರ್ವಂದಿಯಂ ತಂದವಂಗೂರುಂಬಳಿಯುಮೀವರ್ ; ಕುಱಿಯಂ ತಂದವಂಗೆ ತೆಱಗೆಯಂ ಮನ್ನಿಪರ್ ; ಗೆಂಡೆಮೀನಂ ತಂದವಂಗೆ ದಂಡಿಗೆಯುಮಿಕ್ಕುವರ್ ; ಉಡುವಂ ತಂದವಂಗೆ ಕೊಡಿಗೆಯಂ ಕುಡುವರ್. ಇನಿತಱಿಂ ತಣಿಯದೊಂದೊಂದು ದೆವಸಂ ತಾಮೆ ವಿಲಾಸದಿಂ ತಮ್ಮ ನೇಹಿಗರ್ವೆರಸು ಬೇಂಟೆಗೊಳವಿಗಳಂ ತಳೆದು ಪೋಗಮುಟ್ಟು ದೇಗುಲದ ಗೋಪುರಪ್ರಾಕಾರಮಂಟಪವಿಮಾನಂಗಳೊಳ್ ನೆಲಸಿರ್ಪ ಕಿಱುವಕ್ಕಿಗಳನೂದಿ ಮಿಂಟೆಗಳಿಂದಿಟ್ಟು ಕೆಡಸಿಯುಮಱೊಳೊಂದೊಂದು ಗರ್ಭಗೃಹಮಂ ಪೊಕ್ಕೊಡಂ ಬಿಡದೆ ಪಿಡಿದಲೆಯಿಕ್ಕಿ ತಂದು ಅವು ಸ್ವಾರ್ಜಿತಂಗಳಾದುದಱಿಂದತಿಪ್ರೀತಿಯಿಂ ತಂತಮ್ಮ ಸತಿಸುತಹಿತರೊಡವೆರಸುಣ್ಬರ್. ಇಂತೆತ್ತಾನುಮೊರ್ಮೆ ಸವನಿಸದೆ ಪೋಪುದೆಂಬ ತಳ್ಳಂಕದಿಂ ತಂತಮ್ಮ ಮನೆಯೊಳೆ ಸಾಕುವ ಕೋೞಿ ಹುಂಜ ಮಱಿ ಮೊಟ್ಟೆಗಳುಮಂ, ಪಂದಿಯ ಸಲಗ ಮಱಿಯೆಡೆಮಱಿ ಕಿಱುವಱಿಗಳುಮಂ ಲಾವಣಿಗೆಗೊಂಡು ಪದುಳದಿನಿರ್ಪರ್. ಊರೂರ್ಗಳಿಂ ತಪ್ಪಲುಪೆಗಳ ಪಣ್ಬಾಯ್ಕುಬ್ಬೆಗಳನೀರ್ಗಳಂ ಕಸನೆಂದು ಮಾಣಿಸಿ ಮಿಗವಕ್ಕಿಗಳಂ ತಪ್ಪ

ದೆಂದು ನಿರವಿಸುವರ್. ಅಂತುಮಲ್ಲದೆ ಅವರ ಅಂಗಳಂಗಳಾವಗಂ ಕೊಯ್ದುಡೆದುಗಿದ ಪಸಿದೊವಲ್ಗಳಿಂ, ಪೞಯೆಲೆಗಳಿಂ, ಗಿಳಿಯ ತುಪ್ಪುೞ್ಗಳಿಂ, ಪಂದಿಯ ಮೆಯ್ನವಿರ್ಗಳಿಂ, ಮಾಂಸಮುಂ ಸಂಸ್ಕರಿಸಲ್ಕೆಡೆವಿಡದಿಡಿದೆಡೆಯೊಳುದಿರ್ದರಿಸಿನವುಡಿಗಳಿಂದೆಸೆವ ಪಂಚವರ್ಣದ ರಂಗವಲ್ಲಿಗಳಿಂ, ಇರ್ತರದೊಳ್ಕಟ್ಟಿದ ನೇಣ್ಗಳೊಳ್ ನೇಲ್ದೊಣಗುವ ಕೆಂಗಂಡದ ಚಿಗುರ್ದೋರಣದಿಂ, ಕಿಱುನರದೊಳ್ ಕೋದು ಬಿಗಿದು ಜೋಲ್ವೆಳಮೀನ್ಗಳ ಸರದ ಮುತ್ತಿನ ಲಂಬಣಂಗಳಿಂ, ನಿಡುಗರುಳ ಪವಳದ ಸರಂಗಳಿಂ, ದೀಹವಕ್ಕಿಗಳಿಂಚರದ ಕೊಳಲ್ಗೊಗಬೀಣೆಗಳಿಂದರೆವಱಿದೂರ್ವಂದಿಗಳ್ ಚೀಱುವ ದನಿಯ ಬುರುಗುಗಳಿಂ, ಪುಂಜಗಳುಗ್ಗಡಣೆಯ ಕಾಳೆಗಳಿಂದರೆಗೊರಲನರಿವೆಡೆಯೊಳ್ ಪೊಡವಿಯನೊದೆವಾಡುಕುಱಿಗಳ ಖುರಪುಟನಿನದದ ಮುರಜಂಗಳಿಂ, ಪುಱಿದಿರಿಸಿದೀಚಲ್ಪೞುಕೆಂಜಿಗಗಳ ಲಾಜಾಕ್ಷತೆಗಳಿಂ, ಪಱಿದು ಕಿತ್ತು ಪೆರ್ಗಿಳಿಗಳ ನಿಡುಗಱಿಗಳ ದರ್ಭೆಗಳಿಂದಾವೆಯೋಡ ಕಪ್ಪರೆಯೊಳ್ ತೀವಿದ ಬಸೆಯ ಹೋಮದ್ರವ್ಯದಿಂ, ಪೊಸನೆತ್ತರೋಕುೞಿಯಿಂ--ಪಾಪಕನ್ಯೆಯ ಮದುವೆಮನೆಯಂತಿರ್ಪುವು. ಮತ್ತಮವರ ಪಸುಳೆಗಳ್ ಪಕ್ಕಿಯ ಪಿಡಿದಲೆಯೊಳ್ ತಿಱಿಕಲ್ಲಾಟಮುಂ, ಕೈಕಾಲ್ಗಳೆಲುಗಳನುಡಿವೆಡೆಯೊಳ್ ಕೋಲಾಟಮುಂ, ಕೀಱಿ ಪಾಱಿ ಬವಣಿಗೊಂಬ ಮಱಿವಕ್ಕಿಗಳನಟ್ಟಿ ತಱುಬಿ ಪಿಡಿವಲ್ಲಿ ಪಱಿವಱಿಯಾಟಮುಂ, ತುಪ್ಪುೞ್ಗೇೞು ಸಿಡಿವ ಪಾರಿವಂಗಳಂ ಪೊಯ್ದು ನೆಲಕ್ಕೆ ಕೆಡಪುವಲ್ಲಿ ಪೊಡೆಸೆಂಡಾಟಮುಂ, ತುಡುಂಕಿ ಪಿಡಿವೆಡೆಯೊಳ್ ಕೊಡಪುವ ಕೋೞಿಯೆಱಂಕೆಯ ಪೊಯ್ಲಿಂ ನೆಗೆದ ದೂಳಿ ಕಣ್ಗೆ ಬೀೞು ಕಣ್ಮುಚ್ಚುವುದಱಿಂ ಕಣ್ಮುಚ್ಚಾಟಮುಂ ಕಲ್ವರ್. ಅಂತುಮಲ್ಲದೆ ಅವರ್ಗೆ ಹರಣಂಬೆರಸು ಚತುರ್ದವ ಸಲಗನರಿಚದಂತೆ ಬಾಯ್ಮುಚ್ಚಿ ಪಿಡಿವುದಱೊಳ್ ಮುಷ್ಟಿಶಕ್ತಿಯುಂ, ಮಂಗಳವರದೊಳಿರ್ಪ ಮಱಿಗುಬ್ಬಿಯುಂ ಕೊಳವಿಮೀಂಟೆಗಳಿಂದಿಟ್ಟು ಕೆಡಪಲ್ ಗುಱಿನೋಟ್ಪಲ್ಲಿ ದೃಷ್ಟಿಶಕ್ತಿಯುಂ, ಹಬ್ಬ ಮದುವೆ

ಬಿರ್ದೂಟಂಗಳೊಳ್ ಪಲವಾಡುಕುಱುಗಳಂ ತಱುವಾಗಳ್ ತೋಳ ಬಲ್ಪಿಂ, ಪರಿದೋಡುವ ಪಂದಿಯುಂ ತವಕದಿನಟ್ಟಿ ಪಿಡಿವಲ್ಲಿ ಕಾಲ ಬೇಗ ಮುಂ ಕೊಯ್ವ ಕೊಱಿವ ಕೊರ್ಚುವೆಡೆವುಗಿವ ಸೀಳ್ವ ಕಡಿವ ಕತ್ತರಿಪ ಮಿದಿವ ಸದೆವರಿವುದುರ್ವ ಸುಡುವಡುವ ಸುಂಟಿಗೆಗಳೆವ ನೆತ್ತರ್ಗಱಿವ ಬಸೆದೆಗೆವ ಕರುಳನುಚ್ಚುವ ಗೆಯ್ಮೆಯೊಳ್ ಕೈಮೆಯುಂ ಸಫಲಮಪ್ಪುವು. ಇವಱ ನೋಟದೊಳೆ ಕಣ್ಗಳನಿವಱ ದನಿಯೊಳೆ ಕಿವಿಗಳನಿವಱ ಸೊವಡೊಳೆ ಮೂಗನಿವಱ ಸೋಂಕಿನೊಳೆ ತೊವಲನಿವಱ ಸವಿಯೊಳೆ ರಸನೆಯುಂ ಸವಿ ಗಾಣಿಸಿ ಪೆಱತೊಂದಱೊಳಾಸೆಯುಂ ತೊಱಿಯಿಸಿ ಕಡುಸಂತಸಂಬಡೆದಿ ರ್ಪರ್. ಮತ್ತಮೇಂ? ಕಿಱಿದುಂ ದಿವಸದೊಳೆ ಪೊಟ್ಟಿಯ ಮಾಂ ಗಳುಂ ತೀರ್ವುವು: ಆಬಟ್ಟಿಕ್ಕುವರೆಂತಿರ್ಪರೊ? ತಂದೆಯ ತದ್ದಿನಮೆಂ ದೊಂದು ದಿವಸಮುಟ್ಟಿದುದರ್ಕೆ ಮೆಯ್ಗಱಗುವರ್; ಏಕಾದಶಿಯೊ ಳೆಮಿಲ್ಲದುದರ್ಕೆ ಬಾಯ್ನೀರೊಱಿತು ಬಣ್ಣಂಗುಂದುವರ್; ಕಟ್ಟೆಡಱೊಳ್ ಬಿಟ್ಟಿರಲಾಱದೆ ಸುಟ್ಟ ಪಕ್ಕಿಯುನೆಡಗೆಯ್ಯೊಳಿಟ್ಟು ಆಗಂಧಮುನಾಘ್ರಾ ಣಿಸುತ್ತೆ ಪಥ್ಯಮುಂ ಕೊಂಬರ್, ಎಂದು ಬಿನ್ನವಿಸುತ್ತಿರೆ—

ಅರಸನದರ್ಕೆ ಪೇಸಿ ಪೆಱತೊಂದಂ ಕೇಳ್ವೆನೆಂದದಂ ಮಾಣಿಸಿ ಅವರ ಸಂಧಿವಿಗ್ರಹಾದಿ ಷಾಡ್ಗುಣ್ಯದೆಸಕಮುಂ ಬೆಸಗೊಳೆ ಪೇೞ್ವಂ :—

ದೇವ! ಚಿತ್ತವಿಸು. ಆಂ ಬಿನ್ನವಿಪುದಱೊಳೇನಾನುಂ ಮಱಿಮೋ ಸದಿಂ ಪೆರ್ಚುಕುಂದುಳ್ಳೊಡದಂ ಸೈರಿಪುದು. ಆ ತೆಲುಂಗರಾಯುಗುವರಂ ಮಧುರೆಯುತ್ತಣಿಂ ಪಡೆವೆರಸು ಬರ್ಪುದಂ ಕೇಳ್ದು ಈಪ್ರಾಂತದ ನಾಡು ಬೀಡುಗಳನಾಳ್ವ ಪಾರ್ವದೊರೆಗಳುಮರಸುಮಕ್ಕಳುಮೊಕ್ಕಲಿಗರುಂ ಬಣಂಜಿಗರುಂ ಬೇಡರುಂ ಮೊದಲಾದ ಪಲಂಬರ್ ಪ್ರಭುಗಳ್ ತಮ್ಮುಳ್ಳ ಧನ ಕನಕ ವಸ್ತು ವಾಹನಂಗಳಂ ಕೊಂಡು ಕಾಲ್ಗೆಱಗಿ ಕಪ್ಪಕಾಣ್ಕೆಗಳ ನೊಪ್ಪಿಸಿಯುವನ ಮುದ್ರೆಯುಂ ವಹಿಸಿಯುಂ ಪೆಸರ್ವೊತ್ತುಮಾಳ್ಗಯ್ವಂ ಆವನೊಲವಂ ಪಡೆದು ತಂತಮ್ಮ ನೆಲದೊಡೆತನಮುಂ ನೆಲಗೊಳಿಸಿಯುನಿಬ

ರುವೊಂದಾಗಿ—ಪೊಸನೇಸಱಿಖೊಳ್ ಪೊಣರ್ಕೆಗೆಳಸುವ ಮರ್ಬಿನ ಪರ್ಬು ಗೆಯಂತೆಯುಂ, ಬಿಱುಗಾಳಿಯಿಂ ತಱುಬಲೆಣಿಸುವ ಮುಗಿಲ ಮೋಹರ ದಂತೆಯುಂ, ಪೆರ್ಗಿರ್ಚಿಗಿದಿರ್ಚಿ ನಿಲಲ್ಬಯಸುವ ಪೞ್ತ್ರಯ ಮೊತ್ತದಂತೆ ಯುಂ, ಕರೆಗಣ್ಮುವ ಪೊೞೆಯ ಪೆರ್ಮೆಗೆ ಮಾರ್ಮಲೆಯಲಾಸೆವಡುವ ಮಱಲ್ಗಟ್ಟೆಯಂತೆಯುಂ, ಪಕ್ಕಿಯಾಣ್ಮನೊಳ್ಕಳಂಚಲ್ ಪೊಂಚುವೊಳ್ಳಿಗ ಳೊೞ್ಗಿನಂತೆಯುಂ, ಗಂಡುಸಾಳುವನನಂಡಲೆಯಲುಜ್ಜವಣಿಪ ಗೂಗೆಗಳ ಗುಂಪಿನಂತೆಯುಂ, ಮತ್ತಮೇಂ, ಸಿಂಗದೊಳ್ ಕಾದಲಂಗವಿಪ ಜಾಯಿ ಲಂಗಳ ಜಂಗುಳಿಯಂತೆಯುಮವರ್ ಮುಂತಱಿಯದೆ ದೇವರಡಿಯೊಳ್ ಮಚ್ಚರಮಂ ಮನಂಗೊಳಿಸಿರ್ಪರೆಂಬುದುಂ ;

ಅರಸನಾದೂತನ ಮೊಗಮಂ ನೋಡಿ—ನಿನ್ನೀನುಡಿಗಳೆಮಗೆ ಕಿವಿ ಗೊಳವೇೞ್ಪುವೆಂದು ಕಂಡುದಱಿಖೊಳ್ ಕೆಲಕೆಲವಂ ಕೂಡಿ ಕಳೆದು ಕಬ್ಬಂ ಗೆಯ್ಯದಿರ್ದುದನಿರ್ದಂತೆ ಪೇೞ್. ಅವರೆನ್ನೆಡೆಯೊಳೆಣಿಸಬಾರದುದನೆಣಿ ಸಿದೊಡಮಾಡ ಬಾರದುದನಾಡಿದೊಡಮೆಸಗಬಾರದುದನೆಸಗಿದೊಡಮುದ ರ್ಕಂಜದಿರೆಂದು ನಿರವಿಪುದುಂ ; ಅವಂ ಕೈಮುಗಿದಿಂತೆಂದಂ :—

ದೇವ ! ನೀನೆನ್ನ ಬಿನ್ನಪಮಂ ದಯೆಯಿಂದಾಲಿಪುದು. ಒರ್ಮೆ ಆ **ತಿರುಮಲೆರಾಜಂ** ಒಡ್ಡೋಲಗದೊಳ್ ತನ್ನೆಡಬಲದೊಳ್ ಸಿಂದಿರ್ದಖಿಳ ಪ್ರಭುಗಳೊಳ್ ಕಟಾಕ್ಷಾಮೃತಮಂ ಕವಿಸಿ,—ನಿಮ್ಮ ನಿಮ್ಮ ನಾಡುಬೀಡು ಗಳ ಪದುಳದ ಪರಿಯೆಂತು ?, ಎನಲ್ ; ಒಡನವರನಿಬರುಮೊಂದಾಗಿ ವಂದನಂಗೆಯ್ದು ಒಂದೆ ಸೂೞಿಖೊಳ್ ಮೈಸೂರ **ರಾಜೊಡೆಯ**ರಟ್ಟುಳಿ ಬೆಟ್ಟಿತೆಂದು ಗಾವಳಿಪುದುಂ ; ಆರಾಯಂ ಪಡಿಯಱರ ಮೊಗಮಂ ನಿಟ್ಟಿಸಿ ಅವರಾ ಕಳಕಳಮಂ ಮಾಣಿಸಿ—ಪರಿವಿಡಿಯಿಂದೋರೊರ್ವರೆ ಬಿನ್ನ ವಿಸಿಮೆಂಬುದುಂ ;

ಮೆಯ್ಯಿಕ್ಕಿ **ಕಾರುಗಹಳ್ಳಿಯ**ವನಿಂತೆಂದಂ :—ಜೀಯ ! ಕೇಳ್. ಎಮ್ಮ ಪೊೞಲ್ಗೆ ಕೇರಿಗಳಾಱು. ದೊರೆಗಳುಮಱುವರೊಡವುಟ್ಟಿದರಾಕೇ

ರಿಗಳಂ ಪರ್ಚುಗೊಂಡು ಒರ್ಬೊರ್ವರೋರೊಂದು ಕೇರಿಯೊಳರಸುಗೆಯ್ಯುತ್ತಿರ್ದೆವು. ಇಂತಿರ್ಪೆಮಗೆ ಎಲ್ಲೆವೊಲದತ್ತಣಿನಾರಾಜನ್ನೃಪನೊಳ್ ಪಗೆತನಂ ಬಳೆದು ಎಡೆವಿಡದೆ ಕಾದುವೆಡೆಯೊಳ್ ಅಂದಂದಿಂಗೆನ್ನೊಡವುಟ್ಟಿದರೈವರ್ ಕಡಿವಡೆದು ಮಡಿದರ್. ಆಬಟೀಕ್ಕಾನುಮವನಿಂದಟೀವನೇ ನಿಶ್ಚಯಿಸಿ ನಿರ್ಭಯದೊಳವನೆಡೆಗೆ ದೂತರನಟ್ಟೆ—ಇಂದಿನ ಕೊಳಗುಳದೊಳೆರಟ್ಪಡೆಯುಂ ಪೋರದೆ ನೋಡುತಿರ್ಕೆ, ಆವಿರ್ವರೆ ಕಾದುವಂ. ಆಗಳಾನೀಕತ್ತಿಯಿಂ ನಿನ್ನ ನೆತ್ತಿಯನೊತ್ತಿ ಕತ್ತರಿಪೆಂ. ಅದು ತಪ್ಪಿದೊಡೆನ್ನ ನಾಡುಬೀಡುಗಳನೊಪ್ಪಿಸಿ ಕಪ್ಪಡಮನುಟ್ಟು ಕಪ್ಪರೆವಿಡಿದು ಜೋಗಿಯಾಗಿ ಪೋಪೆನೆಂದು ಬೆಸಸಿ ಕಳುಪಿದುದಂ ಕೇಳ್ದು ಮಗುೞ್ದವನುಂ-ನೀನೆಂದುದೆಮಗೆ ಸಂಮತಂ. ಆನುಮಿಂದೆನ್ನಯ ಎಡಗೆಯ್ಯ ಚಮ್ಮಟಿಗೆಯಿಂದಮೆ ನಿನ್ನ ಮೂಗಂ ಪಱಿಗಡಿವೆನೆಂದು ಬೆಸಸಿ ಕಳುಪಿ, ಆಗಳೆ ಪಡೆಯನೊಡಗೊಂಡು ಬರ್ಪುದುಂ ; ಅನುಮೆನ್ನ ಸರ್ವಬಲದೊಡನೆ ಇದಿರೇಱಿ ಪೋದೆಂ. ಆಗಳೆರಟ್ಬಳಮುಂ ಬೆಱಗುವಟ್ಟು ನಿಟ್ಟಿಸುತಿರುತಿರ್ಪಿನಂ ; ಆವಿರ್ವರುಂ ನಾರುವಂಗಳನೇಱಿ ರಾವುತತನದ ಜಿನ್ನಣಮಂ ಮೆಱೆಯಲ್ ನಡೆಯಿಪುದುಂ ಕುಣಿಯಿಪುದುಂ ಪಾಯಿಪುದುಂ ಸುತ್ತಿಪುದುಂ ತೊಲಗಿಪುದುಂ ದುಮ್ಮಾಳಿಪುದುಂ ತಱುಬುವುದುಮೆಂಬಿವು ಮೊದಲಾದ ಗತಿಭೇದಂಗಳಿಂದಿನಿಸುಂ ಪೊೞ್ತುಗಳೆಯುತ್ತಿರ್ಪಿನಂ; ಆನೊತ್ತರಿಸಿ ಕತ್ತಿಯಿಂ ನೆತ್ತಿಯಂ ಪೊಯ್ಯಲೊಡನವಂ ತನ್ನ ಬಲಗೆಯ್ಯಲಗಿಂದಣೆದೊಡನೆಡಗೆಯ್ಯ ಚಮ್ಮಟಿಗೆಯಿಂದೆನ್ನ ಮೊಗಮಂ ಪೊಡೆಯೆ, ಮೂಗು ಪಱಿದು ಪರಿಭವಂಬಡೆದೂರ್ಗೆ ವಂದಾಲೋಚಿಸಿದೆಂ :—ಅಕಟೇಘಾತುಕನತಿವೈರದಿಂದೆಳೆಯೊಳ್ ನೆಗೞ್ತೆವೆತ್ತ ಬತ್ತೀಸ ಕೈದುಗಳೊಳಂ ಗಣನೆಗೆ ಬಾರದೀಚಮ್ಮಟಿಗೆಯಿಂ ಬಡಿದಂ. ಅದಱಿಂದಾಂ ಮುನ್ನಾಡಿದ ಮಾತಿಂಗೆ ತಪ್ಪಿದ ಪಾಪಮನಾದೊಡಮೊಡಂಬಟ್ಟು ಎಂತಾನುಮೀಪಾಡುಪಂತಮಂ ಮಗುೞ್ವೇೞ್ಕುಮೆಂದಿರ್ಪಿನಂ ; ಅನಿತಱೊಳೆ ಎನ್ನೂರಂ ಲಗ್ಗೆಯೇಱಿ

ಕಟ್ಟೞ್ಗಲೆವೀೞ್ದು ಎನ್ನ ಸರ್ವಸ್ವಮಂ ಸೂಱೆಗೊಂಡು ಎನ್ನುಮಂ ಕೋಳ್ವೇದನೆಂದು ಜಱೆದು ಪೊಱಮಡಿಸಿ ಯಾಕ್ಷಣದೊಳ್ ಕೋಂಟೆಯಂ ಕೆಡಪಿಸಿ ಔಡಲಮಂ ಬಿತ್ತಿಸಿ ಆವಸ್ತುವಾಹನಂಗಳಂ ದೇಗುಲಂಗಳ್ಗಂ ಪಾರ್ವರ್ಗಮಿತ್ತುಮೆನ್ನ ನಾಡೊಳ್ ತಲೆವಳ್ಳಿಗಳನಗರಂಗೆಯ್ದಂ. ಆಬೞಿಕ್ಕಾಂ ಪುಗಲೆಡೆಯುಮಂ ಪೊರೆವರಸರುಮಂ ಕಾಣದಿರ್ದೆಂ. ಈಗಳೆನ್ನ ಭಾಗ್ಯೋದಯದಿಂ ನಿಮ್ಮಡಿಗಳಂ ಸಾರ್ದೆಂ. ಎನ್ನಂ ಕಾಯವೇೞ್ಕುಮೆಂದು ಬಿನ್ನವಿಸಿ, ಕಿವಿಯಿಂದಂ ಕಿವಿವರೆಗಂ ಮೊಗದೊಳ್ ಗೆಱೆಗೊಂಡು ಗಂಟುಗಟ್ಟಿ ಮೆಱೆವ ಏಱ ಬಾಸುೞಂ ತೋಱಿಸಿ ಪೆಱಸಾರಲೊಡಂ ;

ಕನ್ನಂಬಾಡಿಯವನಿಂತೆಂದಂ :—ಜೀಯ ! ರಾಯವಜೀರರೊಳ್ **ರಾಣಾಜಗದೇವರಾಯ**ರಸನಗ್ಗಳನೆಂಬುದು ಚಿತ್ತಕ್ಕೆ ವೇದ್ಯಮೈಸೆ ! ಅವನಡಿಗೋಂಟೆಗಳೆಮ್ಮ ನೆರೆಯೊಳಿರ್ಪುವು. ಅವಱೊಳ್ ಪೊಸವೊೞಲಂ ಮೋಸದೊಳ್ ಕೊಳಲೆಂದು ರಾಜನೃಪನೆಮ್ಮೊಳ್ ಸ್ನೇಹಂಬೆರಸಿ ಎಮ್ಮೆಡೆಯೊಳ್ ನಡೆದು ಆಕೋಂಟೆಯಂ ಬಸಂಗೆಯ್ದಂ. ಅದರ್ಕೆನ್ನ ಕುವರರ್ ಆತನ ಪ್ರಭುಮಂತ್ರೋತ್ಸಾಹಶಕ್ತಿಗಳುಮಂ, ಆತನ ಭೃತ್ಯರೈಕಮತ್ಯಭಯಭಕ್ತಿಗಳುಮಂ, ಆತನನುಜರ ಸೌಭ್ರಾತ್ರಸೌಜನ್ಯಸೌಶೀಲ್ಯಂಗಳುಮಂ, ಅವನ ಕುವರರ ಕೂರ್ಮೆಪೆರ್ಮೆಕೂರ್ಪುಗಳುಮಂ, ಅವನ ಸೈನಿಕರ ಶಕ್ತಿಸಾಹಸಶೌರ್ಯಂಗಳುಮಂ, ಆತನೊಳ್ ನೆಲೆಗೊಂಡ ದೈವದೊಲವುಮಂ, ಪಾರ್ವರೆ ಪರಕೆಗಳುಮನಱಿಯದೆ ದುಱುದುಂಬಿತನದಿಂ ಕೆಣಕುಱಗಳಂ ತೆಗೆವುದುಂ ; ಅವನೆಮ್ಮ ನಾಡೊಳ್ ದಾೞಿಟ್ಟು ತುಱುಸೆಱೆಯೊಡನೆನ್ನಣುಗರಂ ಪಿಡಿದು ಬಂಡುಗೆಯ್ದು ಪಾರ್ವಗೊಲೆಗೆ ಪೇಸಿ ಬಿಟ್ಟು ಎನ್ನ ನಾಡೊಳ್ ತಲೆಯೂರೆಸಿಪ ಬೂಕನಕೆರೆಯಂ ಕೊಂಡು ಅದರ್ಕೆ ಸಲ್ವ ಎಲ್ಲಾ ಪಳ್ಳಿಗಳಂ ಮೇಲ್ಗೋಂಟೆಯ ತಿರುಕುಳಿ ಪಾರ್ವರ್ಗಿತ್ತಂ. ಅವರುಮೀಗಳೆನ್ನೊಳ್ ದಾಯಿಗರುಂ ದೊರೆಯುಮಾದರ್. ಅಂತುಮಲ್ಲದೆ ಇಂದು ನಾಳಿನೊಳ್ ನಾನಿರ್ಪರಂ ಕೊಳ್ಳದೆ ಮಾಣಂ.

ಇದರ್ಕೆನಗೆ ನೀನೆ ಗತಿಯೆಂದು ಬಿನ್ನವಿಸಿ ತೊಲಗಲೊಡಂ ;

ತಳಕಾಡವನಿಂತೆಂದಂ :—ದೇವ ! ಬಿನ್ನಪಂ. ಆಜಗದೇವರಾಯರಸನ ಪಡೆವಳರೊಳ್ ಮೊದಲಿಗನುಮಿಳೆಯೊಳ್ಬಲ್ಗಯ್ಯನುಮೆಂದು ನೆಗೞ್ದ **ದಟರಾಯನ** ಅಱಕೆರೆಯುಂ ಆತಂ ಪಗಲ್ ಕೞ್ಗೊಲೆಯೊಳ್ಕೊಂಡಲ್ಲಿ ಸಿಲ್ಕಿದ ನಲ್ವಚ್ಚಂಗಳನೀಪಶ್ಚಿಮರಂಗನಾಥಂಗೆ ಸಮರ್ಪಿಸಿದುದುಂ, ಪಣಂಗಳಿಂ ಪೊಱವಳಯದ ಕಲ್ಲ ಪಾಗಲಂ ಕಟ್ಟಿಸಿದುದುಮಾಳ್ದನ ಚಿತ್ತವೃತ್ತಿಗೆ ಬಂದಿರ್ಕುಮೈಸೆ ! ಬೞಿಕ್ಕಮೆನ್ನಿರವನಱಿಯದೆ **ಅದಟರಾಯನ** ದುರ್ಬೋಧನೆಗೊಳಗಾಗಿ ಅಱಕೆರೆಯ ನಾಡೊಳ್ ಮಱುಮುಯಿಲನೆಸಗುತಿರ್ಪಿನಂ ; ಆರಾಜನೃಪನೆಮ್ಮ ಬನ್ನೂರಂ ಕೊಂಡಂ. ಆರೋಷದೊಳಾಂ ಪೆರ್ವಡೆವೆರಸು ಮಾರ್ಕೊಳೆ, ಆವಂ ಕಿಱಿದು ದೞದೊಳಿರ್ದೊಡಮೆಮ್ಮ ಬಲಮಂ ಲೆಕ್ಕಿಸದೆ ಪೆರ್ಕಳಿಸಿ ಸೊರ್ಕಾನೆಯ ಮೊಕ್ಕಳಮಂ ಪೊಕ್ಕು ಪಾಯ್ದು ಪೊಯ್ವ ಐವಾಯ ಸಿಂಗದಂತೆಯುಂ, ಪೆರ್ವೆಟ್ಟಿನ ತಟ್ಟಿನೊಳ್ ನಟ್ಟು ತಟ್ಟುರ್ಚಲೆಱಗುವ ಬಱಸಿಡಿಲಂತೆಯುಂ, ಕಟ್ಟುಱದೊಳುಱುಬಿ ತಱುಬಿ ತಾಗಿ ಕಣೆ ಕೈಯಿಟ್ಟಿ ಪಾಱುಂಬಳೆ ಭಿಂಡಿವಾಳ ಸಬಳ ಭಲ್ಲೆಯ ಕತ್ತಿ ಕಡಿದಾಬೆ ಕಡಾರ ಕೈಗತ್ತಿಗಳಿಂ ಕೊಂದು ಕೊಱದರಿದು ನಾಂಟೆಱದೌಂಕಿ ಕಡಿದು ಕತ್ತರಿಸಿ ತಿವಿದು ಕೊಯ್ದು ಕೋಟಲೆಗೊಳಿಸಿ ಪೊಕ್ಕಲ್ಲಿ ಪೊಕ್ಕೊಕ್ಕಲಿಕ್ಕಿ ಕಣ್ಗಡಿಸಿ ಕೆಲರಂ ಕೈಸೆಱವಿಡಿದು ಕೈದುಗಳನೀೞ್ದು ಬನ್ನರಿಬಡಿಸಿ ಬೞಿನೀಗುರ್ಡಿಸಿ ಬವಣಿಗೊಳಿಸಿದಂ. ಅದಂ ನೆನೆದೊಡೆ ಈಗಳುಮೆರ್ದೆಯೊಳದವೞಲುಂ, ಮೆಯ್ಯೊಳ್ ನಡುಕಮುಂ, ನುಡಿಯೊಳ್ ತಡಬಡಮುಮಪ್ಪುದು. ಎನ್ನ ರಣಭೀತಿಯಿಂದೆಂದೆಣಿಸತಕ್ಕುದಲ್ತು, ಈನೆರೆದರಸುಮಕ್ಕಳನಿಬರುಮಱಿತಿರ್ಪರ್. ಎನಿತಾನೆಕುದುರೆಕಾಲಾಳ್ಗಳಿರ್ದೊಡಂ ಮಾರ್ಮುಲಿವುದರಿದು. ಅವನೊಳ್ ಮಾನಸರ್ಗಳವಡದದೊಂದು ಮೈಮೆ ಮೆಯ್ಗೊಂಡಿರ್ಪುದು : ಅದೇಂ ಮಂತ್ರದಿಂದಮೋ, ಮಾಯೆಯಿಂದಮೋ, ಕೈ

ಮೆಯಿಂದವೋ ಕಡುಪಿಂದವೋ, ಬೀರದಿಂದವೋ, ಬಿನ್ನಣದಿಂದವೋ, ಸತ್ವದಿಂದವೋ, ಸಾಸದಿಂದವೋ ! ಮೇಣವಂ ಲಾವಣಿಗೆಯೊಳ್ ತಪ್ಪದೀವ ಕೈಜೀತದೊಳಂ ಕಿಱುಮೆಚ್ಚಿನೊಳ್ಕುಡುವುಡುಗೊಱೆ ಕೊಡಿಗೆನಾರಕಂಗಳೊಳಂ, ಮದುವೆಯೊಸಗೆಗಳ್ಗೆಂದು ಪಸದನಂಗೆಯ್ವ ಪೊಂಗಳೊಳಂ, ಕರೆದು ಲಾಲಿಸಿ ನಂಬಿಸಿ ತಂಬುಲಂಗುಡುವ ಮನ್ನಣೆಗಳೊಳಂ, ಮನನಾಱೆ ಮಾಱುವೋದ ಕೂರಾಳ್ಗಳ ಕೂರ್ಮೆಯಿಂದವೋ ! ಮತ್ತಮೇನಡಿಗಡಿಗೆ ನಡೆದು ಬಗೆಗೞಗಿ ಮೆಯ್ಮವಿರುಣ್ಮೆ ಕೆಯ್ಮುಗಿದರೆಗಣ್ಮುಚ್ಚಿ ಕೊಂಡಾಡಿ ಕೊನರ್ದ ಆನಂದಾಶ್ರುವಂ ಕಱೆದಾಳ್ಗೆಯ್ವಭಕ್ತಿಯೊಳಂ, ಎಮ್ಮೆಲ್ಲರುಮಂ ಸದೆದೀಟ್ಟು ಕೈಕೊಂಡ ರತ್ನಭೂಷಣಗೆಗಳೊಳಮರ್ದ ದಿವ್ಯರತ್ನಂಗಳಿಂ ತೆತ್ತಿಸಿದ ಕಿರೀಟ ಮಕುಟ ಕುಂಡಲ ಗ್ರೈವೇಯಕ ಹಾರ ಕಟಕ ದಾಮೋದರಬಂಧನ ಕಾಂಚೀಕಲಾಪ ನೂಪುರಾದಿ ದಿವ್ಯಾಭರಣಸಮರ್ಪಣದೊಳಂ, ಎಮ್ಮ ಬಂಡಾರಂಗಳೊಳ್ ಸೂಱೆಗೊಂಡ ಪೊಂಗಳಿಂದೊಡರ್ಚಿದ ಸೋಪಾನ ಗೋಪುರ ಪ್ರಾಕಾರ ವಿಮಾನ ಮಂಟಪ ವಾಹನೋಪವನ ವಾಪೀಕೂಪತಟಾಕಾದಿ ನಿರ್ಮಾಣದೊಳಂ, ಅಂದಂದೆಸಗುವ ಸಂವತ್ಸರಮಾಸಪಕ್ಷನಿತ್ಯನೈಮಿತ್ತಿಕಾದ್ಯುತ್ಸವಂಗಳೊಳಂ ತಣ್ಣನೆ ತಣಿದೊಲ್ದ ಯಾದವಗಿರಿನಾರಾಯಣನ ಕಟಾಕ್ಷಾಮೃತಸೇಕದಿಂದವೋ! ಮತ್ತಮತಿಭಕ್ತಿಯೊಳ್ ಕರೆಯಿಸಿ ಬರಿಸಿ ಯರಮನೆಯ ಮಣಿಪೀಠದೊಳ್ ಕುಳ್ಳಿರಿಸಿ ಮಣಿದಡಿದೊಳೆದಣ್ಪಿಟ್ಟಲರಂ ಸೂಡಿ ನಲ್ಲುಡೆಯುಂ ಪೊದೆಯಿಸಿ ತೊಡವಂ ತುಡಿಸಿ ಇಷ್ಟದೇವತೆಯೆಂಬ ಭಾವನೆಯೊಳುಪಚರಿಸಿ ಬೆಳೆಗೆಯ್ವೊಲಂಗಳಂ ಗರ್ದೆತೋಂಟಂಗಳಂ ಪಳ್ಳಿಗಳಂ ಬೇಟ್ಪ ವಸ್ತುವನಿತ್ತು ಪರಕೆಗೊಂಬುದಱಿಂದೆ ಎಱಕಂಬೆತ್ತ ಪಲಂಬರ್ ಪಾರ್ವರ ಆಶೀರ್ವಾದದಿಂದವೋ ! ತಿಳಿಯದು. ಅವಂ ಇನ್ನೀ ಮೇರೆಯೊಳಿರ್ಪನಲ್ತು. ಗಳಿಗೆಯರಗಳಿಗೆಯ ಗಣನೆಯೊಳೆ ಪೆರ್ಚಿ ಬರ್ಪಂ. ಆವನಂ ಪದೆವುದರ್ಕಿದುವೆ ವೇಳೆ. ಈನೆರೆದರಸುಗಳನಿಬರುಂಬೆರಸು ದೇವರೇ

ಟ್ಟಿರವೇಳ್ಕುಂ. ಈರಾಯಗಜ್ಜದೊಳಾಂ ಪಡೆವಳನಪ್ಪೆಂ. ಎನಗಪ್ಪಣೆವೀಳೆಯುಮಂ ದಯೆಗೆಯ್ವುದು-ಎಂದು ಮಣಿದು ಬಿನ್ನವಿಸಿ ಸುಮ್ಮನಿರ್ಪಿನಂ;

ಅಮ್ಮಚವಾಡಿಯುಮೆಳ್ದು ಕೆಯ್ಮುಗಿದಿಂತೆಂದಂ :—ಸ್ವಾಮಿಾ! ಈತಳಕಾಡ **ನಂಜರಾಜಂ** ಪಾದಕ್ಕೆ ಬಿನ್ನವಿಸಿದಿನಿತುಂ ನಿಕ್ಕುವಂ. ಆ ಮೈಸೂರವನೊಳತಿಮಾನುಷಶಕ್ತಿಯುಂಟು. ಅದರ್ಕೆ ಕುಱುಪೇನೆಂದೊಡೆ—ಈಯುಗದೊಳಂ ಬೇಟ್ಪರ್ಗೆ ಬೇಟ್ಪುದನೀವ ಶ್ರೀವೇಂಕಟೇಶ್ವರನಿವನ ಮೈಮೆಯನಱಪಲೆಂದೊರ್ವ್ವ ತನಗೆ ಪರಕೆಗೊಂಡು ತಿರುಪತಿಗೇಟ್ಟಿಂದ ವಿಪ್ರಕುಲದ ಕಣ್ಬುಱಡುವೆಣ್ಗೆ ತಾನೊಂದು ಕಣ್ಣನಿತ್ತು ಪೆಱತೊಂದಂ ಮೈಸೂರ ರಾಜನೃಪನೀವನೆಂದು ಕಳುಪುವುದುಂ; ಈಕೌತುಕಮಂ ನಿಟ್ಟಿಸಲೆಂದಾತಿರುಪತಿಯೊಳ್ನೆರದಾಜಾತ್ರೆಯ ನೆರವಿಯೆಲ್ಲಮುಮವಳ ಬೞಿವಿಡಿದೂರ ಮುಂತಣ್ಗೆ ಬರಲೊಡಮಾವಾರ್ತೆಗೇಳ್ದು ರಾಜನೃಪಂ ಮಿಂದು ಮಡಿಯುಟ್ಟು ತನ್ನ ಮನೆಯೊಳ್ನೆಲಸಿ ಮನೆದೇವರೆನಿಪ ಲಕ್ಷ್ಮೀಕಾಂತಂಗಂ ಯದುಗಿರಿಯೊಳ್ನೆಲಸಿ ಯಾದವರಿಂ ಪೂಜೆಗೊಂಡು ತನ್ನ ಕುಲದೇವರೆನಿಸಿದ ನಾರಾಯಣಂಗಂ ತನ್ನೊಳ್ ನೆಪಮಿಲ್ಲದೊಲ್ದು ದಯೆಗೆಯ್ದ ಶ್ರೀವೇಂಕಟೇಶಂಗಂ ಮಣಿದಾನೆರವಿಯನಿದಿರ್ಗೊಂಡು ಬಲವಂದು ಕೆಯ್ಮುಗಿದು ಬಗೆಯೊಳ್ ಶ್ರೀವೇಂಕಟೇಶ್ವರನ ಭಾವನೆಯುಂ ನೆಲೆಗೊಳಿಸಿ ಆಪಾರ್ವಿತಿಯುಂ ಕರೆದು,—ಎಲೆ ತಾಯೆ! ಮುಂ ನಿನಗೆ ತಿರುಪತಿಯೊಳ್ನೆಲಸಿದೊನಂದು ಕಣ್ಣಿತ್ತಾ ಶ್ರೀವೇಂಕಟೇಶ್ವರನೀಗಳೆನ್ನೆರ್ದೆವನೆಯೊಳ್ ನಿಂದು ಪೆಱತೊಂದು ಕಣ್ಣನಿತ್ತಂ. ಎನ್ನಂ ಕಣ್ದೆಱೆದು ನೋಡು ಎಂಬುದುಂ; ಮುಸುಂಕಿದ ಮುಗಿಲನೊಡೆದು ಮೆಯ್ದೋಱುವ ಪೆಱೆಯಂತೆಯುಂ, ಮಂಜಂ ಕಳೆದು ತೊಳಗುವ ನೇಸಱಂತೆಯುಂ, ತಮಮಂ ತಟ್ಟುಗಿಸಿ ಪೊಣ್ಮುವ ಸತ್ವಗುಣದಂತೆಯುಂ, ಮಾಯೆಯಂ ನೀಟ್ಟಿರಿಸಿ ನೆಗಪ್ವ ತತ್ವಜ್ಞಾನದಂತೆಯುಂ ಎವೆದೆಱೆದು ಮಿಱುಪ ಕಣ್ಣಂ ಕಂಡಾನೆರೆದ ನೆರವಿಯೆಲ್ಲಮುಮಿಾತನಪರಾವತಾರಮೆ ತಪ್ಪ

ದೆಂದು ವಂದಿಸಿ ಪರೆದು ಪೋದುದು. ಇದನೆಲ್ಲರುಂ ಬಲ್ಲರ್. ಅಂದು ಮೊದಲಿವನ ವೈಮೆಗಳ್ಗೆಯೆಸ್ಟ್ರೋರ್ವನನುಟಿದು ಕಟಲೆ ಬಿಳುಗುಲಿ ಬಿಳಿಕೆರೆ ಹುರ ಹುಲ್ಲನಹಳ್ಳಿ ಮೂಗೂರ್ ಮೊದಲಾದ ದೊರೆಗಳವಂಗೆ ಪೆಣ್ಣಿತ್ತು ಕಪ್ಪಮಂ ತೆತ್ತು ಕೆಳೆಗೊಂಡಿರ್ಪರವರೇಗೆಯ್ವರ್ ? ಅವರೆನಿತರವರ್ ? ಅವರ ಪಾಡೇಂ ? ಅವರ ಪವಣಾವುದು ? ಎನ್ನಂತಪ್ಪಂಗ ಮಸದಳವಾಗಿರ್ಕುಂ. ಇನ್ನೆಂತಾನುಮುಪೇಕ್ಷಿಸತಕ್ಕುದಲ್ತು. ಈಗಳೆ ಪಡೆವಳಿತನಮನೀ**ನಂಜರಾಜಂ**ಗಿತ್ತೆಮ್ಮೆಲ್ಲರ್ಗಂ ನೀಮುಳ್ಳ ಬಲಸನ್ನಾಹಂಬೆರಸೊಡವರ್ಪುದೆಂದಾಣತಿಗೊಟ್ಟು, ಮತ್ತಂ ಸುತ್ತಣರಸುಗಳ್ಗೆ ರಾಯಸಮನಟ್ಟಿ ಕರೆಯಿಸವೇಟ್ಕುಂ. ಇಂತೆನ್ನ ಬಗೆಗೆ ತೋರ್ಪುದಂ ಬಿನ್ನವಿಸಿದೆಂ. ಮೇಗಣೆಸಕಂ ದೇವರ ಚಿತ್ತವೊಪ್ಪಿದಂತು—ಎಂದು ಬಿನ್ನವಿಪುದುಂ ; ಆರಾಯುನಂತೆಲ್ಲರ್ಗಮಾಣತಿಯಿತ್ತು ತಾನುಮಿತ್ತಲ್ ತೆರಳ್ದು ಬರ್ಪುದರ್ಕೆ ಸನ್ನದ್ಧಮಾಗಿರ್ದಪಂ. ಈವೇಳೆಗೇನುಚಿತವೋ ದೇವರ ಚಿತ್ತಮೆ ಬಲ್ಲುದು—ಎಂದು ಕಂಡುದಂ ಬಿನ್ನವಿಸಿ ಕೆಯ್ಯೇರ್ದ ಬಿನ್ನವತ್ತಳೆಯುಂ ಪಡಿಯುಜಂಗಿತ್ತು ಕೆಯ್ಮುಗಿದು ಬೀಟಿಟ್ಕೊಂಡು ಪೋಪುದುಂ;

ಅರಸನ ಕಣ್ಸನ್ನೆಯಿಂ ರಾಯಸಿಗನದಂ ಕೊಂಡು ಮುದ್ರೆಯ ನಪ್ಪಣೆವಿಡಿದು ಸಡಿಲ್ಚಿ ತೆಗೆದೋದಿದಂ :—

" ದೇವರಡಿಗೆ ಬಿನ್ನಪಂ. ಆಂ ದೇವರ ಪಾದದತ್ತಣಿಂ ಬೀಟಿಟ್ಕೊಂಡು ನಡೆತಂದಕಿ ಪಟ್ಟಣದ ಪೊಜವಳಯದುಪವನದೊಳಿರ್ಪಿನಂ ; ಅವರೆನ್ನನಿದಿರ್ವಂದೊಡಗೊಂಡುಯ್ವುದರ್ಕೆ ಪೊರ್ದುಗೆಯ ಗುಜುವಾನ ಸನ್ಬೊರ್ವನಂ ಕಳುಪಿ ಕರೆಯಿಸಲೊಡಮಾನುಮರಮನೆವೊಕ್ಕು ರಾಯನಂ ಕಂಡು ಕೈಗಾಣ್ಕೆಗೊಟ್ಟು ಕುಳ್ಳಿರ್ಪಿನಂ ; ಆ ರಾಯಂ ದೇವರಡಿಯ ಪದುಳವುಂ ಬೆಸಗೊಳೆ—ದೇವ ! ಕೇಳ್, ಎಮ್ಮಾಳ್ದಂ ಯಾದವಗಿರಿ ನಾರಾಯಣನ ಕರುಣಾಕಟಾಕ್ಷದತ್ತಣಿಂ ದಾನಕ್ಷಾತ್ರನಿರತನೆನಿಸಿ ಕ್ಷೇಮದೊಳಿರ್ಪಂ. ದೇವರಿಲ್ಲಿಗೆಯ್ತಂದುದರ್ಕೆ ಪೇರ್ಕಳಿಸಿ ದೇವರ ಕುಶಲ

ಮಂ ತಿಳಿಯಲ್ಕಾವುಡಮುಂ ಕೊಟ್ಟೆನ್ನಂ ಕಳುಪಿದರ್ ಎಂದು ಮುಂದಿ ಡುವುದುಂ ; ಅದಂ ಕೊಂಡು ಸಂತಸಂಬಟ್ಟು ತನ್ಮೈಮ್ಮನೇಹಂ ಬಳೆವು ದರ್ಕೆ ಇದು ನಾಂದಿಯೆಂದೆನಗೆ ಉಡುಗೊಱೆ ವೀಳೆಯಂಗಳನಿತ್ತು, ಬೀಡಾರಕ್ಕೆ ಕಳುಪಿ, ಉಲುಪೆಯುಚಿತಂಗಳಿಂದುಪಚರಿಸಿ, ಪೆಱತೊಂದು ದಿನಂ ಒಳಓಲಗಕ್ಕೆ ಕರೆಯಿಸಿ, ಕೆಲವುಂ ಪೊೞ್ತು ಷ್ಟಾಲಾಪದೊಳಿರ್ದು ಬೞಿಕೆನ್ನ ಮೊಗಮುಂ ನೋಡಿ— ನಿಮ್ಮಾಳ್ದನವತರಿಸಿದುದಱಿಂದೇೞ್ಗೆ ವೆತ್ತೆಸೆವ ವಂಶಮಾವುದು ? ಆಚಾರದ ಪರಿಯಾವುದು ? ವಯಸ್ಸೆನಿತು? ಮೆಯ್ಸಿರಿಯೇತೆಱಂ ? ಸೋದರರುಂ ಸುತರುಮೆನಿಬರ್ ? ಆಳ್ವ ನಾಡೆ ನಿತು ? ಆನೆಕುದುರೆಯಾಳ್ಗಳೆನಿತು ? ಆಯುವ್ಯಯದ ನೆಲೆಯಾವುದು ? ಎಂದು ಬೆಸಗೊಂಬಿನಮಾಂ ಬಿನ್ನವಿಸಿದೆಂ :—ದೇವ ! ಚಂದ್ರವಂಶ ದೊಳವತರಿಸಿದ ಯದುಭೂಮಿಪನ ಕುಲಭೂಷಣರೆನಿಪ ಬಲಕೃಷ್ಣರಿರ್ವ ರುಂ ಕುಲದೇವರಂ ಬಲಂಗೊಳಲೆಂದು ಯಾದವಗಿರಿಗೇೞ್ತಂದು ಅಲ್ಲಿ ನಾರಾಯಣಂಗೆ ಮಹೋತ್ಸವಮನೊಡರ್ಚಿ ವೈರಮುಡಿಯೆನಿಪ್ಪ ದಿವ್ಯ ಕಿರೀಟಮುಂ ಸಮರ್ಪಿಸಿ ಮಗುೞೆ ತಾಂ ದ್ವಾರಕಿಗೆ ಪೋಪಾಗಳ್, ಈ ಕ್ಷೇತ್ರಮುಂ ಕಾಪಿಟ್ಟು ಸಕಲವಿಧಸೇವೆಗಳಂ ನಡೆಯಿಪುದರ್ಕೆ ತಮ್ಮ ಕುವರರೊಳ್ ಒರ್ವನನಿಟ್ಟು ಪೋಪಿನಂ, ಆಯದುಭೂಷಣಂ ತನ್ನ ಕರಿ ತುರಗ ಪದಾತಿಗಳ್ವೆರಸು ತಾನಾವಗಮಲ್ಲಿರ್ದೊಡೆ ಶ್ರೀಮನ್ನಾರಾಯ ಣನ ನಿತ್ಯಕಿಂಕರತೆಯೊಳಿರ್ಪ ವೈಷ್ಣವಜನಕ್ಕಂ ತರುಗುಲ್ಮಲತಾದಿರೂಪ ದೊಳಿರ್ಪ ನಿತ್ಯಮುಕ್ತರ್ಗೆ ಮುಪರೋಧಮುಪ್ಪುದೆಂಬುದಱಿಂ

ಶ್ಲೋಕ॥ ವೈಕುಂಠವರ್ಧನಂ ನಾಮ ಕ್ಷೇತ್ರಂ ತತ್ಸತ್ಯಮುಚ್ಯತೇ ।
ಪ್ರಮಾಣಂ ತಸ್ಯ ವಿಜ್ಞೇಯಂ ಪರಿತೋ ಯೋಜನದ್ವಯಂ ॥

ಇಂತೆಂಬ ನಾರದೀಯವಚನದಿಂದೀಕ್ಷೇತ್ರಮುಂ ಬಳಸಿದೆರೞ್ಗಾವುದ ನೆಲನುಂ ವಿಷ್ಣುಕ್ಷೇತ್ರಮಾದುದಱಿಂದೀಮೈಸೂರೊಳರಸುಗೆಯ್ಯುತ್ತಿರ್ದ್ದಂ. ಅವನ ಸಂತತಿಯೊಳ್ ಪುಟ್ಟಿ ನೆಗೞ್ತೆವೆತ್ತ ಬೆಟ್ಟದ

ಚಾಮರಾಜಂಗೆ ತಿಮ್ಮರಾಜ ಕೃಷ್ಣರಾಜ ಚಾಮರಾಜರೆಂಬ ಮೂವರಣುಗರಾದರ್. ಆಚಾಮರಾಜನ ತಪಃಫಲವೆನಿಸಿ ನೆಗಟ್ದಸಿವೀರಾಜ ಭೂಪಾಲಂ ಪುಟ್ಟಿದಂದಿಂದೆಯುಂ ಪುಸಿನಾತು ಪೆಱರೊಡವೆ ಪೆಣ್ಗಿರ ನೆನಸಿಲ್ಲದೆಳವೆಯೊಳ್ ಶಾಸ್ತ್ರಶಸ್ತ್ರಾಭ್ಯಾಸದೊಳ್ ಜೌವನದೊಳ್ ದಿಗ್ವಿಜಯವ್ಯಾಪಾರದಿಂದಿರ್ಪುದಱಿಂ ಬೆಸನಂಗಳ್ಗೆ ಪೊಟ್ಟುಗುಡದೆ ನಿಚ್ಚವುಂ ಸ್ನಾನಸಂಧ್ಯಾಜಪದಾನದೇವಪೂಜಾಪುರಾಣಪುಣ್ಯಕಥಾಶ್ರವಣಾದಿ ಪಾರಲೌಕಿಕವ್ಯಾಪಾರಮುಮಂ ಷಾಡ್ಗುಣ್ಯಚಿಂತನ ಪ್ರಜಾಪರಿಪಾಲನ ಕಂಟಕಶೋಧನಾದಿ ರಾಜ್ಯವ್ಯಾಪಾರಮುಮನೊಂದಱಿಂದೊಂದಂ ಸಡಿಲ್ಚದೆ ಸಂತಸದೊಳಿರ್ಪಂ. ಈಪರಿಯಿಂ ಬಗೆಯೊಳ್ ಮೆಯ್ಗೊಂಡ ಸತ್ವಗುಣಂ ಪೊಱಪೊಣ್ಮಿದಂತೆಯುಂ, ಅಱುವತ್ತುಂ ಬರಿಸಮುಂ ಬೆಳ್ಗಡೆಯ ನೆಟಿಲೊಳಿರ್ದುದಱಿಂದಾಬೆಳ್ಗದಿರ್ ಮೆಯ್ವೆತ್ತಿದಂತೆಯುಂ, ಮೂಜಗಮಂ ಪರ್ಬಿದೊಳ್ಜಸವಳ್ಕಿ ಪೊಸವೇರ್ವೆತ್ತಂತೆಯುಂ, ಮೊಗಸಸಿಯಿಂ ಪಸರಿಪ ಜೊನ್ನದ ಜೊಂಪದಂತೆಯುಮೆಸೆವ ನರೆವೊತ್ತಿರ್ದೊಡಂ ಪೊಸಮಿಸುನಿಯೊಳ್ ಕರುವಿಟ್ಟೆಱಿದಂತೆಯುಂ, ಕಂಡರಿಸಿದಂತೆಯುಂ, ಬಟ್ಟಿತ್ತಾದ ತೋಳ್ಕಡುತೊಡೆಗಳಿಂ ಪೇರೆರ್ದೆಯಿಂ ಬಲ್ಗಂದದಿಂ ಬೆಟ್ಟಿತ್ತಾದ ಮೆಯ್ಯಿಂ ವೃಷಭದಂತೆಯುಂ ಪುಲಿಯಂತೆಯುಂ ಸಿಂಗದಂತೆಯುಂ ಮೆಯ್ಸಿರಿವಡೆದಿರ್ಪಂ. ಬೆಟ್ಟದ ಚಾಮರಾಜ, ದೇವರಾಜ, ಚೆನ್ನರಾಜರೆಂಬ ಮೂವರ್ ಸೋದರರ್ ವೇದತ್ರಯದಂತೆ ಧರ್ಮಸಾಧಕರುಂ, ತ್ರಿವರ್ಗದಂತೆ ಸುಖಸಾಧಕರುಂ, ಶಕ್ತಿತ್ರಯದಂತೆ ವಿಜಯಸಾಧಕರುಂ ಕರಣತ್ರಯದಂತೆ ಕಾರ್ಯಸಾಧಕರುಮೆನಿಸಿ ಮೂವರೊಂದಾಗಿ ಮುಪ್ಪುರಿಗೊಂಡಂತಾತನಾಣತಿಯೊಳಿರ್ಪುದೇ ಶೀಲಮೆಂದಾತಂಗಾಳ್ಗಿಯ್ವುದೇ ಒಳ್ಗಜ್ಜಮೆಂದ್ದಾತನ ಹಸಾದಂಬಡೆವುದೇ ಪರಮಲಾಭಮೆಂದಿರ್ದಪರ್. ನರಸರಾಜ ಇಮ್ಮಡಿರಾಜರೆಂಬಣುಗರ್ ಪಡಿನೆಟಿಲಂತೆ ಆ ಗುಣಂಗಳಂ ಪಡೆದಾತನ ಬಟಿಸಲ್ವರ್. ಈಸೋದರರುಂ ಸುತರುಂ ಬೆರಸು

ತಮ್ಮಕುಲಕ್ರಮಾಗತದ ಮೈಸೂರ್ಗೆ ಸಲ್ವಿರ್ಪತ್ತುಮೂಱು ಮಱಿವಳ್ಳಿ ಗಳೊಳೆತ್ತಿ ಬರ್ಪ ಮೂಸಾಸಿರ ಪೊನ್ನಂ ಮುನ್ನೂಱಾಳ್ಗೆ ಪರ್ಚುಗೊಟ್ಟಿ ಡಬಲದ ಮನ್ನೆಯರಿಂ ಬರ್ಪ ಕಪ್ಪದೊಳಮವರ್ ಮಿಸುಕದಂತವರವರ ನಾಡೊಳ್ ಬಸಂಗೆಯ್ದಿರ್ಪ ತಲೆವಳ್ಳಿಗಳಿಂ ಬರ್ಪ ಕಂದಾಯದೊಳಂ ಮನವಾೞ್ತೆಯುಮಂ ನಿತ್ಯದಾನಧರ್ಮಂಗಳುಮಂ ಮದುವೆಯೊಸಗೆ ಗಳುಮನುಡುಗೊಱೆಯುಚಿತಂಗಳುಮನೆಸಗುತ್ತಿರ್ದಪರ್. ಇದುಮಲ್ಲದೆ ಇದಿರಾದರನೊಕ್ಕಲಿಕ್ಕಿ ಸೆಳೆದು ತಂದ ವಸ್ತುವಾಹನಂಗಳಂ ದೇವ ಬ್ರಾಹ್ಮಣರ್ಗಿತ್ತು ಅವರೊಲವನೇ ಧನವಾಗಿ ಸಂಗ್ರಹಿಸಿರ್ಪರ್—ಎಂಬುದುಂ ; ಅದರ್ಕೆ ಸಂತಸಂಗೊಂಡು ಕೊಂಡಾಡಿಯಂತಪ್ಪ ಪುಣ್ಯಪುರುಷನಂ ನಿಟ್ಟಿಸಿ ನುಡಿಸಿ ಕೆಳೆಗೊಂಡು ನಂಬಿ ನೇಹಂಬೆರಸಿರ್ಪರೊಂದೆನಿಸಿಯೊಡರ್ಚುವ ಕಜ್ಜಮೆನಿತಾನುಮುಂಟದಱಿಂ ತಾಮಿಲ್ಲಿಗೆ ಬರ್ಪುದರ್ಕಮಾವೆ ತೆರಳ್ದೆೞ್ತರವೇೞ್ಕುಮೆಂಬುದರ್ಕಂ ಬರೆಯಿಸಿ ಕಳುಪಿ ನಿಶ್ಚಯುಮಂ ತಿಳಿದು ಬೇಗದೊಳೆಮಗಱಿಪುವುದೆಂದೆನಗುಡುಗೊಱೆವೀಳೆಯಂಗಳನಿತ್ತು ಕಳುಪಿದರ್. ಆಬೞಿಕ್ಕೆ ಮತ್ತೊಂದು ದಿವಸದೊಳ್ ತಮ್ಮ ಸಾಮಾಜಿಕರುಮಂ ತಮ್ಮಂ ಕಂಡೋಲಗಿಪರುಮಂ ಕರೆಯಿಸಿ—ಮೈಸೂರವನೊಳಾಮೇತೆಱದಿಂ ವರ್ತಿಸವೇೞ್ಕುಮೆಂದು ಬೆಸಗೊಳ್ವನಂ ಅವರನಿಬರುಂ ದೇವರೆಸಗುವುಪಟಳದಿಂ ನೊಂದು ಬೆಂದಿರ್ಪುದಱಿಂದೀ ವೇಳೆಯೊಳವನಂ ಬೆಂಬಲಂಗೊಂಡನಿಬರುಮೊಟ್ಟಾಗಿನ್ನೊರ್ಮೆ ಸರ್ವಶಕ್ತಿಯೊಳ್ ಪೊಣರಲ್ಕಾತನಂ ದಟ್ಟಿಗಟ್ಟಿಸಲೆಂದು ದೇವರ್ ತಮ್ಮೊಳೆಸಗಿದ ಪರಿಭವಮುಮವನೊಳ್ ನಡೆಯಿಪೌದಾಸೀನ್ಯಮುಮಂ ಬಿನ್ನವಿಸಿ ಕಿವಿಗೊಳಿಸಿ,—ಒಡಲೊಳೆಡಱಂ, ಪಾಸಿನೊಳ್ ತೇೞಂ, ಮಗ್ಗುಲೊಳ್ ಪಾವಂ, ಮನೆಯೊಳ್ ಮಾರಿಯುಮೂರೊಳ್ ಪುಲಿಯುಂ ಪುಗಿಸಿ ಬಾೞ್ವಂ ತೀಮೈಸೂರವನ ನೆರೆಯ ಬಾೞ್ಕೆಯೆಂದು ಬೋಧಿಪುದುಂ ; ಅವನುಮದಂ ನನ್ನಿಯೆಂದು ಬಗೆದು,-ಎಂತಾನುಮೀಕಜ್ಜಮಂ ಸಾಧಿಪಂ. ಒಳ್ಳಾ

ತಿನಿಂದವನಿಲ್ಲಿಗೆಯ್ತಂದೊಡವನಂ ಪಿಡಿದು ಬಂಧಿಪಂ. ಅಂತಲ್ಲದಿರ್ದೊಡೆ ದಂಡೆತ್ತಿ ಪೋಗಿಯೂರಂ ಮುತ್ತಿ ಲಗ್ಗೆಯೇಱಿ ಕೈಸೆಱೆವಿಡಿದು ತರ್ಪಂ. ಇದರ್ಕೆ ಸಾಧಕವಾಗಿ ಮಾನೌಮಿಯೊಸಗೆಯ ನೆವದಿಂ ನೀವೆಲ್ಲರುಂ ದೞಂಬೆರಸೆಯ್ತರ್ಪುದೆಂದು ಕಳುಪಿದರ್ಗಳ! ಅಬೞಿಕ್ಕೆ ಕಿಱಿದುಂ ದಿವಸದೊಳೆ ಮುಂಗಾರೊಳ್ತೆರಳ್ದೆಯ್ತರ್ಪ ಮುಗಿಲ ಮೋಹರದಂತೆಯುಂ, ಮೞೆಯೊಳ್ತುಂಬಿ ಬರ್ಪ ಪೆರ್ವೊೞೆಗಳಂತೆಯುಂ, ಪ್ರಳಯವೇಳೆಯೊಳ್ವೇಲೆಯಂ ಕೈಗಣ್ಮಿ ಕವಿದು ಸಾರ್ತರ್ಪ ಕಡಲ ಗಡಣದಂತೆಯುಂ, ದೆಸೆದೆಸೆಯಿಂ ನಡೆತಂದು ನೆರೆದ ಪೆರ್ದೞವಮೂರ ಮುಂತಣ ಮೈಯಾೞಿಯ ಬಯಲೊಳಂ ಪೊೞೆಯ ತಡಿಯ ತೋಪುಗಳೊಳಮಿೞಿದಿರ್ದಪುದದಂ ಲಾವಣಿಗೆಗೊಳಲೆಂದು ರಾಯನೊರ್ವಗಲೂರ್ವಾಗಲುಪ್ಪರಿಗೆಯನೇಱಿ ಬಲಮಂ ನೋಳ್ಪಲ್ಲಿ—ಬಳ್ಳಾಪುರ ಕೋಲಾಲ ಪುಂಗನೂರ್ ಮಾಗಡಿ ಬೆಂಗಳೂರ್ ಮೊದಲಾದ ಮೊರಸುನಾಡ ಮೋಹರದೊಳಿರ್ಪತ್ತಾನೆಯಿರ್ಛಾಸಿರ ಕುದುರೆಯಿರ್ಪತ್ತುಸಾಸಿರಾಳ್ಗಳುಂ, ತಳಕಾಡೆಳವಂದೂರಮ್ಮಚನಾಡಿ ತೆರಕಣಾಂಬಿಕೋಂಟೆ ಮೊದಲಾದೊಳನಾಡದೞದೊಳೀರ್ಕೈದಾನೆ ಐನೂಱು ಕುದುರೆಯೀರ್ಕೈದು ಸಾಸಿರಾಳ್ಗಳುಂ, ಕೞಲೆ ಬೇಲೂರ್ ಕೆಳದಿ ಮೊದಲಾದ ಮಲೆನಾಡ ಬಲದೊಳಿರ್ಪತ್ತಾನೆಯಿರ್ಛಾಸಿರ ಕುದುರೆ ಇಪ್ಪತ್ತುಸಾಸಿರಾಳ್ಗಳುಂ, ಚಿಂತನಕಲ್ ಚಿಕನಾಯಕನಹಳ್ಳಿ ಬಾಣಾವಾರ ಬಸವಪಟ್ಟಣ ಸೀರೆಯುಂ ಮೊದಲಾದ ಬೇಡವಡೆಯೊಳೈದಾನೆಯೈನೂಱು ಕುದುರೆಯೀರ್ಕೈದು ಸಾಸಿರಾಳ್ಗಳುಂ, ರಾಣಾಜಗದೇವ ಕೆರೆಯೂರ ತಿಮ್ಮನಾಯಕಂ ಮೊದಲಾದ ರಾವುತಪಾಯಕರೊಳ್ ಪದಿನೈದಾನೆ ನಾಲ್ಸಾಸಿರ ಕುದುರೆಯಿರ್ಪತ್ತು ನಾಲ್ಸಾಸಿರಾಳ್ಗಳುಂ, ಮೂಲಬಲದೊಳ್ ಮೂವತ್ತಾನೆ ಮೂಸಾಸಿರ ಕುದುರೆ ಮೂವತ್ತು ಸಾಸಿರಾಳ್ಗಳುಂ ಅನಿತುಂ ಕೂಡಿ ನೂಱಾನೆಯೀರಾಱು ಸಾಸಿರ ಕುದುರೆ ಲಕ್ಕ (?) ಪಾಯಿದೞವಾಯ್ತೆಂದು ಲೆಕ್ಕಿಗಂ ಬಿನ್ನವಿಸೆ—

ೞ್ದಿಲ್ಲರ್ಗಂ ವೀಳೆಯಂಗಳನಿತ್ತುವರವರ ಪಾಳೆಯಕ್ಕೆ ಕಳುಪಿ, ತಾವು
ಅರಮನೆಗೆ ಬಂದು, ತಮ್ಮ ಪಡೆವಳನಂ ಕರೆದು, ಪಯಣಸನ್ನದಮೆಲ್ಲಮು
ಸನೆಸಗೆಂದು ನಿರವಿಸಿ ಕಳುಪಿದಂ. ಅಂದು ಮೊದಲ್ ಗುಡಿ ಗೂಡಾರ
ಕೊಟ್ಟಿಗೆ ಕಟಾರ ಬಾಣ ಬತ್ತಿ ಮೊದಲಾದುದಂ ದೊರೆಕೊಳಿಪುದುಮಾನೆ
ಕುದುರೆಯಾಳ್ಗಳಂ ಲಾವಣಿಗೆಗೊಂಬುದುಮಾಗಿರ್ದಪರ್. ಇದೀಗಳ್
ನಡೆದ ನಡತೆ. ಮುಂತೆ ನಡೆವುದರ್ಕಂದಂದಿಗೆ ಬರೆದು ಬಿನ್ನವಿಸಿ ಕಳುಪುವೆಂ.
ಇದಂ ದೇವರ ಚಿತ್ತಕ್ಕೆ ತಂದು ಆನಿವರೊಳ್ ವ್ಯವಹರಿಪುದರ್ಕೆನಗೆ ತಿಳಿ
ವಂತೆ ನಿರವಿಸಿ ರಾಯಸಮಂ ದಯೆಗೆಯ್ವುದು. ಇದಱೊಳೇನಾನುಂ
ಯಿನ್ನೇಸಬಾಯ್ಯೇಸಂಗಳುಳ್ಳೊಡನೊಲ್ಮೆಯಿಂ ಸೈರಿಪುದು—ಎಂದೋದಿ
ರ್ಪುದುಂ ;

ಆರಾಜನ್ಯಪನೀವಿಷಯದೊಳಾವೆಂತು ವರ್ತಿಸವೇಱ್ಕುಮೆಂದ
ರಾಜರ ಮೊಗಮಂ ನೋಡಿ ನುಡಿಪುದುಂ ;

ಬೆಟ್ಟದ ಚಾಮರಾಜಂ—ಎಲೆ ಜೀಯಾ ! ಕೇಳೀಗಳೆಮಗೆ
ಇಂದ ಕಜ್ಜಮಾವುದು ? ಇದರ್ಕೆ ಯೋಚಿಸತಕ್ಕುದೇಂ ? ಸಂತೆಯ
ಅಂದಣಿಯಂತೆಯುಂ, ಜಾತ್ರೆಯ ಜಂಗುಳಿಯಂತೆಯುಂ, ಅಗರದ
ಕಾರ್ವರ್‌ರೊಟ್ಟಿನಂತೆಯುಂ, ಪರದರ ಪಾಳೆಯದಂತೆಯುಮೊಕ್ಕಲಿಗರ
ಕೊಕ್ಕಳದಂತೆಯುಂ, ಮಿಗವಿಂಡಿನಂತೆಯುಂ, ಕಾಗೆಯ ಬಳಗದಂತೆ
ಯುಂ, ಕಪ್ಪೆಯ ಕುಂಪೆಯಂತೆಯುಂ, ಕೈಪಱೆಗೆ ಬೆದಱಿ ಪರಿ
ದೋಡುವ ತೆಲುಂಗವಡೆಯಂ ಕಡಿದಟ್ಟುವುದರ್ಕೆ ದೇವರಡಿವರೆಗಂ
ಬರ್ಪುದೇನಿರ್ಕುಂ ? ತಕ್ಕುಮಿಕ್ಕೆಮ್ಮವಂದಿಗರ್ಗಾಣತಿಯಿತ್ತು ಕಳುಪು
ವುದು,—ಎನಲೊಡಂ ;

ವಿನಯಂಬೆರಸು ಕೆಯ್ಮುಗಿದು **ದೇವರಾಜಂ**—ಜೀಯ !
ಬಿನ್ನಪಂ. ಕಿಱಿಯರಸರ್ ಬಿನ್ನವಿಸಿದುದೆ ನನ್ನಿ. ಅಂತಾತೊಡಮರ
ಸುಗಳ್ ಗೆಲ್ಲಂಗೊಂಬೆಡೆಯೊಳ್ ಮೊತ್ತಮೊದಲ್ಲನುವೇೞ್ಪುದುಂ ಕುಡು

ವುದುಂ ಪಗೆವರೊಳೋರೊರ್ಬರಂ ಬೇರ್ಪಡಿಸುವುದುಮೆಂಬೀಮೂಱು ಮುಪಾಯಂಗಳನೆಸಗಿಯುಂ ಇವಱೊಳ್ಬಸಮಾಗದುದರ್ಕೆ ಕೊಳುಗುಳಮನೊಡಂಬಡುವರ್. ಅಂತಾಮುಂ ಮನದೊಳ್ ಕಡುಕೇಣಂಗೊಂಡಿರ್ಪುದಱಿಂದೊಳ್ಮಾತಿನೊಳಂ ಕಟ್ಟೈಸಿರಿಯೊಳಿರ್ಪುದಱಿಂ ಕೋಡಿನೊಳಂ ಬೆರಸಿರ್ಪುದಱಿಂ ಬೇರ್ಪಡಿಸುವುದಱೊಳಂ ಬಸಮಾಗರೆಂದು ತಿಳಿದಿರ್ದೊಡಂ ಲೋಗರಂ ಮೆಚ್ಚಿಸವೇೞ್ಪುದು. ಆನಱಿತೊಡಮಱಿಯದಿರ್ದೊಡಂ ಭಕ್ತಿಯಿಂ ಬಿನ್ನವಿಸಿದೆಂ. ಎನ್ನ ನುಡಿಯಂ ಲಾಲಿಸಿ ಚಿತ್ತಂ ಬಂದಂತೆ ನಡೆಯಿಪುದು. ಎಮ್ಮೊಳ್ ಕೇಣಮಾಪ್ರಭುಗಳ್ಗಲ್ಲದಾರಾಯಂಗಿಲ್ಲ. ಆಮವನಂ ಗಣಿಸದಿರ್ಪುದಱಿಂದವರ್ಗೊಳಗಾಗಿರ್ದಪಂ. ಆನೊಳ್ಪುದೋಱಿದೊಡೆಮ್ಮೊಳ್ಬೆರಸುವಂ, ಎಮ್ಮ ನೇಹಮನೇ ಪರಮಲಾಭಮೆಂದೆಣಿಸಿಯೆಮ್ಮನಾದರಿಸಿ ಮನ್ನಿಸಿ ತೇಜಂಗೆಯ್ವಂ. ಆಗಳೀ ನೆರೆದ ನೆರವಿ ಮುಱಿದು ಪರೆದು ಪೋಪುದು. ಆಬೞಿಕ್ಕಮುಂದಂದಿ ಸೌಚಿತ್ಯಮನಾರಯ್ದು ನಡೆಯಲ್ ಬರ್ಕುಂ. ಅದಱಿಂದೀಗಳ್ ಪಟ್ಟಣಕ್ಕೆ ಬರೆಯಿಸಿ ಕಳುಪುವಲ್ಲಿ— " ತಮ್ಮೆಮ್ಮ ನೇಹಂ ಪಿರಿಯರ ಕಾಲದಿಂ ಬಂದುದಲ್ಲದೆ ಪೊಸತಲ್ತೈಸೆ ! ತಾಮಿಲ್ಲಿಗೆಯ್ತರ್ಪುದರ್ಕಮಾಮಲ್ಲಿಗೆ ಬರ್ಪುದರ್ಕಂ ಎರವಾವುದು ? ತಾಮುಂ ದೂರದೇಶದಿಂ ಬಂದು ಬೞಲ್ದಿರ್ಪುದಱಿಂದಾಮೆ ನಡೆತರ್ಪೆವು. "—ಎಂದು ಬರೆಯಿಸಿ ಕಳುಪುವಂ. ಇಲ್ಲಿ ಮೈಸೂರ ಕೆಸಱಿಯ ಕೋಂಟೆಯಗೞ್ವೇರಿಗಳನಾರಯ್ದು ಪೊಱವಳಯದ ಮಱಿತೆಱಿಗಳಂ ತೆಗೆಯಿಸಿ ಸಕಲಸಂವರಣೆಗಳಂ ದೊರೆಕೊಳಿಪುದರ್ಕೆ ಕಿಱಿಯರಸರಂ ಪೊಸಆಳ್ಗಳಂ ಲಾವಣಿಗೆಗೊಂಬುದರ್ಕೆ **ಚಿನ್ನರಾಜ**ರುಮನಿರಿಸಿ ದೇವರುಮೆನ್ನ ಸೇಱುವೆಯ ಕೂರಾಳ್ಗಳನೊಡಗೊಂಡು ಪೊೞಿವರೆಗಂ ಪೋಗಿ ಸಿಂದಲ್ಲಿಯವನಲ್ಲಿಗಿದಿರ್ವಂದನಾದೊಡಾಮೇರೆಗೆ ಸೈರಿಸಲಾಱದೆ ನೆರೆದ ಕಿಱುದೊರೆಗಳೆಲ್ಲರುಮಾಗಳೆ ಕೈದೆಗೆವರ್. ಆಮುಂ ಪಟ್ಟಣಕ್ಕೆ ಪೋಗಿ ದೇವರ್ಕಟ್ಟಿಸಿದ ಪಶ್ಚಿಮರಂಗನಾಥನ ದಿವ್ಯ

ಮಂಟಪಪ್ರಾಕಾರಂಗಳಂ ನಿಟ್ಟಿಸಿ ರಂಗೇಶಂಗೆಱಗಿ ತೀರ್ಥಪ್ರಸಾದಂಗೊಂಡು ಕೃತಾರ್ಥರೆನಿಸಿ ಬರ್ಪಂ. ಮೇಣವನಿದಿರ್ಗೊಳ್ಳದಿರ್ದೊಡವನೊಳ್ ತಪ್ಪಂ ಪೊಱಸಿ ಬರ್ಪಂ.—ಎಂದು ಬಿನ್ನವಿಪುದುಂ ;

ರಾಜನೃಪನದಂ ಮನದೆಗೊಂಡು ಕಿಱಿಯರಸನ ಮೊಗಮಂ ನೋಡಿ—ಬೆಟ್ಟದಯ್ಯ! ಕೇಳೀದೇವರಾಜಂ ನುಡಿದಂತೆ ನಡೆಯಿಸಿ ನೋಟ್ಪಂ. ಇದಱೊಳ್ ತಪ್ಪಿಲ್ಲವೆಂಬುದುಂ ; ಜೀಯ! ಹಸಾದವೆಂದೊಡಂಬಡೆ, ಪಟ್ಟಣಕ್ಕೆ ರಾಯಸವಂ ಕಳುಪಿದಂ.

ಇಲ್ಲಿಯಾತಿರುಮಲೆರಾಜಂ ಮಱುವಗಲ್ ಮೈಸೂರ ನಿಯೋಗಿ ತಂದೋದಿಸಿದೋಲೆಯಭಿಪ್ರಾಯಮಂ ತಿಳಿದು, ತಮ್ಮವರಂ ನೋಡಿ—ಕಡಲೊಳ್ ಸೊದೆಯ ಪೆಂಪುಂ, ಚಂದಿರನೊಳ್ ಕದಿರ ತಣ್ಪಂ, ಸುಗ್ಗಿಯೊಳಲರಲಂಪುಂ, ತೆಂಬೆಲರೊಳ್ ಬಾವನ್ನಗಂಪುಂ, ಕುಲೀನನೊಳೊಳ್ಗುಣದ ಗುಂಪುಂ ಇರ್ಪುದಚ್ಚರಿಯಲ್ತು. ಆದೊಡಮಿವನೊಳ್ ಬೀರಮುಂ ವಿನಯಮುಂ ತಮ್ಮೊಳ್ ತಾಂ ಕೇಣಮನುೞಿದು ಕೆಳೆಗೊಂಡಿರ್ಪುವು. ಇವನ ನೇಹದೊಳಪ್ಪ ಕಜ್ಜಮೆಮಗಿವನ ಬೇರದೊಳಾಗದು. ಈನೆರೆಯವರನಿಬರಮಿವನನೊಳಪುಗಲುಮಿದಿರ್ಚಲುಮಾಱದೆ ಬಱಿಬೇರದಿಂ ಕಳ್ಳರೆಟ್ಟಿಱಕೆಯುಳ್ಳರಂ, ಕಣ್ಬೇನೆಯವರ್ಬೆಳಕಂ, ಗೂಗೆಗಳ್ಪಗಲಂ, ನಾಸ್ತಿಕರ್ ವೇದಶಾಸ್ತ್ರಂಗಳಂ, ಗಾಂಪರೊಳ್ಗಬ್ಬಮನೆಗ್ಗರಕ್ಕರಿಗರಂ ಪಗೆಸಾರಿ ಪಂಬಲಿಸಿ ಬಸವೞಿವಂತೆ ಪಲತೆಱದಿಂ ಬನ್ನಂಬಡುವರ್. ಇವರ್ಗಮಾರಾಜನೃಪಂಗಂ ತಾರತಮ್ಯಂ ಆಡುಗಳ್ಗಮಾನೆಗಮೊಳ್ಳೆಗಳ್ಗಮುರಗೇಂದ್ರಂಗಂ, ವಾಯಸಂಗಳ್ಗಂ ವೈನತೇಯಂಗಂ, ಕಿಱುಬಂಗಳ್ಗಂ ಕೇಸರಿಗಂ, ಮಿಂಚುಂಬುೞುಗಳ್ಗಂ ಮಿಹಿರಂಗಂ, ಗುಂಬಗುೞಿಗಳ್ಗಂ ಅಂಬುಧಿಗಂ, ಅಣುಗಳ್ಗಂ ಅಮರಗಿರಿಗಂ, ಮಿಕ್ಕೋದುಗಳ್ಗಂ ವೇದಕ್ಕಂ, ಅಖಿಲದೇವರ್ಗಮಬ್ಜನಾಭಂಗಂ ಇರ್ಪಂತಿರ್ಕುಂ. ಅದಱಿಂದಾಮಿವರ ನೇಹಮಂ ನೀಟ್ಪರಿಸಿಯವನನಿದಿರ್ಗೊಂಡುಪಚರಿಸಿಯೆರವಿಲ್ಲದೆ ಬೆರಸಿ ಬೇಟ್ಪ ಕಜ್ಜ

ವಂ ಸಾಧಿಸಿಕೊಂಬುದೇ ಜಾಣ್ಮೆಯೆಂದು—ನಿಶ್ಚಯಿಸಿ, ಪೊೞಲಿಂ ಪೊಱಮಟ್ಟು ತೆಂಕಣ ಪೊೞೆಯಂ ದಾಂಟಿ ಪಡುವಣ್ಗೆ ಪರಿವ ಕಿಱುವೊೞೆಯ ತಡಿವರೆಗಮೆಯ್ದಿ, ಅಲ್ಲಿರ್ವರುಂ ದಂಡಿಗೆಗಳನಿೞಿದು ಬೞಿಕಂ ಕ್ಷೇಮಾಲಿಂಗನಂಗೆಯ್ದು, ಉಡುಗೊಱೆಗಳಂ ಕೊಟ್ಟುಕೊಂಡು, ಸರಿ ದಂಡಿಗೆಗಳೊಳ್ ಮಂಡಿಸಿ ಮಾತಾಡುತುಂ ಬರ್ಪಲ್ಲಿ ;

ರಾಜನೃಪಂ ತಿರುಮಲೆರಾಜನಂ ನೋಡಿ— " ರಾಯ ! ನೀಂ ಪಲವುಂ ದಿವಸಮೀದೇಶಮಂ ಪೊರ್ದದಿರ್ದುದಱಿಂ ಪಲಂಬರ್ ಪ್ರಭುಗಳ್ ಪಲತೆಱದೊಳ್ ಪರಿದಾಡುತೆ ಪದುಳದೊಳಿರ್ದರ್. ದೇವರೆಯ್ತಂದ ಬೞಿಕೀತಕ್ಕುಮಿಕ್ಕುರ ಸೊರ್ಕು ಸುರ್ಕಿ ಪೊಡವಿ ಕಿಱುದುಂ ದಿವಸದೊಳೇಕರಾಜ್ಯಮಪ್ಪುದು. " ಎಂಬುದುಂ ; ಆವಂ—" ರಾಜರಸ ! ಕೇಳ್ವುದು. ಆಮೆಲ್ಲಿರ್ದೊಡಮೇಂ ? ಎಮ್ಮಿಂದಪ್ಪ ಕಜ್ಜಮಾವುದು ? ಈನಾಡುಬೀಡುಗಳನಿತುಂ ನಿಮ್ಮವು. ಆಂ ನೀಮಿತ್ತ ಪಡಿಯೊಳಿರ್ಪೆವು. ಎಮ್ಮಿಂ ಬೆಸಗೊಳವೇೞ್ಕುಮೆಂದುಂ ಮನದಿರವನಾರಯ್ಯವೇೞ್ಕುಮೆಂದುಂ ಬೞಿಸಲವೇೞ್ಕುಮೆಂದುಂ ಆಳೋಚಿಸದೀದೊರೆತನಮೆ ಸ್ವಕೀಯಮೆಂದು ಬಗೆದು ನಡೆಯಿಸವೇೞ್ಕುಂ " ಎನಲೊಡಂ ; ರಾಜನೃಪಂ ದೇವರಾಜರಸನಂ ಸನ್ನೆಗೆಯ್ದು ರಾಯನೊಡನೆ— " ನಿಮ್ಮೆಮ್ಮೊಳೆಂತೆಣಿಸಿದಪಿರಂತೆ ನಡೆವುದರ್ಕೆ ಸಂದೆಯಮಿಲ್ಲ. ಶ್ರೀರಂಗೇಶನೇ ನೆರವಪ್ಪಂ. " ಎಂದೀತೆಱದಿಷ್ಟಾಲಾಪಂಗಳಿಂದಮೆ ಕಳೆದ ಪೊೞ್ತಿಂ ನಡೆದ ದಾರಿಯ ನಱಿಯದೆ ಪಟ್ಟಣದೊಳ್ ಮುನ್ನಮೆ ರಾಜನೃಪಂಗೆಂದು ಸಜ್ಜುಗೆಯ್ದ ಬೀಡಾರದ ಸರಿಸಕ್ಕೆ ಸಾರ್ತರ್ಪುದುಂ; ಪಡಿಯಱಂ— " ಜೀಯ ! ಪರಾಕು ! " ಎಂದೆಚ್ಚಱಿಸಿದಂ.

ಆಗಳಲ್ಲಿ ದಂಡಿಗೆಯಂ ನಿಲ್ಲಿಸಿ ತಿರುಮಲೆರಾಜಂ ತನ್ನ ದಂಡನಾಯಕನನೆಕ್ಕಟಿ ಕರೆದು— " ಈರಾಜನೃಪನೆಮ್ಮ ಪುಣ್ಯೋದಯದಿಂದೆಮ್ಮವನಾದಂ. ಈತನ ಕೆಳೆಯೆಮಗೆ ಮಂತ್ರಸಿದ್ಧಿಯಂತೆಯುಮಸ್ತ್ರ

ಶಕ್ತಿಯಂತೆಯುಂ ಯೋಗಸಿದ್ಧಿಯಂತೆಯುಂ ದೇವತಾಪ್ರಸಾದದಂತೆಯು ಮತ್ಯಂತಾತಿಶಯಾವಹಮಾಗಿರ್ಕುಂ, ಆದಱಿಂದೀತಂಗೆ ಸಂತಸಮಪ್ಪು ವೊಲುಲುಪೆಯುಪಚಾರಂಗಳಿಂ ಮನಂಗೊಳಿಪುದು" ಎಂದಾಣತಿ ಯಿತ್ತು, ರಾಜನೃಪನ ಮೊಗಮಂ ನೋಡಿ ವಿನಯಂಗೂಡಿ—"ಬೀಡಾರ ದೊಳ್ ವಿಶ್ರಮಿಪುದು" ಎಂದು ಬೀಳ್ಕೊಟ್ಟು, ತಾನುಂ ತನ್ನರಮನೆಯ ಮೊಗಮಪ್ಪುದುಂ ;

ರಾಜನೃಪನ ಕೈವಾರಿಗಳ್ ಕೆಯ್ಯೆತ್ತಿ—ಸ್ವಸ್ತಿ ! ಸಮಸ್ತ ಸಾಮಂತಮಹೀಪಾಲಮೌಳಿಮಾಲಾಲಾಲಿತಪದರಾಜೀವ ! ರಾಜೀವಸಖ ಗರ್ವಸರ್ವಸ್ವನಿರ್ವಾಪಣಚಣಪ್ರತಾಪೋದಯ ! ದಯಾರಸತರಂಗಾಯಿ ತಾಪಾಂಗಾವಲೋಕನಾಪ್ಯಾಯಿತ ಕರ್ಣಾಟಮಂಡಲ ! ಮಂಡಲಾಗ್ರ ಖಂಡಿತಾರಾತಿನೃಪಕಂಠಕಾಂಡೋಚ್ಚಲದ್ರಕ್ತ ಧಾರಾಪರಿಮೃಷ್ಟತದೀಯ ಬಿರುದ ! ಬಿರುದಂತೆಂಬರಗಂಡ ! ರಾಜನೃಪ ! ವಿಜಯೀಭವ ! ದಿಗ್ವಿ ಜಯೀಭವ ! ಎಂದು ಪೊಗಳ್ವುದುಂ ;

ಅದಂ ಕೇಳ್ದು ಮುಂಗಾರ ಮೊಳಗಂ ಕೇಳ್ದ ಕೇಸರಿಯಂತೆ ಕನಲ್ದು, ಕಾಲೋಚಿತಮಲ್ತೆಂದಾಕನಲ್ಕೆಯನೊಳಕೊಂಡು ತನ್ನ ಕೆಲ ದೊಳ್ ಬರ್ಪ ಮಂತ್ರಿಯೊರ್ವನಂ ಕರೆದು—"ನೀಂ ರಾಜನೃಪನ ಬಳಿ ಗೆಯ್ದಿ ಆತನ ಮನಂ ಕದಡದಂತನುವೇಳ್ದು ಅಂತೆಂಬರಗಂಡನೆಂಬು ದೊಂದು ಬಿರುದನೆಮ್ಮಿದಿರೊಳ್ ಪೊಗಳದಂತೆ ಗೆಯ್ವುದು" ಎಂದು ಕಳುಪ್ಪುವಿನಂ ;

ಆವನಲ್ಲಿಗೆಯ್ದಿ ಕೆಯ್ಮುಗಿದು—"ದೇವರೆಡೆಯೊಳೆಮ್ಮಾಳ್ದರ ನೇಹ ಮೆರವಿಲ್ಲದಿರ್ಕುಂ. ಇದಂ ಸೈರಿಸಲಾಱದಿದಱೊಳೂಣೆಯಮನೂಹಿಸಿ ಯೆಳ್ಳನಿತುಮುಂಟಾಡೊಡದಂ ನೆಗಳ್ಚಿ ಪೆಱಿಯೊಳ್ ಕಱಿಗಂಡಂತೆ ಕೊಂಡು ಕೊನರಿಸಲೆಂದು ಕಾದಿರ್ಪರ್. ಅದರ್ಕೀಗಳಂತೆಂಬರಗಂಡ ನೆಂಬೀಬಿರುದು ದೇವರ ವಂಶಪರಂಪರೆಯೊಳಮೆಮ್ಮಾಳ್ದರ ಪರಂಪರೆಯೊಳ

ಮೊಳದು. ಅದನಿರ್ವರುಮಿರ್ಪೆಡೆಯೊಳುಗ್ಗಡಿಸದಂತೆ ಕೈವಾರಿಗಳ್ಗೆ ಕಟ್ಟಳೆಯೊಾಯ್ತು. ದೇವರ ಬಗೆಯನವರ್ಗಮಂತು ನಿರವಿಸವೇಳ್ಕುಂ '' ಎಂದು ಬಿನ್ನವಿಪುದುಂ ;

ರಾಜನೃಪನೊಡವುಟ್ಟಿದನ ಮೊಗಮಂ ನಿಟ್ಟಿಸೆಯಾದೇವರಾಜಂ ನಸುಕಿನಿಸುವೆರಸು ಮೋಡಿಯೊಳ್ ನಿಯೋಗಿಯ ಮೊಗಮಂ ನೋಡಿ— '' ನೀಂ ಬಿನ್ನವಿಸಿದುದು ಸಾಜಂ. ಅಂತಾದೊಡಮೀಬಿರುದು ನಿಮ್ಮರಸರ್ಗೆ ಕೈವಾರಿಗಳಿಂ ಬಂದುದಾದುದಱಿಂ ಪೊಗಟವೇಡೆಂದು ನಿರವಿಸಿದೊಡಮವರಂತೆ ಮಾಣ್ದಿರ್ಪರ್. ಎಮಗೀಬಿರುದೆಮ್ಮ ಪಿರಿಯರ ಬೀರದಿಂ ಸಮನಿಸಿ ಸೈನಿಕರುರ್ಕಿನಿಂ ನೆಗಳ್ದುದು. ಆದುದಱಿಂ ಕೈವಾರಿಗಳಂ ತಡೆಯಲ್ಕೆ ಕಾರಣಮಿಲ್ಲ. ಮುನ್ನೆಮ್ಮ ಮುತ್ತಯ್ಯನೆನಿಸಿದ ಬೆಟ್ಟದ ಚಾಮರಾಜಭೂಪಾಲನ ಮನ್ನಣೆಯ ತುಟುಲಾಳ್ ಕಟಲೆಯ ನಂಜಸೆಟ್ಟಿ ನಂಜನಗೂಡ ಜಾತ್ರೆಯೊಳ್ ನೆರೆದ ಪಲಂಬರ್ ಪ್ರಭುಗಳ ಮುಂದುಗ್ಗಡಿಪ ಪಲವುಂ ಬಿರುದುಗಳಂ ಕೇಳ್ದು ಸೈರಿಸದೆ ಪಲವುಂ ಪಜ್ಜೆಗಳನಡಕಂಗೆಯ್ವಾನೆವಜ್ಜೆಯಂತೆಯುಂ, ಪಲವುಂ ಪೊಟಿಗಳನೊಳಕೊಳ್ವ ಮುನ್ನೀರಂತೆಯುಂ, ಪಲವುಂ ಮಹಾಭೂತಂಗಳನಾವರಿಪಾಗಸದಂತೆಯುಂ, ಪಲವುಂ ಬಿರುದುಗಳಂ ನೀಟ್ಚರಿಸಿ ನೆಗಳ್ವ ಅಂತೆಂಬರಗಂಡನೆಂಬ ಬಿರುದಂ ತಾಂ ಬಲಗೆಯ್ಯೊಳ್ ಪಿಡಿದ ಕಟಾರದಿಂದೆಡಗೆಯ್ಯೊಳಂಗಡಿಯ ಮಾನವಂ ಪಿಡಿದು ಬಾಜಿಸಿಯುಗ್ಗಡಿಪುದುಮಲ್ಲಿ ನೆರೆದ ಸಮಸ್ತಪ್ರಭುಗಳುಮೊಟ್ಟಾಗಿ ತಂತಮ್ಮ ದಟದೊಡನವನಂ ಪೊಯ್ಯಲೆಂದು ಸುತ್ತು ಮುತ್ತುವಿನಮವಂ ಗಿಡುಗಂ ಗಿಳಿಗಳಂ, ಕಿಱುಬಂ ಕುಱಿಗಳಂ, ಪುಲಿ ಮೊಲಂಗಳಂ, ಜಕ್ಕಂದೊಳಲಿ ಪಲ್ವಲಮಂ, ಮದಕರಿ ಕದಳೀವನಮಂ ಪುಗುವಂತೆ ಪೊಕ್ಕು ಮಿಕ್ಕೊಕ್ಕಲಿಕ್ಕಿ ಗೆಲ್ದು ಬಿರುದನುಗ್ಗಡಿಸಿದಂ. ಆದಱಿಂದೀ ಬಿರುದೆಮ್ಮ ತುಟುಲಾಳ್ಗಳ ಪಾಲ್ಗೆವಂದಿರ್ಪುದು. ಅದಱನೀವಿಷಯದೊಳಾರುಮಂ ಗಣಿಸರ್. ಆಮೆ ನಿರವಿಸಿದೊಡಂ ಸಲಿಗೆಯಿಂದಾಳೊಡೆ

ತನದ ಮೇರೆಯುಂ ಮೀಱುವರ್. ಇದರ್ಕೀತೊಡರ್. ನಿಮ್ಮ ಬಗೆವಂದಂತು !" ಎಂದು ನುಡಿದು ವೀಳೆಯಂಗೊಟ್ಟು ಕಳುಪುವುದುಂ ;

ಅವಂ ತನ್ನಾಳ್ದನ ಬಳಿಯಂ ಸಾರ್ದು ತಾಂ ಕೇಳ್ದುದನೆಲ್ಲಮಂ ಬಿನ್ನವಿಸೆಯಾರಾಯಂ ಮನದೊಳ್ ಬಿರುದಿಂಗೆ ಬೀಯಮಪ್ಪೆಡೆಯೊಳ್ ಸೈರಿಪುದು ಬೀರರ್ಗೆ ಪಿರಿಯೂಣೆಯಮೆಂದು ಬಗೆದು,—ಅಕಟಾ ! ಆಮಿವರೊಳ್ಬೆರಸಿದುದು ಕೂಗಿ ಮಾರಿಯಂ ಕರೆತಂದವೊಲಾದುದು ; ಆದೊಡಮಿನ್ನಿವರೊಳ್ ಬಾಸೆನಂಬುಗೆಗಳನಿತ್ತೆವು—ಎಂದು ಬಗೆದು ಪಿಂದೆಗೆಯದೆ ಕೈಸೆಱೆಗೊಂಡು ಕಡೆಗಾಣಿಸುವುದೇ ಕಜ್ಜಮೆಂದಾಳೋಚಿಸಿ— "ಮಱುವಗಲೊಳ್ ಪೊತ್ತುಱೆಯಾಂ ವೈಹಾಳಿಯ ಬಯಲೊಳಿನಿಸುಂ ಪೊಱ್ತು ಬಿನದದೊಳಿರ್ದು ಬರ್ಪೆವು ಇಲ್ಲಿ ನೀಮುಂ ರಂಗೇಶನ ಸನ್ನಿಧಿಗೆಯ್ದಿ ಸಂದರ್ಶನಂಗೆಯ್ದು ಮಂದಿಪುದು." ಎಂದು ರಾಜನೃಪಂಗೆ ಬೆಸಸಿ ಕಳುಪಿ, ಪೊಱಲ ಪೊಱವಳಯದ ಸಾರಿಯ ಮಂಟಪದೊಳ್ ಕುಳ್ಳಿರ್ದು ಮೊದಲ ದಿವಸದೊಳ್ ಮುನಿದು ಮೋಡಿಯೊಳಿರ್ಪ ಸಕಲ ಪ್ರಭುಗಳಂ ಕರೆಯಿಸಿಯವರೇೞ್ತರ್ಪನ್ನಂ ತನ್ನ ಭಟರೆಸಗುವ ಲಗ್ಗೆಸೆಂಡಾಟಮಂ ನಿಟ್ಟಿಪ ನೆವದಿಂದಿರ್ದು ಅನಿಬರುಂ ಬರ್ಪುದುಮವರನೆಕ್ಕಟಿಗರೆದು—"ನಿನ್ನೆ ನಿಮ್ಮೆಲ್ಲರ್ಗಂ ಪೇೞ್ದೊಡೆ ಮನ್ತ್ರಭೇದಮಪ್ಪುದೆಂದು ಮೈಸೂರವನೊಳ್ ಪುಸಿನೇಹಮಂ ಪೊಸೆಯಿಸಿ ಪೊಱಲಂ ಪುಗಿಸಿದೆವು. ಅವನಂ ಕೈಸೆಱೆಗೊಳಲ್ಕಿದೇ ವೇಳೆ. ಗಳಿಲನೆ ತೆರಳಲ್ವೇೞ್ಕುಂ" ಎಂಬುದು ಮವರವರತಿತ್ವರಿತದಿಂ ತಂತಮ್ಮ ದೞಮಂ ಮೇಳವಿಸುತಿರ್ಪಿನಂ ;

ಇತ್ತಲೀರಾಜನೃಪನರುಣೋದಯದೊಳುಪ್ಪವಡಿಸುತುಂ ಶ್ರೀಮನ್ನಾರಾಯಣನ ಪರ ವಿಭವ ವ್ಯೂಹಾದಿ ಮೂರ್ತಿಗಳುಮಂ ಗಜೇಂದ್ರ ಮೋಕ್ಷಣಾದಿದಿವ್ಯಚಾರಿತ್ರಂಗಳುಮಂ ನೆನೆದು ನಾಮಸಂಕೀರ್ತನಂಗೆಯ್ದು ಕಾವೇರಿಗೆಯ್ದಿ ಮಿಂದು ಮಡಿಯುಟ್ಟು ಲಲಾಟಾದಿತತ್ತದುಚಿತಸ್ಥಾನಂಗಳೊಳ್ ದ್ವಾದಶೋರ್ಧ್ವಪುಂಡ್ರಂಗಳನಿಟ್ಟು ತುಳಸಿ ತಾವರೆ

ಮಣಿಗಳಮುಳ್ಸರಮುಂ ಧರಿಸಿಯುರಮನೆಗೆ ಮಂದಲ್ಲಿ ಗೃಹಾರ್ಚಾರೂಪ ದೊಳೆಸೆವಚ್ಯುತನಂ ಷೋಡಶೋಪಚಾರಂಗಳಿಂದರ್ಚಿಸಿ ತೀರ್ಥಪ್ರಸಾದಂ ಗೊಂಡು ನಿತ್ಯದಾನಮುಸೆಸಗಿ ಬಟ್ಟಿಕೊಳ್ಗೊಡವುಗಳಿಂದೊಡಲಂ ಸಿಂಗ ರಿಸಿ ಮಿತಪರಿಜನಂಬೆರಸು ರಂಗೇಶನ ದೇಗುಲಮುಂ ಸಾರ್ದು ಗೋಪುರದ ಬಾಗಿಲನೊಳಪೊಕ್ಕು ಬಲವರ್ಪಾಗಳ್ ;

ಅಲ್ಲಿರ್ಪ ಶ್ರೀವೈಷ್ಣವರತಿಹರ್ಷದಿನಿದಿರ್ವಂದಾಶೀರ್ವಾದಿಸಿ—" ಎಲೆ ಮಾರಾಯ ! ನೀಮೆಮ್ಮ್ಮಸ್ವಾಮಿಗೀದಿವ್ಯಪ್ರಕಾರಮುಂ ಕಟ್ಟಿಸಿದು ದರ್ಕೆ ಸಂತಸಂಬಟ್ಟು ನಿಮಗೀಪರಿಯ ಪಲವುಂ ಕೋಂಟೆಗಳನಿತ್ತು ದಯೆಗೆಯ್ವರ್ " ಎಂಬುದುಂ ; ಅವರ್ಗೆ ವಂದಿಸಿ,—ಅಖಿಲಜಗತ್ಕಾರ ಣನುಮಪ್ರಮೇಯನುಮನವಧಿಕಾತಿಶಯಾಸಂಖ್ಯೇಯಕಲ್ಯಾಣಗುಣಗಣ ನುಮಪ್ಪ ನಾರಾಯಣಂಗಾಳ್ಗೆಯ್ದೊಲಿಪುದರ್ಕಾನೆನಿತಜನಂ. ನಿಮ್ಮೊ ಲವುಂ ಪರಕೆಗಳುಮೆಮಗೆ ಪರಮಸ್ಪ್ರಾಸ್ಯಂ—ಎಂದು ನುಡಿಯುತ್ತವರೊ ಡವೆರಸಲ್ಲಿಂದೊಳಪೊಕ್ಕು ಬಲಿಪೀಠ ಧ್ವಜಸ್ತಂಭಂಗಳ ಬಟ್ಟಿಯೊಳ್ ಸ್ವಾ ಮಿಗೆ ಸಾಷ್ಟಾಂಗವೆಱಗಿಯಾದ್ವಿತೀಯಾವರಣದೊಳ್ ಬಲವರುತ್ತೆ ದಕ್ಷಿ ಣಭಾಗದೊಳೆಸೆವ ಪರಕಾಲಾದಿದಿವ್ಯಸೂರಿಗಳಂ, ಪರಾಂಕುಶರಂ, ವಿ ಷ್ಣುಚಿತ್ತರಂ, ಶೂಡಿಕ್ಕುಡುತ್ತನಾಚ್ಚಿಯಾರಂ, ಪಾರ್ಥಸಾರಥಿಯುಂ, ನೃಸಿಂಹಸ್ವಾಮಿಯುಂ ಪರಿವಿಡಿಯಿಂ ಬಲಗೊಂಡು, ಪಶ್ಚಿಮೋತ್ತರಭಾಗ ಮಂ ಸಾರ್ದು ಅಲ್ಲಿ ಸಕಲಜಗಜ್ಜನನಿಯೆನಿಸಿದ ಶ್ರೀರಂಗನಾಚ್ಚಿಯಾ ರಮ್ಮನವರ ದಿವ್ಯಶ್ರೀಪಾದಪದ್ಮಪರಾಗಮುಂ ಸಿರದೊಳಾಂತು, ಕಟಾಕ್ಷಾ ಮೃತರಸಾಸೇಕದಿಂ ತಣಿದು, ಮುಂತಣ್ಗೆ ನಡೆದು, ವೇಣುಗೋಪಾಲ ವರದರಾಜ ರಾಮಾನುಜ ಶ್ರೀವತ್ಸಾಂಕರಂ ಸೇವಿಸಿ, ಜಯವಿಜಯರ್ಗೆ ಕೆಯ್ಮುಗಿದು ಒಳಪೊಕ್ಕು ವಿಷ್ವಕ್ಸೇನರಂ ವಂದಿಸಿ, ಮುಂತಣ್ಗೆ ನಡೆದು, ಗರ್ಭಗೃಹದ ಬಾಗಿಲೊಳ್ ಕೆಯ್ಮುಗಿದು ನಿಂದು ನಿಟ್ಟಿಸುವಿನಂ—

—ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ವರ್ಣನೆ—

ಇಂಗಡಲ ನಟ್ಟನಡುವೆ ನೆಗೆದು ಮೆಯ್ದೋಱುವ ಕರ್ಮಣಿದೀವಿಯಂತೆಯುಂ ಐಕಿಲ್ವೆಟ್ಟಿನ ತಪ್ಪಲೊಳ್ ಬೆಳೆದ ಕರ್ದಾಳೆಯ ಬನದಂತೆಯುಂ ಬಾಂಬೊೞೆಯ ಮಡುವಿನೆಡೆಯೊಳ್ ಪೂತು ಪೊದಱಿಟ್ಟ ಕರ್ನೆಯ್ದಿಲ ಗಡಣದಂತೆಯುಂ ಮೆಯ್ಸಿರಿವೆತ್ತು ಶೇಷತಲ್ಪದೊಳ್ ಪವಡಿಸಿ--ಎಳವಿಸಿಲ ಸೋಂಕಿನಿಂದೆಸೆವಾಗಸದಂತೆಯುಮರಿದಳದ ಪಾಸಱೆಯಿಂದೊಪ್ಪುವ ಕಾಡಿಗೆವೆಟ್ಟನಂತೆಯುಂ ಮಿಂಚಿನ ಮಿಱುಗಿನಿಂ ಮೊಱೆವ ಕಾರ್ಮುಗಿಲಂತೆಯುಂ ಪಾವುಗಳ ಬೇರದಿಂ ಪಾತಾಳಮಂ ಪುಗಲ್ಕೆಱಗಿದ ಗರುಡನೆಱಂಕೆಗಳ ಕಳೆಯೊಳ್ತೊಳಪ ಕಡಲಂತೆಯುಂ ಉಟ್ಟ ಪೊಂಬಟ್ಟೆಯ ಪೊಗರಿಂ ಬಗೆಗೊಳ್ವ ಸಿರಿಮೆಯ್ಯ ಕರ್ವೆಳಗು-ಎಡೆವಿಡದೆ ನಿಟ್ಟಿಪ ಪಾಲ್ಗಡಲ ಕುವರಿಯ ಕಱಿಯಾಲೆಯ ಕದಿರ್ಗಳಿಂ ಬಳೆದು, ಸುೞಿವೊರ್ಕುೞಿ ತಾವರೆಯಲರುಣಿಗಳ ಬಳಗದ ನೆರವಿನಿಂ ನಿಮಿರ್ದು, ಸಿರಿದೊಳಸಿಯ ದುಂಡದಂಡೆಯಂದುಗೆಯೊಳ್ ಪೆರ್ಮೆವೆತ್ತು, ಅಡಿಯುಂಗುಟದ ಸೋಂಕಿನೊಳ್ ನೆಗೞ್ದ ಬಾಂಬೊೞೆಯೊಳ್ ಕೇಣದಿಂ ಮೆಯ್ಯೆಲ್ಲಮಂ ಸುತ್ತಿಸುೞಿವ ಜಗುನೆಯ ತೆಱೆಯ ತಿಂತಿಣಿಯಂತೆ ಕವಿದುವರೆ: ಅದನಿದಿರಿಸುತ್ತೆ ಪತ್ತೆಸಾರ್ದು ಮುನ್ನಾಗಸಮನಳೆವಾಗಳಲರಿಚಂ ತೊಳೆದಿಟ್ಟ ಕುಂಕುಮದಣ್ಪಿನಿಂದಮೋ ಮೇಣೆಡೆವಿಡದೆ ಪೊಡೆಮಡುವ ಪುರಹರ ಪುರಂದರಾದ್ಯರ ಮೌಳಿಮಾಣಿಕ್ಯಪ್ರಭಾಜಾಲದಿಂದಮೋ ಮತ್ತೊಯ್ಯನೊತ್ತುವ ಸಿರಿಪೊಡವಿರಾಣಿಯರ ಚೆಂಗೆಯ್ದಳದ ಕಳೆಯಿಂದಮೋ ಯೋಗಿಜನಮನೋನುರಾಗದಿಂದಮೋ ಎಂಬಂತೆ ಕೆಂಪು ಪೆಂಪುವೆತ್ತ ಮೆಲ್ಲಡಿಗಳಿಂ । ಸಾಜದ ಕರ್ಪು ನೇವುರದ ಪಚ್ಚೆವಣಿಯ ಪಸುರ್ಪು ಉಟ್ಟ ಪೀತಾಂಬರದ ಪೊಂಬೊಗರ್ಗಳಿಂ ಮೂವಣ್ಣಂಬಡೆದು ಗಂಡುಸೋಗೆಯ ದುಂಡುಗೊರಲಂತೆಸೆವ ಕಿಱುದೊಡೆಗಳಿಂ । ಕಾವನಾರವೆಯ ಕರ್ಬಾೞೆಗಳಂತೆಯುಂ ಬಿನದಂಗಳೊಳ್ ನೆಮ್ಮುವ ಸಿರಿಪೊಡವಿರಾಣಿಯರ ಕರ್ಬ

ಟ್ಟಿಯ ಕೌಳುಡೆಗಳಂತೆಯುಂ ತೋರ್ಕೆವೆತ್ತ ತೋರದೊಡೆಗಳಿಂ । ಪೊಡೆ ಗಟ್ಟಿದ ಮುತ್ತಿನ ಸರದ ಬೆಳ್ವೆಳಗೆಂಬ ತಿಳಿನೀರಿಂ ತೀವಿ ತನ್ನೊಳ್ ಬೆಳೆದ ತಾವರೆಯುರಲ್ವಡಿಯಿಂ ನಾಲ್ಕೊಗನಂ ಪಡೆದ ಸುಟಿವೊರ್ಕುಟಿಕ್ಕೆ ಳದಿಂ । ಎಡೆವಿಡದಿಡಿದ ಬಾವನ್ನದಣ್ಪಿನ ಮೆಲ್ಪಾಸುಂ ಕೌಸ್ತುಭಮಣಿ ದೀಪಮುಂ ತೊಳಚಿಸರದುಯ್ಯಲುಂ ಪೊದೆದ ಪೊಂಬಟ್ಟೆಯ ಮೇಲ್ಕಟ್ಟುಂ ಕಂಠಿಕಾಮುಕ್ತಾಹಾರದ ಲಂಬಣಂಗಳುಂ ಮೆಯ್ಗೊಳೆ ಸಿರಿಯರಸಿಯ ಸಜ್ಜವನೆಯುಂತೆಸೆವ ಪೇರೆರ್ದೆಯಿಂ । ಪಾಸಿನ ಬೆಳ್ಪಾವಿನ ಬಿಂಕಮುಂ ಬಿಡಿ ಸಲೆಂದೆಡಬಲದೊಳ್ ತಲೆನಾಲಂಗಳೆ ಪಾಯ್ವ ಎಡೆಯ ಕರ್ಬಾವುಗಳಂತೆ ಮಣಿದು ಮುಂಡೆಯೊಡೆಗಂ ನೀಳ್ದು ಮೊಟಕಾಲೆಡೆಗಂ ನಡೆದ ಬಲದೆಡದ ನಿಡುದೋಳ್ಗಳಿಂ । ಮಕರಕುಂಡಲಮಣಿಪ್ರಭಾಪರಿವೇಷಮಂಡಲಮಂ ಮುಗುಳ್ನಗೆವೆಳ್ಗಿಂಗಳಿಂ ಮುಸುಂಕುವ ಮೊಗಚಂದಿರನಿಂ । ನುಣ್ಬಣೆಗನ್ನ ಡಿಯೊಳ್ ಪಡಿನೆಟಿಲ್ಗೊಂಡುದ್ದಂಡನಾಭೀಪುಂಡರೀಕ ತಕ್ಕರ್ಣಿಕೆಗಳಂತೆ ಕಣ್ಗೊಳಿಪೂರ್ಧ್ವಪುಂಡ್ರಶ್ರೀಚೂರ್ಣಂಗಳಿಂ। ಮೇಲ್ಗಡೆಯೊಳ್ ಕವಿದ ಪಾವೆ ಱಿಯನ ಪೆಡೆವಣಿವೊಗರ ಗಡಣಮೋ ಮೋಣಿದು ತಲೆಮಲಂಗಿನೊಳಿಟ್ಟ ಬಲಗೆಯ್ಯ ಸೆಳ್ಳುಗುರ್ಗಳ ಬೆಳಗಿನ ಬಿಂದಮೋ ಮೊಗದಾವರೆಯ ಮೋ ಡಿಗೆ ಮೋಹಿಸಿ ಮುದ್ದಿಸಲ್ಬವಿತಂದ ಗಗನಮಣಿಬಿಂಬಮೋ ಎಂಬ ಸಂದೆಯಮನೊದವಿಪ ದಿವ್ಯಕಿರೀಟದಿಂ । ಮನಂಗೊಳಿಪ ದಿವ್ಯಮಂಗಳ ವಿಗ್ರಹದ ಸಮುದಾಯಶೋಭೆಯುಂ ದಿಟ್ಟಿಸೇಱಿಗಳಿಂ ಮೊಗೆಮೊಗೆ ದೀಂಟಿ ಸವಿಸವಿದುರ್ಕಿ, ಸೊರ್ಕು ತಲೆಗೇಱಿ, ಮೆಯ್ಮಱಿದು ಮಜವ ಟ್ಟೊಡಲೊಳೆಡೆವಿಡದಡಿಗಡಿಗುಣ್ಮುವ ನವಿರ್ಗಳುಂ ಪೊನಲಿಟ್ಟು ಪಾಯ್ದೆ ಡವಱಿಯದೆ ಪರಿವ ಸೊಗದಾಲಿನೀರ್ಗಳುಂ ಸೆಱಿಬಿಗಿಯೆ ಬೇಗದೊಳ್ ಪೊಱಪೊಣ್ಮಲಾಱದೆ ತಡಬಡುವ ಗದುಗದಮುಮಾಗಿ ಪಿರಿದುಂ ಪೊಟಿಮ್ತ ನಂದಸಾಗರದೊಳ್ ಮುಟುಂಗಿ ತೇಲುತ್ತೊಯ್ಯನಾಸುಖಂ ಮೆಯ್ಯಿಂದು ಣ್ಮಿ ಪೊಣ್ಮೆ ಕಣ್ದೆಱಿದೆಬ್ಬೆತ್ತು ತಱುಥಾಯಿಂದೊಂದವಯವದ ಸೌಂ

ದರ್ಯ್ಯಮುಂ ಬೇಱಿಬೇಱಿ ಭಾವಿಸಿ ಬಗೆಯೊಳ್ ಬಂದಿಗೊಳ್ವೆನೆಂದು ಸಂಕಿನ ಪಾಱುಂಬಳೆಯು ಬಾಮ್ಮರದ ಪಟಿಯಿಗೆಯು ತಾವರೆಯಂಕುಸದ ಬಜ್ಜರದ ಮೆಯ್ಸಿರಿವೆತ್ತ ನುಣ್ಗೆಱಿಗಳಿಂದೆಸೆವ ಕೆಂದಳಿರ್ದಳವುಂ। ನಂಬಿ ಸೇಱುದರೆಳಸುವ ಫಲಂಗಳನೊದವಿಸಲೆಂದೈಗೊಂಬುಗಳೊಳಂ ಪೂತೆಸೆವ ಬಾಂಬೊಟಲ್ಮರನಂ ದೊರೆಗೊಂಬ ಮೆಲ್ಲಡಿಗಳಂ। ಅಂದು ಪಾಂಡವರ ಪಾಳೆಯುದಿಂ ಕುರುನಗರಿಗೆ ದೂದುನಡೆದ ಬಟಿಲ್ಕೆಗಳೆಯುಲೆಂದು ಒಯ್ಯ ನೊತ್ತುವ ಸಿರಿಪೊಡವಿಯರ ಮೆಲ್ಗೈಸೋಂಕಿಂಗೆ ನವಿರುಣ್ಮುವ ಕಿಱು ದೊಡೆಗಳಂ। ಒಂದೇ ಅಡಿಯುಂಗುಟದುದಿಯು ಸೋಂಕಿನಿಂ ಬಿಂಕಂಬಡೆದ ಗಂಗೆಯು ಗಾಡಿಯುಂ ಕಡೆಗಣ್ಬಲೆಂದಿರ್ವ್ವಯ್ವೆತ್ತೀರಡಿಗಳ್ಗಂ ಕವಿದು ಪಾಯ್ವ ಜಗುನೆಯು ಪೊನಲ್ಗಳಂತೊಪ್ಪುವ ದುಂಡುದೊಡೆಗಳಂ। ಪೊಡೆ ವೂಗಾವಿನ ನೆವದಿಂ ಕುಡಿವರಿದು ಕೊನರ್ತ್ತ ಪರ್ಬ್ಬವ ಜಗತೀಲತೆಯು ದಾಂಗುಡಿಯು ತಾಯ್ಗುಟಿಯೆನಿಪ್ಪ ಸುಟಿವೊಕ್ಕುಟಂ। ಎಡೆವಿಡದೆಡೆ ಯಾಡುವ ಸಿರಿವಡದಿಯುಡಿಯುಲತಿಗೆಯುಣ್ಪವಡೆದು ಪೊನ್ನುಡೆಯು ಪೊರ್ದುಗೆಯೊಳವುರ್ದು ಸಿರಿಮೆಯ್ವೊಗರ ಸೇಱುವೆಯಿಂ ಸಿಂಗರಂಬಡೆದ ಪಲವಣ್ಣದ ತುಳಸಿಯು ದಂಡೆಯು ಪರಿವೇಷದ ನಟ್ಟನಡುವೆ ನೆಗಟ್ದ ಕೆಂಬ ರಲ ನೇಸರ್ವಟ್ಟನಿಂ ಬಗೆಗೊಳ್ವಾಗಸವುಂ ಪೋಲ್ವ ಪೇರೆರ್ದೆಯಂ। ಎಲ್ಲಾಜಗವುಂ ಪೊತ್ತು ಪೊಱಿವ ಸಿರಿಯರಸನ ಸಿರಿಮುಡಿಗೀದಿವ್ಯಕಿರೀ ಟಮುಂ ಮಿಕ್ಕಿನಲರಿಚಂ ಮೊದಲಾದರ ಮುಡಿಗಳ್ಗೀಕೇಸಡಿದಾವರೆಗಳು ಮುಳವಟ್ಟಿರ್ಪುವೆಂದು ಮುಟ್ಟಿ ತೋರ್ಪಂತೆ ಮುಡಿಯೆಡೆಗಮಡಿಯೆಡೆಗಂ ನಡೆದ ಬಲದೆಡದ ನಿಡುದೋಳ್ಗಳಂ। ಬಗೆಯೊಳೊಗೆದ ಚಂದಿರನ ಬೆಳ್ವಳಗು ಪೊಱಸೂಸುವಂತೆ ಕಡೆವಾಯ್ಗಳೊಳ್ ಮಿಸುಪ ಮುಗುಳ್ನಗೆಯಂ। ತನ್ನೊಳ್ಪುತ್ತುಮೆಣೆಗೊಂಡು ಕೇಣಮನುಟಿದು ಅನ್ನಗಂ ತೇಜಂಬಡೆದುಗ್ರ ಜಾಡ್ಯಂಗಳನೊದೆದು ಬಾಹ್ಯಾಭ್ಯಂತರತಮಂಗಳಂ ಪರಿಹರಿಸುತ್ತೆ ನೀಳ್ದು ಪೊಸಬಗೆವಡೆದ ಸಸಿನೇಸರ್ಗಣ್ಗಳಂ। ನುಣ್ಬಣೆವಲಗೆಯೊಳ್ಪೊಳಪ ಮಿಮ

ಲೋರ್ಧ್ವಪುಂಡ್ರದ ಬೆಳ್ಗದಿರನಿದಿರ್ಗಾಯಲಾಜದೆ ಕೊಂಕಿ ಕವಿದ ನೊಸಲ ಪಟ್ಟದ ಕರ್ಮಣಿವೆಳಗಿನ ಮೊಳೆಗಳಂತೆಸೆವ ಸುರ್ಕುಂಗುರುಳ್ಗಳಂ। ಪದಿ ನಾಲ್ಕುಂ ಜಗದ ರಾಯತನದ ಬೆಳ್ಗೊಡೆಯುಂ ಪೋಲ್ವ ಪಾವೆಱಯನ ಪೆಡೆ ವಟ್ಟನ ನೆಟಿಲೊಳ್ಳಿಗಟ್ಟ ರನ್ನದ ಮುಗುಡಮುಂ। ಕೂರ್ತು ನೋಡುತ್ತಿರ್ದೊ ಡಂ—ನವನಿಧಿಗಳನೊಂದೆ ಸೂಱೊಳ್ ಕಂಡ ಕಡುಬಡವನಂತೆಯುಂ ಸುಗ್ಗಿಯೊಳ್ ಪೂದೋಱಟವುಂ ಪೊಕ್ಕ ಪಱಮೊವಱಗಳಂತೆಯುಂ ಬಿರ್ದಿ ನೊಳಗಿಕ್ಕಿದ ಪಂಚಭಕ್ಷ್ಯಪರಮಾನ್ನಂಗಳ್ಗೆ ಪಾಯ್ವ ಪಾರ್ವರ ಬಗೆಗಳಂ ತೆಯುಂ ಬಿಡದೆ ಸುಱವ ಜಡಿವಱಯುಂ ಸಾರ್ದ ಚಾದಗೆಗಳಂತೆಯುಂ ಆವುದಂ ಪಿಡಿವೆನಾವುದಂ ಬಿಡುವೆನೆಂಬ ತವಕದೊಳವನ ದಿಟ್ಟಿಗಳ್ ಅಡಿಯ ಮೆಲ್ಪಂ ತೊಡೆಯ ಬಲ್ಪಂ ಉಡಿಯೊಳ್ಪಂ ಪೊಡೆಯ ತೆಳ್ಪಂ ಉರದ ಪೆಂಪಂ ಒಡಲ ಸೊಂಪಂ ಮೊಗದ ಕಳೆಯುಂ ನಗೆಯ ಮೊಳೆಯುಂ ನೋಟ ದಿಂಪಂ ನೊಸಲ ನುಣ್ಪಂ ಆರಯ್ಯುತಡಿದೊಡಗಿ ಮುಡಿವರೆಗಂ ನಡೆದು ಮಗುಱ ತತ್ತ್ವದರ್ಥನಿಧಿಧ್ಯಾಸನದಿಂ ಮುಡಿದೊಡವಿನೊಳ್ ನೀಳ್ದು ಪಣೆ ವಟ್ಟದೊಳ್ ಕವಿದು ಕರುಳ್ಗಳೊಳ್ ಸುಱದು ನೊಸಲೊಳ್ ಮಿಸುಗಿ ಪುರ್ಬುಗಳೊಳ್ ಕೊಂಕಿ ಕಡೆಗಣ್ಗಳೊಳ್ ಕೂರ್ಪುವೆತ್ತು ದಿಟ್ಟಿಗಳೊಳ್ ತಣ್ಪಂತು ಮೂಗಿನೊಳರೆಮುಗುಳ್ತು ಗಲ್ಲದೊಳ್ ತೊಳಗಿ ಕಿವಿವಚ್ಚ ದೊಳ್ ಬೆಳಗಿ ಬಾಯ್ದೆಱಯೊಳ್ ಕೆಂಪಡರ್ದು ನಗೆಯೊಳ್ ಮೊಳೆತು ಕೊರಲೊಳ್ ಗೆಱಗೊಂಡು ಕನ್ನದೊಳ್ ಬಳೆದು ತೋಳೊಳ್ ಕುಡಿವರಿದು ಎರ್ದೆಯೊಳ್ ಪಸರಿಸಿ ಸಿರಿಯೊಳ್ ಸಿಂಗರಂಬಡೆದು ಪೊಡೆವೂವಿನೊಳ ರಲ್ದು ಪೊರ್ಕುಱೊಳ್ ಸುಱದು ಪೊಡೆಯೊಳ್ ತೆಳ್ಪುವೆತ್ತು ನಡುವಿ ನೊಳ್ ನವೆದು ತೊಡೆಯೊಳ್ ತೋರವಾಗಿಯುಡೆಯೊಳೊಳ್ಪುವಡೆದು ಕಿಱುದೊಡೆಯೊಳ್ ಬಟ್ಟಿತ್ತಾಗಿ ಅಡಿಯೊಳ್ ಮೆಲ್ಪಂ ತಳೆದು ತತ್ತ್ವದಾ ತ್ಮಕಮಾಗೆ ಬಗೆಯೊಳ್ ಪತ್ತಿದ ಭಕ್ತಿರಸಪರಿಪಾಕಾತಿರೇಕದಿಂ ಸೊದೆ ಯುಂಡಂತೆಯುಂ ಸೊರ್ಕೇಱದಂತೆಯುಂ ಮುಱವಟ್ಟಂತೆಯುಂ ಮಱ

ದೊಱಗಿದಂತೆಯುಂ ಬೆಱಗುವಡೆದಂತೆಯುಂ ಬೆಗಡುಗೊಂಡಂತೆಯುಂ ಕೆಲವುಂ ಪೊೞ್ತು ದಿವ್ಯಮಂಗಳವಿಗ್ರಹಗುಣಂಗಳಂ ಗಣನೆಗೆಯ್ದು ಮತ್ತೆ ದಿವ್ಯಾತ್ಮಕಗುಣಂಗಳಂ ಅಂತರಂಗದೊಳೆಣಿಸುತ್ತಿರ್ಪಿನಂ; ಅವುವೊಳಗಡಂಗದೆ ಪೊಱಪೊಣ್ಮಿ ಕೋಡಿಯುನೋಡಿಸುವಂತೆ ನುತಿಗೆಯ್ವನದೆಂತೆನೆ :—

ಶ್ರೀವರ ! ಸಕಲಜಗಜ್ಜ ।
ನ್ಮಾವನಲಯಲೀಲ ! ರಂಗಮಂಗಳನಿಲಯಾ ! ॥
ಪಾವನಗುಣನಿಧಿ ! ಭಕ್ತನ ।
ಭಾವನೆಯೊಳ್ ಬಂದು ನಿಂದು ನಲಿ ನೀಂ ನಲವಿಂ ॥ ೧ ॥

ಓದುಗಳೊಳ್ ವೇದಂ ಪಿರಿ ।
ದಾದೊಡೆ ನೀಂ ರಂಗಧಾಮ ! ಸಕಲಜಗಜ್ಜ ॥
ನ್ಮಾದಿನಿಮಿತ್ತಾಭಿನ್ನೋ ।
ಪಾದಾನಂ ನನ್ನಿ ನಿನ್ನ ಗುಣವಿಭವಂಗಳ್ ॥ ೨ ॥

ಕಡುನೇಹದೆ ಮೂಜಗಮಂ ।
ಪೊಡೆಯೊಡೆಯೊಳ್ ಪೊತ್ತು ಪೊರೆವ ಪೊಸಬಗೆಯೊಡೆಯಾ ॥
ತಡೆದೆಮ್ಮನೇಕುಪೇಕ್ಷಿಪೆ ।
ಕುಡು ಕೂರ್ಪರ ಕೂರ್ಪ ! ನಿನ್ನ ಚೆನ್ನಡಿಯೊಲವಂ ॥೩॥

ನಿಟ್ಟಿಸದಿರೆ ನೀಂ ದಯೆಯಿಂ ।
ಪುಟ್ಟಿದು ಜಗಮೆಂತುಟೇೞ್ಗೆವೆತ್ತಪುದಱಿಂ ॥
ಕಟ್ಟೆಱಕದಿಂದಮೆಮ್ಮಂ ।
ದಿಟ್ಟಿಸಿ ಕಾಪಿಟ್ಟು ಮೆಱೆವುದೊಡೆತನದದಟಂ ॥೪॥

ಪಶ್ಚಿಮ ರಂಗನಿವಾಸ ! ವಿ ।
ಪಶ್ಚಿನ್ನುತ ವಿಮಲ [ವಿಷ್ಣು] ಪರಮಾತ್ಮಾ ! ಸ ॥
ರ್ವಾಶ್ಚರ್ಯನಿಲಯ ! ನಿಗಮದ ।
ನಿಶ್ಚಯಮಂ ಬಗೆಯೆ ನಿನ್ನ ಚರಣಮೆ ಶರಣಂ ॥೫॥

ಎಂದು ಸ್ತುತಿಸಿಯಾಗಳರ್ಚಕರ್ ತಂದಿತ್ತ ಗಂಧಮಾಲೆಗಳಂ ಧರಿಸಿ ಮುಡಿಯೊಳಿಟ್ಟು ಶಠಗೋಪವೆಸರ ರನ್ನವಾವುಗೆಯುಂ ಭಕ್ತಿಯೊಳಾಂತು ತೀರ್ಥಪ್ರಸಾದಂಗಳನಂಗೀಕರಿಸಿ ಕೃತಾರ್ಥತೆವಡೆದು ಪೊಡೆಮಟ್ಟು ಅಲ್ಲಿಂ ಪೊಱಮಟ್ಟು ಬರ್ಪಿನಂ ;

ಪರಿಕಾಱನೊರ್ವನೆಯ್ತಂದು ಪತ್ರಸಾರ್ದು ಕಿವಿಯೊಳಿಂತೆಂದು ಆತೆಲುಂಗರಾಯನ ದುರಾಲೋಚನೆಯುಂ ಸೂಚಿಪುದುಮದಂ ಕೇಳ್ದು ತಮ್ಮನಂ ಕರೆದು,—ನೀನುಮಾಳ್ಗಳನೊಡ್ಗೆಯ್ದಟ್ಟಜಿಕೆಯೊಳ್ ನಡೆವುದೆಂದು ಬೆಸಸಿ, ಕೊಂಬುಕಾಳೆಗಳ ಕೋಲಾಹಲಂಬೆರಸು ಪೊೞಲಂ ಬಿಟ್ಟು ಪೊಱಗಣ್ಗೆ ಪೋಪಾಗಳ್ ಪೊಱವಳಯದ ಬಯಲೊಳ್ ತಮ್ಮ ಬಲಂಬೆರಸೆಡಬಲದೊಳಿರ್ದೊಡಮವರಂ ಗಣಿಸದೆ ಪೊೞಯುಂ ದಾಂಟಿ ದಾಱಿವಿಡಿದು ಮೈಸೂರಂ ಸಾರ್ದಂ.

ಅತ್ತಲ್ ತಿರುಮಲೆರಾಜಂ ರಾಜನೃಪಂ ಮಿಾಱಿ ಪೋದುದಂ ಕೇಳ್ದು—ಕಜ್ಜಂ ಕೈಗಣ್ಮಿದುದು, ಬಲ್ಲಿದನೊಳ್ ಬೇರಂ ಬಳೆದುದು. ಇನ್ನುಪೇಕ್ಷಿಸಲ್ತಕ್ಕುದಲ್ತು. ಎಂತಾನುಂ ಸಾಸಂಗೆಯ್ದರ್ಥಪ್ರಾಣಂಗಳ ನಾದೊಡಂ ವೆಚ್ಚಿಸಿಯುವಂಗೆ ಪರಿವಂ ಕಾಣಿಪೆನೆಂದು ನೆರೆದ ನಿಖಿಲ ಪ್ರಭುಗಳಂ ಕರೆಯಿಸಿ—ಮೈಸೂರ್ಗೆ ಮುತ್ತಿಗೆಯಿಡಲ್ಬೇಪಮೆಂಬುದುಂ; ಅವರ್ ವಿನಯಂಗೂಡಿ ಕೆಯ್ಮುಗಿದು—ದೇವರಾಣತಿಯನಾಂ ಶಿರದೊಳಾಂತೆಸಗುವರಲ್ಲದೆ ಪಡಿನುಡಿವೇೞಲ್ತಕ್ಕರಲ್ತು. ಮುನ್ನೊರ್ವರ್ ಪಿರಿಯರಸಂ **ಚಾಮರಾಜ**ನೆಮ್ಮೆಲ್ಲರೊಡಗೊಂಡಾಮೈಸೂರಂ ಮುತ್ತಿ ಮೂಱು ತಿಂಗಳಿರ್ದಂದದಂದಿಂಗಾಮೈಸೂರ **ಚಾಮರಾಜ**ನೆಸಗುವ ಮಱೆವುಯಿಲುಪಟಳದಿಂ ಪಾಳೆಯಕ್ಕೆ ಬರ್ಪ ಸಕಲವಸ್ತುಗಳುಮಿಲ್ಲದೊಂದೆರಡ್ಪಗಲುಪವಾಸಮಿರ್ದು ಪಿಂದೆಗೆದು ಪೋಪುದರ್ಕಂ ದಾಱಯಿಲ್ಲದೊಂದು ದಿನಂ ನಟ್ಟಿರುಳ್ ಮರ್ಬಿನೊಳೋಡಿ ಬರ್ಪಾಗಳೂರವರ್ಗೆ ಬೇಹುಸಂದು ದಾಱಿಯನಡ್ಡಗಟ್ಟಿ ಕೆಲವಾನೆಕುದುರೆಗಳನೀೞ್ದು ಕೆಲಕೆಲರ ಕೈದು

ಗಳಂ ಸೆಳೆದಿದಿರಾದರ ಮೂಗಂ ಕೊಱೆದು ಕಳುಪಿದರ್. ಅದುಮಲ್ಲದೆ ಮತ್ತವರ ಗಾವಳಿಯಿಂ ಪಟ್ಟಣದೊಳಂ ಪದುಳವಿಲ್ಲದೆ ಬನ್ನಂಬಟ್ಟು ಮಗುೞೆ ಮೈಸೂರವರೊಳ್ ನೇಹಂಬೆರಸುವುದರ್ಕೆ ಕಾಲ್ವೆಯು ಕೊತ್ತಾಗಾಲಮನಿತ್ತರ್. ಅದಱಿಂದೀಗಳುಮಾಮೈಸೂರಂ ಮುತ್ತುವುದು ಮೋಸಂ. ಮೊದಲ್ ಕೆಸಱೆಯಂ ಮುತ್ತಿ ನೋೞ್ಪಂ—ಎಂಬುದು ಮದರ್ಕೊಡಂಬಟ್ಟು, ಆಗಳೆ ನಿಸ್ಸಾಳಂಗಳಂ ಪೊಡೆಯಿಸಿ ಸಂದಣಿಸಿ ಮುಂದೆ ಪರಿವ ತುರಗಂಗಳ ಪದಧೂಳಿ ಬಾಂಬೊೞಲ್ಗಂ, ಶಂಖಭೇರೀ ಪಣವಾನಕಗೋಮುಖಾದಿವಾದ್ಯಕಳಕಳಮೆಣ್ದೆಸೆವಳರ ಪೊೞಲ್ಗಂ ನಡೆಯೆ, ಕೆಸಱೆಗೆ ನಡೆದು ಬಳಸಿ ಪಾಳೆಯಮಿೞಿದು ತಳಿಮೇರುವೆಗಳ ನೊಡರ್ಚುತಿರ್ಪಿನಂ ;

—ಕೆಸಱೆಯ ಕಾಳೆಗ—

ಆವೂರೊಳಿರ್ಪ **ಬೆಟ್ಟದಚಾಮರಾಜ ಚೆನ್ನರಾಜರ್** ಕೋಂಟೆ ಕೆೞಿದುಮಗೞಾಳ್ವೇರಿಗಳಸಿದುಮಾಗಿರ್ದೊಡಮಾೞಮಾದ ತಮ್ಮಳವನೆ ಪಡಿಯಗೞುಮನುದ್ದವರಿದ ಬೀರಮನೆ ಪಡಿಗೋಂಟೆಯುಮಂ, ಬಿತ್ತರಂಬಡೆದ ಬಿನ್ನಣಮನೆ ಪಡಿಯಾಳ್ವೇರಿಯುಮಂ, ಎೞ್ತರಂಬೆತ್ತ ಶಕ್ತಿಯನೆ ಕೊತ್ತಳಮುಮಂ, ಸಾಸಮನೆ ಶತಘ್ನಿಗಳುಮಂ, ಮೊನೆಗಾಱತನಮನೆ ಮುಗಿಲಟ್ಟಳೆಗಳುಮಂ ಗೆಯ್ದು ಕಾದುತ್ತಿ ಕೞ್ತಲೆಯೊಳ್ ಪೊಱಮಟ್ಟು ಪಾಳೆಯಮಂ ದೞಿದುೞಿನಾಯ್ದು ಪೊಯ್ದು ಆನೆಕುದುರೆಗಳನುಯ್ದು ಕೋಂಟೆಯನೊಳಪುಗಲೊಡಂ ;

ಮಱುವಗಲ್ ಪೊೞ್ತಱೆಯುವರನಿಬರುಂ ಕೞಶ್ಗೆಲೆಗೊಳಲೆಂದು ಕವಿದೊತ್ತರಿಸಿ ಮೇಲ್ವಾಯ್ದು ಗುಂಡುಮೞೆಗೆ ಪಲಗೆಯಂ ಮಱೆಗೊಂಡು ಕೋಂಟೆಗೇಣಿಗಳಂ ಸಾರ್ಚಿ ಸಗ್ಗಮನೇಱುವಲ್ಪಪುಣ್ಯರಂತೇಱುತಿರ್ಪಿನಂ ;

ಊರವರ್ ಕವೆಗೋಲ್ಗಳಿಂ ನೂಂಕಿಯುಂ, ಕೆಯ್ಬೆಟ್ಟಗಳಿಂ ದ್ದಿಟ್ಟುಂ, ಕಾಯ್ದೆಣ್ಣೆಗಳಂ ಸೂಸಿಯುಂ, ಪುರಿವೞಲಂ ಸುರಿದುಂ, ಮರ್ದಿ

ನುರಿಯಿಂ ಚುರ್ಚಿಯುಂ, ಕವಣೆಗಲ್ಗಳಂ ಬೀಱಯುಂ, ಕಣೆಗಳಿಂದೆಚ್ಚುಂ ಮತ್ತಂ ಮಿಱುಯೇಱವರ್ಪರಂ ಕತ್ತಿಗಳಿಂ ಕಡಿಕಡಿದುಂ ಕೆಡಪುತಿರ್ದೊಡಂ ಮಾಣದೆ ಮುಱುಕೊಳಸಿ ದೀವಿಗೆಗುಡಿಗೆಱಗುವ ಪತಂಗದ ಪುೞುಗಳಂತೆ ಬೀೞ್ವರಂ ಕಂಡು ಪೆಱಸಾರದೆ ಪಡಲ್ವಟ್ಟಟ್ಟಿಗಳನೆ ಮೆಟ್ಟುಗೆಗೆಯ್ದೇಱುತ್ತೆ ಮಿತಿಮಿಱುತ್ತಿರ್ದಪರೆಂಬ ವೃತ್ತಾಂತಮಂ ದೂತಮುಖದಿಂ ಕೇಳ್ದು, ತಮ್ಮ ಮೂಲಬಲಮನೊಡಗೊಂಡು **ರಾಜನೃಪನುಂ ದೇವರಾಜನುಂ** ಕಿರ್ಚುಂ ಗಾಳಿಯುಮೊಂದಾಗಿಯೊಣಗಿದ ಪೞುವಂ ಪುಗುವಂತೆ ಅವರ ತೆಂಕಣ ಪಡುವಣ ಪಾಳೆಯಮಂ ಪೊಕ್ಕು ಬೀದಿವರಿದಿರ್ದಿರ್ದರಂ ಪೊಯ್ದು, ಕಾಲ್ಗೆಱಗಿದರುಮಂ, ಕಾಯುವೇೞ್ಪುದೆಂದರುಮಂ, ಪುಲ್ಗರ್ಚಿದರುಮಂ, ಪುತ್ತನೇಱದರುಮಂ, ನೀರ್ವೊಕ್ಕರುಮಂ, ನಿನ್ನವರೆಂದರುಮಂ, ಮರನನಡರ್ದರುಮಂ, ಮುಱಿವಿಟ್ಟುರುಮಂ ತಲೆಗಾದು ಮನ್ನಿಸಿ ಮಿಕ್ಕರನೊಕ್ಕಲಿಕ್ಕಿಯುವರ ಸರ್ವಸ್ವಮಂ ಸೂಱೆಗೊಂಡು ಬರ್ಪಿನಂ ;

ಬೆಟ್ಟದಚಾಮುರಾಜ ಚೆನ್ನರಾಜರುಂ ಲಗ್ಗೆಯೇಱದರನನಿಬರುಮಂ ಸಗ್ಗಕ್ಕೇಱಸಿ ಕಿಱದುಂ ದೞಮನೂರೊಳಿಟ್ಟು ಮಿಕ್ಕ ಬಲದೊಡನೆ ಪೊಱಮಟ್ಟು ತಂತಮ್ಮ ಪಾಳೆಯದೊಳ್ ದೞದುೞನಾಯ್ತುದಂ ಕೇಳ್ದು ಬಿಟ್ಟೋಡುವ ತೆಂಕಣ ಪಡುವಣವರಂ ಕಳೆದು ಮೂಡಣ್ಗೆ ನಡೆದು ತಱುಬಿ ತಱದಿಱದು ತಲ್ಲಣಂಗೊಳಿಸಿ ದಾಯುಗಿಡಿಸಿ ದಯೆಗೆಯ್ದುಮರಲ್ದು ಬಡಗಣ್ಗೆ ಬರುತ್ತಿರ್ಪನಂ ಕಂಡು ಕಾಲ್ಗೆಱಗಿ ಬೇಗದೊಳ್ ನಾಲ್ವರೊಡವುಟ್ಟಿದರುಂ ಪಟ್ಟಣಕ್ಕಾಗಿ ಬಿಟ್ಟೋಡುವ **ತಿರುಮಲಿರಾಜನಂ** ಬೆನ್ನಟ್ಟಿ ಮುಟ್ಟುವರೆ ; ಅವನುಮುೞವಿಂಗಳ್ಕಿ ಬೆಳ್ಗೊಡೆಯುಂ ಬಿಟ್ಟು ಸೀಗುರಿಗಳಂ ನೀಗಿ ಚವರಮಂ ತೆವರ್ದು ಪೞಯಿಗೆಯಂ ಪಱದು ವಾದ್ಯಂಗಳನುದ್ಯಾಪನಂಗೆಯ್ದು ವಾರುವಮನಿೞದು ತೊಡವುಗಳಂ ತೊಱೆದು ಒಳ್ಪುಡೆಯನುೞದು ವೇಷಮಂ ಮಾಂಜಿಯುಂಜಿ ಪೋಪುದುಂ ; ಅವನರಸುಗುಱಪುಗಳೆಲ್ಲಮಂ ಕೊಂಡು ಗಂಡುಮಿಱು ಮೈಸೂರಂ ಸಾರ್ದರ್.

ಅತ್ತಲಾ**ತಿರುಮಲೆರಾಜ**ನೊರ್ವನೇ ಪಟ್ಟಣಮಂ ಪೊರ್ದಿ ಒಂದೆರೞ್ದಿನದೊಳ್ ಬಂದು ಸೇಱುಯೞಿದುೞಿದರಂ ಕರೆಯಿಸಿ—ಕೊಳುಗುಳದೊಳೆಮ್ಮ ದೞದೊಳೞಿದರಾರ್ ? ಏಱುವಡೆದರಾರ್ ? ಸೆಱೆಸಿಲ್ಕಿದರಾರ್ ?—ಎಂದು ಬೆಸಗೊಂಬುದುಮವರ್ ಬಿನ್ನವಿಸಿದರ್ :—

ಜೀಯ ! ಬಿನ್ನಪಂ. ಈವೊಳನಾಡ ಪ್ರಭುಗಳನಿಬರುಂ ಪಲವುಂ ಸೂೞಿಸೂಳ್ ಮೈಸೂರವರಿಂ ನೊಂದವರೆಸಗುವ ಪುಯ್ಯಲ ಚಾತುರ್ಯಮನವರ್ ಬರ್ಪ ಬಟ್ಟೆಗಳಂ ತಿಳಿದಿರ್ಪುದಱಿಂದವರ ಮೂವಂಕದ ಕೊಂಬುಗಾಳೆಯ ದನಿಗೇಳ್ವುದುಂ, ಸಿಂಗದ ರವಂಗೇಳ್ದಾನೆವಿಂಡಿನಂತೆಯುಂ ತಳವರರದಿರ್ಗೋಲುಲಿಗೇಳ್ದ ಮಱಿಗಳ್ಳರಂತೆಯುಂ, ಮಾಂತ್ರಿಕರ ಮಂತ್ರಾಕ್ಷರಂಗಳಂ ಕೇಳ್ದ ಪಂದೆಮರುಳ್ಗಳಂತೆಯುಂ, ಪಾಂಚಜನ್ಯ ಝುಂಕಾರಂಗಳಂ ಕೇಳ್ದ ರಾತ್ರಿಂಚರರಂತೆಯುಂ, ನಾರಾಯಣನ ನಾಮಮಂ ಕೇಳ್ದ ಪಾಪಂಗಳಂತೆಯುಂ ಬೆರ್ಚಿ ಬಿಗುರ್ತು ಬಿಂಕಂಗುಂದಿ ಬೇವಸಂಗೊಂಡು ಬೆದಱಿ ಬೀದಿವರಿದು ಸರಿಯುತ್ತೆ ಇರ್ತರದೊಳ್ ನಿಂದು ನಿಂದಿಸಿ ನೀಟ್ಕಿರಿಪರಂ ನಿಟ್ಟಿಸದೆ ನಿಟ್ಟೋಟದೊಳ್ ನಿಂದಲ್ಲಿ ನಿಲ್ಲದೆ ನಿಜನಿವಾಸಮಂ ಸಾರ್ದು ಜಸಮಂ ಜಾಱಿಸಿಯಸುವನಾದರಿಸಿ ಪೊಸತೊಂದು ಬಸಿಱೊಳ್ ಬಂದಂತೆ ಸಂತಸದೊಳ್ ಜವೆಗೊಂಕದಿರ್ದಪರ್. ಮೊರಸುಮೋಹರಂ ಮೊನೆಗಾಱತನದ ಮೋಡಿಯೊಳ್ ಮುಂತಱಿಯದಿರ್ಪಿನಮವರ್ ಮೋಸಂಗೊಂಡು ಮುತ್ತಿ ಮೊಗಗಿಡಿಸಿ ಮೋದಿ ಮೂದಲಿಸಿ ಮೂಗಂ ಕೊಯ್ದು ಮೊಱೆಯಿಡಿಸಿಯಱಿಯಟ್ಟಿ ಕೆಟ್ಟು ಮುಱಿದೋಡಿದರ್. ಮಲೆನಾಡವರ್ ಮಲೆತು ನಿಲ್ವಿನಮವರ್ ವೇಢೈಸಿ ಬಿಗಿದಿತ್ತತ್ತಲಿಸಿಸುಂ ಮಿಸುಕಲೀಯದೆ ಕೆಯ್ಯ ಕೈದುಗಳನೀೞ್ದಾನೆಕುದುರೆಗಳಂ ಬಸಂಗೆಯ್ದು, ಅವರೊಳ್ ಕಟ್ಟರಸುಗಳಂ ಕ್ಕೈಸೆಱೆಗೊಳಲುೞಿದ ಕಿಱುದೊರೆಗಳ್ ಕಪ್ಪಿನೊಳ್ ಬಿೞ್ದು ಪೇರಾನೆಯುಂ ಬೞಿಸಂದ ಮಱಿಗಳಂತೆ ಚೀಱುತ್ತೆ ಕಟ್ಟುರದಿಂ ಮಲೆಯುಂ

ಸಾರ್ದಿತ್ತಣ್ಗೆ ಮೋಸದೊಳಾದೊಡಮಿನ್ನೊರ್ವಯುಂ ಬರಲಣ್ಮರೆಂದು ಬಾಸೆಗೆಯ್ದೋಡಿದರ್. ಬೇಡವಡೆ ಮುನ್ನಡವಿಯೊಳ್ ಗಿಡುಮರಂಗಳ ಮಱೆಯೊಳ್ ಪೊಂಚಿ ಬಟ್ಟೆಗರಂ ಕೋವಿಯೊಳಿಟ್ಟು ಕಣೆಯಿಂದೆಚ್ಚು ಕೆಡಪಿ ಬಟ್ಟೆಗಳಂ ಸುಲಿದ ಪಾಪದಿಂ ಕೆಸಱೆಯ ಕೆಱೆಯ ಕೋಡಿವಳ್ಳದೊಳೋಡಿವರುತ್ತೆಡಪಿ ಕಾಲುಲುಂಕಿಯುಂ ಮೊಣಕಾಲ್ಮುಱಿದುಂ ತೊಡೆಯುಡಿದುಂ ನಡು ನೆರ್ಗಿಯುಮೆರ್ದೆ ಬಿಱಿದುಂ ತೋಳ್ ತೊಲಗಿಯುಂ ಕೊರಲ್ ಕುರ್ಗಿಯುಂ ತಲೆಯೊಡೆದುಂ ಪಡಲಿಟ್ಟು ಪಾಸಿದಂತಾಗಿ ಪಳ್ಳದಿಂಟೆಗಳ್ ಸಮತಳವಾದೊಡಂ ಪಿಂದೆ ಬರ್ಪರುಮಾನೆಕುದುರೆಗಳ್ ತುೞಿದುದಱಿಂ ಮಟ್ಟಮೞಿಯಾದರ ತಲೆಮಿದುಳ ಬಸಿರ್ಗರುೞಿಗ್ಗಸಱೊಳ್ ಸಿಲ್ಕಿ ಮೊನೆಯೆಲ್ವು ಮುಳ್ಗಳಡಿದಳದೊಳ್ ನಾಂಟೆ ತಟ್ಟುರ್ಚೆ ತಡಬಡಿಸುತಿರೆ ಪಿಡಿಪಿಡಿದು ತುಟೆವೆರಸು ಮೂಗಂ ಕೊಱೆದು ಪಲ್ಗಿಱಿಸಿ ಕಳುಪೆ : ಮೂಗೞಿದುಸಿರುೞಿದುದರ್ಕೆ ಪೆರ್ಕಳಿಸಿ, ತಲೆಗೆ ವಂದುದೆವೆಯೊಳ್ ಪೋದಂತೆ ಸಂತಸದಿಂ ಚಿಂತನಕಲ್ ಮುಂತಾದ ತಂತಮ್ಮ ನೆಲನಂ ಸಾರ್ದರ್. ಮತ್ತಂ ರಾವುತಪಾಯಕರ್ ಪೌಜೊಡೆಯದೆ ಪೊಱಗೆ ನಿಂದು ಪುಯಿಲೊಳ್ ಪೊಲಂಬುಗೆಟ್ಟುದಂ ನಿಟ್ಟಸಿಯೋಡಿಪೋದರ ಪೆಂಡಿರೋಲೆಯುೞಿದುದೆಂಬ ನಾಣ್ನುಡಿಗೀಡಾಗಿ ವಾರುವಂಗಳಂ ಪರಿಸುವುದಱಿಂದೆಟ್ಟ ದೂಳಂ ಚಮ್ಮಟಿಗೆಯ ಪೊಯ್ಲಿಂದೊಡೆದ ಕುದುರೆಯ ತೊಡೆಯ ನೆತ್ತರ್ವೊನಲಿಂದಡಂಗಿಸುತ್ತೆ ಬೆಂಬತ್ತೆ ಬರ್ಪರಂ ಮುಱಿಮುಱಿದು ನೋಡುತ್ತೆ ಮತ್ತಡಿಗಡಿಗೆ ಮಡದಿಂ ಪಕ್ಕಮನೊತ್ತುತ್ತೆ ಕತ್ತಿಯ ಪರಜಿನಿಂ ನೆತ್ತಿಯಂ ತಿವಿಯುತ್ತೆ ಮುಂದಿರ್ಪ ಪಳ್ಳಕೊಳ್ಳಂಗಳಂ ತೆವರ್ದಿಂಟೆಗಳಂ ಕಲ್ಮುಳ್ಗಳಂ ಬೇಲಿಬೆಳ್ವಾರಂಗಳುಮನಱಿಯದಱಿಯಟ್ಟುತ್ತೆ ಪೊಲಗೆಟ್ಟು ಬಗೆಯೊಳ್—ನೆಲಂ ಬಾಯ್ದೆಱೆಯದೆ? ಅದೃಶ್ಯಾಂಜನಮನುಗೂಡದೆ? ಎಱಂಕೆಗಳ್ ಮೊಳೆಯವೆ? ಎಮ್ಮರಿದಿರ್ವಾರದೆ? ದೇವರುಂ ನೆರವಾಗರೆ? ಇವರ್ಗಾದೊಡಂ ದಯೆದೋಱದೆ?—ಎಂದು ಬಗೆ

ಯುತ್ತೆ ತಂದೆಯಾದೊಡಂ ಕಂದನಾದೊಡವೊಡವುಟ್ಟಿದನಾದೊಡವೊಡನಾಡಿಯಾದೊಡಂ ಮತ್ತಂ ತನ್ನೊಡೆಯನಾದೊಡಂ ಬಿಟ್ಟುವನನೆತ್ತದೆ ಪಿಂತಿರುಗಿ ನೋಡದೋಡಿಸೆ ಬಸವಱದು ಮುಱ್ಗೆ ಮೊಱಕಾಲೂರಿ ಮುಂಗೆಡುವ ವಾರುವಂಗಳ ವಾಗೆಯುಂ ಪಿಡಿದು ಜಡಿದೆತ್ತುತ್ತೆ ಇತ್ತಣಿಂ ಬಂದೆವಿತ್ತಣ್ಗೆ ಪೋಪೆವಿಲ್ಲಿಗಿದು ದಾಱಯೆಂಬಾರಯ್ಕೆದೋಜದೆ ಕುದುರೆಯಱವನ್ನಮುಸಿರ್ಕಱವನ್ನಂ ದೆಸೆಗೆಟ್ಟೋಡಿದರ್. ಮೂಲಬಲಂ ಮುಱದ ತೆಱಂ ದೇವರ ಬಗೆಯೊಳ್ ತಿಳಿದಿರ್ಪುದೈಸೆ ; ಆಂ ಬಿನ್ನವಿಪುದೇನಿರ್ಕುಂ ?- ಎನೆ ;

ಕೇಳ್ದು ಮನದೊಳ್—ಅಕಟಕಟಾ ! ಈ ಕೂಟದ ದಳಂಗಳೆನಿತಾನುಮಿರ್ದೊಡಂ ಒಱಸಲ್ಲದು. ಈ ದಱನಾಯಕ್ ಚೆನ್ನಮನಾಯಕನುಂ ಈ ಪ್ರಧಾನಿರಾಮಾನುಜಯ್ಯನುಂ ಎನ್ನೆಡಬಲದೊಳಿರ್ದುಮೆನ್ನ ಮೇಲ್ವಿಟ್ಟು ಪುಯಿಲ್ಗೊಱಯುಂ ಪೋರುವರಂತೆ ಮುಂತಣ್ಗೆ ನಡೆದು ಮೊಗವಱಯುಪ್ಪುದುಮೆನ್ನನೊಪ್ಪಿಸಿ ತಪ್ಪುದಾಱವಿಡಿದೊಪ್ಪದಿಂ ನಡೆದರ್. ಆನಿನ್ನೆವರಮಿವರಂ ಮನ್ನಣೆಯಿಂದೋವಿದುದು ಕಾಡೊಳಟ್ಟಂತೆಯುಂ ಕಲ್ಲಱಯೊಳ್ ಕಡಲೆವಿತ್ತಿದಂತೆಯುಂ ಅಂಧನೊಳಾಡಿದಂತೆಯುಂ ಬಧಿರನೊಳ್ ಪಾಡಿದಂತೆಯುಂ ಮಱಲಂ ಪಿಱದಂತೆಯುಂ ಉಯ್ಯನಗಿದಂತೆಯುಂ ಪಱ್ತಯುಂ ತುತ್ತಿದಂತೆಯುಂ ಕೊಡನಂ ಕೌಚಿ ನೀರನೆಱದಂತೆಯುಂ ಆದುದು. ಇವರಂ ನಚ್ಚಿ ಮೈಸೂರವರೊಳಿದಿರ್ಚಿದೆಂ. ಅಱತಱತುಮಱಯದನಾದೆಂ. ಕೊಡೆಯುಂ ಮಱಗೊಂಡು ಸಿಡಿಲ್ಗಿದಿರೇಱದೆಂ. ಜಾಯಿಲ ವಾಲಮಂ ಪಿಡಿದು ಜಾಹ್ನವಿಯುಂ ದಾಂಟಲೆಳಸಿದೆಂ. ಪಱಮೊಜದೆಱಂಕೆಯಿಂ ಪಾಱಲ್ಬಯಸಿದೆಂ. ಕಳಸದ ನೀರಿಂ ಕಾಟ್ಕಿಚ್ಚನಡಂಗಿಸಲೊಡರ್ಚಿದೆಂ. ಮುಚ್ಚುಮಱಯೇಂ ? ಮೋಸವೋದೆಂ. ಮುಂತೆನಗೆ ಗತಿಯಾವುದು ? ಪಸಿದ ಪಾವನೇಱಗಂಡೆಕ್ಕಲನಂ ಸೊರ್ಕಿದಾನೆಯನೀರ್ನ್ದ ಪುಲಿಯುಂ ಕಣ್ಮಱಗಳೆದ ಸಾಳ್ವನಂ ಸಿಟ್ಟೆಟ್ಟಿ ಸಿಂಗಮಂ

ಕೆಣಕಿ ಕೆಟ್ಟಿಂ. ಇನ್ನೀಪಟ್ಟಣದಾಸೆಯುಂ ಬಿಟ್ಟು ಪರಿವುದೇ ಪದುಳಂ. ಅದಱಿಂ ಮಱಿವುಯಿಲನೆಸಗಿ ಮುೞ್ಗಸದಮುನ್ನಮೆ ಬಟ್ಟೆಗಳಂ ಕಟ್ಟಿಬಾಧಿಸದ ಮುನ್ನಮೆ ದೞದುೞವಾಯ್ದುದಾಯಂಗೆಡಿಸಿ ಕೞಬ್ಗಲೆ ವಿಟ್ಟು ಕೈಸೆಱಿಗೊಳ್ಳದ ಮುನ್ನಮೆ ಮೋಸಂಗೊಂಡು ಮೂಗನರಿಯದ ಮುನ್ನಮೆ ಸಾಗುವೆಂ—ಎಂದು ಪಯಣಸನ್ನದಂಗೆಯ್ಯುತ್ತಿರ್ದರ್.

ಅತ್ತಲಾಪುಯಿಲೊಳ್ ನೊಂದು ಪೊೞಲ್ಗಳಂ ಪೊರ್ದಿದ ತಳಕಾಡೆಳವಂದೂರಮ್ಮಚನಾಡಿ ತಗಡೂರ್ ಮೊದಲಾದ ಮೈಸೂರ ನೆರೆ ದೊರೆಗಳ್—ಎಮಗಿನ್ನುೞಿವಿಲ್ಲ, ಎಂತಾದೊಡಂ ತೆಲುಂಗುರಾಯಂಗೆ ಧೈರ್ಯಮಂ ನೆರಪಿಯುವನ ಮಱಿಯೊಳುೞಿದ ಕಾಲಮಂ ಕಳೆವೆವು, ಅವ ನೞಿಪಿನೊಳೞಿವೆವೆಂದನಿಬರುಮೊಂದಾಗಿ ನಿಯೋಗಿಯನೊರ್ವನಂ ಕಳು ಪಲೊಡಮವಂ ರಾಯನಂ ಸಂಧಿಸಿ—ಅಂದು ಮೊರಸ ಬೇಡ ಮಲೆನಾಡ ವರ್ ಬಂದು ಬೆರಸಿರ್ದುದಱಿಂದವನೊಡನೆಲ್ಲರುಂ ಪಂದೆಗಳಾಗಿ ಪುಯಿ ಲೊಳ್ ಪೊಲಂಬುಗೆಟ್ಟುದು. ಆದರ್ಕೆ ಮನದೊಳ್ ಕಕ್ಕುಲಿತೆಗೊಳಲ್ಕೆ ಕಾರಣಮಿಲ್ಲ. ಇನ್ನುಮವರ್ ಮುನ್ನಿನಂತೆಣಿಸಿ ಮೆಯ್ಮಱಿದೆಮ್ಮಂ ಬಗೆಯದೆ ಕಟ್ಟಿದಟಿಂ ಪಟ್ಟಣಮಂ ಮುತ್ತುವರ್. ಆಗಳಾಮವರ ಪಾಳೆ ಯಮಂ ದೞದುೞನಾಯ್ದು ಸೂಡುಪಾಡಂ ಮಱಲ್ಚುವೆವು. ಇದು ನಿಶ್ಚಿತಂ. ಇನಿತಱಿಯಳವರುಪಟಳಕ್ಕೆ ಬೆಚ್ಚಿದೆಮ್ಮಂ ನಚ್ಚಿರ್ಪುದು—ಎಂದ ನಿಬರುಂ ಕಳುಪಿದ ಬಾಸೆವತ್ತಳೆಗಳನಿತ್ತು ಬಿನ್ನವಿಪುದುಂ ;

ಆ ತಿರುಮಲೆರಾಜಂ—ಅಕಟಕಟಾ ! ಇರುಳ್ಕಂಡ ಪಳ್ಳದೊಳ್ ಪಗಲ್ ಬೀೞ್ವರೆ ? ಅಟ್ಟಿಪಿಡಿದವನನಮನೆಯೊಳವಿದುಕೊಳ್ವರೆ ? ಪೋಪ ಮಾರಿಯುಂ ಕೂಗಿ ಕರವರೆ ? ತಳನನಗುೞ್ದು ಮೇಲೆ ಕೆಡಪಿಕೊಂ ಬರೆ ? ತಲೆದಾಗಿಯ್ಮುಂ ನಿಮಿರ್ದಪರೆ ? ಮುಗ್ಗಿವಿಟ್ಟುಂ ಮೂಗು ಮೇಲೆಂಬರೆ?—ಎಂಬ ಮಾತೇನಿನ್ನರಮನೆಯ ಸೀಮೆಯೊಳ್ ದಾೞಿಟ್ಟು ತುೞುಸೆಱಿಗೊಂಡುದಱಿಂದಂದಂದಿಗೆ ವರ್ಪ ಧನಧಾನ್ಯಂಗಳಡಂಗಿ,

ಸಂಚಿತಂಗಳುಂ ಸಮೆದು, ಆನೆಕುದುರೆಗಳ ಮೇವುಗಳ್ಗಂ ಜೋದ ರಾವುತಪಾಯದೞದ ಜೀವಿತಂಗಳ್ಗಂ ಅರಮನೆಯೊಡವೆಯೊಳಮಗರದ ತೆಱಿಗೆಯೊಳಂ ದೇಗುಲದುಪಕರಣಂಗಳೊಳಂ ಪರದರ ಬಣಂಜದೊಳಂ ಮತ್ತಮೇಂ ದಂಡದೊಳಂ ಕವರ್ತೆಯೊಳಂ ತೀಱದೆ ದಂದುಗಂಗೊಂಬುದೆ ನಿತಾನುಮುಂಟು. ಅದುಮಲ್ಲದೆ ಪಟ್ಟಪಗಲ್ ನಡುವಟ್ಟಣದೊಳ್ ತಳವಱನ ತಲೆಗೊಯ್ದರ್ ; ಕಾವಲಿಗರಂ ಕಡಿದೊಟ್ಟಿದರ್ ; ಅಧಿಕಾರಿಯನ ಱೆಯಟ್ಟಿದರ್ ; ಅರಮನೆಗೇೞ್ತಿರ್ಪರನಡ್ಡನಾಯ್ದು ಪೊಯ್ದರ್ ; ಕತ್ತಿಯೂೞಿಗದವನಂ ಕತ್ತರಿಸಿ ಕತ್ತಿಯನೀೞ್ದರ್ ; ಸಂಚಿಯವನಂ ಪೊಂಚಿ ಸದೆದು ಕಂಚುಮಿಂಚಾದರ್. ಅವಕೇರ್ಣಮಂ ತೊಟ್ಟು ಮನಂಮುಟ್ಟಿ ನಡೆಯಿಸಿದೊಡೆ ಪೊೞಲ್ ಬಳಸಿದುದೆ ಪುಸಿಯೆನಿಸುವರ್ ; ಕೋಂಟೆಯಗಟ್ಗಳಂ ದಿಂಟೆವಳ್ಳಂಗಳನರೆಗಳಿಗೆಯೊಳ್ ಸಮತಳಂಗೆಯ್ವರ್ ; ಮೂಡುವ ಪೊೞ್ತಿಂ ಮುಚ್ಚಿ ಮಾಂಜುವರ್ ; ಬೀಸುವೆಲರಂ ಪಿಡಿದು ನಿಲಿಸುವರ್ ; ಕಗ್ಗಲ್ಲಂ ಮೆಲ್ಲಿತೆನಿಸುವರ್. ಅಂತಾದೊಡಮೆನ್ನೊಳ್ ಮುನ್ನಿನ ಕೆಳೆಯನೆಂದುಂ ಮುದುಪನೆಂದುಂ ಬಲ್ಲರಣಿಗನೆಂದುಂ ಬಸಗೆಟ್ಟನೆಂದುಂ ತಱಹರಿಸಲಾಱನೆಂದುಂ ತಾನೆ ಪೋಪನೆಂದುಂ ದಯೆಗೆಯ್ದೆನ್ನುಮನೆನ್ನಂತಪುರಮುಮಂ ಮನ್ನಿಸಿರ್ಪರ್. ಆದೊಡಮರಮನೆಯ ಮನೆವಾೞ್ತಿಗಂ ತೆಱನಿಲ್ಲದೆ ಬೊಮ್ಮಪುರದವರ್ ಒದಾಳಿ ಪಾರ್ವರೆಂದೊಲ್ದು ಮೈಸೂರವರವರೂರಂ ಸೂಱೆಗೊಳ್ಳದೆ ತುಱುಸೆಱೆಗೆಯ್ಯದೆ ಕಾಪಿಟ್ಟುದಱಿಂದಾಪೂರೊಳ್ಬೆಳೆದ ಕೞವೆಯೊಳನಿಸಿನಿಸಂ ಕಳ್ದು ತರಿಸಿನ್ನೆವರಂ ಕಾಲಂಗಳೆದೆಂ. ಇನ್ನಿಲ್ಲಿರ್ಪುದಿಲ್ಲ, ತಾಮಿರ್ಪಲ್ಲಿಗೆ ವರ್ಪೆಂ—ಎಂದು ಬೆಸಸಿ ಕಳುಪಿದಂ.

ಬೞಿಕ್ಕವರಾವೃತ್ತಾಂತಮಂ ಕೇಳ್ದು ಆಳ್ದನಾಪತ್ತನೊತ್ತರಿಪೆವೆಂದು ತಮ್ಮುಳ್ಳ ಧನಧಾನ್ಯಂಗಳಂ ಮದ್ದುಗುಂಡುಗಳಂ ಬಾಣಬತ್ತಿಗಳ್ಮೊದಲಾದೆಲ್ಲಾವಸ್ತುಗಳಂ ಕೊಂಡು ಬಂದು ಪಟ್ಟಣಮಂ ಪುಗಲೆಂದು ಬಡಗಣ ಪೊೞಲ ಪೊಱಗಡೆಯೊಳ್ ಪಾಳೆಯಮಿೞಿದರ್.

ಇತ್ತಲಾರಾಜನೃಪನೀಯೆಸಕಮನಾರಯ್ದು ಕೆಸಱಿಯ ಪುಯಿಲೊಳ್ ಬಸಗೆಯ್ದಾನೆಕುದುರೆಗಳ ಬಳಗದಿಂ ಬಳೆದ ದೞಮಂ **ನರಸರಾಜ**ನೆಂದು ನೆಗೞ್ತೆವೆತ್ತ ತನ್ನ ಪಿರಿಯಣುಗನ ಬೞಿಯೊಳ್ ಕಳುಪುವುದುಂ; ಆವಂ ಕಣ್ಣವೆ ಮಿಸುಕಿದಂತವರ ಪಾಳೆಯದ ಮುಂತಣ್ಗೆ ವಂದು ನಿಂದು, ಭಟನೋರ್ವನಂ ಕರೆದು, ನೀನವರ ಬೞಿಯಂ ಸಾರಿ,—ವೈರಿರಾಜವೇಶ್ಯಾಭುಜಂಗನೆನಿಪ ರಾಜನೃಪನ ಕುವರಂ ಕೂಡಾಳ್ಗಳ ಗಂಡನಾದ ನರಸರಾಜನೞ್ಕೆಗಾಳೆಗಂಗೊಳಲ್ಬಂದಂ. ನೀಂ, ಇಂದು ಮೆಯ್ಮಱೆತಿರ್ದೆವು, ಮದವೇಱಿರ್ದೆವು, ಮಱವಟ್ಟಿರ್ದೆವು, ಮರುಳಾಗಿರ್ದೆವು, ಪಸಿದಿರ್ದೆವು ಬೞಲ್ದಿರ್ದೆವು, ಉಣುತಿರ್ದೆವು, ಒಱಗಿರ್ದೆವು ಎಂದು ಪಿಂದೆ ಗೞಪದೆೞ್ಚತ್ತು ಸನ್ನದವಾಗಿ, ಬಗೆವಂದಾಗಳ್ ಬರ್ಪುದು—ಎಂದು ಮೂದಲಿಸಿ ಬೆಸಸಿ ಕಳುಪೆ; ಆವಂ ಪಸಿದೆಯ್ದುವಂದು ಅಂತೆ ಪೇೞಲೊಡಮವರ್ ಮೊೞಿದೆೞ್ದು ಆವಂ ಮರಲ್ದು ಬರ್ಪುದರ್ಕೆ ಮುನ್ನಮೆ ಕವಿತರ್ಪುದುಂ; ನರಸರಾಜಂ ಮುಂ ರಕ್ಕಸರನೊಕ್ಕಲಿಕ್ಕಿದ ಕುವರನಂತೆ ಶಕ್ತಿಧರನೆನಿಸಿ, ಕೊಂಚವೆಟ್ಟಂ ತಟ್ಟುರ್ಚಿದಂತೆ ತಾಱುಂತಟ್ಟಾಗಿ ಕೆಡಪಿ ಮಟ್ಟೆಡುವುದುಂ; ಆವರ್ ಕೆಟ್ಟು ಮುಱಿದೋಡಿ ಬಡಗಲ್ ಗಾವುದದೊಳಿರ್ಪ ಕೋಡಾಲಮಂ ಪುಗಲೊಡನೀತನುಂ ಬೆಂಬತ್ತಿ ಸುತ್ತಿರ್ಪಿನಂ; ಒಳಗಿರ್ದ ದೊರೆಗಳನಿಬರುಂ ಕಡುವಿಸಿಲೊಳ್ ಪರಿತಂದು ಪಸಿದಿರ್ದುದಱಿಂ ನೀರೞ್ಕೆಗೊಂಡು ಬಾವಿಯುನಱಸಿ ಬನ್ನಂಬಟ್ಟು ಬಾಯೊಣಗಿ ಬಸಗೆಟ್ಟು ಅಲ್ಲಿರ್ಪ ತಿಪ್ಪೆವಳ್ಳದೊಳ್ ಪಾವಸೆಗಟ್ಟೆ ಬಣ್ಣಂಗುಂದಿ ಕೊೞೆತು ಪುೞುತು ಪೊಲಸುಗಂಪಿಡುವ ನೀರನೆ ಕುಡಿದು ಸಂಜೆವರೆಗಮುಸಿರ್ವಿಡಿದಿರ್ದು ಮರ್ಬಿನೊಳ್ ಪೊಱಮಟ್ಟು ಓರೊರ್ವರೊಂದದೆ ಪರಿದು ಪೋದರ್.

ಮಱುವಗಲ್ ತಿರುಮಲೆರಾಜಂ ನರಸರಾಜನ ವಿಜಯವಾರ್ತೆಯಂ ಕೇಳ್ದು, ಎತ್ತಾನುಮಾತನಾಪಡೆವೆರಸು ಬಂದು ಪಟ್ಟಣಮಂ

ವೇಷ್ಟೈಪನೆಂದಳ್ಕಿಯೊಡಲಂ ಬಿಡುವ ಜೀವನಂತೆ ಪಲತೆಱದೊಳ್ ಪಲುಂಬಿ ಕೊಱಗಿ ಕೋಟಲೆಗೊಂಡು ಪೆಣ್ಡಿರಂ ಬಿಟ್ಟು ಪಟ್ಟಣದಿಂ ಪೊಱಮಟ್ಟು ಗತಪುಣ್ಯರ್ ಸ್ವರ್ಗದಿಂ ದುರ್ಗತಿಗಿೞಿವಂತೆ ತಳಕಾಡ ಬೞಿಯ ಮಾಲಂ ಗಿಗೆಯ್ದು ಮೆಯ್ಮಱಿಸಿದಂ.

ಬೞಿಕ್ಕೆ ನರಸರಾಜಂ ರಾಜನೃಪಂಗೆ ಈ ವಾರ್ತೆಯಂ ಬಿನ್ನವಿಸಿ ಕಳುಪುವುದುಂ ; ಸೋದರನನೊಡಗೊಂಡು ಪಟ್ಟಣಕ್ಕೆ ನಡೆತಂದು ಊರ ಮುಂದಣ ಬಯಲೊಳಿೞಿದಿರ್ದ ಕುವರನಂ ಕೂರ್ಮೆಯಿಂದಪ್ಪಿ ಸಂತಸಂ ದಳೆದು ಸನ್ನುತಿಗೆಯ್ದು ಪೊೞಲಂ ಪುಗಲೆಳಸಿಯುಂ, ಪರಿವ ಪಾವಂ ಉರಿವ ಕಿರ್ಚ್ಚಂ ಮೆಯ್ಗೊಂಡ ಮರುಳಂ ಪೆಱರ ಪೆಂಡಿರಂ ಪತ್ತಿಸಾರ್ವುದು ಪಾಟಿಯಲ್ತೆಂದು ಅಲ್ಲಿಯೆ ನಿಂದು, ತಿರುಮಲೆರಾಜನ ರಾಣಿಯಾದ ರಂಗ ಮ್ಮನೆಡೆಗೆ ಮುತ್ತ ಮುದುಪನನೊರ್ವನಂ ಬೆಸಸಿ ಕಳುಪಲೊಡಮವಂ—ಹದಿಬದೆಯರ್ಗೆ ಗಂಡನಂ ಬೞಿಸಲ್ವೇದೆ ಬಲ್ಲವಿಕೆ. ನೀಂ ನಿಮ್ಮಡಿಗೆ ತೊಡಿಗೆಗಳುಮನೂೞಿಗವೆಣ್ಗಳುಮನೊಡಗೊಂಡು ಪೋಪುದರ್ಕೆ ತಕ್ಕ ದಂಡಿಗೆಗಳುಮಂ ಭಂಡಿಕುದುರೆಗಳುಮನೊಡಗೊಂಡು ಬಂದೆಂ, ತೆರ ಳ್ವುದು—ಎಂಬುದುಂ ;

ಆನುಡಿಗೇಳ್ದು, ಮುಂತೆನ್ನ ಮನದೊಳ್ ಈರಾಯಂ ಬಿಟ್ಟುಪೋದ ನಿನ್ನೇನಪ್ಪುದೋ ಎಂಬ ಚಿಂತಾಸಾಗರದೊಳ್ ಮುೞುಂಗಿದ ಮೂಗುಬ್ಬ ಸಮಿೞಿದು,—ಎಲೆಯಣ್ಣ ! ನೀನುಂ ಮಡದಿಮಕ್ಕಳ್ವೆರಸು ಕಟ್ಟೈಸಿರಿ ಯೊಳ್ ನೂಱು ಬರಿಸಂ ಸೊಗವಾೞ್ ! ಎಂದು ಪರಸಿ, ಸಂತಸಗದುಬಿ ನೊಳ್ ಕೆಳದಿಯರಂ ಕರೆದು, ರಾಜನೃಪಂ ನೆವಮಿಲ್ಲದೆಱಕದೊಳಿಂದೆ ನ್ನನೆಮ್ಮಾಳ್ದನ ಬೞಿಗೆ ಕಳುಪುವಂ, ಪೋಪಮೆಂಬುದುಂ ; ಅವರವರ್ ತಂತಮ್ಮ ಕಟ್ಟಳೆಯೂೞಿಗಂಗಳನೆಸಗುತ್ತೆ ಬೞಿವರೆ, ರಾಣಿ ಪೊಱಮಟ್ಟು ರಂಗೇಶರಂಗನಾಯಕಿಯರ್ಗೆ ವಂದನೆಯಂ ಗೆಯ್ದು ಅಂದಳವೇಱಿ ಯೂರ ಪೊಱಗಣ್ಗೆ ವಂದು, ರಾಜರಸನ ಪೌಜಂ ಕಿಱಿದುಂ ದೂರ

ದೊಳ್ ಕಂಡು ನಿಂದು, ಕೆಟವಿಗೆಳದಿಯೊರ್ವಳಂ ಕರೆದು, ನೀಂ ರಾಜನೃಪನ ಸಮ್ಮೊಗದೊಳ್ ನಿಂದು ಎನ್ನ ನುಡಿಯಿಂದೆ—ಎಲೆ ತಂದೆ, ಕೇಳೆನ್ನರಸನುಮೂರೊಳಗಿಲ್ಲದೆ ಮೆಯ್ಗಾವಲಿಗರುಂ ಪೋಗಿಯಾನೋರ್ವಳೆಂ. ಎನಗಮೆಮ್ಮೊಟಿಗಮೆಣ್ಗಳ್ಗಮೆನ್ನ ಮನಮುಮಂ ಮಾತುಗಳುಮಂ ಕಾವಲಿಟ್ಟು ಕಡಲೊಳ್ ಮುಟುಂಗಿ ಕೈಗೆಟ್ಟಂತಿರ್ಪಳನೆತ್ತಿ ಸಲಪಿಯೆನ್ನಾಳ್ದನೆಡೆಗೆ ಕಳುಪಿದೆ. ಪ್ರಾಣಮಾನಂಗಳೊಡನೆಮ್ಮ ಕುಲಧರ್ಮಮಂ ಕಾಪಿಟ್ಟು ಮನ್ನಿಸಿದೆ ಇಂದಾಂ ನಿನ್ನ ಬೆನ್ನೊಳಂ ಬಸಿಜಋಳಂ ಬಂದೆಂ. ನೀನೆನ್ನ ಪರಕೆಗಳಿಂ ನಳನಹುಷನಾಭಾಗರಂತೆ ಇಳೆಯನಾಳ್ದು ಪಗೆಗಳಂ ಗೆಲ್ದು ಪೊರ್ದಿದರಂ ಪೊರೆದು ಪಾರ್ವರ್ಗಿತ್ತು ಮಿತ್ರಕಳತ್ರಪುತ್ರಪೌತ್ರರ ಮೇಳದೊಳ್ ಸೊಗನಾಟಿಋಂದು ಬಿನ್ನವಿಸಿ ಬರ್ಪುದು ಎಂದು ಕಳುಪೆ ; ಅವಳಂತೆಗೆಯ್ದು ಮರಳ್ದಳ್.

ಬಟಿಕ್ಕೆ ರಾಜನೃಪಂ ನಂಬುಗೆಯೊಳ್ ಪೂರ್ಣಕುಂಭಂಗಳಂ ಕೊಂಡು ಪರಸುತ್ತಿರ್ದಿರ್ಪರ್ಗರದ ಪಾರ್ವರಂ ಬಲಗೊಂಡು, ಇರ್ತರದೊಳ್ ಕೆಯ್ಯೆತ್ತಿ ಪೊಗಟ್ವ ಕೈವಾರಿಗಳ ಕೊರಲುಲಿಗೆ ಕೊರ್ಬುತೆ, ತಂತಮ್ಮ ಕೇಱುವಾಗಿಲ ಸರಿಸದೊಳ್ನಿಂದು ಆರತಿಯೆತ್ತಿ ಸೇಸೆಗಳಂ ಸೂಸುವ ಪಾರ್ವಿತಿಯರ ಪರಕೆಗೊಂಡು, ಅವರ್ಗೆ ಬಣ್ಣಬಂಗಾರಂಗಳನಿತ್ತು ರಂಗೇಶನ ಸನ್ನಿಧಿಗೆಯ್ದಿ ಬಲವಂದು ವಂದಿಸಿ ಹಸಾದಂಗೊಂಡು ಕಾಣ್ಕೆಯಿತ್ತು ಅರಮನೆಯ್ಗಂ ಪೊಕ್ಕು, ಜೋಯಿಸಗನಿತ್ತ ನಲ್ವೊಟ್ಟಿನೊಳೋಲಗಮಿರ್ದು, ದೇವದಾಯಂಗೊಟ್ಟು ಅಱಂಗೆಯ್ದು, ನಂಬಿ ಸೇಱದರನುಂಬಳಿಯುಚಿತಂಗಳಿಂದೆ ಮನ್ನಿಸಿಯರಸುಗೆಯ್ಯುತ್ತಿರೆ—

ವೆಂಕಟಪತಿರಾಯಂ ತನ್ನಂ ಮಧುರೆಯ ಪುಯಿಲೊಳ್ ಪಗೆವರ್ಗೊಪ್ಪಿಸಿಯೆರಟ್ಟಿಗೆದು ಬಿಟ್ಟು ಪೋಗಿ ಪಿಂತೆಣಿಸದೆ ಬೇರಂಗೊಂಡು ಬಿಂಕದೊಳ್ ತನಗಂ ತನ್ನನೋಲಗಿಪ ದೊರೆಗಳ್ಗಂ ಬಸಮಾಗದೆ ಪಡಿಬರಿಸಿ ಬಲ್ಕೆಯೊಳಿರ್ಪ **ತಿರುಮಲೆರಾಜನ** ದೇಶಕೋಶಂಗಳಂ ಕೊಂಡು

ಅವನನೆಟ್ಟಿರ್ದುದರ್ಕೆ ಪೆರ್ಕಳಿಸಿ, ಸೊರ್ಕಾನೆಗಳನುರ್ಕುಗುದುರೆಗಳನೊಳ್ಪುಡೆತೊಡವುಗಳಂ ಪಾವುಡಮಂ ಕೊಟ್ಟು ಮಂತ್ರಿಗಳೊಳ್ ಕಟ್ಟಾಳೆನಿಸಿದ **ಗಂಭೀರರಾಯುವಿರುಪಣ್ಣ**ನಂ ಕಳುಪೆ, ಅವನೆಯ್ತಂದು ತಂದುವನೊಪ್ಪಿಸೆ ಯವಂ ಕೊಂಡವನಂ ಮನ್ನಿಸಿ ರಾಯಂಗೆ ಪಡಿಪಾವುಡಮಂ ಕಟ್ಟಿಸಿ ಕಳುಪಿ ಸಂತಸದೊಳಿರ್ದಂ.

ಇತ್ತಲೀ **ಪದಿನಾಡ ನಂಜರಾಜಂ** ತನ್ನಂ ಕಂಡೋಲಗಿಪಾಲಂಬಾಡಿ ಕೊಳೆಯುಂ ಮೊದಲಾದ ಕೂಟದಾಳ ನೆಱವಿಯುಂ, ಎಳವಂದೂರ ಸತ್ಯಾಗಾಲದರಸರಪ್ಪ ತನ್ನೊಡವುಟ್ಟಿದರ ಪಡೆಯುಂ, ನೆರೆಯ ದೊರೆಗಳ ಪಡಿದಳಮುಂ, ತನ್ನ ಮೂಲಬಲಮುಂ, ತನಗೆ ಮಧುರೆಯುವರೀವ ಕಪ್ಪದ ಪಣದೊಳ್ ಕಟ್ಟಿದ ಕಾಲಾಳ್ಗಳ ಮೋಹರಮುಮುಂಟೆಂಬುಬ್ಬಿನಿಂ **ರಾಜನೃಪ**ನೊಳ್ ತೋಂಟಿಗೊಳಲೆಂದು ಎಡದೊಱೆಯೆಂಬ ಗಡಿಗೋಂಟೆಯೊಳ್ ಕಟ್ಟಿರ್ದ ಮೇಘಪುಷ್ಪವೆಂಬ ತೇಜಿಯಂ ಕಳವಿನಿಂದೆ ಕೊಂಡೊಯ್ವುದುಂ ;

ಅದಂ ಸೈರಿಸದೆ ರಾಜನೃಪಂ ಆತೇಜಿಗೆ ಅವನ ತಲೆಯುನೆ ಬೆಲೆಗೊಂಬೆನೆಂದು ಬಲದೊಡನೆ ನಡೆದು ಅವನ ತಾಯೂರೆಂಬ ಗಡಿಗೋಂಟೆಯಂ ವೇಢೈಸಿ ಮುತ್ತುವಿನಂ ;

ಅವಂ ಸಂವರಣೆಗೊಂಡು ಬರೆ, ದಾೞಿಯೊಳವನ ದಳಮುನಡಗಟ್ಟಿ ಬೇಡರನೞಯುಟ್ಟಿಬೀರದೊಳಿದಿರ್ಚಿದ **ಹಱಿಗೆಯು ನಂಜುಂಡಂ, ಕೋರನಹಳ್ಳಿಯು ಕೊಂಡಂ** ಮೊದಲಾದ ಗಂಡುಗಲಿಗಳ ತಲೆಯಂ ಸೆಂಡಾಡಿಯಾ**ನಂಜರಾಜ**ನಂ ಕೈಸೆಱೆಗೊಂಡು ಕೈಗಾದು ಕಳುಪುವೆನೆಂದಿರ್ಪಿನಂ ; ಮೊನೆಯೊಳೋರ್ವಂ ಮುಂಚಿ ಮೋಹರದೊಳ್ ಕುಱುಪುಗಾಣದಿರಿದು ಕೊರಲಂ ಕೊಱೆದು ತರ್ಪಿನಂ ;

ಅರಸನದಂ ಕಂಡು ಮುಳಿಗಿಯುವನಂ ಕೊಂಡಾಡಿಯಾಪನ್ನಲೆಯಂ ಪೊನ್ನಳಿಗೆಯೊಳಿಟ್ಟು ಪೊಂಬಟ್ಟೆಯಂ ಪೊದಿಸಿಯುಂದಣದೊಳಿರಿಸಿ

ಯುವನೂರ್ಗೆ ಕಳುಪಿಯುವನ ಧನಕನಕವಸ್ತುವಾಹನಾದಿಗಳಂ ಸೂಱೆ ಗೊಂಡಾನಾಡನನಿತುವುಂ ಬಸಂಗೆಯ್ದುವನ ಕಂಡೋಲಗಿಪರನಾಳ್ಗೊಂ ಡು ಬೀರರೊಳ್ಬೀರನೆನಿಸಿಯೆಣ್ಬತ್ತುಂ ಬರಿಸಂ ಧರ್ಮದಿಂ ಧರೆಯುಂ ಪಾಲಿಸಿ ಬಟಿಲ್ಪು ಯದುಗಿರಿನಾರಾಯಣನಡಿದಾವರೆಯು ನೆಟಿಲೊಳಾ ಬಟಿಲ್ಕೆಗಳೆಯುಲೆಳಸಿಯನುಜರಂ ಕರೆದು—ಎಲೆ ಬೆಟ್ಟದಯ್ಯ ದೇವ ರಾಜರಿರಾ! ನೀವಿರ್ವರುಮೆನ್ನಂ ತಂದೆಗೆತ್ತದಱಿಂದಾನುಮೆನ್ನ ಕಂದ ಗೆತ್ತು ಕಿಱಿಯತಮ್ಮಂ ಚಿಕ್ಕರಾಜಂ, ನರಸರಾಜಂ ಮೊದಲಾದ ಮೂವರಣುಗರುಂ ನಾರಾಯಣನ ಚರಣಾರವಿಂದದೊಳಡಂಗಿಯೆನ್ನಂ ತೊಱೆದುದರ್ಕೆ ಮಱುಗದೆ, ಮನಂಗುಂದದಿರ್ದೆಂ. ಇನ್ನೆವರಂ ಪೊತ್ತಿ ರ್ದರಸುತನದ ಬಲ್ಪೊಱೆಯನಿಟುಪ್ಪವೆಂ. ನೀವಿದಂ ಪೊತ್ತೆನ್ನಂ ಮನ್ನಿ ಸಿ ತಪಕ್ಕೆ ಕಳುಪುವುದೆಂದಾಣತಿಗುಡುವುದುಂ; ಅವರಿರ್ವರುಂ ಕಡು ಮಱುಕದಿಂ ಕಣ್ಬನಿಗಱೆಯುತ್ತೆ—ಜೀಯಾ! ನೇಸಱುಟಿದು ಬಿಸುಗ ದಿರ್ಗಳಿರ್ಕುವೆ? ಬಿಜ್ಜೆಯುಂ ವರ್ಜಿಸಿ ಬಿನ್ನಣಂಗಳ್ ಬಳೆಗುವೆ? ಬಿಂಬವುಂ ಬಿಟ್ಟು ಪಡಿನೆಟಲ್ ನೆಗಟ್ಗುವೆ? ದೇವರಂ ಬಿಟ್ಟಾವಿ ರ್ಪೆವೆ? ಈ ಮಾತಂತಿರ್ಕೆ. ದೇವರ ಕಿಱಿಯಣುಗರಿಮ್ಮಡಿರಾಜರ**ಸಂ** ಗಾದೊಡಂ ನರಸರಾಜನ ಬಸಿಱಽಳ್ಬಂದ ಮೊಮ್ಮಂಗೆ **ಚಾಮರಾಜರ** **ಸಂ**ಗಾದೊಡಂ ಪಟ್ಟಂಗಟ್ಟಿಯಾಂ ಮೂವರುಂ ಪರಮಪುರುಷಚರಣ ಯುಗಳಧ್ಯಾನಾರ್ಚನೆಪ್ರಣಾಮಾದಿತತ್ಪರರಾಗಿ ಪರಮಪದವಿಯುಂ ಪಡೆ ವೆವೆಂಬುದುಂ. ಅದರ್ಕೆ ಸಮ್ಮತಿಸಿ—ಆದೊಡೀನರಸರಾಜನ ಕುವರಂಗೆ **ಚಾಮರಾಜಂ**ಗರಸುವಟ್ಟಂಗಟ್ಟಿಯೆನ್ನ ಕುವರಂಗಂ ನಿಮ್ಮ ಕುವರರ್ಗಂ ಬೇಱೆವೇಱುಂಬಳಿಗಳನಮರಿಸಿಯಾಂ ಬಟಿಕೆ ಪರಮಪದಸಾಮ್ರಾಜ್ಯಮಂ ಸಾರ್ವೆವು—ಎಂದು, **ಚಾಮರಾಜಂ**ಗೆ ರಾಜ್ಯಾಭಿಷೇಕಂಗೆಯ್ದು, ತನ್ನ ಕುವರಂಗೆ ಪಡುವಣ ದಣಾಯಕನ ಕೋಂಟೆಯುಂ, ಬೆಟ್ಟದ ಚಾಮರಾ ಜರಸನ ಕುವರರ್ಗೆ ರಂಗಸಮುದ್ರ ನಳ್ಳೂರ್ ವಿಜಯಾಪುರಂಗಳಂ,

ದೇವರಾಜರಸನ ಕುವರರ್ಗೆ ಅಱಿಕೆಱಿಯೆಲೆಯೂರ್ ಮಂಗಲಂಗಳ ನಿತ್ತು, ಅವರನಿಬರುಮನೆನ್ನಂ ಕಂಡಂತೆ ಕಾಣ್ಬುದೆಂದು ಮೊಮ್ಮಂಗೆ ಬೆಸಸಿ, ಪುಯಿಲನೆಸಗುವಲ್ಲಿಯುಂ ಪೊಡವಿಯುಂ ಪೊರೆವಲ್ಲಿಯುಂ ಪುರು ಳ್ಗೊಂಬಲ್ಲಿಯುಂ ಪುಸಿವುಗದೆ ಧರ್ಮಮನಾರಯ್ದು ನಡೆವುದೆಂದು ಬುದ್ಧಿ ವೇಳ್ದು ಮೂವರುಂ ಅಂಬರೀಷರುಕ್ಮಾಂಗದಾದಿಪರಮಭಾಗವತರಂ ದೊರೆಗೊಂಡು ಪರಮಾನಂದದೊಳಿರ್ಪಿನಂ ;

ಒಂದು ದಿವಸಂ ರಾಜನೃಪನ ಮೆಯ್ಗೆನಿಸಾಯುಸಂದೋಱೆ ಕಡು ಮುಪ್ಪಾದುದಱಿಂ ಕಟೋವೂವಿನ ಕಾವುಗಳೆದಂತುಗ್ಗಡಿಪ ನಾರಾಯಣನ ನಾಮಾಕ್ಷರದೊಡನೆ ಅಸು ಪೊಱಮಟ್ಟು ಪೋಪುದುಮಾದಿವಸದೊಳಾ ಜಾವದೊಳಾಗಳಿಗೆಯೊಳಾಕ್ಷಣದೊಳ್ ಮುನ್ನೆಯ್ತರ್ಪ ಪರಿಯೊಳೀಯದು ಗಿರಿನಾರಾಯಣಚರಣಾರವಿಂದದ್ವಂದ್ವಸನ್ನಿಧಾನಮಂ ಸಾರ್ವುದುಂ ; ಅಲ್ಲಿ ದಿವ್ಯಪ್ರಬಂಧಾನುಸಂಧಾನಂಗೆಯ್ಯುತಿರ್ಪ ಶ್ರೀವೈಷ್ಣವರನಿಬರುಂ ಎಟ್ಟಾಶೀರ್ವಾದಿಸೆ ಅವರ್ಗೆಱಗಿ ಗರ್ಭಗೃಹಮಂ ಪೊಕ್ಕು ತಿರುನಾರಾ ಯಣನಡಿದಾವರೆಯೊಳ್ ಮುಡಿಯಂ ಸಾರ್ಚಿ ಮೆಯ್ಮಱಸಿದಂ. ಅದಂ ಕಂಡಂದು ಮೊದಲಲ್ಲಿರ್ಪರನಿಬರುಂ ಪರಾಂಕುಶ ಪರಕಾಲಾದಿ ದಿವ್ಯಯೋಗಿ ಗಳ ಗಣನೆಯೊಳೀತನಂ ಪುದುಂಗೊಳಿಸಿಯೆಣಿಸುವರ್.

ಇತ್ತಲ್ ಪಟ್ಟಣದೊಳ್ **ಬೆಟ್ಟದ ಚಾಮರಾಜ ದೇವರಾಜರಸ** ರಿರ್ವರುಂ ಮೊಮ್ಮನನುಮತದಿಂದಣ್ಣಂಗೌರ್ಧ್ವದೈಹಿಕಸಂಸ್ಕಾರಮಂ ನಿರ್ವ ರ್ತಿಸಿ ತಂತಮ್ಮಣುಗರನಾ **ಚಾಮರಾಜ**ನ ಕೆಯ್ಯೆಡೆಗೊಟ್ಟು ಯದುಗಿರಿ ವೇಂಕಟಾಚಲ ಕಾಂಚಿ ಕುಂಭಘೋಣ ಶ್ರೀರಂಗ ರಾಮಸೇತುಗಳ್ ಮೊದಲಾದ ಪುಣ್ಯಕ್ಷೇತ್ರಂಗಳ ಯಾತ್ರೆಗೆಯ್ದಿದರ್.

ಚಾಮರಾಜನ ಚರಿತಂ

ಆಚಾಮರಾಜನೆಳವರೆಯದವನಾದೊಡಂ ಮಱಿಸಿಂಗದಂತೆಯುಂ, ಪೊಸನೇಸಱಂತೆಯುಂ, ನೃಸಿಂಹನಂತೆಯುಂ, ತ್ರಿವಿಕ್ರಮನಂತೆಯುಂ ಬೀರಮುಂ ತೇಜಮುಂ ಶೌರ್‍ಯಮುಂ ಪರಾಕ್ರಮಮುಂ ಮೆಯ್ಗೊಂಡು, ಗಂಡುಮಿಾಱಿ ದಿಗ್ಜಯಂಗೆಯ್ಯಲುಜ್ಜುಗಿಸಿ ದಳಮಂ ದಳನಾಯೊಡನೆ ಕಳುಪಿ, ಮೂಡಲ್-ತಳಕಾಡವರ ಮಳವಳ್ಳಿಯಂ ವೇಡೈಸಿ ಮುತ್ತಿ ಸುತ್ತುವೇಲಿಯಂ ಬಲಿದು ತಳಿಯನೊತ್ತರಿಸಿ ಪಡಿದಳಮಾಗಿ ಬಂದ **ಜಗದೇವರಾಯ**ನ ಪಡೆನೋಡಿಸಿಯ್ಯೂರುಗರ್ಗೆ ಕವಲ್ಗಂಬುಗೆಯನಿತ್ತು ಪೊಱಮಡಿಸಿಯುದಂ ಬಸಂಗೆಯ್ದು ಒಡನೆ ತಳಕಾಡಂ ತನ್ನದೆನಿಸಿ ಅತ್ತಣಿಂ ದಾಗ್ನೇಯದೊಳ್ ಕಣುವೆಯ ಬೆಟ್ಟಮನಿೞಿದು **ಘಟ್ಟಮುದನಾರಿಯಂ** ಕುಟ್ಟಿಮಟ್ಟಿಟ್ಟವಂ ಕಾಣ್ಕೆಗೊಟ್ಟೊಡವೆಪೊಂಗಳೊಡನೆ ಚೆಂಗೊಡೆಯೆಂಬಾನೆಯನಂಗೀಕರಿಸಿ. ಪಡುವಲ್—ಕೆಳಲೆಯ ನಾಡ ಪಿರಿಯಪಟ್ಟಣದ ದೊರೆಯ ತಟ್ಟನೞಿಯಟ್ಟಿ ಅವಂಗೆ ನೆರನಾಗಿ ಬಂದ ಕೆಳದಿಯ ಸಿಂಗಳರಾಯನ ಮೂಗನರಿದು ಭಂಗಿಸಿ, ಬೋಳಮಲ್ಲನೆಂಬಾನೆಯೊಡನೆ ತೊಡವು ಪಾವುಡಂಗಳಂ ಕೊಂಡು, ಅವನಂ ಮನ್ನಿಸಿಯತ್ತಣಿಂ, ಬಡಗಲ್—ನರಸಿಂಹಪುರದರಸನಂ ಧುರದೊಳ್ ಪರಿಭವಿಸಿಯವಂ ತಂದಿತ್ತ ಕನಕಭೂಷಣದೊಡನೆ ಕನಕವಸಂತನೆಂಬಾನೆಯಂ ಸ್ವೀಕರಿಸಿ, ಬೞಿಕ್ಕೆ ಬೇಲೂರವನೊಳಿಲ್ಲಿಪೊಲದತ್ತಣಿಂ ಬೇರಂಬಳೆದವಂ ಬಳೆಯಿಸಿದ ದಳಮೆಲ್ಲಮಂ ಚೋೞಿಯನ ಪಳ್ಳಿಯ ಬೞಿಯೊಳೊರ್ಮೆ, ಆನೆಯ ಕೆಱೆಯ ಸನಿಯದೊಳೊರ್ಮೆ, ಎಲೆಯೂರ ಪೊಲದೊಳೊರ್ಮೆ ಕೊಳುಗುಳದೊಳೊಕ್ಕಲಿಕ್ಕಿಸೊರ್ಕನುಡಿದು, ಮಿಕ್ಕವರ ಮೂಗನರಿದು ಮೊಗಗೆಡಿಸಿ, ಕೊಳತೂರಂ ಮುತ್ತಿ ಲಗ್ಗೆಯೇಱಿ ಕಟಿಬ್ಗೆಲೆವಿಟ್ಟು ಕಡಿದೊಟ್ಟಿದ ಕಡಿವೆಟ್ಟನೊಳ್ ಪಂದಲೆಗಲ್ಗಳಂ ತಂದವಱೊಳ್ ಮೂನೆಲೆಯ ಜಗಲಿಯಂ, ಕಡಿದು ಕೆಡಪಿದಾನೆಗಳ ನೀಡುಗೋಡುಗಳಿಂ ಕಂಭಂಗಳಂ[ಗಂಡುಗಲಿಗಳ]ಗುಂಡುಗೋವಿಸರಗೋವಿಗಳಿಂ ಬೋದಿಗೆತೊಳೆಗಳಂ, ಕೈಸೆಱೆಸಿಲ್ಕಿದ ಪದಿನಾಱು ಸಾಸಿ

ರಾಳ್ಗಳ ಕೆಯ್ಯೊಳಿಟ್ಟು ಕುಂತಂಗಳಿಂ ಜಂತೆಗಳಂ, ಪ್ರಾಸಪಟ್ಟಸಂಗಳಿಂ ಪಾಸುವಲಗೆಗಳಂ, ವಂಕಿಗಳಿಂ ಲೋವೆಗಳಂ, ಕಣೆಗಳಿಂ ಪಂಜರಂಗಳಂ, ಬಿಲ್ದುಱುವುಗಳಿಂ ಬಿಗಿನೇಣ್ಗಳಂ, ಪಲತೆಱದಲಗುಗಳಿಂ ಮೇಲ್ವೊದಕೆಗಳನ ಳವಡಿಸಿ, ಬೀರಕ್ಕೆ ಬೀಡಾರಮುಂ, ರೌದ್ರಕ್ಕೆ ಭದ್ರಶಾಲೆಯುಂ, ಸಾಸಕ್ಕೆ ವಾಸಗೃಹಮುಂ, ಗರುವಿಕೆಗರಮನೆಯುಂ, ಗರ್ವಕ್ಕೆ ಗರುಡಿಯುನೊಡರ್ಚು ವಂತೊಂದಲಗುವನೆಯುನನುಗೆಯ್ದು ಅದಂ ಗೆಲ್ವೆನೆಂ ಮದುವೆಯ ಪನೆಜಗತಿಯುನೇಱುವಂತೆ ಸಂತಸದೊಳೇಱು ಪೇರೋಲಗಮನಿತ್ತು, ಅವ ರೊಳ್ ಬಲಿದ ಬೇರಮುಂ ತೀರ್ಚಿ, ಬೞಿಕ್ಕೆ ಪೊಸಕೋಂಟೆಯುಂ ಮುತ್ತಿ ಮೂಗುಬ್ಬಸಂಗೆಯ್ವಿನಮಲ್ಲಿಯ ದೊರೆ ನೆವಂಗೊಂಡು ಬಂದ **ಜಗದೇವ ರಾಯ**ನ ಒಡವುಟ್ಟಿದನಾ**ದಂಕುಶರಾಯ**ನನಱಿಯುಟ್ಟಿ ಅವನ ತಟ್ಟಿ ನೊಳ್ ಭೋಜರಾಜಚೊಕ್ಕಳಿಕವೆಸರೆರಡಾನೆಗಳುಮಂ ಪಲಬಿರುದುಗುಱು ಪುಗಳುಮಂ ಕೊಂಡು ಕಳುಪಿಯಾಕೋಂಟೆಯುಂ ಬಸಂಗೆಯ್ದು, ಕೆಲವುಂ ದಿನದಮೇಲೆ ಮುಂ **ಜಗದೇವರಾಯಂ** ಪೊಸಕೋಂಟೆಯುಂ ಕೊಂಬೆಡೆ ಯೊಳಡನಾಯ್ದುದಂ ನೆನೆದವನ ಚೆನ್ನಪಟ್ಟಣ ನಾಗಮಂಗಲಂಗಳೆಂಬ ತಾಯ್ಗೋಂಟೆಗಳಂ ಕಟಿಬ್ಗಾಲೆಯೊಳ್ಕೊಂಡು ಪೊಱಮಡಿಸಿಯುದರ್ಕೆ ಸಲ್ವ ಬೆಳ್ಳೂರಂ ಮುತ್ತಿ ಮುನ್ನಂ ನೆರೆಯ ಕಿಱುದೊರೆಗಳಂ ಗೆಲ್ದುಬ್ಬುಗೊಬ್ಬಿ ನಿಂ ಮೆಯ್ಮಱಿತು ಮೇರೆಯಟಿದು ಗಳಪುವ ಚಿಕನಾಯಕನ ಪಳ್ಳಿಯ ದಟನಾಯಾದ **ಪರಮರಾವುತ**ನನಿಱಿದು ಕೆಡಪಿ ಕೊರಲನರಿದು ಮೂಗಂ ಕೊಯ್ದು ಅವನ ಬಲಮುಂ ಬಱಗೆಯ್ವಿನಮುದರ್ಕೆ ಬಿಗುರ್ತ ವನ ದೊರೆಯಿತ್ತ ವಸ್ತ್ರಭೂಷಣಂಗಳೊಡನೆ ರಾಮಲಿಂಗವೆಂಬಾನೆಯುಂ ಕೊಂಡು, ಇಂತೆಣ್ದೆಸೆಗಳಂ ಗೆಲ್ದು, ಜಸಮುಂ ಪಸರಿಸಿ, ಮತ್ತಂ ಧಿತ್ರ ಭಾವದೊಳ್ ಪತ್ತಿದಿರ್ಕೆಱು ಬಾಣವರ ಬಸವಪಟ್ಟಣಂಗಳ್ ಮೊದ ಲಾದ ಪೊಬಲಾಣ್ಮೆರ್ಗೆ ನಲ್ಕೆಗೆಯ್ದು, ನಲ್ಕೆಯಿಂ ಕನ್ನಡನಾಡೆಲ್ಲಮಂ ಬಸಕ್ಕೆ ತಂದು, ಅಗರದೇಗುಲಂಗಳಂ ಪೊರೆಯುತ್ತುಂ, ಪೊಸತಾದುವನೆ

ಸಗುತ್ತುಂ ಸಂತಸಮಿರುತ್ತಾನೆತೇಜಿಗಳನೇಱ, ವೈಯಾಳಿಯ ವಿಲಾಸ ದೊಳೊರ್ಮೆ, ಕೈದುವಿಡಿದು ಗರುಡಿಗೆಯ್ದದ ಕೈಮೆಯೊಳೊರ್ಮೆ, ಬಿಲ್ಗಣೆ ಗೊಂಡು ಗುಱಯಿಸುವ ಕೌಶಲದೊಳೊರ್ಮೆ, ವೀಣೆದಳೆದು ಬಣ್ಣಿವಾಡು ಗಳಂ ಬಾಜಿಪೋಜೆಯೊಳೊರ್ಮೆ, ಸುಜ್ಞರವೆತ್ತಿ ಪಾಡುವ ಬಿಡಯದೊ ಳೊರ್ಮೆ, ಅಂತವುರದ ಕಾಂತೆಯರ ನೃತ್ತಾವಲೋಕನದೊಳೊರ್ಮೆ, ಕಾವ್ಯನಾಟಕಾಲಂಕಾರಸಾರಸರ್ವಸ್ವರಸಾಸ್ವಾದನದೊಳೊರ್ಮೆ, ಪುರಾಣೇತಿ ಹಾಸಾದಿ ಪುಣ್ಯಕಥಾಶ್ರವಣಾನುರಾಗದೊಳೊರ್ಮೆ, ದೇವಯಾತ್ರೋತ್ಸವ ಸಂದರ್ಶನಾನಂದದೊಳೊರ್ಮೆ, ಉಳ್ಳ ಕಾಲಮೆಲ್ಲಮನಿಂತೊಳ್ಗೆಯ್ದುದೊಳ್ ಕಳೆದು ಅಱಯದ ಬೆಳ್ಳಸಮೆಯ್ಯಂ ಇಳೆಯೊಳ್ ನೆಲೆಗೊಳಿಸಿ ಬರ್ದಿಲ ನಾಡೊಳ್ ಬಾಳ್ದಂ.

ಇಮ್ಮಡಿ ರಾಜರಸನ ಚರಿತಂ

ಬಱಕ್ಕೆ **ರಾಜರಸ**ಕುವರನಾ**ದಿಮ್ಮಡಿರಾಜರಸಂ** ಅರಸುಗೆಯ್ಯು ತ್ತುಮುಳವಿನೊಳಮಾರ್ಪಿನೊಳಂ ಸತ್ತಿಯೊಳಂ ಸಾಸದೊಳಂ ಬೀರ ದೊಳಂ ಬಿನಯದೊಳಂ ನನ್ನಿಯೊಳಂ ನಲ್ಮೆಯೊಳಂ ಜಸದೊಳಂ ಜಾ ಣ್ಮೆಯೊಳಂ ಬಿಜ್ಜೆಯೊಳಂ ಬಿನ್ನಣದೊಳಂ ಎಱಕದೊಳಂ ಏಱಗೆಯೊಳಂ ಒಜೆಯೊಳಂ ಉಜ್ಜುಗದೊಳಂ ಧೈರ್ಯದೊಳಂ ಧರ್ಮದೊಳಂ ವಿನಯ ದೊಳಂ ವಿವೇಕದೊಳಂ ತಂದೆಯಿಂದೆಯುಂ ಇರ್ಮಡಿಸಿ, ತನ್ನ ಪೆಸರನ ನ್ವರ್ಥಂಗೆಯ್ದೆಣ್ದೆಸೆಗಳಂ ಜಯಿಸಿ, ಪಲದೊರೆಗಳಿಂ ಪಲವುರ್ ಧನಕನಕ ವಸ್ತುವಾಹನಂಗಳಂ ಕಪ್ಪಂಗೊಂಡು, ಪೊರ್ದಿದರಂ ಪೊರೆದು, ಎಱಕವ ರ್ಗಿತ್ತು, ಪರಮಪುರುಷನ ಚರಣಾರವಿಂದದ್ವಂದ್ವಸಂದರ್ಶನಶ್ರವಣ ಕೀರ್ತನಾದಿ ಭಕ್ತಿರಸಪರಿಪಾಕಭೇದಮಂ ನಿಚ್ಚಣಿಗೆಗೆಯ್ದು ಪರಮಪದ ಮನೇಱದಂ.

ಕಂಠೀರವ ನರಸರಾಜ ಚರಿತಂ

ಬೞಿಕ್ಕೆ **ಬೆಟ್ಟದ ಚಾಮರಾಜರಸನ** ಕುವರಂ ವೈರಿರಾಜಗಜ ಕಂಠೀರವಂ **ಕಂಠೀರವ ನರಸರಾಜಂ** ರಾಜ್ಯಾಭಿಷೇಕಮಂ ತಾಳ್ದು ಪಟ್ಟವಣೆಯಂ ಪಗೆವರ ತಲೆಯೊಡನೆ ಮೆಟ್ಟಿ ಕಟ್ಟಾರ್ಪಿನೊಳಿರ್ಪಿನಂ—

ಬಸವಪಟ್ಟಣದ **ಕೆಂಗೆಹನುಮಪ್ಪನಾಯಕ**ನಿರ್ಕೆಱಿಯ **ವೀರಭದ್ರನಾಯಕನ** ಮೇಗಣ ಬೇರದಿಂ ಯವನಕುಲದ ವಿಜಯಾಪುರದ **ಸುರಿತಾಣ ಮಹಮ್ಮದ ಪಾದುಶಾಹ**ನೆಡೆಗೆ ನಡೆದವನಡಿವಿಡಿದು **ರಣದುಲಖಾನ**ನೆಂಬ ಸೇನಾಪತಿಯೊಡನೆ ನಾಲ್ವತ್ತುಂ ಸಾಸಿರ ವಾರುವಂಗಳುಮಂ ನಾಲ್ವತ್ತಾನೆಯುಮಂ ಲಕ್ಕಪಾಯಿದಱಿಮುಮನೊಡಗೊಂಡು ಬಂದೊಂದೆ ಸೂೞಿಯೊಳಿರ್ಕೆಱೆಯನೊಕ್ಕಲಿಕ್ಕಿ ದಕ್ಕುಗೊಳಲೊಡಮಾತುರುಕಪಡೆವಳಂ ಕೊರ್ಬಿಯುರ್ಬಿ ಕನ್ನಡನಾಡೊಳ್ ತನ್ನ ಪೆರ್ವಡೆಗಿದಿರಪ್ಪರೊರ್ವರುಮಿಲ್ಲೆಂದು ಮುಂತಣ್ಗೆ ನಡೆದು ಸೀರೆಯದ ದೊರೆಯಂ ಸೆಱೆಗೊಂಡು ಪಾಯ್ದು ತುಱುಗೆಱೆಯವನಂ ತೊತ್ತೞಿಂದುೞಿದು, ಬೆಂಗಳೂರವನಂ ಭಂಗಂಬಡಿಸಿ, ಅವರವರ ದೇಶಕೋಶಂಗಳಂ ಬಸಂಗೆಯ್ದು, ಬೆಱೆತು, ತಱುವಾಯೊಳ್ **ಕೆಂಗೆಹನುಮಂ** ತಕ್ಕುದಲ್ತೆಂದು ನುಡಿದು ತಡೆದೊಡವೊಡಂಬಡದೆ ಕಡುಪಿನೊಳ್ ಮುಟ್ಟುಮೀಱಿ ಪಟ್ಟಣಮಂ ಬಳಸಿ ವೇಢೈಸಿ ಕಟ್ಟಳವಿನಿಂದಿಟ್ಟಡಿಯಂ ಪಿಂದೆಗೆಯದೆ ಚಲಂದೊಟ್ಟು ನಡೆದಿಟ್ಟು ಕೆಡಪಿದ ಪೆಣದೊಟ್ಟಿಲೊಳಗೞಿಂ ಪೊಱಟ್ಟು ಪಟ್ಟಪಗಲೆ ಕೞ್ತಲೆಗೆ ಬಗೆಯಿಟ್ಟು ಕಟ್ಟುಱಿದೊಳಿಟ್ಟೞಿಸಿ ಸುರಿದ ಕೈದುವಱಿಗಳವೞಿಯದೆ ಕೋಂಟೆಯಂ ಮುಟ್ಟೆ ನಿಟ್ಟೇಣಿಗಳನೇಱಿ ತಲೆ ಪಱಿದು ಪಡಲ್ವಟ್ಟೊಡಂ ನಿಟ್ಟೋಟದಿಂದಟ್ಟಳೆವರೆಗಮಡರ್ದಟ್ಟೆಗಳನಿಟ್ಟೆಗಳಿಂದಿಱಿದಿಱಿದವನ ತಲೆಗೇಱಿದ ಸೂರ್ಕಿನೊಡನಿೞಿಯ ಕೆಡಪಲೊಡಂ ; ಅವಂ ಕೆಟ್ಟುಮುಱಿದು ಬಾಯ್ವಿಟ್ಟು **ಕೆಂಗೆಹನುಮನ** ಬಸಿಱೊಳ್ ತಲೆಯಿಟ್ಟು ನುಡಿದಂ :—

" ಎಲೆ ನಾಯಕ ! ನೀನೆಂದ ನುಡಿ ನಿಜಮಾದುದು. ಆಂ ವಿಜಯಾ ಪುರಮಂ ಪೊಱಮಟ್ಟಂದುಮೊದಲಿಂದುವರೆಗಂ, ಮತ್ತಮೇಂ, ಪುಟ್ಟಿ ದಂದುಮೊದಲಿಂದುವರೆಗಂ ಈಪರಿಯ ಬೀರನಂ ಕಂಡುದಿಲ್ಲ. ಅಕಟ ಕಟಾ ! ಮುನ್ನೀತೆಱದ ಬಲ್ಲಿದನೆಂದು ಬಗೆಯದೆ ಬಲನೆಲ್ಲಮಂ ಬಲಿ ಯಿತ್ತೆಂ ; ಪೆತ್ತ ಗೆಲ್ಲಮಂ ಪೆಱಸಾರ್ಚಿದೆಂ ; ಪೊತ್ತಜಸಮಂ ಪುಯ್ಯೆ ನಿಸಿದೆಂ ; ಪತ್ತಿದೇಟಿಗ್ಗಿಯುಂ ಬಯಲ್ಗೆಯ್ದೆಂ ; ನಿನ್ನ ನುಡಿಯುಂ ನೀೞ್ಕರಿ ಸಿದೆಂ ; ಭಿನ್ನತಂತ್ರದೊಳ್ ಬೀದಿವರಿದೆಂ ; ಮುಂತಣಿರವಿನೊಳ್ಮೋಸ ಪೋದೆಂ ; ಪಿಂತಣೋಜೆಯುಂ ಬೀೞ್ಕೊಡಿಸಿದೆಂ ; ಈಕಡಲುಡಿಗೆಯ ಪೊಡ ವಿಯೆಡೆಯೊಳಿಡಿದ ಕೂರ್ದೊರೆಗಳೊಳಿನ್ನೆವರೆಗಂ ಎನ್ನ ಪೆಸರ್ಗೇಳ್ದು ಬಸವೞಿಯದರುಂ ಪೞಯಿಗೆಗಂಡಳವುಗಳೆಯದರುಂ ಪೌಜಂ ಕಂಡು ತೇಜಂಗುಂದದವರುಂ ಕೈದುವೆಳಗಿಂಗೆ ಕಣ್ಗೆಡದವರುಮಿಲ್ಲ. ಅಂತಿರ್ಪ ಕೂರ್ಪನೀಪಟ್ಟಣದೊಳ್ ಪೊಟ್ಟುಗೆಯ್ದೆಂ. ಎನ್ನ ಮನ್ನಣೆಯ ತುೞಿ ಲಾಳ್ಗಳೀಲಗ್ಗೆಯೊಳೀರಾಱು ಸಾಸಿರ್ವರೞಿದರ್. ಉೞಿದರುಮೂರೂರಿ ಗರಿರುಳೊಳ್ ಪೊಱಮಟ್ಟು ಎಸಗುವಟ್ಟುಳಿಯಿಂ ಕಣ್ಗೆಟ್ಟು ಕಟ್ಟೞಿದು ಇಂದು ನಾಳಿನೊಳೆನ್ನಂ ಬಿಟ್ಟುಪೋಪರ್ ; ಅವರೇಗೆಯ್ವರ್ ? ಕಳ್ವ ನಾರುವಂಗಳ್ಗಮಿಾಟ್ವ ಕೈದುಗಳ್ಗಂ ಕೊಯ್ವ ತಲೆಗಳ್ಗಂ ಕೊಱೆವ ಮೂ ಗುಗಳ್ಗಂ ಗಣನೆಯಿಲ್ಲ. ಇಟ್ಟೆಡೆಗೆಯ್ದುದಱಿಂ ಮೂಗುಬ್ಬಸಮಾ ದುದು. ಬಿಟ್ಟು ಪೋಪೊಡಂ ಬಟ್ಟೆಯಿಲ್ಲ. ಕೆಟ್ಟಕಜ್ಜದೊಳ್ ಕೈಗೊಟ್ಟು ಕಾಪಿಟ್ಟೆಮ್ಮಂ ಕಡೆನಾಯಿಸವೇೞ್ಕುಂ. ಅದರ್ಕೀಪಟ್ಟಣದವನ ಕಡೆಗಡಿ ವರೆಗಮೆಮ್ಮನಾಡುಗರ್ ಕಾಣದಂತೆ ಅವನ ರಾಯಸಮಂ ತೆಗೆದಿತ್ತೊ ಡಾಂ ಪದುಳದೊಳ್ ಪೋಪೆಂ " ಎಂದನುವೇೞ್ವುದುಮವನುಮಂತೆಗೆ ಯ್ದಂ. ಬೞಿಕ್ಕಾತುರುಕಪಡೆವಳಂ ಕಪ್ಪಿನಿಂದೆೞ್ದ ಕಾಡಾನೆಯಂತೆಯುಂ ಪುಲಿವಾಯ್ದುೞಿದ ಪುಲ್ಲೆಯಂತೆಯುಂ, ತಡೆಯೊಡೆದ ಪಾವಿನಂತೆಯುಂ, ಅಂಟುಗೞಿದ ಪಕ್ಕಿಗಳಂತೆಯುಂ, ಬಲೆಯಿಂ ತಪ್ಪಿದ ಮೊಲದಂತೆಯುಂ

ಬಾಲಂ ಪಱಿದ ಪಿಳ್ಳಿನಂತೆಯುಂ, ಕಟ್ಟುಸಡಿಲ್ದ ಕಳ್ಳನಂತೆಯುಂ, ನಿಂದಲ್ಲಿ ನಿಲ್ಲದೆ ಪಿಂದಿರುಗಿ ನೋಡದೆ ಒಡಿ ತನ್ನ ಬೀಡಂ ಸಾರ್ದಂ. ಅಂದು ಮೊದಲ್ ತುರುಕರೀ**ಕಂಠೀರವನೃಪನ** ಪೆಸರ್ಗೊಳ್ಳಲುಮಾದೆಸೆಗೆ ಮೊಗಮಾಗಲುಮಣ್ಮದೆ ಹಮ್ಮುಱಿದು ಹುದುಗಿದರ್.

ಈತನುಮಾ ಯವನಪಡೆಯಂ ಜಯಿಸಿ, ಕನ್ನಡನಾಡೊಳ್ ನೆಗೞ್ತೆವೆತ್ತು, ದೆಸೆಗಳಂ ಗೆಲಲುಜ್ಜುಗಿಸಿ ಮೂಡಲ್ ನಡೆದು, ವಿಜಯಾಪುರದ ಸೇನಾನಿಯೆನಿಸಿದ **ಖಾನಖಾನನ** ಸೇನೆಯನೆಬ್ಬಟ್ಟಿ, ರಾಯಗೋಂಟೆ ರತ್ನಗಿರಿ ರಾಮಗಿರಿ ವೀರಭದ್ರದುರ್ಗ ಕೆಂಗೇಱಿ ಪೆನ್ನಗರಂಗಳಂ ಕಟ್ಟಿ, ತೆಂಕಲ್-ಮಧುರೆಯ **ತಿರುಮಲೆನಾಯಕ**ನನೀಕಮಂ ಧುರದೊಳ್ ನೀಟ್ಟಿರಿಸಿ, ಕೊಳೆಯ ಸಾಂಬಳ್ಳಿ ಸತ್ಯಮಂಗಲ ಡಣಾಯಕನ ಕೋಂಟೆಗಳಂ ಕೊಂಡು, ಪಡುವಲ್—ಕೆಳಲೆಯ ನಾಡ ಪಿರಿಯಪಟ್ಟಣಮಂ ಕಱುಗಲೆಯೊಳೀಱ್ದು, ಸರ್ವಸ್ವದೊಡನಾ**ಮಲ್ಲರಾಜನಂ** ಕೈಸೆಱೆವಿಡಿದು, ಬಡಗಲ್—**ಮಲ್ಲುಕನ** ದೞಮಂ ಮುಱಿಗೊಳಿಸಿ, ತುಱುಗೆಱೆ ಕಡಬ ಕಲ್ಲೂರ್ ಹೆಬ್ಬೂರ್ ಮೊದಲಾದ ಪಲವುಂ ಪೊೞಲ್ಗಳಂ ಸೆಳೆದು ಪೆರ್ಮೆವೆತ್ತು, ಧರ್ಮದೊಳಿಳೆಯಂ ಪಾಲಿಸುತ್ತ, ನಿತ್ಯಸುಖಮನೆಳಸಿ, ತತ್ತ್ವಮನಾರಯ್ದು, ಪುರುಷೋತ್ತಮನ ಭಕ್ತಿಯೊಳಲ್ಲದೆ ಮುಕ್ತಿಯನುಗೊಳ್ಳದೆಂದು ನಿಶ್ಚಯಿಸಿ, ಅವತರಿಸುತ್ತುಮೆ ಆರ್ತರಕ್ಷೆಯಂ ಧೂರ್ತಶಿಕ್ಷೆಯಂ ಕ್ಷಣವಿಳಂಬಮಂ ಸೈರಿಸದೆಸಗಿದ ನೃಸಿಂಹನ ದಿವ್ಯಮೂರ್ತಿಯಂ ನೆನೆದು ಜಾನಿಸಿ ಕೂರ್ತು ಕೊಂಡಾಡಿ ಅಡಿಗೆಱಗಿಯಾಳ್ಗಯ್ದು ತಣಿದಾನಂದರಸದೊಳ್ಳಾಂದಿರ್ದೊಡಂ—ತನ್ನಂತೀಲೋಗರೆಲ್ಲರುಂ ಬರ್ದುಂಕುಗೆಂದು ತಾನಿರ್ಪರಮನೆಯ ಮುಂದೆ ಸುತ್ತಲ್ಬಳಸಿದೇೞ್ತರದ ಕಲ್ಲ ಪಾಗಲುಂ, ಬಿತ್ತರದ ಕೈಸಾಲೆಯುಂ, ಬಾಂಬರೆಗಂ ಬಳೆದೇೞ್ನೆಲೆಯ ಗೋಪುರಮುಂ, ಮಂಟಪಂಗಳುಮೊಳವಳಯದೊಳಿಡಿದ ಪರಿವಾರದೇವತಾಲಯಂಗಳುಂ, ರಂಗುವಡೆದ ನವರಂಗಮುಂ, ಕೞ್ತಲೆವಳಸುಂ ಗಬ್ಬವನೆಯುಮೊ

ಳ್ಪುವಡೆದ ದೇಗುಲಮಂ ಕಟ್ಟಿಸಿಯಲ್ಲಿ ಸನ್ನಿದಮಾದ ಲಕ್ಷ್ಮೀನೃಸಿಂಹಂಗೆ ತನ್ನ ಬೊಕ್ಕಸದೊಳ್ ಪೆಸರ್ವೆತ್ತ ಮುತ್ತಿನೆಕ್ಕಸರಂಗಳುಂ ಬಜ್ಜರದ ಮುಗುಡಂಗಳುಂ ಪಚ್ಚೆಯ ತೋಳ್ವಚ್ಚೆಂಗಳುಂ ಕೆಂಬರಲ ಕಡಗಂಗಳುಂ ಕರ್ಮಣಿಯುಡೆನೂಲ್ಗಳುಂ ಮೊದಲಾದ ಪಲವಣ್ಣದ ಪೊನ್ನರನ್ನದೊಳ್ತೊಡವುಗಳಂ ಮಿಸುನಿಯ ತಟ್ಟೆ ತಳಿಗೆ ಬಟ್ಟಲ್ ಗುಂಬಂಗಳ್ ಮೊದಲಾದುಪಕರಣಂಗಳಂ ಪಲತೆಱದ ವಾಹನಂಗಳಂ ಸಮೆಯಿಸಿ ಬರಿಸದ ತಿಂಗಳ ಪಕ್ಕದ ಪಗಲ ನಿಚ್ಚದ ಜಾತ್ರೆಯುಕ್ಕೆವಂಗಳನೊಡರ್ಚಿಮೆಚ್ಚಿಸಿ, ಕಟ್ಟೆ ಕೆಱೆ ಪರಿಕಾಲ್ಗಳಿಂದೊಪ್ಪುವ ನಾಡುಗಳಂ ತದಧೀನಂಗೆಯ್ದಾವಗಂ ತದಾಯತ್ತಚಿತ್ತದೊಳ್ ಪಲವೂಟಂಗಂಗಳನೆಸಗುತ್ತೆ ಪಲವುಂ ಬರಿಸಮಿರ್ದು ತಣಿದು ಪರವಾಸುದೇವನಡಿಯಂ ಪರಿಚರಿಸಲ್ಕೆಂದು ಪರಮಪದಮಂ ಸಾರ್ದಂ.

ದೊಡದೇವರಾಜ ಚರಿತಂ

ಶ್ರೀಮತ್ಸಕಲಸಾಮಂತರಾಜನ್ಯಚೂಡಾವತಂಸಿತ ಪದರಾಜೀವನೆನಿಪ **ದೇವರಾಜಂಗೆ** ನಾಲ್ವರ್ ಕುವರರ್ ಐರಾವತಕ್ಕೆ ನಾಲ್ಕುಂ ನಿಗ್ಗವಂಗಳಂತೆಯುಂ, ಪೊಂಬಸಿಱಂಗೆ ನಾಲ್ಕುಂ ಮೊಗಂಗಳಂತೆಯುಂ, ಪೊಡೆಯುಲರಂಗೆ ನಾಲ್ಕುಂ ತೋಳ್ಗಳಂತೆಯುಂ ಅತಿಶಯಾವಹರೆನಿಸಿ ನೆಗಟ್ದರ್. ಆ **ದೇವರಾಜ**ರಸನ ನಾಲ್ವರ್ ಕುವರರೊಳಂ **ದೊಡದೇವರಾಜಂ** ವರ್ಗಚತುಷ್ಟಯದೊಳ್ ಧರ್ಮದಂತೆಯುಂ, ಉಪಾಯಚತುಷ್ಟಯದೊಳ್ ಸಾಮದಂತೆಯುಂ, ವೇದಚತುಷ್ಟಯದೊಳ್ ಋಕ್ಕಿನಂತೆಯುಂ, ವ್ಯೂಹಚತುಷ್ಟಯದೊಳ್ ವಾಸುದೇವನಂತೆಯುಂ ಮೊದಲಿಗನಾಗಿ ಜಗದೊಳ್ ನೆಗಟ್ಟೆವೆತ್ತಂ. ಆತನಿರವನಾರಯ್ದು ಆವಂ ಮೆಯ್ವೆತ್ತ ಚಂದ್ರಕುಲದ ವೈಮೆಯೆಂದುಂ, ಗಂಡುಮರಿಜುವಡೆದ ಯದುಕುಲದೇಟಿಗ

ಯೊಂದುಂ, ಪೊಸತೊಂದು ವೇಷದೊಳೆಸೆವ ಭೂಲೋಕದ ಪುಣ್ಯಮೆಂದುಂ, ಕೈಯ್ಯಾಲ್ದೆಳೆದ ಕನ್ನಡನಾಡ ಕಡುಪೆಂದುಂ, ಪಡಿಯೊಡಲ್ಗೊಂಡ ಸಜ್ಜನರ ಭಾಗ್ಯೋದಯಮೆಂದುಂ ಬಗೆದು ಬಣ್ಣಿಪರ್. ಮತ್ತಮೀತನ ಮೆಯ್ಸಿರಿ ಗಳ್ಕಿಯಲರಂಬನೊಡಲ್ಪಡೆದಾದನೆಂದುಂ, ಮೊಗದೊಳ್ಪಿಂಗೆ ನಾಣ್ಚಿ ಚಂದಿರಂ ಕಂದುದಳೆದನೆಂದುಂ, ತೇಜಕ್ಕೆ ದಿಟಂಗುಂದಿ ಬಿಸುಗದಿರಂ ಬವಣಿಗೊಂಡಪನೆಂದುಂ ಭಾವಿಸುವರ್. ಈತನುಂ ಧರ್ಮದೊಳ್ ಧರ್ಮಸುತನಂ, ಸತ್ಯದೊಳ್ ರಾಮಚಂದ್ರನಂ ದೊರೆಗೊಂಡು ತನ್ನಂ ಬೞಿಸಂದಾಳ್ಗೆಯ್ವನುಜರ್ವೆರಸು ಸಂತಸದೊಳ್ ತನ್ನ ಬೀರಮುಂ ಬಲ್ವೞಿಕೆಗಾಳೆಗದೊಳ್ ತನ್ನ ಬಿನ್ನಣಮುಂ ಪೊರ್ದಿದರಂ ಪೊರೆವುದಱೊಳ್, ತನ್ನೌದಾರ್ಯಮುಂ ಓದಾಳಿ ಪಾರ್ವರೊಳ್, ತನ್ನೆಱಕಮುಂ ತನ್ನಂ ನಂಬಿದರೊಳ್, ತನ್ನ ದಯೆಯುಂ ಆರ್ತರೊಳ್, ತನ್ನೈಸಿರಿಯುಂ ಆಳ್ಗಳೊಟ್ಟಿನೊಳ್, ತನ್ನ ಸೊಬಗಂ ಕೆಯ್ವಿಡಿದ ರಾಣಿಯೊಳ್, ತನ್ನ ಕಡುಪಂ ಕಳ್ವರೊಳ್, ತನ್ನ ಪುರುಡಂ ಪುಸಿವರೊಳ್, ತನ್ನಾಸೆಯುಂ ಜಸದೊಳ್, ತನ್ನ ಭಕ್ತಿಯುಂ ಪುರುಷೋತ್ತಮನೊಳ್ ಪುದುಗಿಸಿ ಪದುಳದೊಳಗಿರ್ಪಂ. ಮತ್ತಮೊಡನಾಡಿವಗೆಗಳೆನಿಸುವೇಕಾದಶೇಂದ್ರಿಯಂಗಳುಮಂ ಗೆಲ್ದು ಬಸಂಗೆಯ್ದು ಬಲ್ಮೆಯಿಂದೊಳವಗೆಗಳಪ್ಪ ಕಾಮಾದಿಷಡ್ವರ್ಗಮಂ ನೆರ್ಗಿ, ಆವಗಂ ಬಿಜ್ಜೆಗಲ್ವುದುಂ ಬಿನ್ನಣಂಬಡೆವುದುಂ ಬಿನಯಮುಂ ತೋರ್ಪುದುಂ ಚಾಗಮನಾಗಿಪುದುಂ ಜಸಮುಂ ಪಸರಿಪುದುಂ ಶಕ್ತಿಯುಂ ಬಿತ್ತರಿಪುದುಂ ಶೌರ್ಯಮುಂ ಬೀರ್ವರಿಪುದುಂ ಸಾಸಮುಂ ಸೂಸುವುದುಂ ಸತ್ಯಮುಂ ಸಲಪುವುದುಂ ಜಯಮುಂ ಸಂಪಾದಿಪುದುಂ ಮೊದಲಾದೊಳ್ಗೆಯ್ತದೊಳಿಪೊಟ್ಟುಗಳೆಯುತ್ತೆ, ಪುಸಿಗಂ ಪೊಱಟೆಗಂ ಮಾಯೆಗಂ ಮಱವೆಗಂ ಕಳವಿಂಗಂ ಕಪಟಕ್ಕಂ ಹಿಂಸೆಗಂ ಹಿಸುಣ್ಗಂ ಬಿಱುನುಡಿಗಂ ಬೇಂಟೆಗಂ ಪಗಡೆಗಂ ಪಗಲ್ನಿದ್ದೆಗಂ ಜೂದಿಂಗಂ ಜೋಡತನಕ್ಕಂ ಸೊರ್ಕಿಂಗಂ ಸೊಜಿಂಗಂ ಇಂಬುಗೊಡದೆ, ಜಸದೊಳಂ ತೇಜದೊಳಂ ಸಸಿನೇಸರ್ಗಳೊಡವೆರೆದೊಂ

ದು ಮೆಯ್ದುಳಿದರೆಂಬ ಸಂದೆಯುಮನೊದವಿಸುತ್ತೆ, ಪತ್ತಿದರೊಳಂ ಪಗೆವರೊಳಂ ತಱುವಾಯಿಂ ತಣ್ಪುಬಿಸುಪುಗಳಂ ಪಸರಿಸುತ್ತೆ, ತಾಂ ನಿರ್ಮಳನಾಗಿಯುಂ ಪಗೆರಾಣಿಯರ ಮೊಗದೊಳ್ ಮಾಲಿನ್ಯಮಂ, ಪರಿಶುದ್ಧನಾಗಿಯುಂ ಪ್ರಜೆಗಳೊಳ್ ರಾಗಮನಾಗಿಸುತ್ತೆ, ಬೀರದ ಮೊಳೆ ಬಿನ್ನಣದ ಬೆಳೆ ದಯೆಯ ಸೊಂಪು ದಾಕ್ಷಿಣ್ಯದ ಪೆಂಪು ನಯದ ಕೂರ್ಪು ನನ್ನಿಯಾರ್ಪು ಚದುರ ಬಲ್ಪು ಜಾಣ್ಮೆಯೊಳ್ಪು ಜಯದ ಮೋಡಿ ಜಸದ ಗಾಡಿ ದಾನದ ಪೂಣ್ಕೆ ಧರ್ಮದ ಕಾಣ್ಕೆ ತಿಳಿವಿನ ಮಚ್ಚು ಧೀರತೆಯ ಪೆಚ್ಚು ಒಸಗೆಯುರ್ಬು ಒಜೆಯ ಕೊರ್ಬು ಸಿರಿಯ ಕೂಟಂ ಸಿಂಗರದಾಟಂ ಒಲವಿನಣ್ಪು ಉತ್ಸವದ ನಣ್ಪೆಂದು ಬಲ್ಲರ್ ಬಗೆಯೆ, ಬೆಟ್ಟದಂತೆಯುಂ ಪೆರ್ಗಡಲಂತೆಯುಂ ಇನಿತಿನಿತರ್ಕೆ ಕಂಪಿಸದೆ ಕದಡದೆ ಇಂತಿರ್ಪವನ ನಿಱುಗುರುಳಂ ಪೆಱೆನೊಸಲಂ ಕುಡುವುರ್ವಂ ಕುಡಿತೆಗಣ್ಣಂ ಮೊನೆವಲ್ಲಂ ಮುಗುಳ್ನಗೆಯುಂ ಕೆಂಬಾಯ್ದೆಱೆಯುಂ ಕಂಬುಗಳಮುಂ ತೋರಗಂದಮುಂ ಪೇರೆರ್ದೆಯುಂ ನಿಡುದೋಳಂ ಬಡನಡುವಂ ಮಿಸುಪ ತೊಡೆಯುಂ ಮೆಲ್ಲಡಿಯುಂ ಕಂಡು ಮರುಳ್ಗೊಂಡು ಮೇರೆಮೀಱಿ ಮೆಯ್ಮಱೆದೆಕ್ಕಟಿಯೊಳ್ ಸೊರ್ಕಿ ಮೇಲಿಕ್ಕುವ ಸಱಿಮಿಂಡಿವೆಣ್ಗಳಂ ಸದೆದು ಭಂಗಿಪ ಸತ್ಯಸದಾಚಾರಂಗಳಿಂದೆಯುಂ, ನನ್ನಿಯ ನಲ್ಲನಣ್ಮನಾಣ್ಮಂ ಪುಸಿವರ ಬೊಜಗಂ ಮುದ್ದುಗರ ಮೊದಲಿಗನಾರ್ಪರರಸನಳವಿಗರಾಣ್ಮನುರ್ಕಳ್ಕರೋಪನೆಟ್ಟಱುವರಿಯೆಮಂ ಇಱಿತಗಾಱರೆಱೆಯುಂ ಬಲ್ಲಿದರ ಬಲ್ಲಹನೆಂಬಿವು ಮೊದಲಾದ ಪಲವುಂ ಬಿರುದಂ ಕೇಳ್ದು ಕಿಡಿಗೆದಱಿ ಕಿನಿಸು ಕೇಣಂಗೊಂಡು ದಂಡೆತ್ತಿ ನಡೆವ ಬಲ್ಪಗೆವಡೆಯುಂ ಬಂಡುಗೆಯ್ವ ಶೌರ್ಯಪರಾಕ್ರಮಂಗಳಿಂದೆಯುಮೊಂದಿ ಜಸಂಬಡೆದೆಸೆವೀತನಂ ಮುಂ ನೋಂತ ಪಲನೋಂಪಿಗಳಿಂದೆ ದಮಯಂತಿ ನಳನಂ, ಸುದಕ್ಷಿಣೆ ದಿಲೀಪನಂ, ಜಾನಕಿ ರಾಮಚಂದ್ರನಂ, ರೋಹಿಣಿ ಚಂದ್ರಮನಂ, ಶಚೀದೇವಿ ದೇವೇಂದ್ರನಂ, ಗಿರಿಜೆ ಶಂಕರನಂ, ಸಿರಿಯರಸಿ ನಾರಾಯಣನಂ ಸಾರ್ದಂತೆ

ಸಾರ್ದ **ಅಮೃತಾಂಬಿ**ಯೆಂಬರಸಿ ಎಡೆವಿಡದೆ ಕಾಂತಿ ಸೂರ್ಯನೊಳ್ ಕಳೆ ಚಂದ್ರನೊಳ್ ಕಂಪು ಬಾವನ್ನದೊಳ್ ಪುದಿವಂತೆ ಪುದುಗಿ ಪೊಱದೋಱದೆ, ಮನ್ವಾದಿ ಸತ್ಕೃತಿ ವೇದಾರ್ಥಮಂ, ಜಸವೆಣ್ ಜಯವಂತನಂ, ಮತಿ ಬಿಜ್ಜೆವಳನಂ, ಧೃತಿ ದೃಢಸತ್ವನಂ, ಶುದ್ಧಿ ಸುಚರಿತ್ರನಂ, ಕ್ಷಮೆ ಜಿತಾತ್ಮನಂ, ದಯೆ ಧಾರ್ಮಿಕನಂ, ನೀತಿ ನೇಮಗಾಱನಂ ಬೞಸಲ್ವಂತೆ ಬೞಸಂದಿರ್ಪಳ್.

ಇಂತಿರ್ವರುಂ ಪಲವುಂ ಬರಿಸಂ ಪೊಸಪೊಸತೆನಿಸಿ ಪಸರಿಸುವ ನೇಹದಿಂ ಸಂತಸಮಿರ್ಪಿನಂ;

ಅರಸಿಯೊರ್ವಗಲ್ ಚಿಂತೆಯಿಂದೆವೆಯಾಟಮಂ ಮಱೆದು ಮೌನದೊಳಿರ್ಪಿನಂ; ಅವಳಂ ಕೆಳದಿಯರುಂ ಬಗೆಯಱಿದೊಳ್ಪಾತಿನಿಂದೊಯ್ಯನೊಡಂಬಡಿಪಂತವುರದ ಬರ್ದೆಯರುಂ ಬಳಸಿರೆ, ಎಡಗೆಯ್ದಳದೊಳ್ ಮೊಗದಾವರೆಯಿಟ್ಟು ನಿಟ್ಟುಸಿರ್ವಿಡುತ್ತೆ, ಎಡೆಯೆಡೆಯೊಳೆವೆಪೊಯ್ಲಿಂದುದಿರ್ವ ಕಣ್ಬನಿಯಿಂ ದುಗುಲಮಂ ನನೆಯಿಸುತ್ತೆ ಜಾನದೊಳಿರ್ಪಿನಂ;

ಅರಸಂ ಪತ್ತೆಸಾರ್ದಿದಿರೇೞ್ವುದಂ ಮಾಣಿಸಿ, ತಾನುಮಾಮೆಲ್ವಾಸಿನೊಳ್ ಕುಳ್ಳಿರ್ದು—"ಎಲೆಯರಸಿ! ನೀನುಟ್ಟು ತೊಟ್ಟೆಣ್ಪಿಟ್ಟು ಪೂಮುಡಿದಾನಂದಂಬಡೆಯದೆ ಬಱದೇಕೆ ಪಗಲ್ ಕಂಡ ಪೆಱೆಯಂತೆ, ಮಂಜುಮುಸುಕಿದ ತಾವರೆಯಂತೆ, ಪೊಗೆಸುತ್ತಿದ ಪುತ್ತಳಿಯಂತೆ, ಬಿಸಿಲ್ಪೊಡೆದ ನೆಯ್ದಿಲಂತೆ, ಬಾಡಿ ಬಣ್ಣಂಗುಂದಿ ಬಸವಳಿದು ಜಾನಿಸುತ್ತಿರ್ಪೆ? ಏಪರಿಯೆಣಿಸಿದೊಡಮೆನ್ನೊಳಮೆನ್ನಂತವುರದವರೊಳಂ ತಪ್ಪಿನಿತುಮಿಲ್ಲಂ. ಅದೆತ್ತಣಿಂ ಬಂದುದೆಂತು ಮೊಳೆತುದೇಪರಿಯೊಳ್ ಬಳೆದುದೇತೆಱದಿಂ ನೆಲೆಗೊಂಡುದಿದೇನುಬ್ಬೆಗಮೋ ಮುಳಿಸೋ ಮಱುಕಮೋ ಪೇೞ್? ಎೞ್ಚ ಪೊರ್ಡೆನ್ನಂ ಮೊಗನೋಡು, ನುಡಿಸು, ಬಣ್ಣಿಸು." ಎಂದು ಪಲರ್ಮೆ ಬೆಸಗೊಳೆಯುಂ, ಪಡಿನುಡಿಗುಡಲಣ್ಮದೆ ಕೆಲದೊಳಿರ್ಪ ಕೆಳದಿಯ ಮೊಗಮಂ ನೋಡೆ, ಆವಳ್ ಮೆಲ್ಪಾತಿನಿಂದೆ—

"ಎಲೆ ದೇವ! ದೇವರ್ ದಯೆಗೆಯ್ವೆಡೆಯೊಳ್ ಕೊಱತೆಯೆತ್ತಣಿಂ ಬರ್ಪುದು ? ಎತ್ತಾನುಮುಳ್ಳೊಡಂ ದೇವರಡಿಯೊಳರಸಿಯರ್ಗೆ ಮುನಿಸೆನಿತು ಸಮನಿಪುದು ! ಆಯೆಣಿಕೆ ನಿಲ್ಕೆ. ಮೋಣರಸಿಯರ್ ಪಲವುಂ ದಿವಸದಿಂ ಶಿಶುವಂ ಬಯಸಿ ಬೇವಸಂಗೊಂಬುದೆನಿತಾನುಮುಂಟು. ಇನಿಸುಂ ಪೊಱಪೊಂದೆಡೆಯೊಳ್ ನಿಲ್ಲದೆ ಕುಳ್ಳಿರದೆ ಮಲಂಗದೆ ದುಗುಲವಂ ತೊಡವಂ ತಿಲಕಮುಂ ಮುಡಿವ ಮಾಟಮುಂ ಮೀಳೆಯುಮನೆಮ್ಮ ನಿರ್ಬಂಧದಿಂದೆಸಗುತ್ತೆ ದೇವರಡಿಯೊಳ್ ಭಯದಿಂದೊಂದು ವೇಳೆಯುಂ ಕಂಡು ಕಾಣಿಸದಿರ್ಪಳ್. ಈಪೊಱ್ತು ಭಾಗವತಶ್ರವಣಂಗೆಯ್ವಲ್ಲಿ—

—ಶ್ರೀಕೃಷ್ಣನ ಬಾಲಲೀಲೆಯ ವರ್ಣನೆ—

ಗೊಲ್ಲವಳ್ಳಿಯೊಳೆಳಸಿಸುತನದೊಳೆಸೆವ ವಾಸುದೇವಂ ನೆವಮಿಲ್ಲದೆಡೆಯೆಡೆಯೊಳ್ ಮಸಗುವ ಮುದ್ದುನಗೆಯುಂ, ಒರ್ಕೆಯ್ಯೊಳೆಱದು ಚೆಂಬಾಯೊಳಿಂಬುಗೊಳಿಸಿದ ಮೆಲ್ಲಡಿಯುಂಗುಟಮುಂ, ಮುತ್ತಿನೆಕ್ಕಸರದೊಳ್ ಕಟ್ಟಿ ನೇಲ್ದ ನೀಱ್ಕೆಯುಂ ನೀಱ್ಪಿದುಯ್ಯಲಾಡುವ ಕೆಂಬರಲ ಸೆಂಡಸಂಡಲೆವ ಪೆಱಗೆಯ್ಯುಂ, ಬಗೆಗಱಗಿ ಪರಿತಂದು ನಿಟ್ಟೆಸಿ ಮಣಿದು ಮೊಗದೊಳ್ ಮೊಗವಿಟ್ಟು ಮುದ್ದಿಸಿ ಮೆಯ್ಮಱವ ಗೋಪಿಯ ಮೊಲೆಯುಣಲೆಳಸಿ ನಿಮಿನಿಮಿರ್ದು ನೀಱ್ಕುತೆಳವಳ್ಳಿದೋಳ್ಗಳಂ ನೆಗನೆಗಪಿ ನೀಡುತಡಿಯಿಡುವ ತವಕದೊಳುಲಿವ ಕಿಱುಗೆಜ್ಜೆಯಂದುಗೆಗಳುಂ, ನಸುಜೋಲ್ದೆಳಗಿವಿಯನಲೆವ ಪಚ್ಚೆಯ ಮಾಂಗಾಯ ತಾಕಿನೊಳ್ ಮಸುಳಿಸುವೆರಡುಂ ಮೆಲ್ಗದಂಪುಗಳೊಳಿಟ್ಟ ಕತ್ತುರಿಯ ದಿಟ್ಟಿಬೊಟ್ಟುಂ, ಕಿಱುಗುರುಳೊಳ್ ಕೋದು ಕಟ್ಟಿದ ಕೆಂಬರಲರಳೆಲೆಯ ಲಂಬಣದ ಮುತ್ತಿನ ಪೆಱೆಯಂತೆ ಮೆಱೆವ ಪೆಱೆಗೆಱೆಯ ನಾಮಮುಂ ಮನಂಗೊಳೆ ಪೊಂದೊಟ್ಟಿಲೊಳ್ ಮಲಂಗಿದ ಪಾಂಗಂ। ಮತ್ತಮೆಳಸಸಿನೊಸಲೊಳ್ ಕವಿವ ನಿಱಗುರುಳುಂ, ಅರೆದೆಱೆದ ಕಡೆವಾಯೊಳ್ ಸೂಸುವಿಂಚರಿಯಿಂ ನನೆದ ನಸುದೋಱುವುಸಿರುಂ, ಮುಂ ಜಗಮಂ ಪಡೆವಾಗಳ್ ಮೊಗದೊಳ್

ಮೊಗೆದು ಮೊಳೆದೋಱುವ ಪಾವಕನಂ ಪಡಿಗೊಳ್ವ ಶ್ರೀಚೂರ್ಣತಿಲಕಮುಂ, ಕರ್ಮಣಿವೊಗರ್ವಡೆದಿರ್ದೆಯಾಗಸದ ಸೊಬಗಿಂಗೆ ಸೋಲ್ತಿರ್ಮೆಯ್ದಳೆದುದಿಸಿದ ಪೊಸವೆಱೆಯುಂ ಪೋಲ್ವ ಪುಲಿಯುಗುರುಂ, ಪೆಱಸಾರ್ಚಿದಡಿಯ ಕಿಱುಗೆಜ್ಜೆಯುಲಿಗೇಳ್ದು ಮಡಮುಱಿದು ಪಸರಿಸುವೆಸಟ್ಟೆಣ್ವೆಳಗುಂ, ಪಿಡಿಪಿಡಿದೆಱೆಯೆ ಪಱಿದುದಿರ್ದರಳೆಲೆಯ ಲಂಬಣಸರದ ಮುತ್ತುಗಳ್ ಊಱಿದೊರ್ಕೆಯ್ದಳಮನೊರ್ಮೊಱಕಾಲನೊತ್ತುವಿನಂ ಅಲ್ಲಿ ನಿಂದವಂ ಬೆದಕುವ ಮೊಳೆವೆರಲ್ಗಳುಂ, ತುಂಬಿದ ಪೊಂದಳಿಗೆಗಳಂ ತುಡುಕಿ ಕೌಚಿ ಪರಿವ ತಿಳಿನೀರೊಳ್ ತನ್ನ ಪಡಿನೆಱಲಂ ಕಂಡು ಪೊಡೆಯೆ ಪಿಡಿವ ಸೀರ್ಪನಿದಳೆದ ಸಿರಿಯೊಡಲುಮಾಗಿ, ಅಂಗಳದೊಳ್ ತಳರ್ವ ತನ್ನ ಬಱಿವಿಡಿದು ಮನದೊಡನೆ ದಿಟ್ಟಿಯುಂ ಸುಱಿಸುಱಿಸಿ ಸೊಗಂಬಡೆದು ಸೊರ್ಕಿ ಮೇಲಿಕ್ಕಿ ಪಿಡಿದೆತ್ತಿ ತೞ್ಕೈಸಿ ಮಗ್ಗುಲಂ ಸಾರ್ಚಿ ಮೊಗ ನೋಡಿ ಮೊಲೆಯೂಡೆ ಪಾಲ್ಗುಡಿಯುತ್ತಿ ಮೊಳೆವಲ್ಮಿಸುಗೆ ಎಡೆಯೆಡೆಯೊಳ್ನಗುವ ಗಾಡಿಯುಂ। ಬಱಿಕ್ಕಡಿಗಡಿಗೇಳ್ವ ಬೀೞ್ವಾಯಸದಿಂ ಪೊಡೆಯೊಳಿಡಿದ ಪಲವುಂ ಜಗಮುಂ ಕಂಪಿಸದಂತೆ ಬಿಗಿದು ಕಿಱುಪ್ಪೊಡೆಯೊಳ್ ಕಟ್ಟಿದ ಪವಳದಮುಳ್ಕೇವಳದೊಳ್ ನೇಲ್ವ ಪೊಂಗಿಱುಗಂಟೆ ಉಲಿಯ ದಂತೊರ್ಕೆಯ್ಯೊಳ್ ಪಿಡಿದು ಒಯ್ಯನೆಡಗೋಣೆಗೆ ನಡೆತಂದು ಅಲ್ಲಿ ಗೋಪಿ ಕಡೆಗಂದಲೊಳ್ಬೆಣೆ ಗಳೆಯದುಱುಪಿಯೊಲಿಯೊಳುರ್ಕಿಯುಗುವ ಪಾಲ್ಗಂದಲನಿಱುಪಿ ಬರ್ಪನಿತಱೊಳಾಕಡೆಗಂದಲಿಂ ಮಂತಿನೊಳ್ ಪೊಯ್ದೊಡೆದು ಆಬೆಣ್ಣೆಯೊಳ್ ಬೇಱ್ಪನಿತುಮಂ ನುಣ್ಣನೆ ನುಂಗಿ ತಣ್ಣನೆ ತಣಿದು ಉೞಿದುದಂ ಕೊಂಡಂಗಳಕೆ ನಡೆದು ಅಲ್ಲಿ ನಟ್ಟನಡುವೆ ನಟ್ಟ ಪೊಂಗಱೆಯೊಳ್ ಕಟ್ಟಿರ್ದ ಕರ್ಗೋಡಗದ ಸರಪಳಿಯ ಕೀಲಂ ಕೞಲ್ಚಿ ಪೆಡದಲೆವಿಡಿದದನೆೞೆದುಯ್ದುರುಮುಱಿಯದಂತೊಂದು ಮೂಲೆವನೆಯೊಳ್ ಮರವೊರಲೇಱಿ ಮಂಡಿಸಿ ಬೆಣ್ಣೆದಿನಿಸಿಯೊಡನುಂಡುದನುಗುೞೆಂದು ದಂಡಿಸುವಿನಮುದರ್ಕದು ಬೆದಱಿ ಪಲ್ಗಿಱುವುದುಮುದಂ ಬೆಣ್ಣೆಗೆತು॰

ಬೆರಲಿಂ ತೆಗೆಯುತ್ತುಮಿರೆ, ಮುಂ ಮನೆವಾೞ್ತೆಗೆಯ್ದು ಬಂದ ನಂದವಧು ಕಂದಲೊಡೆದುದಂ ಕಂಡದಂ ತನ್ನ ಕಂದನೆಸಕಂಗೆತ್ತು ಸಂತಸದೆ ನಸು ನಗುತ್ತುಲ್ಲಿಯುಮಱಿ ಕಾಣದಲ್ಲಿಗೆ ನಡೆತಂದು ನಿಂದಾಮಾೞ್ಕೆಯುಂ ಕಂಡಳ್ಕಿ ನಸುಮುನಿಸಿಂದೆ—ಎಲೆ ದುಱುದುಂಬಿ, ಸಿಲ್ಕಿದೆಯ್ಕೆಸೆ! ನಿನ್ನುದ್ದುರುಟುತನಕ್ಕೆ ತಕ್ಕ ಬುದ್ಧಿವೇೞ್ವೆನೆಂದದ್ದರಿಪುಮಾದನಿಗೇಳುತ್ತು ವಳ ಕೋಲ್ವಿಡಿದ ಕೆಯ್ಯುಂ ಕುಡಿಗೊಂಡ ಪುರ್ಬುಂ ಕೆಂಗಣ್ಣುಂ ಕೂರ್ನೋಟಮುಮಾದ ಕೋಪಾಟೋಪಕ್ಕಂಜಿ ತನ್ನಂ ಮಾಂಜಲೆಂ ದತ್ತಣಿನೆಟ್ಟು ಬೀದಿವರಿಯುತ್ತೆ ಮನೆದೇಗುಲಮನಂಗಳದೆಳದೊಳಸಿದೋಂ ಟಮಂ ಕಱುದುಱುಗಳ ಕೊಟ್ಟಗೆಗಳುಮಂ ಪೊಕ್ಕು ಬವಣಿಗೊಂಬ ತನ್ನಂ ಬೞಸಲ್ವಾಯಸದಿಂ ಬೆಮರ್ದ ಮೊಗಮುಂ ಪೆರ್ಚಿದ ಸುಯ್ಯ ಲರುಂ ಸಡಿಲ್ವ ಮುಡಿಯುಂ ಸರಿದ ಮೇಲುದುಂ ಬಳ್ಕುವ ನಡುವುಂ ಬಸವೞಿವ ನಡೆಯುಮಾದ ತಾಯ ಬೞಲ್ಕೆಗಂಡೊದವಿದ ಮಱುಕದಿಂ ನಾಲ್ಕೊಗಂ ಮಾದೇವಂ ಮೊದಲಾದ ಬಾಂಬಟ್ಟೆಗರ ದಿಟ್ಟೆಗಂ ಪರಮ ಯೋಗಿಗಳ ಬಗೆಗಂ ಮೆಯ್ಗುಡದ ಬೊಮ್ಮನವಳ ಕೆಯ್ಪಸಮಾಗುತ್ತೆ ಹದುಗಿ ಹಂಮ್ಮೆಸಿ ನಡನಡುಗಿ ಪನಿಸೂಸುವ ಬಗಸೆಗಣ್ಣಿಂ ಮುಚ್ಚಿ ಪೊಱಗೆಯ್ಯಿಂದೊಱಸುತ್ತೆ ನಿಲ್ವುದುಂ, ಅವಳುಮಳ್ಕುತ್ತು ಕೊಲಲೆತ್ತಿದ ಕೋಲಂ ಕೆಲಕಿಟ್ಟು ಕಟ್ಟುಱದೊಳ್ಪೆಟ್ಟತ್ತನೆ ನಿಟ್ಟುರಮಂ ನುಡಿದು ಕಟ್ಟ ನಿಲಿಸಲ್ಕೆಂದು ತೊಟ್ಟನೊಂದು ಕಡೆದಾವಂ ಪೊಡೆವಳಿಸಿ ಪಿಡಿವಿನ ಮೆರಟ್ಟೆರಲಳವುಂ ಕಡಮೆಯಾಗೆ ಬೇಗದೆ ತನ್ನ ಇರ್ನೆರೆಯ ಬೀದಿಯ ಪಳ್ಳಿಯ ಮನೆಗಳೊಳುಳ್ಳ ದಾವನಿತುಮಂ ತಂದು ಗಂಟಿಕ್ಕಿದೊಡಮಳ ವಡದಿರೆ ಅವಳೞಲಿ ಬೞಲ್ವಿನಂ, ಮನಂಗಱಗಿ ನೆಟ್ಟನೆ ಕಟ್ಟುವಡೆದಿರ್ಪ ಕಟ್ಟೊಳ್ಪುಮಂ। ಮತ್ತಂ—“ ಕೇಳೆಲೆ ಗೋಪಮ್ಮ! ನಿಮ್ಮೊರೊ ಳಿರ್ದಮ್ಮವಂದಿಗರ್ ಮನೆವಾೞ್ತೆಗೆಯ್ವುದರಿದು. ನಿನ್ನ ಮಗನಟ್ಟುಳಿ ಬೆಟ್ಟತ್ತು. ಈ ಪೊೞ್ತುಱಿಯೆಟ್ಟು ಎಡೆಗೋಣೆಯೊಳ್ ಕಡೆಯುತ್ತಿರ್ಪಿನಂ;

ಮನೆವೊಕ್ಕುವಂದು ತೊಟ್ಟಿಲೊಳ್ ಪಟ್ಟಿರ್ದ ಮಗುವಂ ತುಱುಪುದ ಮಾದನಿಗೇಳ್ದಾಂ ಕಡುಗಿ ನಡುಮನೆಗೆಯ್ತರ್ಪನಿತಱೊಳತ್ತಣಿಂ ಪರಿದಂಗಳಕ್ಕೆ ನಡೆದಲ್ಲಿ ಕಟ್ಟಿರ್ದೆಳಗಱುವಂ ಬಿಟ್ಟದಱ ನಾಲವುಂ ಪಿಡಿದು ಬಿಡದೆ ಪರಿದಂತೆ ಪರಿದು ನೆಗೆದಂತೆ ನೆಗೆದು ಪತ್ತಿಸಾರ್ದಿನಮಾತುಱು ಮುಱುಕದಿನೆಟ್ಟಿ ಮೊಗಂ ಮುಱಿದು ನಟ್ಟಾಲಿಯಿಂ ನಿಟ್ಟಿಸುತ್ತೆ ಪೆಱಗಾಲ್ಗಳಿನಿನಿಸುಂ [ಕುನುಂಗಿ]ನಿಂದು ಮೊಲೆಯುಣವಂದ ಕಱುವಿನ ಮೆಯ್ಯಂಪಂ ಸವಿದು ತೊಱೆಯಿಬುಪಲೊಡಮಾಕಱುವುಂ ನೆಗಪಿದ ಬಾಲಮುಂ ನಿಮಿರ್ದ ಪೆಱಗಾಲ್ಗಳುಂ ನೆಗೆದ ಮೊಗಮುಂ ನಟ್ಟ ಮುಂಗಾಲ್ಗಳುಮಾಗಿ ಮೊಲೆಗುಡಿವ ಬೆಡಂಗಂ ನಿರವಿಸಿ ತಾನುಮದಱಂತೆ ನಾಲ್ಕಾಲೊಳ್ ನಿಂದು ಮೊಗನೆಗಪಿ ಮೊಲೆಯುಣ್ಬನಿತಱೊಳಾನುಂ ಬಂದು ಕಱೆಯಲನುವಪ್ಪುದುಂ, ಬೆದಱಿಯತ್ತಣಿಂ ಬೀದಿವರಿದು ಮೆಯ್ಮಱಸಿ ಮಗುಟ್ಟಿ ಮನೆವೊಕ್ಕು ಕಂದಲ ಬೆಣ್ಣೆಯನಿತುಮುಂ ತಿಂದು ಪೋದಂ" ಎಂದು ದೂಱುವೆಡನೆರೆಮನೆಯ ಮಡದಿಯುಂ ; ಮತ್ತಂ—"ಎಮ್ಮ ಚತ್ವರದೊಳ್ ಕಱುನಾಲವಂ ಕರ್ಗೋಡಗದ ಗಡ್ಡದೊಳ್ಗಂಟಿಕ್ಕಲೊಡಮವೆರಡುಮೊಂದರ್ಕೊಂದು ಬಿಗುತರ್ು ಪಡುವ ಪಲವುಂ ಚಾಪಲಮುಂ ನಿರವಿಸುತ್ತಿರ್ಪಿನಮಾನುಂ ಬಂದು,—ಎಲೆಲೆ ಕಳ್ಳಂ ಕೆಯ್ಸಟ್ಟನೆಂಬುದುಮೊದವಿ ಮೆಯ್ಮಱಸಿ ಮನೆವೊಕ್ಕಲ್ಲಿಯೊಲೆಯೇಱಿಸಿದ ಪಾಲ್ಗಂದಲಂ ಕಡೆವೆಡೆಯೊಳಂ ಕಡೆವ ಮೊಸರ್ಗಂದಲನೊಲೆಯೊಳಂ ಪಲ್ಲಟಂಗೊಂಡಿರಿಸಿ ಸಿಸುಗೆಱೆಯಲೆಂದಿರಿಸಿದ ಬಿಸುನಾಲ್ವೆಣ್ಣೆಯಂ ಸವಿದಾಪೊಂದಟ್ಟಿಯೊಳ್ ಸುಣ್ಣಮನಾತಿಳಿಯುಮಂ ತುಂಬಿ ಮೋಸಂಬಡಿಸಿದಂ" ಎಂದುಲಿವ ಬಲನೆರೆಮನೆಯ ಭಾವೆಯುಂ ; ಮತ್ತಂ—"ಪೊಟ್ಟಱೆಯಾಂ ಕಱೆಯುತ್ತಿರ್ಪಿನಂ ತನ್ನಂ ಬಱಿಸಲ್ವ ಪಲವುಂ ಕುವರರ್ವೆರಸೊಳಪೊಕ್ಕು ಬಳಸಿಯುಂ ನೋಡಿ ಕಾಣದೆ ಕೋಣೆಯೊಳ್ ಕಟ್ಟ ನೇಲ್ವ ನೆಲವಿನೊಳ್ ಮೊಸರ್ಗಂದಲಂ ಕಂಡು ಕಡೆಗೋಲಂ ನೆಗಪಿ ಕುಟುಕುವಿನಂ

ನೀೞ್ಕಿದಿರೆ ಮಣೆಯಂ ಮರವೊರಲಂ ಮಕ್ಕಳಂ ಕುಳ್ಳಿರಿಸಿ ಪೆಗಲೇಱಿ ನಿಂದು ಕಂದಲಂ ಕುಟುಕೆ, ಸುರಿವ ಮೊಸಱ ಸರಿಯಂ ಸವಿಯುತ್ತಿರ್ಪಿನಮೆನ್ನೀಪೆಣ್ಮಗಳ್ ಪೋಗಿ ಕಂಡು ಕಳ್ಳಂ ಕಳ್ಳನೆಂಬುದುಮೊದಗಿ ಬಾಯೊಳಿಡಿದ ಮೊಸಱನವಳ ಮೊಗದೊಳ್ ಮುಕ್ಕುಳಿಸೆ ಕಣ್ಮುಚ್ಚುವುದುಂ ಗಳ್ಪನೆ ತೞ್ಕಿಗೆಯ್ದು ಮೊಗದೊಳ್ ಮೊಗವಿಟ್ಟು ಮುದ್ದಿಪ ನೆವದಿಂ ಗಾಸಿಗೆಯ್ದನಿದೆ ನೋಡು '' ಎಂದು ಮಗಳ ಬಾಯ್ದೆಱೆಯಂ ತೋಱಿ ದೂಱುವ ಮುಮ್ಮನೆಯ ಗರತಿಯುಂ; ಮತ್ತಂ—ಎಮ್ಮಂಗಳದೊಳ್ ಪಂಜರದ ಕೀಲಂ ಕೞಲ್ಚಿ ಗಿಳಿಯಂ ತಱುಬಿದನೆಂದುಂ, ಆಡುವೆಳವಕ್ಕಳ ಕಣ್ಗೆ ಮೆೞಸಿಕ್ಕಿದನೆಂದುಂ, ಮಲಂಗಿದ ಪೆಣ್ಗಳ ಮೊಗಕ್ಕೆ ಮಸಿಗೆಱೆಯುಂ ಬರೆದನೆಂದುಂ, ಮುದುಪಂ ಬಾಯ್ದೆಱೆಯದಂತೆ ಬಿಗಿದು ಗಡ್ಡಮೀಸೆಗಳಂ ಗಂಟಿಕ್ಕಿದನೆಂದುಂ, ಸಿಸುಗಳಾಡುವ ಪೊಡೆಸೆಂಡಂ ಕೊಂಡುಯ್ದನೆಂದುಂ, ಪೊಂಬೊಗರಿಯನಪಹರಿಸಿದನೆಂದುಂ, ಕವಡೆಗಳಂ ಕವರ್ದನೆಂದುಂ, ಇವು ಮುಂತಾದ ಪಲವಂ ಪೊಲ್ಲದ ನಡತೆಗಳಂ ಸೊಲ್ಲಿಪ ಬೀದಿವನೆಗಳ ಪೆಂಡಿರ್ಗಳುಂ—ತಮ್ಮೊಳ್ತಾವೆ ನಾಣ್ಚಿ ತಲೆವಾಗಿ ಬೇಗದೆ ಮೋನದೆ ಪೋಪಂತೆ ತಾಯ ಮಗ್ಗುಲಿನೆಟ್ಟು ಸಿರಿಮೊಗಂದೋಱುವ ಮುದ್ದುವಗೆಯುಂ । ಮತ್ತಂ ನೆತ್ತಿಯೊಳ್ ಸಿರಿಮೆಯ್ವೊಗರ್ ಮೇಗಣ್ಗೆ ನೆಗೆದೊೞ್ಗಿಗೊಂಡಂತೆ ಮೆಱೆವ ಚಂಡಿಕೆಯುಂ, ಅಲ್ಲಿ ಮೊತ್ತಂಗೊಂಡ ಕೞ್ತಲೆಯತ್ತಲಿತ್ತಲುಂ ಬಿತ್ತರಿಸಿದಂತೆ ಸುತ್ತಮುತ್ತಿದೆಳನೇಸರ್ಗದಿರಂ ನೆರಂಗೊಂಡು ಚಂಡಿಕೆಯೊಳ್ಕಟ್ಟಿರ್ಪ ಪೊಂಗುಂಡುಸರಮುಂ, ಜಗಮನೊಗೆಯಿಸುವಾಗಳ್ ಆವಗಮೊಗೆಯಿಸಿದಭ್ಯಾಸದಿಂದೀಗಳುಂ ಬಗೆಯೊಳಂ ಕಣ್ಣೊಳಂ ಪೊಣ್ಮಿ ನಿಂದೆಳಸಸಿನೇಸರ್ಗಳ್ ಸಿರಿಗುರುಳ್ಗೞ್ತಲೆಯೊಳ್ ಕೇಣದಿಂದಿದಿರೇಱಿದಂತಿರ್ಪ ಪೆಱೆಗೆಱೆನಾಮ ಕೆಂಬರಲರಳೆಲೆಗಳುಂ, ನಿಡುಗಣ್ಬಾೞಿಮೀನ್ಗಳುಗುೞ್ದುವೆಂಬಂತೆಸೆವ ಮುತ್ತಿನ ಕಿವಿವಚ್ಚಮುಂ, ತ್ರಿಗುಣಮಯಮಾದ ಸೃಷ್ಟಿಗೆಯ್ಯಲೆಂದೆತ್ತಿಕಟ್ಟಿದ ಬಿತ್ತು

ಗಳ ಮೊತ್ತದಂತೆಸೆವ ಮುತ್ತಿನ ಕೆಂಬರಲ ಕರ್ವಣಿಯ ಕಂಠಸರಂಗಳುಂ, ಬಾನೊಳಂ ಬಾನ್ಗುರುಳನ ತಲೆಯೊಳಂ ನೆಲಸಲ್ಕೆಂದಿರ್ಪೆಯ್ದುಳಿದು ಮನ ದೊಳ್ ಪೊಣ್ಮಿದೆಳವೆಱ ಪೊಱಗಣ್ಗೆ ಪಡಿನೆಲೊಗ್ಗೊಂಡಂತೆಸೆವ ಪುಲಿ ಯುಗುರ್ವಚ್ಚುಮುಂ, ಕಲಿಯುಗದೊಳ್ ಬಳೆವ ಸಿರಿಮೆಯ್ಯ ಕರ್ಪೊಗರ್ ಪೊಱಮಡಿಸಿದೊಡಂ ಬಿಡದೆ ತೊಡರ್ವ ಪಿಂತಣ ದ್ವಾಪರದ ಫಳಧಿವಣ್ಣ ದಂತಿರ್ಪ ಪೊಂದುಗುಲಮುಂ, ನಡುವಳಸಿ ಸುತ್ತಿಯುದಱಳ್ ಸಿಲ್ಕಿಸಿದ ಪೊಂಗೊಳಲುಂ, ಏೞುಂ ಜಗಮನೊಳಕೊಂಡೊಡಂ ತಣಿಯದ ಬಸಿಱಂ ತುಂಬಲ್ಕೆಂದು ಕಿಱುಗಲ್ಲಿಯೊಳಿಟ್ಟು ಕಕ್ಷದೊಳ್ ನೇಲ್ವ ಕಟ್ಟೋಗರ ಮುಂ, ಕೆಯ್ಯೊಳ್ ಪಿಡಿದ ಕಿಱುಗೋಲುಮಾಗಿ ತನ್ನಂತೆಸೆವ ಸಾಸಿ ರ್ಗವರರ್ವೆರಸು ಕಱುಗಾಯಲ್ಕೆಂದು ಕಾನನಮಂ ಪೊಕ್ಕಲ್ಲಿ ಕಱುಗಳ ಮಂದೆಯೆಲ್ಲಮನೊಂದುವೆರಸಿ ಮೇಯಲ್ಕೆ ನಿಲಿಸಿ, ತಾನುಂ ಜಗುನೆಯ ತಡಿಯೊಳ್ ಜಾನಿಸುವಳ್ಳಿಗರೊಡನೆ ಕುಳ್ಳಿರ್ದರೆಗಣ್ಮುಚ್ಚಿ ಜಾನಿಸುತ್ತುಂ, ಮೊರೆಯುತ್ತೆ ಬವಣಿಗೊಂಬ ತುಂಬಿಗಳೊಡನೆ ಸುತ್ತಿ ಮೊರೆಯುತ್ತುಂ, ಕುಕಿಲ್ವ ಕೋಗಿಲೆಗಳಂ ಬೞಸಂದು ಕೂಗುತ್ತುಂ, ಕಮುಗಿಲ ಕರು ವಿನಂತೆ ಮೆಱೆವ ತನ್ನ ಸಿರಿಮೆಯ್ಯಂ ಕಂಡು ಸೊರ್ಕೆೞು ಕುಣಿಯುವ ಸೋಗೆಯೊಡನೆ ಕುಣಿಯುತ್ತುಂ, ಆಗಸದೊಳ್ ಪಾಱುವ ಪಕ್ಕಿಗಳ ನೆೞ ಲಂ ತಱುಬಿ ಪರಿಯುತ್ತುಂ, ಏಡಿಸುವ ಕೋಡಗಂಗಳನೇಡಿಸುತ್ತುಂ, ಅವಱ ಕೊನೆವಾಲಂಗಳಂ ಪಿಡಿದು ಬಿಡದೆ ಕೊಂಬಿನತ್ತಣಿಂ ಕೊಂಬಿಂಗಂ ಮರ ದತ್ತಣಿಂ ಮರಕ್ಕಂ ನೆಗೆಯುತ್ತುಂ, ನೀರ್ತಡಿಯೊಳ್ ಕುಪ್ಪಳಿಸುವ ಕಪ್ಪೆ ಗಳೊಡನೆ ಕುಪ್ಪಳಿಸುತ್ತುಂ, ಪಡಿನೆೞಲಂ ಪೊಡೆಯುತ್ತುಂ, ಪಡಿನುಡಿಯಂ ಬಯ್ಯುತ್ತುಂ, ಪಿರಿದುಂ ಪೊೞ್ತುಗಳೆದುಣಲೆಳಸಿ ಕಿಱುವೊನಲ್ವಳಸಿದ ಪುಳಿ ನವನಮಂ ಸಾರ್ದು ಅಲ್ಲಿಯೋರೊರ್ವರ ಕಲ್ಲಿಗಳನೋರೊರ್ವರ್ ಕಳು ತ್ತುಂ ಒಲ್ಮೆಯೊಳಿತ್ತುಂ ಮೇಗಣ್ಗೆಡುತ್ತುಂ ಆನುತ್ತುಂ ತಣಿದು, ಪದು ಳದೊಳ್ ಕಟ್ಟೋಗರಂಗಳಂ ಬಿಟ್ಟು, ತಾವರೆಯ ಕರ್ಣಿಕೆಯಂ ಬಳಸಿದೆ

ಸಟ್ಟೆಗಳಂತೆ ನಟ್ಟನಡುವಿರ್ಪ ತನ್ನಂ ಬಳಸಿ ಮುಂಡಿಸಿದ ಕೆಳೆಯರನಿಬರ್ಗಂ ತನ್ನ ಸಿರಿಯೋಗರದ ಸವಿಯಂ ತೋಱು, ತಾನುಮವರೋಗರಂಗಳಂ ಸವಿಯುತ್ತುಂ ನುಡಿಸುತ್ತುಂ ನಗಿಸುತ್ತುಂ ಪಸಿವಂ ಕಳೆದು, ಇಱುವೊಱ್ತು ನೊಳ್ ಮರಂಗಳ ತಳಿರ್ ನನೆಯಲರ್ ಮಿಡಿಕಾಯ್‌ಪಣ್ಗಳಿಂದೆಯುಂ ಮುಂ ತಾಯೊಡರಿಸಿದ ಪಲವುಂ ತೊಡವುಗಳಂ ಮಱಸಿ ಮನಂಗೊಳಿಸಿದ ಸಿಂಗರಂಗಳಂ ತಳೆದು, ಬೆಟ್ಟುಗಳ ತಪ್ಪಲೊಳಿರ್ಪ ಅರಿದಳಕಾವಿಗಲ್ಗಳಿಂ ದಣ್ಪಿಟ್ಟು, ತನ್ನಂತೆ ತನ್ನೊಡನಿರ್ಪ ಪಲವುಮೆಳಗೋವಳರುಂ ಮುಂದೆ ನಡೆವ ಕಱುವಂದೆಯುಂ ಬಳಸಿ ಕೈಪೆಱೞಗುಟ್ಟುತ್ತೆ ಕುಣಿವೆಳಗೋವಳರು ಮೊಡೆವರೆ ಪುರವೀಧಿ ತುಂಬಿ ಬರ್ಪ ಬೆಡಂಗುಮಂ। ಕೇಳ್ದು ತಾಮುಮಾ ತೆಱದ ಕುವರನಂ ಪಡೆಯಲ್ಕೆ ನೋಂಪಿಗೆಯ್ವ ಪೆಂಪಂ ಚಿಂತಿಸುತ್ತಿರ್ಪರ್ ''—

ಎಂದು ನುಡಿವ ಕೆಳದಿಯ ಮೊಗದಾವರೆಯೊಳ್ ಕಡೆಗಣ್ದುಂಬಿಗಳಂ ಸುೞಸಿ ಅರೆವೆಱೞನೊಸಲೊಳ್ ಮಿಱುಪ ಕಱೞಗೆಱೞಯೆನೆ ನಿಱುಗೊಳ್ವ ಪುರ್ಬುಗಳಿಂ ಜರ್ಬುವೆರಸಿಯೆನಸು ನಾಣ್ಬೆರಸಿದ ಮುನಿಸಿ ನೆಸಕಮನೆರ್ದೆಗೊಳಿಸಿ ಅಂತರಂಗದೊಳ್ ಪೊಂಗುವ ಸಂತಸವುಂ ಸಂತವಿಸಿ ಸಂತಾನಚಿಂತಾಸಂತಾಪಮನಭಿನಯಿಸುತ್ತೆ ಕಿಱುದುಂ ಪೊೞ್ತು ಮೋನದೊಳಿರ್ದು ನಿಡುಸುಯ್ದು ನುಡಿದಂ :—

ಅರಸೀ ! ಕೇಳೀಜಗದೊಳೆಂತಪ್ಪರ್ಗಂ ತನಯರ್ಗಳಂ ಪಡೆವ ಚಿಂತೆ ದುರಂತಮಾಗಿರ್ಪುದು. ಅದಱೊಳಂ ಸಿರಿಯುಮರಸುತನಮುಮುಳ್ಳೊಡೆ ಪೇೞ್ವುದೇಂ ? ಅಂತಾದೊಡಮೀಯದುಕುಲಲಲಾಮರೆನಿಪ ಮಹೀಶೂರಪುರದರಸುಗಳ ಲೇಸಂ ಬಳೆಯಿಸಲೆಳಸಿ ಸಿರಿಯರಸಿವೆರಸಿ ಯದುಶಿಖರಿಶಿಖರದೊಳ್ ನೆಲಸಿಯಖಿಲಜಗತ್ಕಾರಣನಪ್ಪ ನಾರಾಯಣಂ ಪೊಣೆಯಾಗಿರ್ಪಂ. ಈ ಚಿಂತೆಯುಂ ತವಿಪುದು.—ಎಂದಿವು ಮೊದಲಾದ ಪಲವುಂ ಹಿತೋಪದೇಶಂಗಳಿಂದರಸಿಯ ಕಡುದುಗುಡಮುಂ ಕಳೆದು ನಡೆ

ದರಮನೆಯು ದೇಗುಲಮುಂ ಸಾರ್ದಲ್ಲಿ ಮುಂ ತಂಮೋಲ್ತುರದರಸುಗಳೊಡರ್ಚುವರ್ಚನೆಗಳಿಂ ಪೆರ್ಚುಗೆವಡೆದ ಗೃಹಾರ್ಚಾಗೋಪಾಲನ ಶ್ರೀಪಾದಪದ್ಮಂಗಳ್ಗೆ ಸಾಷ್ಟಾಂಗವೆಱಗಿ ಭಕ್ತಿಭರದೊಳ್ ನುತಿಗೆಯ್ಯುತ್ತಿರ್ಪಿನಂ;

ಅನ್ನೆಗಮುಳಹಿಯ ಸಿಂಗರಾರ್ಯರ್ ಇತ್ತ ಬ್ರಾಹ್ಮಮುಹೂರ್ತದೊಳುಪ್ಪವಡಿಸಿ ಸ್ವಾಚಾರ್ಯರುಂ ಮೊದಲೆನೆ ಸಿರಿಯರಸಂಬರೆಗಮಾದ ಪರಮಾಚಾರ್ಯರಂ ಜಾನಿಸಿ, ಸ್ನಾನಾದಿನಿತ್ಯಕರ್ಮಾನುಷ್ಠಾನತಿರುವಾರಾಧನಂಗಳಂ ನೆರವಣಿಗೆಗೊಳಿಸಿ, ಶಿಷ್ಯರ್ಗೆ ಶ್ರೀಭಾಷ್ಯ ಶ್ರುತಪ್ರಕಾಶಿಕೆಗಳಂ ಪ್ರಕಾಶಮಾಗಿ ತಿಳಿವಂತು ಸೈತುಪದೇಶಿಸಿ, ಶಾಂತಿಪಾಠಾನಂತರದೊಳ್ ರಹಸ್ಯಾರ್ಥಂಗಳಂ ಬಿತ್ತರಿಸಿ, ಆಬಳಿಕ್ಕೆ ನಿತ್ಯನಿಯುತಮಾದ ಗೀತಾರ್ಥಮುಂ ನಾಮತೀರ್ಥಸಮುಯದೊಳರಸಂಗಱಪಲೆಳಸಿಯರಮನೆಗೆ ತಕ್ಕ ಪಸದನಂಗೊಂಡು, ಶಿಷ್ಯಸಂಘಂ ಬಳಿವರೆ ತಿರುಮಾಳಿಗೆಯಿಂ ಪೊಱಮಟ್ಟು, ಪೊನ್ನಂದಳಮನೇಱಿ, ಅರಮನೆಯ ಬಾಗಿಲಂ ಸಾರ್ವಿನಂ—

ಅಲ್ಲಿ ಸಂದಣಿಸಿ ನಿಂದಿರ್ಪ ಮಂದಿ ಕುದುರೆ ಪೇರಾನೆ ತೇರ್ಗಳ ಭಾರಣೆಗಳಂ ತೇರ್ಕೈಸಿ ಪಲನಾಡುಗಳಿಂ ಪಲತೆಱದ ಕಪ್ಪಂಗಳಂ ಕೊಂಡು ಕಾಣ್ಕೆಗೆ ವಂದಿರ್ಪ ನೆಲದೆರೆಯರ ನೆಱವಿ ಇರ್ತರದೊಳಮಿರ್ಕವಿಸಿ ಸಾಲ್ಗೊಂಡು ತಂತಮ್ಮ ವಾಹನಂಗಳಿಂದಿಳಿತಂದು ಪರಿವಿಡಿಯಿಂದೆಱಗಿ ಪರಕೆಗಳಂ ಸಿರದೊಳಾಂತು ಹರಿಸಂದಳೆಯೆ, ಕಱುವಾಡದರಮನೆವಾಗಿಲಂ ಪೊಕ್ಕು ಮಿಕ್ಕು ಬರ್ಪಾಗಳ್—ಇರ್ಕೆಲದೊಳಂ ಕಕ್ಕಸದ ಸೊರ್ಕಿನುರ್ಕಾಳ್ಗಳಿಕ್ಕತಳದಿಂ ಬಂದು ಮೆಯ್ಯಿಕ್ಕಲವರನಟ್ಟಿಱಿಂ ತಕ್ಕವೋಲಾದರಿಸುತ್ತುಂ ಸಾರಿ ಬರೆ ; ಹಜಾರದ ತೊಟ್ಟಿಯೊಳಿಟ್ಟಣಿಸಿ ನಿಂದ ಭಟ್ಟನಟ್ಟುವಿಗರುಂ, ಕಟ್ಟಂದದಿಂ ಬಿಟ್ಟಕಣ್ಣಿ ಬಿಡಪೆಂಡಿರನಂಡಲೆವ ಸಿಂಗರದ ಬೆಲೆವೆಣ್ಗಳ ವಂಗಡಮುಂ, ಮುಂಗುಡಿಯೊಳ್ ಸಿಂಗಂಗಳಂತಂಗವಿಸಿಯೊತ್ತರದಿಂ ತೆತ್ತೈಸಿ ನಿಂದ ಬಾಹತ್ತು ನಿಯೋಗಿಗಳುಂ, ದಿಗ್ದೇಶದ ನಿಯೋಗಿಗಳುಂ, ಬೇಗದಿಂ ಬಂದು ಕೆಯ್ಗಳಂ ಮುಗಿಯುತ್ತುಮಿರಲಿರ್ತೆಱದೊಳಂ ಕೂರ್ತು ಮನ್ನಿ

ಸುತ್ತೆಯ್ದಿ ಮತ್ತಮಾವೊತ್ತಿನ ಚಿತ್ತರದ ಬಾಗಿಲೋವರಿಯೊಳಾವಗಂ ತೀವಿ ಕಾವಲಿರ್ಪ ಬಲ್ಲಿದರಪ್ಪ ಗೊಲ್ಲರೆಲ್ಲರುಮಲ್ಲಿ ನಿಂದು ಪೊಡೆಮಡುತ್ತು ಮಿರೆ ಬಿಡಯಂಬೆರಸು ಕಡುದಯದಿಂ ನಿಟ್ಟಿಸುತ್ತೆ ಮುಂದುವರಿದಂದ ಳವುನಿಟಾದು ಮುಂದಣ ಮೊಗಸಾಲೆಯ ತೊಟ್ಟಿಯಂಗಳದ ಮುಂ ಗುಡಿಯ ಬಾಗಿಲ ಪಡಿಯಜರ್ ಪಿಡಿದ ಪೊಂದಡಿಗಳಿಂ ನೆಲಗಟ್ಟಿನ ಪಲಗೆಯನಪ್ಪಳಿಸಿದ ಸೊಪ್ಪುಳಂ ಕೇಳುತ್ತೆ ತತ್ತರದಿಂ ತಂತಮ್ಮ ತಾಣಂಗಳಿಂದಿಟಾತಂದು ಹಂತಿಗೊಂಡು ತಿಂತಿಣಿಸಿ ತುಟಾಲ್ಗೆಯ್ವ ಸಾ ಮಂತ ಮಂತು ಮನ್ನೆಯ ಮಂಡಳಿಕರಂ ಭಂಡಾರಿಕರಂ ಸಜ್ಜೆವಳರಂ ಬಿಜ್ಜೆವಳರಮಡಪವಳರಂ ಪಡೆವಳರಂ ಘೋಟಾಯ್ಲರಂ ಝಳಂ ಬಾಯ್ತರಂ ಪಸಾಯ್ತರಂ ಪ್ರೇಮದಿಂದವರವರಂತರವಱಿತು ಮಧು ರೋಕ್ತಿಗಳಿಂ ಸಂತಸವಡಿಸುತ್ತಲ್ಲಿಂ ಮುಂದೆಸೆವ ಕಜಾನಾಡದೊಳ ನಾಗಿಲೊಳಗಣೋವರಿಯೊಳಿರ್ಪ ಮಂತ್ರಿಪ್ರಧಾನಿಗಳುಂ ರಾಯಸ ದಕ್ಷರಚಣರುಮಣಿಯರದಿಂ ಮಣಿಯಲವರ್ಗಳ ಮನಮಂ ನಲ್ವಾತು ಗಳಿಂ ತಣಿಯಿಸುತ್ತಂತವುರದ ಬಾಗಿಲಂ ಸಾರ್ದಲ್ಲಿರ್ಪ ವರ್ಷವರಾದಿಗಳಾ ಶೀರ್ವಾದಪ್ರಕರ್ಷದಿಂ ಹರ್ಷಮನೆಸಗಿ, ಅಲ್ಲಿಂ ಮುಂದಿರ್ಪ ನಾಮತೀ ರ್ಥದ ಚವುಕಿಗೆಯ ಮುಂದಣ ಮೊಗಸಾಲೆಯೊಳೋಲಗಿಸುವ ಶಂಖ ಕಾಹಳೀವೇಣುವೀಣಾಮೃದಂಗತಾಳಢಕ್ಕಾದಿನಾದಕರುಂ ಸಂಗೀತನಿಪು ಣರುಂ ಪ್ರಣಮಿಪುದಂ ನಿಟ್ಟಿಸಿ ಪದುಳಿಸುತ್ತಾ ತೊಟ್ಟಿಯೊಳಪುಗುವಿನಂ ;

—ಅಳಹಿಯ ಸಿಂಗರಾರ್ಯರ ವರ್ಣನೆ—

ತತ್ಕಾಲೋಚಿತರಾಗಲ್ಲಿರ್ಪ ಸಾಮಾಜಿಕರೀಯಳಹಿಯಸಿಂಗರಾ ರ್ಯರಂ ನಿರವಿಸಿ ಯಿವನಂ ಇಂದ್ರಂಗೆತ್ತು ಪರಿತರ್ಪ ಬೃಹಸ್ಪತಿಯೋ, ದಶರಥಂಗೆತ್ತು ಪತ್ತೆಸಾರ್ವ ವಸಿಷ್ಠನೋ, ಜನಕಂಗೆತ್ತೇಟ್ತರ್ಪ ಯಾಜ್ಞ ವಲ್ಕ್ಯನೋ, ಯುಧಿಷ್ಠಿರಂಗೆತ್ತು ಬಟಾಸಲ್ವ ಧೌಮ್ಯನೋ, ಜನಮೇಜ ಯಂಗೆತ್ತು ಬಂದ ವೈಶಂಪಾಯನನೋ ಎಂದು ಪೌರಾಣಿಕರೆಣಿಸುತ್ತಿರೆ;

ಮತ್ತಂ, ಮುಂ ತಾನನುಗೊಳಿಸಿದ ವೇದಶಾಸ್ತ್ರಂಗಳ್ ಕಲಿದೋಷದಿಂ ವ್ಯಾಕುಲವಾಗೆ ಮಗುಳ್ದವೆಲ್ಲಮಂ ಮುನ್ನಂತನುಗೊಳಿಸುವ ವ್ಯಾಸನೋ, ಮಗುೞ್ದುರ್ವರ್ಗೆ ಪರಾವರತತ್ವಮಂ ತಿಳಿಪಲಿೞ್ತಂದ ಪರಾಶರನೋ, ಪೆಱತೊರ್ವರ್ಗೆ ಭಗವದ್ಭಕ್ತಿಯಂ ಬಿತ್ತರಿಸಲುದಿಸಿದ ಶುಕಮುನಿಯೋ, ಇನ್ನು ಮೊರ್ವರ್ಗೆ ಹರಿಹರಬ್ರಹ್ಮರಿರವನಾರಯ್ದು ಹರಿಯೇ ಪರಬ್ರಹ್ಮಮೆಂಬುದಂ ನೆಲೆಗೊಳಿಸಲೊಗೆದ ಭೃಗುಮುನಿಯೋ! ಎಂದು ತತ್ವಜ್ಞರ್ ಬಗೆಯುತ್ತಿರೆ;

ಮತ್ತಂ, ಬೇಱುರ್ವರ್ಗೆಯಾಱುಂ ದರ್ಶನಂಗಳನಾರಯ್ದು ವೈಷ್ಣವಮೇ ಸಾರಮೆಂದೊರೆವ **ಭಕ್ತಿಸಾರನೋ,** ತಾಂ ತಾಮೆಳಸಿದ ದೇವರಂ ಪರತತ್ವಮೆಂದು ವಾದಿಸುವೋದಾಳಿಪಾರ್ವರ ಗರ್ವಮಂ ಕತ್ತರಿಪ **ವಿಷ್ಣುಚಿತ್ತನೋ,** ಮುಂ ತಾಂ ಶ್ರೀರಂಗವೇಂಕಟಾದ್ರಿಪ್ರಮುಖ ದಿವ್ಯದೇಶಾಶ್ರಯನಪ್ಪ ಶ್ರಿಯಃಪತಿಯ ದಿವ್ಯಮಂಗಳ ಗುಣಂಗಳಂ ಕಿಱಿದುಂ ಬರಿಸಮನುಭವಿಸಿದುದಱಿಂ ತಣಿಯದೆ ಪೊಸಮೆಯ್ದುಳಿದಿೞಿದ ಶಠಕೋಪನೋ, ಮುಂ ತನ್ನಿಂ ಬನ್ನಂಬಡೆದ ವಾದಿಗಳೀಗಳ್ ಮಱುವುಟ್ಟೆನೊಳಂ ತಿಳಿವೞಿದು ಕೆಲರ್ ವೇದಮಪ್ರಮಾಣಮೆಂದುಂ ಕೆಲರ್ ವೇದಪ್ರಾಮಾಣ್ಯಮನಂಗೀಕರಿಸಿಯುಮರ್ಥದೊಳೆ ಭ್ರಮಿಸೆ ಬೆಳಕಿಂಗೆತ್ತಿದ ಸೊಡರೊಳ್ ಸಿಡಿದು ಬೀೞ್ವ ಪತಂಗದಂತೆ ರೂಪೞಿದು ಪೋಗುತ್ತಿರೆ ಅವರ ಮರುಳಂ ಕಳೆದು ಶ್ರೀಮನ್ನಾರಾಯಣನೇ ಪರತತ್ವಮೆಂದುಮವನ ಭಕ್ತಿಯೇ ಮುಕ್ತ್ಯುಪಾಯಮೆಂದುಂ ಅವನಿಂ ಪುಟ್ಟಿದ ಜಗಮನಿತುಂ ಸತ್ಯಮೆಂದುಂ ಆವಂಗಾಳ್ಗಳೆನಿಸಿದ ಜೀವಾತ್ಮರ್ ಅವನ ದಿವ್ಯಾಜ್ಞಾರೂಪಮಾದ ವರ್ಣಾಶ್ರಮಾಚಾರಂಗಳನನುಸರಿಸಲ್ವೇೞ್ಪುದೆಂದುಂ—ಇವು ಮುಂತಾದ ಹಿತೋಪದೇಶಂಗಳಿಂ ಜಗಮನಿತುಮುಜ್ಜೀವಿಸಲ್ ಜನಿಸಿದ **ರಾಮಾನುಜನೋ,** ಎಂದು ಪರಮಸಾತ್ವಿಕರ್ಭಾವಿಸುತ್ತಿರೆ;

ಉದಯಗಿರಿಶಿಖರದೊಳುದಿಸುವ ರವಿಬಿಂಬದಂತೆ ಸಿರಿಮುಡಿಯೊಳ್ ಧರಿಸಿದ ರಕ್ತಪಟ್ಟೋಷ್ಣೀಷಮುಂ, ಸಿರಿಮೊಗದಾವರೆಯೊಳ್ಗಂಪನೆಳಸಿ ಬಳಸುತ್ತೆ ನಾಸಾಚಂಪಕಕ್ಕಳ್ಕಿಯೆರಡುಂ ಕಿವಿಗಡೆಯೊಳ್ಪಾಲ್ಗೊಂಡು ಸಲ್ವ ತುಂಬಿವಿಂಡುಗಳಂತಿರ್ಪ ಕಾಲಕರ್ಬಟ್ಟೆಯ ಸೆಜಂಗುಗಳುಂ, ಮುನ್ನಾಗಸಮನಳೆವಾಗಳ್ ತನ್ನುಗುರ್ಗೊನೆಸೋಂಕಿಂ ಪಱಿದಂಡಕಟಾಹ ಬಾಹ್ಯಜಲಮಿರ್ತೆರದೊಳ್ ಪರಿಯುತ್ತಿರೆ ಮೆಱೆವ ತ್ರಿವಿಕ್ರಮನ ಚರಣಾಂಗುಷ್ಠನಖಮಂಡಲಮೆನೆ ವಿಮಲೋರ್ಧ್ವಪುಂಡ್ರದಿಂದೆಸೆವ ಮುಖಮಂಡಲಮುಂ, ಆವೂರ್ಧ್ವಪುಂಡ್ರಮಂ ಪುಂಡರೀಕಪ್ರಕಾಂಡಂಗೆತ್ತಲ್ಲಿ ಮಂಡಿಸಿದ ಸಿರಿಯರಸಿಯ ಪೊಂಜೆಳೆಮೆಯ್ಯಂ ಪೋಲ್ವ ಶ್ರೀಚೂರ್ಣತಿಲಕಮುಂ, ಮೊಗಮನಿತುಮಂ ವ್ಯಾಪಿಸಲೆಳಸುವ ಬಗಸೆಗಣ್ಗಳಂ ಮೇರೆಯೊಳ್ ನಿಲಿಸುವೆಲ್ಲೆಗಟ್ಟೆಗಳಂತಿರ್ಪ ಪುರ್ಬುಗಳುಂ, ಎಮಗಿದಿರಪ್ಪ ವಸ್ತುಗಳನಲ್ಲದೆ ತಿಳಿವುದರಿದು ನೀಮುಭಯವಿಭೂತಿಗಳೊಳಿರ್ಪುದನಿತುಮಂ ತಿಳಿದಿರ್ಪ ತೆಱನಾವುದೆಂದು ಬೆಸಗೊಳಲೆಳಸಿದಂತೆ ಕಿವಿವರೆಗೆ ಪರಿದ ಕಣ್ಮಲರ್ಗಳುಂ, ಕಡಲಂ ಕಡೆದು ಸೊದೆಗೊಂಬಂತೆ ಶಾಸ್ತ್ರದೊಳ್ ಸಾರಾಲ್ಪಸಾರಸಾರತರಗಳಂ ಕಳೆದು ಸಾರತಮಮಾದ ಮೂಲಮಂತ್ರದರ್ಥಂಗಳಂ ಸಂಗ್ರಹಿಸಿ ಸದಾಚಾರ್ಯರುಪದೇಶಂಗೆಯ್ದುದಱಿಂದಾಯೆಂಟುಮಕ್ಕರಂಗಳೊಳ್ಪುರುಳ್ಗಳ್ ಬೇಱೆ ರೂಪುವೆತ್ತು ಕಿವಿಯುಂ ಪತ್ತಿದುದೆಂಬಂತಿರ್ಪ ಚೌಕುಳಿಗಿವಿವಚ್ಚಮುಂ, ತುಂಬಿ ತುಳುಂಕುವುಭಯವೇದಾಂತಸಾರಸಾಗರದ ತೆರೆಗಳಂತೆಯುಂ ಸತ್ಯಲತೆಯ ಪೂಗೊಂಚಲಂತೆಯುಂ ಸತ್ವಗುಣದುನ್ಮೇಷದಂತೆಯುಂ ಅಂತಃಕರಣಪ್ರಸಾದದಂತೆಯುಂ ಧರ್ಮಾಂಕುರಂಗಳಂತೆಯುಂ ಬೆಳತರ್ಪ ಪೊಱಸೂಸುವ ನಸುನಗೆಯುಂ, ರಜಸ್ತಮೋಗುಣಂಗಳೆರಡುಮಂ ಕಳೆದು ತಾನೊಂದುಮೆ ಮುಮ್ಮಡಿವೆತ್ತು ಸತ್ವಗುಣದಂದದಿಂ ಕಂದದೊಳೆಸೆವ ಯಜ್ಞೋಪವೀತಮುಂ, ಮಾನಸಪೂಜಾಸಮಯದೊಳಂತರಾತ್ಮಂಗರ್ಪಿಸಿದ ದುಂಡುಮಲ್ಲಿಗೆಯ ನನೆಗಳ್ ನಿರ್ಮಲಹೃದಯದೊಳ್

ಪೊಱಗಣ್ಗೆ ಕಂಗೊಳಿಸಿದಂತೆ ಪೇರೆರ್ದೆಯೊಳೆಸೆವ ಮುತ್ತಿನೆಕ್ಕಸರಮುಂ, ಅದಱ ನಡುಗಂಪಿಂಗೆಱಗಿದ ಪಱಮೆವಱಿಗಳ ಸಾಲ್ಗಳಂತೆಸೆವ ತೊಳಚಿ ತಾವರೆಮಣಿಗಳ ಸರಂಗಳುಂ, ಮೇರುವಿನ ತಪ್ಪಲೊಳ್ ಕಾಯ್ವ ಬೆಳ್ದಿಂಗಳಂತೆಯುಂ ಆಯೆಡೆಯೊಳ್ ಪರಿವ ಮಂದಾಕಿನೀಪ್ರವಾಹದಂತೆಯುಂ ಮೆಯ್ಯೊಳ್ ಪೊದೆದುಟ್ಟ ಧವಳಪಟ್ಟಾಂಶುಕಯುಗಳಮುಂ—ಮನಂಗೊಳೆ ಬಱಿವರುವ **ಅಳಹಿಯ ಸಿಂಗರಾರ್ಯರ**ನಾದರದೊಳ್ ಕಣ್ಗೊಳಿಸುತ್ತ ರಸನ ಸಂಮೊಗದ ಕೃತಮುಖರ್ ಮನದೊಳೆಣಿಸಿದರದೆಂತೆನೆ :—

ಈಮಹಾನುಭಾವನೆಳಮೆವಿಡಿದೆಮಗೊಳ್ಳೆಯುಮೊಡನಾಡಿಗನುಮಾಗಿರ್ದೊಡಂ ಶಮದಮಾದಿಗುಣೈಕಾಶ್ರಯನಾಗಿರ್ದೊಡಮಿವನೊಡಲೊಳಿಡಿದ ಕಡುವೊಗರ ಪೆರ್ಕಳದಿಂ ಗಳ್ಳನೆ ನೋಡಲುಂ ನುಡಿಸಲುಮುಸದಳಮಾಗಿರ್ಪುದು ಸಾಜಮಿನಿತಾನುಂ ಬಿಜ್ಜಗಳ ಪೊಸಸಿರಿ ಮೊಗದೊಳ್ ಮಿಸುಗುತಿರ್ಕುಂ. ಈತೆಱದಿಂ ಪದದೊಳ್ ಪತಂಜಲಿಯುಂ, ವಾಕ್ಯದೊಳ್ ಜೈಮಿನಿಯುಂ, ಸ್ಮೃತೀತಿಹಾಸಪುರಾಣವೇದವೇದಾಂತಂಗಳೊಳ್ ವ್ಯಾಸನಂ ದೊರೆಗೊಂಡಖಿಲತತ್ವಂಗಳಂ ಕರತಲಾಮಲಕಮೆನೆ ತಿಳಿದು ತಿಳುಪಲೀಮಹಾಮಹಿಮನ ಮ್ಮೈಮೆಯಂ ಪೇೞ್ವುದೇಂ ? ಕಲಿಯೆಂಬ ಕರ್ಗಾಲದೊಳ್ ಕದಡಿದೆಲ್ಲಾಬಿಜ್ಜೆವೊೞೆಗಳುಮಿವನೆಂಬ ಶರತ್ಸಮಯಮಂ ಸಾರ್ದು ಕಲುಷಮಂ ಕಳೆದು ತಿಳಿಗುಂ. ಇವನಾಧಾರದಿಂದೀಧರೆಯಾಂಗಿರಸನ ಸಂಗತಿಯನಗ್ಗಳಿಸುವ ಸಗ್ಗದೇೞ್ಗೆಯಂ ತಱ್ಸಿರ್ಕುಂ. ಸರಸತಿಯುಮೀತನಂ ಸೇಱಿ ಸಿರಿಯರಸಿಯೊಳ್ ಬೇರಮಂ ಪರಿಹರಿಸಿ ಸಂತತಮುಂ ಸಂತಸದೊಳಿರ್ಕುಂ. ಶ್ರುತ್ಯಂತದೊಳ್ ಬಿತ್ತರಂಬಡೆದ ಮೂವತ್ತೆರಡುಂ ಬ್ರಹ್ಮವಿದ್ಯೆಗಳುಂ ಮುಂ ಪರಾಶರ ವ್ಯಾಸ ಶುಕ ಶೌನಕ ನಾಥ ಯಾಮುನ ರಾಮಾನುಜರೊಳೆರವಿಲ್ಲದೊಡವೆರದಿರ್ದಂತೆ ಇವನೊಳಂ ತಮ್ಮೊಳವಂ ತಿಳುಪಿ ನಂಬಿ ಸೊಗಂಬಡೆದಿರ್ಕುಂ. ಮಿಕ್ಕುದೇಂ ? ಬೆಳ್ಳಕ್ಕರಿಗರೊಳ್ ಸಿಲ್ಕಿ ಕಕ್ಕಸಂಬಡುವೆರಡುಂ ವೇದಾಂತಗಳುಮಿವನ ಸಂಗತಿಯಿಂ ಪೊಂಗಿ ಪೊಗ

ರ್ವಡೆದಿರ್ಕುಂ. ಇಂತಪ್ಪವರಂ ನೆನೆದೊಡಮೆಂತಪ್ಪೆಡರ್ಗಳುಂ ತೀರ್ಕುಂ; ಪೆಸರ್ಗೊಂಡೊಡಮೊಡಲ್ವಿಡಿದ ಪಾಪಮನಿತುಂ ಪೋಪುದು; ಕಂಡೊಡಂ ಕರೆಗಣ್ಮುವ ಕರಣಂಗಳ್ ಕೈಬಸಮಕ್ಕುಂ. ಆವಗಮೊಡನಾಡಿಯುಂ ನುಡಿ ಗೇಳಿಯುಂ ಬಿನಯಂಗೆಯ್ದುಂ ಬೇಟ್ಪುದನಿತ್ತುಂ ಮನ್ನಿಪರುನ್ನತಿಗೆ ಮಿತಿ ಯಾವುದು ? ಇವರ್ನೊಳ್ ಬಟುಸಂದೊಂದೊಂದೆ ದಿನಮೋದುಗಲ್ತೊಡಂ ಒದುಗಳೊಳಗುದಿಳಿದು, ಕಾಮಕ್ರೋಧಾದಿಗಳಂ ಕಳೆದು, ಸಂದೆಯಮಂ ಕೆಲಸಾರ್ಚಿ, ಕದುಬಂ ಕಡೆಗಣಿಸಿ ಕುಲಪತಿಗಳೆನಿಸುವರ್. ಇವರಂತಿ ರ್ಕೆ! ಮತ್ತಮೆಂತಪ್ಪ ದುರ್ದಾಂತರಾದೊಡಂ ದುರುಳರಾದೊಡಮವರ ಕಲ್ಲೆರ್ದೆಗಳುಂ ಸಸಿಯಂ ಕಂಡ ಸಸಿವಣಿಯಂತೆ ತಣ್ಪೇಱು ಕಱಂಗುಗುಂ. ತಮ್ಮ ಸಂಬಂಧದಿಂದಮೆ ಪೆಱರಂ ಬಸವಟುಸಿಯುಱುವುಗೆಡಿಪುದೇ ಸಾಜ ಮಾದ ದುರ್ಗುಣಂಗಳುಮಿವನತ್ತಣಿಂ ತಂತಮ್ಮ ಕಡುಪಂ ಕಳೆದು ಸದ್ಗು ಣಂಗಳೆನಿಕುಂ. ಅದೆಂತೆನೆ:—ಕಾಮಮುಂ ಅಲ್ಪಂಗಳುಮಸ್ಥಿರಂಗಳುಮೆ ನಿಸುವೈಹಿಕಾಮುಷ್ಮಿಕಫಲಭೋಗವಿಮುಖಮಾಗಿ ಭಗದ್ಗುಣಾನುಭವವಿ ಷಯುಮೆನಿಸಿ ಭಕ್ತಿಯೆನಿಪುದು। ಕ್ರೋಧಮುಂ ಜ್ಞಾತಿಸಾಮಂತಾದಿ ಗಳನುಬುದಂತರ್ಬಾಹ್ಯಕರಣಂಗಳೊಳ್ ಪೊಂಗುವ ಪೊಲ್ಲದ ನೆನಪಂ ಸಲ್ಲದ ನುಡಿನಡತೆಗಳುಮಂ ವಿಷಯಂಗೊಂಡು ವೈರಾಗ್ಯಮೆನಿಪುದು। ಲೋಭಮುಂ ಧನಧಾನ್ಯಾದಿಗಳನಲ್ಲಗಳೆದು ಸದೋಷರಪ್ಪ ಸಂಶ್ರಿತಜನ ವಿಷಯುಮಾಗಿ ವಾತ್ಸಲ್ಯಮೆನಿಪುದು। ಮೋಹಮುಂ ಪರಾವರತತ್ವಂಗಳ ನೆಲೆಯಿಂ ಕೆಲಸಾರ್ದು ಸ್ವಕೀಯಗುಣಗಣಮಾಹಾತ್ಮ್ಯಮಂ ಪತ್ತಿರ್ಪು ದಱಿಂ ಸೌಶೀಲ್ಯಮೆನಿಪುದು। ಮದಮುಂ ವಿದ್ಯಾಧನಾಭಿಜಾತ್ಯಾದಿಗಳಿಂ ದಲ್ಲದೆ ಭಗವದ್ಭಾಗವತ ಕೃಪಾಸಂಪನ್ನಮಾಗಿರ್ಪುದಱಿಂ ಭಗವನ್ಮಹಿ ಮಾನುಸಂಧಾನಮೆನಿಪ್ಪುದು। ಮಾತ್ಸರ್ಯಮುಂ ಭಗವದ್ವಿಷಯುದತ್ತಣಿಂ ಪೆಱತೆನಿಪ ಮಂತ್ರಸಾಧನದೇವತಾವಿಷಯುಮಾಗಿರ್ಪುದಱಿಂ ಸ್ವರೂಪ ಜ್ಞಾನಾಂತರ್ಗತಮಾಗಿರ್ಪುದು.

ಮತ್ತಮೀವೈಷ್ಣವೋತ್ತಮಂ ವ್ಯೆಮೆಯೊಳ್ ಪರಮೇಷ್ಠಿಸುತನೆಂಬ ಶ್ರೈಷ್ಠ್ಯದಿಂದಿದಿರ್ಚದ ವಸಿಷ್ಠನಿಂದಮೆ ಬ್ರಹ್ಮರ್ಷಿಯೆನಿಸಿ ಸಕಲವೇದಮಾತೆಯುಂ ಬ್ರಾಹ್ಮಣ್ಯಜನನಿಯುಮೆನಿಪ ಗಾಯತ್ರಿಗಧಿಕರ್ತನೆನಿಸಿ ತಾರಕಮಂತ್ರನಾಮಕ ಶ್ರೀರಾಮಚಂದ್ರಂಗೆ ಮಂತ್ರರಹಸ್ಯೋಪದೇಶದೇಶಿಕನೆನಿಸಿ ತನ್ನ ಗೋತ್ರಪತಿಯೆನಿಪ ಕೌಶಿಕನಂ, ಸದಾಚಾರದೊಳ್ ಯಜುಶ್ಶಾಖೋದಿತಸಕಲಶ್ರೌತಸ್ಮಾರ್ತಕರ್ಮಪ್ರಯೋಗಪದ್ಧತಿಯೊಳೇನಾನುಮೊಂದು ಶಂಕಾಕಳಂಕಂ ತೋಱಯುಮದನೌದಾಸೀನ್ಯಂಗೆಯ್ಯದೆ ಆರಯ್ದು ಪರಿಹರಿಸಿ ಸುಲಭಮಾಗಿಯುಂ ಸುವ್ಯಕ್ತಮಾಗಿಯುಂ ಪವಣ್ಗೊಳಿಸಿ ನಿಜಸೂತ್ರಕೃತ್ತೆನಿಸಿದ ಆಪಸ್ತಂಬನಂ, ತತ್ವಹಿತಪುರುಷಾರ್ಥನಿಶ್ಚಯದೊಳ್ ಶ್ರೀಹಸ್ತಿಗಿರಿನಾಥನಿಂದರ್ಥಪಂಚಕಂಗಳಂ ತಿಳಿದು ತಿರುಕುರುಂಗುಡಿನಂಬಿಗುಪದೇಶವಿತ್ತು ನಿಜದರ್ಶನಪ್ರವರ್ತಕನೆನಿಸಿದ ಶ್ರೀಭಾಷ್ಯಕಾರನಂ, ಸ್ವರೂಪಾನುರೂಪಪ್ರವೃತ್ತಿಯೊಳ್ ಪಿಂತಣ ಜನ್ಮದೊಳ್ ಶ್ರೀರಾಮಚಂದ್ರಂಗೆ ಸರ್ವದೇಶಸರ್ವಕಾಲಸರ್ವಾವಸ್ಥೋಚಿತಸರ್ವವಿಧಸೇವಾಸಾಮ್ರಾಜ್ಯದೀಕ್ಷಿತನೆನಿಸಿ ನೆಗಟ್ದ ರಾಮಾನುಜಾಚಾರ್ಯರ ಮನಂಬರ್ಪಂತೆ ಸಂತತಮುಂ ಮನೋವಾಕ್ಕಾಯಂಗಳಿಂ ಬೞಿಸಂದಾಳ್ಗೆಯ್ದುವನೊಲ್ಮೆಯಿಂ ಸ್ವಾನುವರ್ತನದ್ಯೋತಕ **ಬಾಲಧನ್ವಿ**ನಾಮಧೇಯಮುಂ ಪಡೆದ ನಿಜಕುಲಪತಿಯೆನಿಸುವ **ಎಳಿಯುವಿಲ್ಲಿಯಾರ್ಯ**ರುಮಂ ನೆರಂಗೊಂಡಿರ್ಪಂ.

ಈದೇಶಿಕನ ದೇಸೆಯುಂ ಭಾವಿಸೆ ಸೈಪು ರೂಪುವೆತ್ತಂತೆಯುಂ, ಧರ್ಮಂ ಬೇರ್ವಿಡಿಯ್ದುಳಿದಂತೆಯುಂ, ಸತ್ಯಂ ಮೊತ್ತಮಾದಂತೆಯುಂ, ವೈರಾಗ್ಯಮೊಗ್ಗುಗೊಂಡಂತೆಯುಂ, ಭಕ್ತಿಯೊತ್ತರಂಬೆರಸಿದಂತೆಯುಂ, ಬುದ್ಧಿ ಸನ್ನದ್ಧಮೆನಿಸಿದಂತೆಯುಂ, ಸತ್ವಂ ದೃಢಸತ್ವಮೊಂದಿದಂತೆಯುಂ, ಕ್ಷಮೆ ನಿಮಿರ್ದಂತೆಯುಂ, ಶಾಂತಿ ತಿಂತಿಣಿಸಿದಂತೆಯುಂ ತೋರ್ಕುಮೆಂದೆಣಿಸಿಯಾನಂದಂಬಡೆದಲರ್ದ ಕಣ್ಮಲರ್ಗಳಿಂದೊಸರ್ವ ಹರ್ಷಾಶ್ರುವುಂ

ಉಣ್ಮುವ ನವಿರುಂ ಕವಿವ ದಿಟ್ಟಿಯುಂ ಕಾತರಿಪ ಮನಮುಮಾಗಿರೆ **ಅಳಹಿಯ ಸಿಂಗರಾರ್ಯರು**ಮರಸನಂ ಪತ್ತಿಸಾರುತ್ತವನ ದಿವ್ಯತೇಜಸ್ಸನಾರಯ್ದು ಮುಂ ತಾಮಿತಿಹಾಸಪುರಾಣಂಗಳೊಳ್ ತಿಳಿದ ಪಲವುಂ ಪುರುಷರಂ ಮನದೆಗೊಂಡನದೆಂತೆನೆ :—

—ಪೂಜಾವಸರದಲ್ಲಿದ್ದ ದೊಡ್ಡದೇವರಾಜನ ವರ್ಣನೆ—

ಸತ್ಯಲೋಕದತ್ತಣಿಂದಿೞಿದು ಇಕ್ಷ್ವಾಕುಕುಲಪರಂಪರೆಯಿಂ ಪೂಜೆಗೊಂಡು ಕುಲಧನಮೆನಿಪ ಶ್ರೀರಂಗನಾಥನನಾರಾಧಿಪ ದಶರಥನೋ ! ಮತ್ತಮಾಸತ್ಯಲೋಕದಿಂದಮೆ ಸನತ್ಕುಮಾರನತ್ತಣಿಂ ಯಾದವಗಿರಿಯೊಳ್ನೆಲಸಿ ಯದುಕುಲಪರಂಪರೆಯಿಂ ಪೂಜೆಗೊಂಡ ಶ್ರೀಮನ್ನಾರಾಯಣನಂ ಪೂಜಿಸುವ ವಸುದೇವನೋ! ತನ್ನುತ್ತರವೇದಿಯೊಳುದಿಸಿದ ಕಾಂಚೀವರದರಾಜನಂ ಪೂಜಿಸುವ ರಾಜೀವಸಂಭವನೋ ! ರಾಜಸೂಯಸಭಾಮಧ್ಯದೊಳಚ್ಯುತಾರ್ಚನೆಯೊಡರ್ಚುವ ಧರ್ಮಪುತ್ರನೋ ! ಪ್ರಭಾಸದೊಳ್ವೈದಿಕಸುತರನಱಸುತ್ತೆ ಸಮುದ್ರಮಂ ಪೊಕ್ಕ ಚಕ್ರಾಯುಧನ ಪಾದಸಪರ್ಯೆಗೆಯ್ವ ವರುಣನೋ ! ಗೋವರ್ಧನೋದ್ಧರಣಾನಂತರಂ ಮುಂ ತಾಂ ಮುೞಿಗಱಿದ ಕಱಿಯಂ ಕಳೆಯಲೆೞ್ತಂದು ಮುಕುಂದಂಗೆ ವಂದನಂಗೆಯ್ವ ದೇವೇಂದ್ರನೋ ! ಆರಾಧನವಿಧಾನಮನಱಿಯದ ಜಗಕ್ಕಱಿಪಲೆಂದುತ್ತರಬದರಿಕಾಶ್ರಮದೊಳಿರ್ದೆಯ್ದುಳಿದು ತನ್ನಂ ತಾನೆಯಾರಾಧಿಸುವ ನಾರಾಯಣಶಿಷ್ಯನೆನಿಸುವ ನರಮುನಿಯೋ! ಎಂದಿಂತು ಪೊಣ್ಮುವ ಬಣ್ಣಿಗೆಗಳಿಂದಳವೞಿವ ಹೃದಯಮುಮಂ ಪದುಳಂಗೊಳಿಸಿ ಮತ್ತಮವನ ಚೆಲ್ವಂ ಕಂಡೊಲ್ವ ಚಿತ್ತದೊಳ್ಚಿಂತಿಸಿದಂ:—ಈಗಳಿವಂ ಗಿರಿಶನಂ ಗೆಲಲೆಳಸಿ ನೇಮಂಬೆರಸಿದ ಮನಸಿಜನಕ್ಕುಮಲ್ಲದೊಡೀಸೌಂದರ್ಯಮೆತ್ತಣದು ? ಮೇಣಾವಗಂ ಪರಿಪೂರ್ಣತೆವೆಱಲೆಂದು ತಪಕ್ಕೆ ಪೂಣ್ದ ಚಂದಿರನಕ್ಕುಮಲ್ಲದೊಡೀಕಳೆಯುಂ ಸೌಮ್ಯತೆಯುಮೆಲ್ಲಿಯದು ? ಬರಿಸಮನಿತುಂ ಬೆರಸಿರ್ಪೆನೆಂದು ನೋಂಪಿಗೆಯ್ವ ವಸಂತನಕ್ಕುಮಲ್ಲದೊಡೀ

ಸೌಗಂಧ್ಯಸೌಕುಮಾರ್ಯಂಗಳೀವಗೆಯುವೆಂದೆಣಿಸುತ್ತೆ, ಮತ್ತಮವನ ಧೀರೋದಾರಪ್ರಸನ್ನಾಕೃತಿಯನಾರಯ್ಯುತ್ತೆ—ಸಿರದತ್ತಣಿಂದೋರಣದೊಳೊಂದು ಕಿವಿಯಂ ಪತ್ತೆಸಾರ್ದು ಬೆಳ್ವಟ್ಟೆಯಿಂ ಕಟ್ಟುವಡೆದು ಬಟ್ಟೆತ್ತೆನಿಸಿ ಅಚ್ಚಪೊಚ್ಚ ಪೊಸಸೇವಂತಿಗೆಯೆಸಟ್ಸರದ ಸುತ್ತಿನಿಂದಿನಿಸುಂ ನಡುವಟ್ಟನುಱುದು ತಲೆಯೆಡೆಯುಂ ಬೆಳರ್ತಿಸುವೋರೆಸಿಕಿ ತನ್ನ ಕುಲದೇಟಿಗೆಯುಂ ನಿಟ್ಟಿಸಲ್ಕೆಱುತಂದ ಚಂದಿರನೆಂಬ ಸಂದೆಯುಮಂ ಸಮನಿಸುತ್ತಿದೆ। ಆ ಸಿಕಿಯೊಳ್ಕಟ್ಟಿದೊಳ್ವಟ್ಟೆಯು ಮೂಱುಂ ಸೆಱಂಗುಗಳೊಳ್ಕೋದು ನೇಲ್ವ ಬಟ್ಟಮುತ್ತುಗಳುಂ ಕಿವಿಯೊಳಿಟ್ಟ ಚೌಕುಳಿನಾವುಲಿಗಳುಮಿನಿಯನಂ ಬೞಸಂದು ವಂದ ತಾರಗೆವೆಣ್ಗಳೆಂಬ ನೆನಪಂ ನಿಗುರಿಸುತ್ತಿದೆ। ಪೊಂಬಲಗೆನೊಸಲೊಳ್ ಮಿಱುಪ ಪೆಱನಾಮತಿರುಚೂರ್ಣಂಗಳುಂ ಗೋವಿಂದ ನಡಿಯಿಂದಿೞವ ಗಂಗಾಪ್ರವಾಹವೇಗದಿಂ ಸಡಿಲ್ವ ಮುಡಿಯುಂ ವೃಡನನುಣ್ಮೊಗದೊಳ್ಪರಿದು ಪಣೆಗಣ್ಣ ಕೆಳಗಣ್ಗಿೞದು ನಾಸಿಕಾಧಾರದೊಳ್ನಿಂದ ಚಂದ್ರಕಲೆಯ ಸೊಬಗಂ ಸೂಚಿಸುತ್ತಿದೆ। ಕಡುನೀಳ್ದ ಕಣ್ಮಲರ್ಗಳ್ ಶತ್ರುಮಿತ್ರೋದಾಸೀನರೆನಿಪ ಮೂಱುಂ ತೆಱದ ದೊರೆಗಳ ರಾಜ್ಯಸಪ್ತಾಂಗದಿರವಂ ತನ್ನೊಳೋರೊರ್ವರಱಿಯದಂತೊಂದೊಂದೆಡೆಗೆ ಕಳುಪಿದ ಮೂಱು ಮೂಱುಂ ಬೇಹಿಗರಿಂ ಬೇಱವೇಱ ಕೇಳ್ದು ಕರತಲಾಮಲಕವಾಗಿ ತಿಳಿದಿರ್ದುಂ ತಣಿಯದಿರ್ಪರಸನಭಿಪ್ರಾಯಮಂ ತಿಳಿದು ಕಿವಿಗೊಂಡಿರ್ಪ ಭೂಮಂಡಲವೃತ್ತಾಂತಮನಿತುಮಂ ಸಾಕ್ಷಾತ್ಕರಿಸಲೆಳಸಿ ಕಿವಿಗಳಂ ಪುಗುವ ಸನ್ನಾಹಮಂ ಸಮನಿಸುತ್ತಿದೆ। ಆಕರ್ಣಾಂತ ವರೆಗಂ ನೀಳ್ದ ಕುಡುಪುರ್ವುಗಳವಂ ತಾವರೆಗೆತ್ತು ಸಾಲ್ಗೊಂಡೆಱಗಿದ ಬಂಡುಣಿವಿಂಡುಗಳೆಂಬ ಭಾವಮಂ ಬಗೆಗೊಳಿಸುತ್ತಿದೆ। ನಸುನೀಳ್ದ ಮಿಸುಪ ನಾಸಾವಂಶಂ ನಯನಾಮೃತಜಲಧಿಗಳೆರಡುಮೊಡ್ಡವೆರೆಯದಂತೆಡೆಯೊಳಿಟ್ಟಪೊಂಗಟ್ಟೆಯ ನೆಲೆಯುಂ ನೆಗೞ್ತೆಗೆಯ್ಯುತ್ತಿದೆ। ಪಿರಿದುಂ ಕಿಱಿದುಮಲ್ಲದೆಡತೆಱದೊಳ್ಮಿಱಿವ ಮೀಸೆಗಳ್ಮೊಗಸಸಿಯ ಕಱಗೆಱೆಯ ಸಿರಿಯಂ

ಸೆಜಿಽಗೊಳುತ್ತಿದೆ। ಒತ್ತಿ ಕತ್ತರಿಸಿದ ಪವಣ್ಬವರಿ ಯೌವನದ್ವಿರದವುದ ಧಾರೆಗಳ ಪಾಂಗಿನೊಳ್ ಕಂಗೊಳಿಸುತ್ತಿದೆ। ಮಂತ್ರಾಕ್ಷರೋಚ್ಚಾರಣ ದೊಳ್ನಸುಬಿರ್ಚಿದ ಬಾಯ್ದೆಜಽಯಿಂ ಪೊಜಸೂಸುವ ನೊಲ್ಲೆವಲ್ವೆಳಗು ಭಗೀರಥಾನುವರ್ತನದಿಂದೊಲ್ದು ಜನ್ಹುಮುನಿಯು ಮೊಗದಿಂದೊಗೆವ ಬಾಂ ಬೊಟಽಯು ಪೊಚ್ಚ ಪೊಸವೊನಲಂದವುಂ ಬಂದಿವಿಡಿಯುತ್ತಿದೆ। ಭಗ ವದ್ಗುಣಾನುಭವದಿಂ ಗದುಗದಂಗೊಂಬ ಗೆಜಽಗೊರಲ್ ನಿರ್ಮಲಮಾದ ಸ್ತುತಿವರ್ಣಂಗಳೆಂಬ ಪಾಲಂ ತುಂಬಿ ಮುಖಾಂಬುಜದಿಂ ಮಜಸಿ ಸಜ್ಜು ಗೆಯ್ದು ಭಗವನ್ಮಜ್ಜನಕ್ಕೆಂದಿರಿಸಿದ ಸಂಕೆಂಬ ಸಂಕೆಯುನಂಕುರಂಗೊಳಿ ಸುತ್ತಿದೆ। ಬಾಹುಮೂಲದೊಳ್ಪೊಳೆವ ಶಂಖಚಕ್ರಲಾಂಛನಂಗಳ್ ಮುಂ ಪರಶುರಾಮಂ ಕೈವಿಡಿದ ಕೈದುವಂ ತನ್ನಪರಾವತಾರವೆನಿಪ ರಾಮ ಚಂದ್ರನೊಳಿರಿಸಿ ಸೊಗದೊಳಿರ್ದಂತೀಗಳುಂ ಶ್ರೀಕೃಷ್ಣನುಂ ತಾಂ ಪೊತ್ತಿ ರ್ದ ಸಂಕುಪಾಱುಂಬಳಿಗಳನಿವನ ಭುಜಂಗಳೊಳಿರಿಸಿದನೆಂಬ ಭಾವನೆಯುಂ ಭಾವಿಸುತ್ತಿದೆ ! ಇಂತಿರ್ಪ ನಿಡುದೋಳ್ಗಳೆರಡುಂ ಪಲವಗಲುಂ ಪಾತಾಳ ದೊಳಿರ್ದು ಬೇಸರ್ಗಳೆಯಲೆಳಸಿ ಇಳಾತಳಮನಡರುತ್ತೆ ಗರುಡನಿಂದೇ ನಾನುಮೊಂದೆಡಜುದೋಜದಂತೆ ಶ್ರೀಕಾಂತನ ದಿವ್ಯಾಯುಧಮುದ್ರೆಯುಂ ಧರಿಸಿ ನಿರ್ಭಯದೊಳಾನಂದಂಬಡೆದಿರ್ಪ ಶೇಷವಾಸುಕಿಗಳ ಪೆರ್ಮೆಯುಂ ಪೆತ್ತಿದೆ। ಪೊತ್ತ ಪೆರ್ಮುತ್ತಿನೆಕ್ಕಾವಳಿ ತಿಸರ ಪಂಚಸರಂಗಳ ಬೆಳ್ಗದಿರ್ದೆ ರೆಗಳಂ ತೀವಿ ಯಂತರದೊಳ್ ಶ್ರೀಕಾಂತನಂ ತಾಳ್ದಿದ ಪೇರೆರ್ದೆ ಪಾಲ್ಗ ಡಲ ಬಿಡಯುಮಂ ವಿಡಂಬಿಸುತ್ತಿದೆ। ಪೊದೆದುಟ್ಟ ಬೆಳ್ವಟ್ಟೆಗಳೆರಡುಂ ಗುಣಂಗಳಂ ನುಂಗಿ ಪೊಂಗುವ ಸತ್ವದೇಟ್ಟರಮುಂ ಬಿತ್ತರಿಸುತ್ತಿದೆ। ಪದ್ಮಾಸನದೊಳಿರ್ಪುದಜಿಂ ಪೊಜಗಣ್ಗೆ ತೋರ್ಪೊಂದಡಿಯು ಪೆರ್ವೆರಲ ಪೆಜವೆರಲ್ಗಳ ಬಟ್ಟುಗುರ್ಗಳ್ ಮೊಗಸಿರಿಗೆ ನಿಂದಂತವುರಂಬೆರಸು ವಂದೆಜ ಗಿದ ಚಂದಿರನಂದದೊಳ್ ಬಗೆವರುತ್ತಿದೆ—ಎಂದೆಣಿಸುತ್ತೆ ಮತ್ತಮಿವಂ ಭಗವದಾರಾಧನವಿಧಿಗೆ ಮೊತ್ತಮೊದಲೆನಿಪ ಮಾನಸಪೂಜಾವಿಧಿಯೊಳಧಿ

ಕರಿಸಿ ಭಕ್ತಿಭರದಿಂ ನಸುಮಣಿದ ಸಿರದೊಳ್ಪೊತ್ತಂಜಲಿಹಸ್ತಮುಮರೆದೆಱಿದ ಕಣ್ಗಳುಮಲುಂಗದಂಗಂಗಳುಮಾಗಿರೆ ಈಯಿರವನರೆಗಳಿಗೆ ನಿಟ್ಟಿಸುತಿರ್ಪಿನಮನಿತಱಿೞಳೆ ಮಲರ್ವ ಮೊಗಮುಂ ಸೊಗದಾಲಿನೀರೊಗುವ ಕಣ್ಮಲರುಂ ಸೆಱೆವಿಗಿವ ಕೊರಲುಮುಣ್ಮುವ ನವಿರುಮಾದಿರವಂ ನಿರೂಪಿಸಿ ಆಯಿಂಗಿತಂಗಳಿಂ ಮಾನಸಾರಾಧನದೊಳಿನ್ನೆವರಮಾದುದೀನೀತಿಗಳಾಗುತಿರ್ಪುದೀಯಂಶವೆಂಬುದಂ ಸಂಶಯಮಿಲ್ಲದೆ ನಿರವಿಸಿದನದೆಂತೆನೆ :—

—ರಾಜನ ಮಾನಸಾರಾಧನ ಪ್ರಕಾರ—

ಮೊದಲೊಳ್ಪದಿನಾಲ್ಕುಂ ಜಗಂಗಳನವಱಂದಿಡಿಕಿಱಿದಜಾಂಡವುಮನದಱ ಪೊಱವಳಯದೊಳ್ತುಱನಾಯಿನೊಂದಱನೊಂದು ಪತ್ತುಂಮಡಿಯೆನಿಪ ಜಲಾದಿಪ್ರಕೃತ್ಯಂತಮಾದೇೞುಮಾವರಣಂಗಳುಮಂ । ಅವಱಂ ಮೇಗಣ್ಗೆ ಪರಮವ್ಯೋಮಮೆಂಬ ಪೆಸರಿಂದೆಸೆದು ನಾಲ್ಮೊಗಂ ಮೊದಲಾದವರ ನುಡಿಗಂ ನೋಟಕ್ಕಂ ನೆನಪಿಂಗಂ ನೀಟ್ಟದ ವೈಮೆದಳೆದ ವೈಕುಂಠಲೋಕಮುಮಂ । ಅಲ್ಲಿ ಚೆಲ್ವುವೆತ್ತು ಪಲವುಂ ರನ್ನವೊನ್ಗಳಿಂ ಸಮೆದು ತಳತಳಿಪುದಱಿಂದೀಯಗಲಮೀಯುದ್ದಮೀತೆಱನೆಂಬುದನಱಿಯಲರಿದಪ್ಪ ಪಲವುಂ ಪಾಗಲ್ಗಳಿಂ ಬಳಸುವಡೆದ ವೈಕುಂಠವೆಂಬ ದಿವ್ಯ ನಗರಮುಮಂ । ಅಲ್ಲಿಯಾವಗಂ ತಳಿರ್ತು ನನೆಯೀಱಿಯಲರ್ದು ಕಾಯ್ದುಳಿದು ಪಣ್ತು, ನಲಿದುಲಿವ ಕೋಗಿಲೆ ತುಂಬಿ ಗಿಳಿ ಪುರುಳಿ ಮೊದಲಾದುವಂ ಪೊರೆವ, ಪಲವುಂ ಕುಲದ ಪೆರ್ಮರಂಗಳಿಂದೆಸೆವ ಪಲವುಂ ಸಿಂಗರದೋಂಟಂಗಳುಮಂ। ಆನಡುವೆ ಕೆಂಬರಲ್ಪಚ್ಚೆ ಮುತ್ತು ಕರ್ಮಣಿಬಜ್ಜರಂಗಳಿಂ ಬೇಱಿವೇಱಿ ಸಮೆದ ನೆಲಗಟ್ಟುಗಳೊಳ್ಬೆಳೆದ ಮಂದಾರಪಾರಿಜಾತಾದಿ ಕಲ್ಪದ್ರುಮಂಗಳಿಂದುದಿರ್ದ ಕಮ್ಮಲರ್ಗಳಿಂ ಪೂವೆಟ್ಟುಗಳೆನಿಪ ಪಲವುಂ ಸಿಂಗರದೋಂಟವೆಟ್ಟುಗಳುಮಂ। ಅಲ್ಲಿಯೊಂದೆಡೆಯೊಳ್ಮೊಲ್ಲೆ ಮಲ್ಲಿಗೆ ಮೊದಲಾದ ಪೂಗೊಂಚಲ್ಗಳಿಂ, ಮತ್ತೊಂದೆಡೆಯೊಳ್ಸೀಗೆ ಮಾವು ಮೊದಲಾದ ತಳಿರ್ದೊಂಬೆಗಳಿಂ, ಮತ್ತೊಂದೆಡೆಯೊಳ್ ರನ್ನವೊನ್ಗಳಿಂ ಸಮೆದ ಸಜ್ಜೆವನೆ

ಗಳುಮಂ । ಆಕ್ರೀಡಾಶೈಲಂಗಳೊತ್ತಿನೊಳ್ಪಳಸಿದ ಪಳಿಕುವಲಗೆಯ ನೆಲ ಗಟ್ಟುಂ, ಪವಳ ಮುತ್ತುಗಳ ಪಾವಟಿಗೆಗಳುಂ, ಅಮರ್ದನಿಱಕೆಯ್ವ ತಣ್ಪಿಂ ಪು ಕಂಪುಗಳ್ತೀವಿದ ತಿಳಿನೀರುಂ, ಇಂಚರಂಗೆಯ್ವಂಚೆಕೊಂಚೆ ಮೊದಲಾದ ಪಲವುಂ ನೀರ್ವಕ್ಕಿಗಳುಂ ಮನಂಗೊಳೆ ತೊಳಪ ತಾವರೆನೆಯ್ದಿಲ್ಗೊಳಂಗಳು ಮಂ। ಇಂತೆಸೆವ ಪಟ್ಟಣದ ನಟ್ಟನಡುವೆಯಾವಗಂ ನೆಲಸಿರ್ಪರ್ಗಂ ಮುಪ್ಪೊ ಟ್ಟುಂ ಪೊಸಪೊಸತೆನಿಸಿಯಚ್ಚರಿವಡಿಸುವ ಸರ್ವಾಶ್ಚರ‍್ಯಮಯಮಾದರ ಮನೆಯುಮಂ। ಅಲ್ಲಿ ಪಲವುಂ ಬಣ್ಣದ ಪೊಂಬಟ್ಟೆಯ ಮೇಲ್ಕಟ್ಟುಂ, ಮುತ್ತಿ ನ ಲಂಬಣಂಗಳುಂ, ನೀಲದ ನೆಲೆಗಟ್ಟುಂ, ಪಲವುಂ ರನ್ನಗಂಬಂಗಳುಮಾಗಿ ಕಾಲತತ್ವಮುಳ್ಳನ್ನೆವರಮೆನಿಬರ್ಬಂದೊಡಮನಿಬರ್ಗಮಿಂಬಾಗಿ ಪೊಕ್ಕರ ಮನಮಂ ಗಳ್ಕನೆ ಸೊರ್ಕಿಪ ಪೇರೋಲಗದ ಸಾಸಿರ್ಗಂಬದ ಮಾಮಣಿಮಂಟ ಪಮುಮಂ । ಅಲ್ಲಿಯೆಲ್ಲೆಯಿಲ್ಲದಱವುಮಾರ್ಪುಮೈಸಿರಿಯುಂ ಬೀರಮುಂ ತೇಜಮುಂ ಸಫಲಮಪ್ಪಂತು ಪರಮಪದನಾಥನಡಿಯೂಱಗಮೆ ತಮಗೆ ಭೋಗಮೆಂದಿರ್ಪ ಪಲವುಂ ನಿತ್ಯಮುಕ್ತರ್ಗಳುಮಂ । ಶಂಖಚಕ್ರಗದಾಸಿ ಶಾಙ್ಗಾದ್ಯಾಯುಧಂಗಳಂ ತಂತಮ್ಮ ನೆತ್ತಿಯೊಳ್ಪೊತ್ತು ಭಯಮಿಲ್ಲದ ದೇಶಮಾದೊಡಂ ಭಕ್ತಿವಿಶೇಷದಿಂದಾವಗಂ ಸನ್ನದ್ಧಮಾಗಿರ್ಪ ಸುದರ್ಶನ ಪಾಂಚಜನ್ಯಾದಿ ದಿವ್ಯಾಯುಧಪುರುಷರ್ಗಳುಮಂ। ಆಳ್ದನೂಱಗಮನಿತು ಮಂ ತಾನೊರ್ವನೆ ಗೆಯ್ವ ಡಾವರದಿಂ ಪಟ್ಟವಣೆಯುಂ ಪಱವಿಗೆಯುಂ ತೇರುಂ ತೇಜಿಯುಂ ಬಿಜ್ಜಣಿಗೆಯುಂ ಮೇಲ್ಕಟ್ಟುಂ ಒಳ್ಗೆಳೆಯನುಮೂಱ ಗದವನುಮಾಗಿಯುಂ ತಣಿಯದೆ ಭಗವದ್ಗುಣಂಗಳನಿತುಮಂ ಕಾಣ್ಕೆಗೆ ಯ್ವ ಕೈಪಿಡಿಯಂತೆ ನಿರ್ಮಲಮಾಗಿ ವೇದಮಯಮಾದ ಪಕ್ಕಂದಳೆದಾ ಳಂದದೊಂದೊಡಲ್ವಿಡಿದಿದಿರೊಳ್ ಕೆಯ್ಮುಗಿದು ಸನ್ನದ್ಧನಾಗಿರ್ಪ ಗರುತ್ಮಂ ತನುಮಂ । ಆಳ್ದನಾರೋಗಿಸಿಯುಱಸಿದಮೃತಾನ್ನಮಂ ಸವಿವ ಬಲ್ಪಿಂದ ಮಂ ಪೊಱಸಿದುಭಯವಿಭೂತಿಯರಸುತನದ ಪೊಱೆಯುಂ ಪೊತ್ತು ತತ್ತ ದ್ವ್ಯಾಪಾರಂಗಳನಾಳ್ದನಿಂಗಿತಮಱದೆಸಗುವ ಸೇನಾನಿಯೆನಿಸಿಪ ವಿಷ್ವಕ್ಸೇ

ನರುವಂ । ಆನಟ್ಟನಡುವೆ ಧರ್ಮಾದಿಪೀಠವೆಸರ ಪಟ್ಟವಣೆಯ ಮೇಲೆ ವಿಮಲಾದಿಶಕ್ತಿಮಯಮಾದ ಪನ್ನೆರಡುಮೆಸೞ್ಗಳಿಂದೆಸೆವ ಪೊಂದಾವರೆಯ ದಿವ್ಯರತ್ನಮಯಕರ್ಣಿಕಾಗ್ರದೊಳ್ ಪುಷ್ಪಸಂಚಯವಿಚಿತ್ರಿತಮಾದ ದಿವ್ಯ ಯೋಗಪರ್ಯಂಕಮೆಂಬ ಪಾಸಿನೊಳ್ ಸಾಸಿರ್ವರ್ಚಂದಿರರನೊಂದುವೆರಸಿ ಕರುವಿಟ್ಟೆಱದಂತೆ ತಣ್ಬೊಗರ್ವೆತ್ತು ತನ್ನೊಳ್ಗುಣಂಗಳ್ಗೆ ಕಡೆಯಿಲ್ಲದುದಱಿಂದನಂತನೆಂದುಂ ಪಾಸುವುಡಿಸುವ ಪೊದಿಸುವ ಪಾವುಗೆಯಿಡುವ ಕೊಡೆವಿಡಿವುದು ಮೊದಲಾದೊೞಿಗಂಗಳೆ ಗೆಯ್ಮೆಯಾಗಿರ್ಪುದಱಿಂ ಶೇಷನೆಂದುಂ ನೆಗೞ್ತೆವೆತ್ತು ಮೆಲ್ಲಲರ್ಪೞ್ತಿಯಿಂ ತೀವಿದ ಪಾವೆಱಯನೆಂಬ ಮೆಲ್ವಾಸುಗೆಯುಮಂ ಭಾವಿಸಿದಂ. ಈಗಳಲ್ಲಿ ಮುಚ್ಚುಳ್ದೆಗೆದ ಬೆಳ್ಳಿಗರಡಿಗೆಯೊಳ್ ತಳತಳಿಪ ಪಟನುಡಿವೆಂಡಿರ ಪಚ್ಚೆಯ ತೊಂಡಲ್ವೆಚ್ಚದಂತೆಯುಂ ಸಿರಿಯರಸಿ ತನ್ನ ಕಣ್ಗೆ ಸಿಂಗರಿಸಲೆಂದೆತ್ತಿ ಮುತ್ತಿನ ಸಿಪ್ಪಿನೊಳ್ಪುದುಳಂಗೆಯ್ದ ಪೊಸವಗೆಯ ಪೊಳೆಪುವಡೆದ ಕಾಡಿಗೆಯಂತೆಯುಂ, ಪೊಡವಿವಡದಿ ತನ್ನೊಡಲ ಪಸದನಕ್ಕೆಂದು ಪಳಿಕುದಟ್ಟೆಯೊಳಿಟ್ಟ ಕತ್ತುರಿಯಣ್ಪಿನಂತೆಯುಂ, ಮಂಜುವೆಟ್ಟಿನ ತಪ್ಪಲೊಳೊಪ್ಪುವ ಸೊರ್ಕಾನೆಯಂತೆಯುಂ, ಅಲ್ಲಿಯಮರ್ದುವೞಿಗಱಿಯಲಿೞಿದ ಪೊಗರುಗುವ ಕಾರ್ಮುಗಿಲಂತೆಯುಂ, ಪಳಿಕಿನ ಜಗಲಿಯೊಳ್ಬೆಳೆದ ಕಲ್ಪವೃಕ್ಷದಂತೆಯುಂ ತೋರ್ಪ ಶೇಷಶೇಷಿಗಳ ಸಮುದಾಯಶೋಭೆಯಂ ಭಾವಿಸಿ-ಮತ್ತಮಲ್ಲಿ ಮುಗಿಲೊಳ್ಪೞಿಂಚುವ ಮಿಂಚುವಳ್ಳಿಗಳಂತೆಯುಂ, ಕರ್ಮಣಿವೆಟ್ಟನೊಳ್ಪೊಳೆವ ಪೊಂದಪ್ಪಲ್ಗಳಂತೆಯುಂ, ಬಾಮ್ಮರನಂ ನೆಮ್ಮಿದ ಪೊಂಜೆಳೆಗಳಂತೆಯುಂ, ಇರ್ಕೆಲದೊಳಿರ್ಪ ಶ್ರೀಭೂಮಿನೀಳೆಯರಿರವಂ ನಿರವಿಸಿ ಅವಯವಶೋಭೆಗಳಂ ಬೇಱವೇಱ ಭಾವಿಪೆನೆಂದು ಮುಂದುವರಿವಿನಂ, ಪೊನ್ನಂ ಪಸುರ್ವಣಿಯಂ ಕರ್ಮಣಿಯುಮಂ ಸಮಂಗೊಂಡು ಕರಗಿಸಿಯ್ಯಾತನಿರಸದಿಂ ತುಂಬಿದಂಬುಧಿಯತ್ತಣಿಂದುಜವಣಿಸಿ ಕವಿವ ತೆರೆಯ ತಿಂತಿಣಿಯಂತೆ ಮೇಲ್ವಾಯ್ವ ಪೊಗರ್ವೊೞಿಗಿದಿರ್ವಾಯ್ದುವೆನಿಸುವ ದಿಟ್ಟಿಗಳೊಳಗಂ ಪೊಱ

ಗುಂ ಪಸುರ್ವುಂ ಕರ್ಪುಂ ಪಳದಿಯುಮಾಗಿ ಪರಿಣಮಿಸಿದುದಱಿಂದಾವೆಡೆಯುಂ ನೋಡಿದೊಡಂ ಮೂವಣ್ಣಮಾಗಿ ಕಟ್ಟಲೆಗವಿದಿನಿಸುಂ ಪೊಟ್ಟು ತಡೆದು ನಿಲ್ವಿನಂ—ಅನಿತಱೊಳೆ ತಾಮಿರ್ವರುಂ ಕಟ್ಟೆಸಿರಿಯೊಳೊಸಗವಿಪ್ಪಾಗಳೆ ಮರುಳ್ಗೊಂಡು ತಮ್ಮನಗಲ್ದು ಪಲವುಂ ನಾಡೊಳ್ ಬವಣಿಗೊಂಡು ರೂಪುಂ ಪೆಸರುಮಱಿದಿರ್ದ ಕಂದನಾಮರುಳ್ಗೞಿದು ತನ್ನವರಂ ನೆನೆದುವಂದು ಮುಂದೆ ನಿಂದಿರೆ ಕಂಡ ತಾಯ್ತಂದೆಗಳ್ಮದದಿಂ ಕರಗಿದ ಮನಮುಂ ಕದುಬುವಂಗಮುಂ ಕವಿದ ದಿಟ್ಟಿಯುಂ ಗದುಗದಂಗೊಂಬ ಕೊರಲುಮಾಗಿ ನಟ್ಟಾಲಿಯುಲುಗದೆ ಕಟ್ಟೆಱಕದಿಂ ನಿಟ್ಟಿಸುವ ಶ್ರೀನಾರಾಯಣರ ಕಟಾಕ್ಷಾಮೃತರಸಾಸೇಚನದಿಂದಾಪ್ಯಾಯನಂಬಡೆದು ತನ್ನ ದಿಟ್ಟಿ ನಾಲಗೆ ಮೂಗು ತೊವಲ್ಕಿವಿಗಳೆಂಬ ಐದುಂ ಕರಣಂಗಳುಂ ಅಪ್ರಾಕೃತದಿವ್ಯಾದ್ಭುತರೂಪರಸಗಂಧಸ್ಪರ್ಶಶಬ್ದಗ್ರಹಣಂಗಳೊಳವ್ಯಗ್ರಮಾಗಿರೆಯಾ **ಪರಮಪದನಾಥ**ನ ಕೇಶಾದಿಪಾದಾಂತಮಾದ ದಿವ್ಯಾಂಗಸೌಂದರ್ಯಮಂ ತನ್ನಂತರಂಗದೊಳ್ ಚಿಂತಿಸಿದನದೆಂತೆನೆ :—

— ಪರಮಪದನಾಥನ ವರ್ಣನೆ —

ಸಿರಿಮೊಗದೊಳ್ಬೆಳಗು ಮೇಗಣ್ಗೆ ಪಾಯ್ದುದೆಂಬ ಸಂದೆಯಮಂ ಸಮನಿಸುತ್ತೆ ವಿಭೂತಿದ್ವಯದೊಡೆತನಮಂ ಚಾಡಿವೇೞ್ವ ರನ್ನದ ಮಗುಡಮುಮಂ। ನೋೞ್ಪರ ಕಣ್ಬಗೆಗಳ್ಗೆ ಮರ್ಬಂ ಕವಿಸಿ ತನ್ನಂತೆ ಸುೞಿಗೊಳಿಸುವ ಸುಕುರ್ಳಂಗುರುಳ್ಗಳುಮಂ। ಪೊಳೆಪುಂ ಮೆಲ್ಪುಮಾಗಿರ್ದುದಱಿಂ ನಸುಬೆಮರ್ದಂತಿರ್ಪ ಸಿರಿನೊಸಲುಮಂ। ಅರೆವೆಱೆಯೊಳ್ತುಂಬಿ ತುಳುಂಕುವಮರ್ದಿರ್ತರಡೊಳ್ಪೊನಲಿಟ್ಟಂತೆಸೆವ ವಿಮಲೋರ್ಧ್ವಪುಂಡ್ರಮುಮಂ। ಮೊಗಗನ್ನಡಿಯೊಳ್ಪಡಿನೆೞಲ್ಗೊಂಡ ಕೆಯ್ವಿಡಿದ ಶಾರ್ಙ್ಗದೆರಡುಂ ಕಡೆಗಳಂ ಕಡ್ಡೆಗಣ್ಚುವ ಕುಡುಪುರ್ಬುಗಳುಮಂ। ಕಡುನುಣ್ಪಿಂ ಪೊಳಪಂಬಡೆದು ಕರ್ಪುಂ ಬಳ್ಪುಮೇರ್ಪಟ್ಟಗಲ್ದು ನೀಳ್ದು ಕಡೆಯೊಳ್ಕೆಂಗಱಿಗೊಂಡ ಮೊಗಸಿರಿಯುಮಂ। ನೀರ್ಗೊಳೊಂದಕರ್ಗಿದು ಕೇಣಂ

ಗೊಂಡು ಪಡಿವೊಗದೊಳ್ಮಿಲಿವೆಳವಿಾನ್ಗಳಂತೆಸೆವ ಬಗಸೆಗಣ್ಗಳುವಂ। ಮೂವಡಿನಾಡೊಡೆತನದಿಂ ವ್ಯೆಮೆವೆತ್ತೆಡಬಲದ ಸಿರಿಪೊಡವಿವಡದಿಯರ ನೆಡವಿಡದೆ ನಿಟ್ಟಿಪುದಱಂ ನೇಹರಸದಿಂ ನನೆದು ಎಲ್ಲೆಡೆಯೊಳವೆಲ್ಲಾ ಪೊಟ್ಟುವೆಲ್ಲಾ ತೆಱದೊಳೆಲ್ಲೂಱಗಂಗೆಯ್ವ ಪಟಿಪೊಸಜೂಱಗದವ ರೊಳ್ವುಱುಕದಿಂ ತಣ್ಪೇಱು ಕವಿವ ಕರುಣಾವಲೋಕನಂಗಳುವಂ। ನಿ ಡುಗಣ್ಣಿಸಿವುಡುಗಳ ನಡುದೀವಿಯೊಳ್ಮೊಳೆತ ಕಲ್ಪಲತೆಯ ದಾಂಗುಡಿಯ ವೊಗರಂತೆಸೆವ ನಾಸಾವಂಶವುುವಂ। ಅದಱ ತಳಿರ್ದೊಂಬೆಗಳಂತಿರ್ಪ ಮೆಲ್ಗದಂಪುಗಳುವಂ। ಅದಱ ಪೊಸವುಲರಂತೆಸೆವ ನಸುನಗೆಯುುವಂ। ತನ್ನ ಪೊಗರಿಂ ನಿಟ್ಟಿಪರ ಕಣ್ಬಗೆಗಳಂ ರಾಗಸಾಗರದೊಳ್ಮುೞುಂಗಿಸುವ ಚೆಂಬಾಯ್ದೆಱೆಯುುವಂ। ಪೊಂಬೆಟ್ಟದತ್ತಣಿಂದೆಡಬಲವೆಟ್ಟುಗಳ್ಗಿೞಿವ ಬಾಂಬೊಱೆಯ ಪೊನಲ್ಗಳಂ ದೊರೆಗೊಂಡು ದಿವ್ಯರತ್ನಕಿರೀಟದತ್ತಣಿಂ ಕಂದಂಗಳೆಡೆಗಿೞಿತಂದ ಭುಜಕೀರ್ತಿಯ ಕಾಂತಿಪ್ರವಾಹದೊಳ್ಪೊಳೆದು ಸುೞಿಗೊಂಬ ಮಕರಂಗಳಂದದ ರನ್ನಗಿವಿವಚ್ಚಂಗಳುವಂ। ಪೊಳಪೊಳ್ಪು ತಣ್ಪಿಂಪುಗಳ್ತೀವಿರ್ಪುದಱಂ ತುಂಬುವೆಱೆಯಂ ಪೋಲ್ವ ಸಿರಿವೊಗವು ವಂ। ಒಳ್ನಿಲದೊಳ್ಪುಟ್ಟಿ ಪೊಣ್ಮಿ ಪೊಗರ್ವಡೆದೆಳಗೌಂಗಿನ ತೊಂಡೆಯಂ ಬೆಂಡುಗಳೆವ ಗೆಱೆಗೊರಲುವಂ। ತವ್ಮ ತಣ್ಣೆೞಲೊಳುಭಯವಿಭೂತಿಗಳ ನಿಂಬುಗೊಳಿಸಿ ಸೊಗಂಬಡಿಸಿ ದಿವ್ಯಾಯುಧಂಗಳೆಂಬ ಪೊಸೆವಗೆಯ ರಲ್ಗೊಂಚಲ್ಗಳಂ ತಾಳ್ದಿರ್ಪುದಱಂದಪ್ರಾಕೃತಕಲ್ಪಶಾಖೆಗಳಂ ಕೆಳೆಗೊಂಬ ನಿಡುದೋಳ್ಗಳುವಂ। ಪೊದೆದ ಪೊಂಬಟ್ಟೆಯ ಮೇಲ್ಕಟ್ಟಿಂ ಸಿರಿಗೊರಲ್ವ ಚ್ಚದೊಳ್ಪೊಲ್ವ ಮುತ್ತುರನ್ನದ ಲಂಬಣಂಗಳಿಂ, ಬಾವನ್ನದಣ್ಪಿನ ಮೆಲ್ವಾ ಸಿನಿಂ, ಎಳದೊಳಸಿದಂಡೆಯುುಯ್ಯಲಿಂ, ಕೌಸ್ತುಭಮಣಿದೀಪದಿಂದೆಸೆವ ಸಿರಿ ಯರಸಿಯ ಸಜ್ಜೆವನೆಯೆನಿಪ ಪೇರೆರ್ದೆಯುುವಂ। ಲಾವಣ್ಯಾಮೃತರಸಪ್ರ ವಾಹದೊಳ್ಕಟ್ಟಿದ ಕಟ್ಟೆಯೆನಿಪ ರನ್ನದ ಪೊಡೆಗಟ್ಟುವಂ। ಆಕಟ್ಟೆಯತ್ತಣಿಂ ಪೊಣ್ಮಿ ಪೊನಲಿಡುವ ಪರಿಕಾಲ್ಗಳೆನಿಪ ಯಜ್ಞೋಪವೀತವುುವಂ। ಆಲಾವ

ಣ್ಯಾಮೃತರಸಪ್ರವಾಹಮಿಟ್ಟಣಿಸಿ ಸುೞಿಗೊಂಡಂತಿರ್ಪ ಸಿರಿವೊರ್ಕುೞುಮಂ। ಶಂಖಚಕ್ರಂಗಳಂ ಚಂದ್ರಾದಿತ್ಯರ್ಗೆತ್ತಲರಲುಂ ಮುಗಿಯಲುಮಣ್ಮದರೆವಿರಿದ ಬಿದಿಯ ತಾಯ್ವನೆಯೆನಿಪ ಪೊಡೆದಾವರೆಯುಮಂ। ಕಂಡರಿಸಿದ ಪಸುರ್ವಣಿಗಂಬಂಗಳಂ ಪೋಲ್ವ ತೊಡೆಗಳಂ ಬಳಸಿ ಮುಸುಂಕುವುಡೆನೂಲ ಕೆಂಬರಲ್ಗಳ ಪೊಗರ್ದೆರೆಗಳಂ ನಗುವ ಚೆಂಬೊನ್ನುಡೆಯುಮಂ। ಸಂಕು ಬಳೆಗೈದು ಬಾಮ್ಮರ ಪೞವಿಗೆಯಂಕುಸ ಬಜ್ಜರಂಗಳಂ ತಾಳ್ದಲರ್ದ ಕೆಂದಾವರೆಗಳಂ ಪೋಲ್ವ ಚೆನ್ನಡಿಗಳುಮಂ-ಭಾವಿಸಿಯಾನಂದಭರಿತನಾಗಿ ರಾಯಂ ಕಂಡು, ಎಳಸಿಸು ತನ್ನ ಬಾೞ್ತಿಗೆಂದೇ ಪರ್ಚುಗೊಟ್ಟಿರ್ಪ ಮೊಲೆಯೊಳ್ಪಾಯಿಟ್ಟು ಪಾಲುಂಡು ತಣಿದು ಸೊರ್ಕುವಂತೆ, ಭಕ್ತಜನದ ಭಾಗಕ್ಕೆ ಬಂದ ಅಮೃತಸ್ಯಂದಿ ಪಾದಾರವಿದಂಗಳ್ಗೆಱಗಿ ; ಮುಂ ಕಡುವೇಸಗೆಯ ನಡುವಗಲೊಳ್ ನೀರೞ್ಕೆಯಿಂ ಗಳ್ಕನಡವಿವೊಕ್ಕಲ್ಲಿ ಸಿಂಗದುಲಿಗೇಳ್ದು ಬೆರ್ಚಿ ಬೀದಿವರಿದುರ್ಕಡಗಿ ಸೊರ್ಕೞಿದೆಲ್ಲಿಯುಂ ದಳ್ಳುರಿಗೊಂಡು ಚುರ್ಚುವ ಕಾೞ್ಕಿರ್ಚಿಂ ಬೆಂದು ನೊಂದು ಬಾಯ್ಮೊಗೊಣಗಿ ಬಸಿಱನೀರಂ ಬಯಲ್ಗೆ ಚೆಲ್ಲಿ ಬಱಿತು ಬಣ್ಣಂಗುಂದಿ ಬಸವೞಿದಿರ್ಪಾನೆ ಇನಿರಸಂ ತೀವಿ ತಣ್ಪುವಡೆದು ಕಂಪೇಱಿದ ತಾವರೆವಡುವಂ ಕಂಡೊಡನದಂ ಪೊಕ್ಕು ಮುೞುಂಗಿ ತೇಲ್ದು ತುೞುಂಕಿ ನೀರನೀಂಟಿ ಮೊಗದೊಳುಂ ಮೆಯ್ಯೊಳುಂ ಚೆಲ್ಲಿ ಚಲ್ಲಾಡುವಂತಿವನುಮಾಸಿರಿಯಡಿದಾವರೆಗಳಂ ಮುಡಿಯೊಳಮೆರಡುಂ ಕಣ್ಗೊಳಮೆರ್ದೆಯೊಳಂ ತಾಳ್ದಿತಾಳ್ದಿ ಸಕಲಸಾಂಸಾರಿಕ ದುಃಖಂಗಳಂ ಕಳೆದು; ಮತ್ತಂ ತಣಿಯದೆ ಮುಂ ಬತ್ತಿದ ಪೞಗೊಳದೊಳ್ಪವಣಿವರಿದು ಬಾಯೊಣಗಿಯೆಱಂಕೆಯಲುಂಕಿ ಬಳಸಿ ಬೆಳೆದ ಕೊಳವಳಿಕೆಗಾಡೊಳ್ಪಡಲ್ವಟ್ಟು ಮುಳ್ಮೊನೆಯೇಱಿನೊಳ್ಮೊಗಗೆಟ್ಟೊಱಲ್ವ ಪಱಿಮೆವಱ ತಿಳಿನೀರ್ಗೊಳದೊಳಲರ್ದ ತಾವರೆಯಂ ಕಂಡದಱಿಖೂಳ್ಪಂ ಡುಣಲೆಱಗಿ ನಸುವೊಗರ್ವೆರಸಿ ಪೆಂಪುವಡೆದ ತಣ್ಗಂಪಿನಿಂಪಂ ಸವಿದಾಷೊರ್ಕು ತಲೆಯೇಱಿ ಮೆಯ್ಮಱೆದು ಕಟ್ಟುವಡದಂತೆಯುಂ, ಕಾಸಿ ಬೆಚ್ಚಂ

ತೆಯುಂ, ಕೊರೆದು ಕೋದಂತೆಯುಂ, ಕೂಱುಗೊಂಡಂತೆಯುಂ, ಆಗೆದು ನಟ್ಟಂತೆಯುಂ, ಅಂಟುಗೊಳಿಸಿದಂತೆಯುಂ, ಬಿತ್ತಿದಂತೆಯುಂ, ಬೇರ್ವರಿದಂತೆಯುಂ ಮಗ್ನಮಾಗಿರ್ಪಂತುಟಾಮೆಲ್ಲಡಿಯೊಳ್ಗಂಪಂ ಸವಿವಿನಂ ; ಬಗೆನಾಯ್ಕೆಯ್ಗಳ್ ತಂತಮ್ಮ ಗೆಯ್ಮೆಗಳಂ ತಮ್ಮುಮಂ ಮಱೆಯೆ ಮರುಳ್ಗೊಂಡಂತೆಯುಂ, ಮಱವಟ್ಟಂತೆಯುಂ, ನಿದ್ರಿಸಿದಂತೆಯುಂ, ನೇಮಂಬೆರಸಿದಂತೆಯುಮೆಮೆಯಾಡದೆಯುಸಿರ್ವುಸಗದಂಗಮಲುಗದೆ ಕಡಲೊಳ್ನಡೆವಂಗೆ ನಡುಮಡುವಿನೊಳ್ನಾವೆಯೊಡೆದಂತೆ ಸಂತಸಗಡಲೊಳ್ ನಡೆವುದರ್ಕೆ ಸಾಧನಮಾದ ತಿಳಿವುಂ ಕೈದೆಗೆದುದಱಿಂದಾನಂದಸಾಗರದೊಳ್ಮುೞುಂಗಿ ಜೀವಾತ್ಮಪರಮಾತ್ಮಸಾಯುಜ್ಯಸಾಮ್ರಾಜ್ಯಮನನುಭವಿಸುತ್ತಿರ್ಪನೆಂದು ನಿರವಿಸುತ್ತಿರ್ಪಿನಂ ;

ಅರಸನಿನಿತುಂ ಪೊೞ್ತು ಮಱೆದೊಱಗಿದ ಮನಮೆೞ್ಚತ್ತುಮುಂ ಮಱವಟ್ಟ ಕೈಕಾಲ್ಗಳದೊಳ್ ನಸುಬೆಮರ್ತು ಕಿಱುನಡುಕಂಗೊಂಡು ನವಿರ್ದಳಿದ ಮೆಯ್ಯ್ಯಮಾಬಿಗುಪಂ ಸಡಿಲ್ಚಿ ಸೊಗದಾಲಿನೀರ್ಗಱೆದು ಮುಗುಳ್ದು ಕಣ್ಮಲರಲರ್ದುಂ ಇದಿರನೆಡಬಲಂಗಳಂ ತನ್ನುಮುಂ ನಿಟ್ಟಿಸಿಯುಚ್ಚರಿವಟ್ಟು ಈಗಳಾತ್ತಂ ನಿತ್ಯವಿಭೂತಿಯತ್ತಣಿಂ ಲೀಲಾವಿಭೂತಿಗಿೞಿದಂತೆಣಿಸುತ್ತಿರ್ಪಿನಂ—**ಈಯುಳಹಿಯ ಸಿಂಗರಾರ್ಯನುಂ** ಪ್ರಸನ್ನ ಮಧುರ ಗಂಭೀರಸ್ವರದಿಂದೆ—

ಶ್ಲೋಕಂ॥ ಆಯುರಾರೋಗ್ಯಪುತ್ರಾರ್ಥರಾಜ್ಯಬಂಧುಸಮೃದ್ಧಯಃ ।
ಭವಂತು ತೇ ಸದಾ ವಿಷ್ಣೋಃ ಪ್ರಸಾದಾದ್ರಂಗಶಾಯಿನಃ ॥

ಎಂದಾಶೀರ್ವಾದಿಪುದುಮಾದನಿಯುಂ ಕೇಳ್ದು ಮುಂಗಾರ ಮೊಬಗಂ ಕೇಳ್ದ ಸೋಗೆಯಂತೆ ಕಣ್ಮನಂಗಳಂ ಕವಿಸಿ ನೇಹಂಬೆರಸಿದ ಬಹುಮಾನದಿಂ ಸನಿಯದೊಳ್ಕುಳ್ಳಿರಿಸೆ ಕಣ್ಮನಂಗಳ್ಗೆ ಸೊಗಂಬೆರೆದಚ್ಚರಿಯುಂ ಸೂಱೆಗುಡುತ್ತೆ ಸಿರಿಯರಸನಡಿದಾವರೆಗಳಂ ಪೂಜಿಸುವೆಡೆಯೊಳ್ ರಾಜನ ಭಾವಶುದ್ಧಿಯಂ ಭಾವಿಸಿ ತನ್ನೊಳಾಲೋಚಿಸಿದಂ :—

ಲೋಕದೊಳ್ ದುಷ್ಕೃತಿಗಳೊಳ್ ಕೆಲರ್ ಪರಲೋಕಮಿಲ್ಲೆಂದುಂ, ಕೆಲರ್ ವೇದವಿರುದ್ಧಾಗಮೋದಿತಾಚಾರಮದರ್ಕೆ ಸಾಧನಮೆಂದುಂ; ಕೆಲರ್ ವೈದಿಕಕರ್ಮಫಲಪ್ರದರ್ ದೇವತಾಂತರಂಗಳೆಂದುಂ, ಕೆಲರ್ ದೇವತಾನಿರಪೇಕ್ಷಮಾದ ಕರ್ಮದಿಂದಮೇ ಫಲಮೆಂದುಂ ನಿರವಿಸಿ ಕೆಡುವರ್ । ಸುಕೃತಿಗಳೊಳಂ ಕೆಲರ್ ಭಗವದಾರಾಧನಮೆ ಇಷ್ಟಸಾಧನಮೆಂದು ತಿಳಿದದನಾಚರಿಸಿಯುಂ, ತಮ್ಮಂ ಪಡೆದು ಬಳೆಯಿಸಿ ಪೊರೆದು ಬಿಜ್ಜೆಗಲಿಸಿ ಬುದ್ಧಿವೇಳ್ವ ತಂದೆಗೇನಾನುಮೊಂದೂಟಿಗಂಗೆಯ್ದಲಿಸಿಯದರ್ಕೆ ಕೂಲಿಗೊಂಬೆಡೆಯೊಳಂ ತಮ್ಮ ಹಿತಮನವನ ಪ್ರಿಯಮುಮನಱಿಯದೆ ಕಳವಿನೊಳಂ ಜೂದಿನೊಳಂ ಸೊರ್ಕಿನೊಳಂ ಬಾಟಿಸ್ವೆಂದು ಕೇಳ್ವ ಕಳ್ಳವರರಂತೈಹಿಕಾಮುಷ್ಮಿಕ ಫಲಮಂ ಬಯಸುವರ್ । ಕೆಲರ್ ತಮ್ಮಂ ಕೈವಿಡಿದು ತನ್ನೊಳ್ಪೊಡಮೆಯೆಂದು ಮರೆಮೊಯ್ಯೆಂದುಂ ಬಗೆದು ಕಾಪಿಟ್ಟು ಸಲಪಿ ಸರ್ವಸ್ವಮನಿತ್ತು ಸಂತತಮುಂ ಸಂತಸಂಗೊಳಿಪ ನಿಜಪತಿಗೆ ತಾಂ ಗೆಯ್ವ ಮನೆವಾೞ್ತೆ ಸಜ್ಜೆಯೂಟಿಗಂ ಮೊದಲಾದುದಂ ಗಣನೆಗೊಂಡು ಪೊಟ್ಟಱ ಪಣಮಂ ಕೇಳ್ವ ಕಾಟಿಸ್ವಂಡಿರಂತೆ ತಮ್ಮ ಕರ್ಮಜ್ಞಾನಭಕ್ತಿಗಳ್ಗೆ ಫಲಮಾಗಿ ಮುಕ್ತಿಯಂ ಬಯಸುವರ್ । ಈರಾಯನವರಂತಲ್ಲದೆ ತನ್ನಾಳ್ದರ ನೆಲೆಯಂ ತನ್ನದುಮಂ ತಿಳಿದಿರ್ಪುದಱಂ ನಾರಾಯಣಂ ತನ್ನಾಳ್ಗಳಪ್ಪೆಮ್ಮೊಳ್ಜೀವಮಿಲ್ಲದ ನೇಹಂಬೆರಸಿ ಎಳಸಿಸುವಿನೆಡಱಂ ತೀರ್ಚಲ್ಕೆಂದೌಷಧಿಗುಡಿವ ತಾಯಂತೆ ತಾನಿತ್ತ ಕರಣಕಳೇಬರಂಗಳಿಂ ತಾನಿತ್ತ ಪೂಜೋಪಕರಣಂಗಳಿಂ ತನ್ನಂ ತಾನೆ ಪೂಜೆಗೆಯ್ವನೆಂದು ತನ್ನ ಸ್ವರೂಪಪಾರತಂತ್ರ್ಯಮಂ ತಿಳಿದು ನಿರ್ಭಯನಾಗಿರ್ಪಂ । ಈನೆಲೆ ಸತ್ಸಹವಾಸದಿಂದೆಯುಂ ಸದಾಚಾರ್ಯಸಮಾಶ್ರಯಣದಿಂದೆಯುಂ ಗುರುಕುಲವಾಸದಿಂದೆಯುಂ ಭಗವತ್ಕಟಾಕ್ಷದಿಂದೆಯುಂ ದೊರೆಕೊಳ್ವುದಲ್ಲದೆ ಬಱಿಯೋದುಗಲ್ವ ಬಲ್ಮೆಯಿಂ ಸಮನಿಸದು । ಈಶೇಷತ್ವ ಪಾರತಂತ್ರ್ಯಂಗಳಂ ತಿಳಿವುದೆ ಸಕಲವೇದಾಂತಜ್ಞಾನಮುಂ ಮೂಲಮಂತ್ರಾರ್ಥತತ್ವಮುಂ ಮಂತ್ರರತ್ನ ತಾತ್ಪರ್ಯ

ಮುಂ ಚರಮಶ್ಲೋಕಾರ್ಥನಿಷ್ಕರ್ಷಮುಮೆನಿಸಿರ್ಕುಂ। ಇದನೆ ದಿವ್ಯಸೂರಿಗಳ್ ತಮ್ಮ ದಿವ್ಯಪ್ರಬಂಧಂಗಳಿಂ ಪಲವಗೆಯಿಂ ನಿರವಿಸುವರ್। ನಾಥಯಾಮುನ ಯತಿವರಾದಿಗಳಿದನೆ ತಂತಮ್ಮಡಿಗಳಂ ಪೊರ್ದಿದ ಶಿಷ್ಯರ್ಗುಪದೇಶಂಗುಡುವರ್। ಇವನಿರವಂ ನಿರವಿಸೆ ಮುಂ ಕೊಲ್ಲಿನಗರದೊಳುದಿಸಿದ ಕುಲಶೇಖರನಂ ನೆನೆಯಿಸುವನೆಂದು ಮನದೊಳಾನಂದಂಬಡೆಯುತ್ತಿರ್ಪನಂ—

ರಾಯನುಂ ಮಂತ್ರಸ್ನಾನಾಲಂಕಾರಭೋಜ್ಯಾಸನಂಗಳೊಳ್ ತತ್ತದುಚಿತ ಭಗವದುಪಚಾರಂಗಳಿಂದಾರಾಧನಮಂ ನೆಗಳ್ಚಿ ತೀರ್ಥಪ್ರಸಾದಂಗೊಂಡು ಕೃತಾರ್ಥನೆನಿಸಿ ಮತ್ತಂ ಭಗವದ್ಗುಣಾನುಭವಕ್ಕೆಳಸಿ ಅಳಹಿಯಸಿಂಗರಾರ್ಯರಂ ನೋಡಿ ಸ್ಮೃತೀತಿಹಾಸಪುರಾಣಂಗಳೊಳ್ಭಗವದ್ವೈಭವಮಂ ಸಂಶಯವಿಪರ್ಯಯಮಿಲ್ಲದಂತೆ ಸೊಲ್ಲಿಸುವೊಂದಂಶಮಂ ಪೇಳ್ವೇಳ್ಕುಮೆಂಬುದುಮದರ್ಕವರ್ ಪೆರ್ಕಳಂಗೊಂಡು ಗುರುಪರಂಪರೆಯಂ ನೆನೆದುಪಕ್ರಮಿಸಿ ತಿಳುಪಿದರದೆಂತೆನೆ :—

— ಭಗವದ್ವೈಭವ ವಿವರಣಂ —

ಶ್ರಿಯಃಪತಿಯುಮವಾಪ್ತಸಮಸ್ತಕಾಮನುಮಖಿಲಹೇಯಪ್ರತ್ಯನೀಕನುಂ ಸಮಸ್ತಕಲ್ಯಾಣಗುಣಾಶ್ರಯನುಮಪ್ಪ ಶ್ರೀಮನ್ನಾರಾಯಣಂ ಬ್ರಹ್ಮಾದಿದೇವತೆಗಳಂ ಮನುಷ್ಯರುಮಂ ಸೃಜಿಸಿಯವರ್ಗೆ ಹಿತಾಹಿತಂ ತಿಳಿವುದರ್ಕೆ ನಾಲ್ಕುಂ ವೇದಂಗಳನುಪದೇಶಂಗೆಯ್ದು ಆವೇದಾರ್ಥಮಂ ವ್ಯಕ್ತಮಾಗಿ ತಿಳಿವುದರ್ಕೆ ಸ್ಮೃತೀತಿಹಾಸಪುರಾಣಂಗಳಂ ನಿರವಿಸಿದಂ. ಅವಱೊಳ್ ಸ್ಮೃತಿಗಳ್ ಭಗವದಾರಾಧನರೂಪಮಾದ ವರ್ಣಾಶ್ರಮೋಚಿತಕರ್ಮಂಗಳಂ ವಿಧಿಸುವ ವೇದಂಗಳ ಪೂರ್ವಭಾಗದರ್ಥಮಂ ತಿಳಿಸುವುವು. ಇತಿಹಾಸಪುರಾಣಂಗಳೆರಡುಂ ಭಗವತ್ಸ್ವರೂಪ ರೂಪ ಗುಣ ವಿಭವೈಶ್ವರ್ಯಂಗಳಂ ಪ್ರತಿಪಾದಿಸುವ ವೇದಾಂತಂಗಳ ತತ್ತ್ವಾರ್ಥಮಂ ವ್ಯಕ್ತಮಾಗಿ ತಿಳಿಸುವುವು. ಈಯೆರಡಱೊಳಂ—

ಶ್ಲೋ॥ ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್॥ ಎಂಬ ವಚನದೊಳಿತಿಹಾಸಮುಂ ಮೊದಲ್ಪೇೞ್ದುದಱಿಂದಿದೆ ಮುಖ್ಯಮಾಗಿರ್ಕುಂ. ಇತಿಹಾಸಂಗಳೊಳಂ ದ್ವಾಪರಾಂತದೊಳ್ ವೇದೋದ್ಧರಣಾರ್ಥಮಾಗಿ ಶ್ರೀಮನ್ನಾರಾಯಣಾಂಶದಿಂದುದಿಸಿದ ವೇದವ್ಯಾಸರ್ ಸಕಲ ವೇದಶಾಸ್ತ್ರಾರ್ಥಂಗಳನಾರಯ್ದು ತಾಂ ತಿಳಿದ ಪಲವುಂ ತತ್ವಾರ್ಥಮುಂ ಲೋಕಹಿತಾರ್ಥಮಾಗಿ ಪವಣ್ಗೊಳಿಸಿದುದಱಿಂದೀ ಮಹಾಭಾರತಮೆ ಪ್ರಬಲಮಾಗಿರ್ಕುಂ. ಇದಱೊಳುಂ ಭಗವದ್ವಿಷಯಮನೇ ಪ್ರತಿಪಾದಿಪುದಱಿಂ ಶ್ರೀವಿಷ್ಣುಸಹಸ್ರನಾಮಮುಂ ಮೋಕ್ಷಧರ್ಮಮುಂ ಭಗವದ್ಗೀತೆಯುಮುತ್ತಮಂಗಳಾಗಿರ್ಪುವು. ಇವಱೊಳ್ ವಿಷ್ಣುಸಹಸ್ರನಾಮಂ ಭಗವದಾರಾಧನಜಪಾದ್ಯುಪಯೋಗಮಾಗಿರ್ದೊಡಮದಱಿಂ ತತ್ವಹಿತಪುರುಷಾರ್ಥಂಗಳಂ ತಿಳಿವುದರಿದಾಗಿರ್ಕುಂ. ಮೋಕ್ಷಧರ್ಮಂ ಸಕಲಾರ್ಥಪ್ರತಿಪಾದಕಮಾಗಿರ್ಕುಮಾದೊಡಮೀಭಗವದ್ಗೀತೆ—

— ಭಗವದ್ಗೀತೆಯ ಮಾಹಾತ್ಮ್ಯಂ —

ಶ್ಲೋ॥ ಗೀತಾಸು ಗೀತಾಃ ಕರ್ತವ್ಯಾಃ ಕಿಮನ್ಯೈಶ್ಶಾಸ್ತ್ರಸಂಗ್ರಹೈಃ।
ಯಾಸ್ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಸ್ಸೃತಾಃ॥

ಎಂಬ ಮರ್ಯಾದೆಯಿಂ ಶ್ರೀಕೃಷ್ಣನ ದಿವ್ಯಮುಖಾರವಿಂದೋದ್ಭವಮಾಗಿರ್ಪುದಱಿಂ ಸರ್ವೋತ್ಕೃಷ್ಟಮೆನಿಪುದು. ಆದಱಿಂದಿದಂ ಸಕಲವೈದಿಕರುಂ ಉಪನಿಷತ್ತೆಂದು ಪೇೞ್ವರ್. ತದ್ವ್ಯಾಖ್ಯಾತೃಗಳುಂ ಮೂವತ್ತೆರಡುಮುಪನಿಷತ್ತುಗಳೊಡನಿದನುಂ ವ್ಯಾಖ್ಯಾನಂಗೆಯ್ದರ್—ಎಂದದಱ ಮಹಾತ್ಮ್ಯಮನುಪಪಾದಿಸಿ ಪದಿನೆಂಟುಮಧ್ಯಾಯಂಗಳನೋದಿಯದಱೊಳ್ ಶ್ಲೋಕಂಗಳೇೞುಂ ನೂಱಕ್ಕಂ ಪ್ರತಿಶ್ಲೋಕದರ್ಥಮುಂ ಪೇೞ್ವುದುಂ—

ಆದರದೊಳ್ ಕೇಳ್ದರಸನುಂ ಅಖಿಲತತ್ವಾರ್ಥಂಗಳಂ ಕರತಲಾಮಳಕಮಾಗಿ ತಿಳಿದು ತಿಳಿದರ್ಥಂಗಳಿಂದುಂ ಮಱಿಯದಂತೆಲ್ಲಮುಂ

ಸಂಗ್ರಹಿಸಿ ಪೇೞಲ್ವೇೞ್ಕುಮೆಂದು ಬೆಸಗೊಳ್ವುದುಮಿವರುಂ—

ಶ್ಲೋ॥ ಯುಕ್ತಂ ಹಿ ವಿದುಷಾಂ ಲೋಕೇ ಸಮಾಸವ್ಯಾಸಧಾರಣಂ ॥

ಎಂಬ ತೆಱದಿಂ ವಿಸ್ತರಮಾಗಿ ಕೇಳ್ದರ್ಥಮಂ ಸಂಕ್ಷೇಪಮಾಗಿಯುಂ ಕೇಳ್ದೊಡೆ ಮಱವುದೋಱದೆ ನೆನೆಪಾಗಿರ್ಕುಮೆಂದು ಮನಮೊಲ್ದು ಪದಿನೆಂಟಧ್ಯಾಯಕ್ಕಮೊಂದು ಸಮುದಾಯಾರ್ಥಮುಮಂ ಆಱುಮಾಱುಮಧ್ಯಾಯಂಗಳ್ಗೊಂದೊಂದರ್ಥಮಾಗಿ ಮೂಱುಂ ಷಟ್ಕಾರ್ಥಂಗಳುಮಂ ಒಂದೊಂದಧ್ಯಾಯಕ್ಕೊಂದೊಂದರ್ಥಮಾಗಿ ಪದಿನೆಂಟುಮಧ್ಯಾಯಾರ್ಥಂಗಳುಮಂ ಸಂಗ್ರಹಿಸಿ ಸುಲಭಮಾಗಿಯುಂ ಸುವ್ಯಕ್ತಮಾಗಿಯುಂ ತಿಳುಪಿದರದೆಂತೆನೆ :—

— ಭಗವದ್ಗೀತೆಯ ಸಮುದಾಯಾರ್ಥಂ —

ತಂತಮ್ಮ ವರ್ಣಾಶ್ರಮೋಚಿತಮಾಗಿ ವೈರಾಗ್ಯಂಬೆರಸಿದ ಕರ್ಮಜ್ಞಾನಂಗಳಿಂ ಬಳೆದ ಭಕ್ತಿಗಂ ವಿಷಯಮಾದ ಪರಬ್ರಹ್ಮಂ ಶ್ರೀಮನ್ನಾರಾಯಣನೆಂಬುದು ಸಮುದಾಯಾರ್ಥಂ ।

— ಷಟ್ಕಾರ್ಥಂಗಳ್ —

ಜ್ಞಾನಕರ್ಮಂಗಳೆರಡುಂ ಯೋಗಾಭ್ಯಾಸದೊಡಗೂಡಿ ಆತ್ಮಸಾಕ್ಷಾತ್ಕಾರಸಾಧನಮಾಗಿರ್ಪುದೆಂಬುದಂ ಮೊದಲ ಆಱುಮಧ್ಯಾಯದೊಳ್ಪೇೞ್ವುದು। ಜ್ಞಾನಕರ್ಮಂಗಳಿಂದುದಿಸಿದ ಭಕ್ತಿಯೋಗದಿಂ ಪರಮಾತ್ಮತತ್ವಜ್ಞಾನಂ ಪುಟ್ಟುವುದೆಂಬುದನೆರಡನೆಯ ಆಱುಮಧ್ಯಾಯದೊಳ್ಪೇೞ್ವುದು। ಪ್ರಕೃತಿಜೀವಾತ್ಮಪರಮಾತ್ಮಸ್ವರೂಪಮಂ ಕರ್ಮಜ್ಞಾನಭಕ್ತಿಗಳ ಸ್ವರೂಪಮುಮಂ ಕಡೆಯಾಱುಮಧ್ಯಾಯದೊಳ್ಪೇೞ್ವುದು ।

— ಪ್ರತ್ಯಧ್ಯಾಯದ ಸಂಗ್ರಹಾರ್ಥಂ —

ಎರಡು ದಳಕ್ಕಂ ಪುಯ್ಯಲಡಸಿರುವ ಸಮಯದೊಳ್ ಬಂಧುಸ್ನೇಹಮುಂ ಕಾರುಣ್ಯಮುಂ ಸ್ವಜಾತಿಧರ್ಮಮಾದ ಯುದ್ಧದೊಳಧರ್ಮಬುದ್ಧಿಯುಂ ಪುಟ್ಟೆಯರ್ಜುನಂ ವ್ಯಾಕುಲಚಿತ್ತನಾದನೆಂಬುದಂ ಮೊ

ದಲಧ್ಯಾಯದೊಳಂ। ಇಂತು ಶೋಕಾವಿಷ್ಟನಾಗಿ ತನ್ನಡಿಗೆಱಗಿದರ್ಜುನಂ ಗನಿತ್ಯಮಾದ ಶರೀರಾದಿಗಳತ್ತಣಿಂ ಬೇಱಾಗಿ ನಿತ್ಯಮಾದ ಜೀವಾತ್ಮನಂ ತಿಳಿವ ಸಾಂಖ್ಯಮೆಂಬ ಬುದ್ಧಿಯುಂ ಫಲಸಂಗಕರ್ತೃತ್ವರಹಿತಮಾದ ಕರ್ಮಸ್ವರೂಪಮಂ ತಿಳಿವ ಯೋಗಮೆಂಬ ಬುದ್ಧಿಯುಮಾತ್ಮಾವಲೋಕನ ಸಾಧನಮಾದ ಸ್ಥಿರಬುದ್ಧಿಯುಂ ಪುಟ್ಟಿಪುವೆಂಬುದನೆರಡನೆಯ ಅಧ್ಯಾಯದೊಳಂ। ಈಕರ್ಮದಿಂದೀಫಲಮಂ ಸಾಧಿಪೆನೆಂಬ ಫಲಾಪೇಕ್ಷೆಯುಂ ಈಕರ್ಮಮೆನಗೆ ಫಲಮಂ ಸಾಧಿಪುದಱಿಂದೆನ್ನದೆಂಬ ಸಂಗಮುಮನೀಕರ್ಮಮನಾನೆಸಗುವೆನೆಂಬ ಕರ್ತೃತ್ವಮುಮಂ ಕಳೆದು ಸತ್ವರಜಸ್ತಮೋಗುಣಂಗಳ್ ತಂತಮ್ಮ ಸ್ವರೂಪಕ್ಕನುಗುಣಮಾದ ಕರ್ಮಂಗಳಂ ಗೆಯ್ಸುವುವೆಂದಾದೊಡಂ ಕರಣಕಳೇಬರಂಗಳನಿತ್ತು ಪರಮಾತ್ಮನೆ ಗೆಯ್ಸುವನೆಂದಾದೊಡಂ ತಿಳಿದು ಕರ್ಮಮನಾಚರಿಸಲ್ವೇಟ್ಪುದೆಂಬುದಂ ಮೂಱನೆಯ ಅಧ್ಯಾಯದೊಳಂ। ಈಕರ್ಮಯೋಗದೊಳ್ ಜ್ಞಾನಮುಂ ಬೆರಸಿರ್ಪುದೆಂಬುದಂ ಈಕರ್ಮಭೇದಂಗಳುಮಂ ಅದಱೊಳ್ ಜ್ಞಾನಾಂಶಮೆ ಪ್ರಧಾನಮೆಂಬುದಂ ಈಕರ್ಮಾರಾಧ್ಯನಪ್ಪ ಶ್ರೀಮನ್ನಾರಾಯಣನ ಅವತಾರ ರಹಸ್ಯಂಗಳುಮಂ ನಾಲ್ಕನೆಯ ಅಧ್ಯಾಯದೊಳಂ। ಈಕರ್ಮಯೋಗಮನಾಚರಿಪುದು ಸುಲಭಮೆಂದುಮಿದಱಿಂ ಶೀಘ್ರಂ ಫಲಂ ಸಿದ್ಧಿಯಪ್ಪುದೆಂದುಂ ಇದಱ ಭೇದಂಗಳುಮನೈದನೆಯ ಅಧ್ಯಾಯದೊಳಂ। ಯೋಗಾಭ್ಯಾಸಪ್ರಕಾರಮಂ 'ನಾಲ್ಕುಂ ತೆಱನಾದ ಯೋಗಿಗಳ ಭೇದಮುಮಂ ಯೋಗಸಾಧನಂಗಳುಮಂ ಯೋಗಸಿದ್ಧಿಯುಮಂ ಪಲವುಂ ತೆಱದ ಯೋಗಿಗಳತ್ತಣಿಂ ಪರಮಾತ್ಮೋಪಾಸಕನಾದ ಯೋಗಿಯೆ ಮುಖ್ಯನೆಂಬುದುಮನಾಱನೆಯ ಅಧ್ಯಾಯದೊಳಂ। ಪರಮಪುರುಷನ ಮಹಿಮೆಯುಂ ಜೀವಾತ್ಮಂಗೆ ಪ್ರಕೃತಿಬಂಧದಿಂದಾಮಹಿಮೆ ತಿಳಿಯದಿರ್ಪ ತೆಱನಂ ಆ ಪ್ರಕೃತಿಬಂಧಮಂ ಪಱಿವುದರ್ಕೆ ಆ ಪರಮಪುರುಷನಡಿವಿಡಿವುದೆ ಉಪಾಯಮೆಂಬುದುಮಂ ನಾಲ್ಕು ತೆಱನಾದ ಭಕ್ತರುಮಂ ಅವರೊಳಂ ಪರ

ಮಾತ್ಮಪ್ರಾಪ್ತಿರೂಪಮಾದ ಮುಕ್ತಿಯುಂ ಬಯಸುವ ಜ್ಞಾನಿಯೇ ಉತ್ತ ಮನೆಂಬುದನೇೞನೆಯ ಅಧ್ಯಾಯದೊಳಂ। ಐಹಿಕಾಮುಷ್ಮಿಕಮಾದೈಶ್ವ ರ್ಯಮುಂ ಜೀವಾತ್ಮಪ್ರಾಪ್ತಿರೂಪಮಾದ ಕೈವಲ್ಯಮುಂ ಪರಮಾತ್ಮಪ್ರಾ ಪ್ತಿರೂಪಮಾದ ಮುಕ್ತಿಯುಂ ಬಯಸುವ ಮೂಱುಂ ತೆಱದ ಭಕ್ತರ್ಗೆ ಬೇಱಿಬೇಱಿ ತಿಳಿಯುವೇೞ್ಪುದಿದೆಂಬುದನೆಂಟನೆಯ ಅಧ್ಯಾಯದೊಳಂ। ಪರಮಪುರುಷನ ನಿರತಿಶಯಮಾಹಾತ್ಮ್ಯಮುಂ, ಅವಂ ಮನುಷ್ಯರೊಳವತರಿ ಸಿದೊಡಂ ಮಹಿಮೆಯೊಂದೆ ತೆಱನಾಗಿರ್ಪುದೆಂಬುದುಮುಂ, ಭಗವದ್ಭಕ್ತ ನ ಬಗೆಗಳುಮಂ, ಭಕ್ತಿಯೋಗದ ನೆಲೆಯುಮನೊಂಬತ್ತನೆಯ ಅಧ್ಯಾಯ ದೊಳಂ। ಪರಮಪುರುಷನೊಳ್ ಭಕ್ತಿ ಪುಟ್ಟುವುದರ್ಕಾಗಿಯುಂ ಪುಟ್ಟಿದ ಭಕ್ತಿ ಪೆರ್ಚುವುದರ್ಕಾಗಿಯುಂ ಅವನ ಕಲ್ಯಾಣಗುಣಂಗಳುಮಂ ಈ ಜಗಮೆಲ್ಲಮುಮವನೊಡವೆಯುಮೊಡಲುಮಾಗಿಯುವನಧೀನಮಾಗಿ ರ್ಪುದೆಂಬುದುಮುಂ ಪತ್ತನೆಯ ಅಧ್ಯಾಯದೊಳಂ। ಪರಮಪುರುಷನ ದಿವ್ಯ ಮಹಿಮೆಯನರ್ಜುನಂ ಸಾಕ್ಷಾತ್ಕಾರಮಾಗಿ ಕಂಡ ಬಗೆಯುನಾಪರಮ ಪುರುಷನಂ ತಿಳಿವುದರ್ಕಮವನಡಿದಾವರೆಗಳಂ ಸೇಱುವುದರ್ಕಂ ಭಕ್ತಿಯೇ ಉಪಾಯಮೆಂಬುದುಮುಂ ಪನ್ನೊಂದನೆಯ ಅಧ್ಯಾಯದೊಳಂ। ಭಗವ ದುಪಾಸನಾರೂಪಮಾದ ಭಕ್ತಿಯೋಗಮೇ ಸರ್ವೋತ್ತಮಮೆಂಬುದಂ, ಇದಱೊಳ್ ಶಕ್ತಿಯಿಲ್ಲದವರ್ಗೆ ಈ ಭಕ್ತಿಯುಂ ಸಾಧಿಸುವುದರ್ಕೆ ತಂ ತಮ್ಮ ಶಕ್ತ್ಯನುಗುಣಮಾದ ನಡತೆಗಳುಮಂ ಜೀವೋಪಾಸಕನ ನಡತೆ ಗಳುಮಂ ಪನ್ನೆರಡನೆಯ ಅಧ್ಯಾಯದೊಳಂ। ಶರೀರದ ನೆಲೆಯುನಾತ್ಮ ಜ್ಞಾನಕ್ಕೆ ಸಾಧನಂಗಳುಮಂ, ಆತ್ಮಸ್ವರೂಪಮುಮನಾತ್ಮಂಗೆ ಸಂಸಾರ ಸಂಬಂಧಕಾರಣಮುಮಂ, ಪ್ರಕೃತಿಜೀವಾತ್ಮರ ಭೇದಮುಮಂ ಪದಿಮೂಱ ನೆಯ ಅಧ್ಯಾಯದೊಳಂ। ಸತ್ವರಜಸ್ತಮೋಗುಣಂಗಳ್ಜೀವಾತ್ಮಂಗೆ ಬಂಧ ಕಂಗಳಾಗದ ತೆಱನಂ, ಆಅ ಗುಣಂಗಳ್ಪೆರ್ಚಿರ್ಪುದೆಂಬುದರ್ಕೆ ಕುಱುಪು ಗಳಾದ ಕಾರ್ಯಂಗಳುಮಂ, ಆಅ ಗುಣಂಗಳಿಂ ಬರ್಩ ಉತ್ತಮ ಮಧ್ಯ

ಮಾಧವಂಗಳಾದ ಜನ್ಮಂಗಳುವಂ, ಆಱ ಗುಣಂಗಳಂ ಜಯಿಸಿರ್ಪನ ನಡತೆಗಳಂ, ಜಯಿಸುವ ಪ್ರಕಾರಮುಮಂ ಪದಿನಾಲ್ಕನೆಯ ಅಧ್ಯಾಯ ದೊಳಂ। ಪ್ರಕೃತಿಯೊಡಗೂಡಿ ಸಂಸರಿಸುವ ಜೀವಾತ್ಮವರ್ಗಮುಂ ಪ್ರಕೃತಿಬಂಧಮಂ ಕಳೆದು ಮುಕ್ತಿವಡೆದಿರ್ಪ ಜೀವಾತ್ಮವರ್ಗಮುಂ, ಪುರುಷರೆನಿಪುವು—ಈ ಯೆರಡರ್ಕವೊಡೆಯನಾಗಿ ಇವಱೊಳ್ವ್ಯಾಪಿಸಿ ಯಿವಂ ಪೊರೆವುದಱಿಂ ಪರಮಾತ್ಮಂ ಪುರುಷೋತ್ತಮನೆನಿಸಿ, ಈ ಜೀ ನಾತ್ಮರತ್ತಣಿಂ ಬೇಱಾಗಿರ್ಪನೆಂಬುದಂ ಪದಿನೈದನೆಯ ಅಧ್ಯಾಯದೊ ಳಂ। ವೇದಶಾಸ್ತ್ರಂಗಳೊಳ್ ವಿಶ್ವಾಸಮುಂಟಾಗಿ ನಡೆವರ್ ದೇವಪ್ರಕೃತಿ ಯುವರೆಂದುಂ ಈವಿಶ್ವಾಸಮಿಲ್ಲದೆ ತಮ್ಮಿಚ್ಛೆವಂದಂತೆ ನಡೆವವರಾಸುರ ಪ್ರಕೃತಿಯುವರೆಂದುಂ ತಿಳುಪಿ, ಶಾಸ್ತ್ರದೊಳ್ಪೇೞ್ದಂತೆ ನಡೆವರ್ಗಲ್ಲದೆ ತತ್ವಜ್ಞಾನಮುಂ ಸದಾಚಾರಮುಂ ದೊರಕೊಳ್ಳದು ಎಂಬುದಂ ಪದಿ ನಾಱನೆಯ ಅಧ್ಯಾಯದೊಳಂ। ಶಾಸ್ತ್ರವಿಧಿಯಿಲ್ಲದೆ ನಡೆವ ನಡತೆಯೆಲ್ಲ ಮುಂ ಆಸುರಮಾದುದಱಿಂ ನಿಷ್ಫಲಮೆಂದುಂ, ಶಾಸ್ತ್ರವಿಹಿತಮಾದ ಕರ್ಮಮುಂ ಸಾತ್ವಿಕರಾಜಸತಾಮಸಭೇದದಿಂ ಮೂಱುಂ ತೆಱನಾ ಗಿರ್ಪನೆಂದದಱ ಕುಱುಪುಗಳಂ ಪದಿನೇೞನೆಯ ಅಧ್ಯಾಯದೊಳಂ। ತಾಮಸರಾಜಸಸಾತ್ವಿಕಂಗಳಾದ ನಡತೆಗಳಂ ಬೇಱೆವೇಱೆ ತಿಳುಪಿ ಇವಱೊಳ್ಮೋಕ್ಷಾರ್ಥಿಗೆ ಸಾತ್ವಿಕಂಗಳೆ ನಡೆಯುತಕ್ಕವೆಂಬುದಂ, ಈ ಸಾತ್ವಿಕಕರ್ಮಾಚರಣದಿಂ ಪೆರ್ಚಿದ ಭಗವದ್ಭಕ್ತಿಯೆ ಮೋಕ್ಷಸಾಧನ ಮೆಂಬುದಂ ಪದಿನೆಂಟನೆಯ ಅಧ್ಯಾಯದೊಳಂ ಪ್ರತಿಪಾದಿಪುದು.

— ಕರ್ಮ ಜ್ಞಾನ ಭಕ್ತಿಯೋಗಂಗಳ ನಿಷ್ಕೃಷ್ಟಾರ್ಥ —

ಇವೆಲ್ಲಮುಂ ಭಾವಿಸೆ ತಪಂಗೆಯ್ವುದುಂ ತೀರ್ಥಯಾತ್ರೆಗಳಂ ಮಾ ಡ್ಪುದುಂ ದಾನಯಜ್ಞಾದಿಗಳನಾಚರಿಪುದುಂ ಮೊದಲಾದುದು ಕರ್ಮ ಯೋಗಮೆನಿಪುದು। ಪರಿಶುದ್ಧಾಂತಃಕರಣದಿಂದಾತ್ಮಜ್ಞಾನಂಗೆಯ್ವುದು ಜ್ಞಾನಯೋಗಮೆನಿಪುದು। ಅತ್ಯಂತಪ್ರೀತಿಯಿಂ ಪರಮಾತ್ಮಧ್ಯಾನಮಂ

ಮಾೞ್ಪುದು ಭಕ್ತಿಯೋಗಮೆನಿಪುದು । ಇವು ಮೂಱುಂ ಒಂದಱೊ ಳೊಂದು ಬೆರೆದಿರ್ಪುವು । ಅದಱೊಳ್ ಕರ್ಮಯೋಗಿಗೆ ಕರ್ಮಂ ಪ್ರಧಾನ ಮಾಗಿ ಜ್ಞಾನಭಕ್ತಿಗಳೆರಡುಂ ಅದರ್ಕಂಗಂಗಳಾಗಿರ್ಪುವು । ಭಕ್ತಿಯೋಗಿಗೆ ಭಕ್ತಿಯೇ ಪ್ರಧಾನಮಾಗಿ ಕರ್ಮಜ್ಞಾನಂಗಳೆರಡುಂ ಅದರ್ಕಂಗಂಗ ಳಾಗಿರ್ಪುವು । ಈಮೂಱುಂ ಯೋಗಂಗಳ್ಗಂ ತಂತಮ್ಮ ವರ್ಣಾಶ್ರ ಮೋಚಿತಸದಾಚಾರಮಂಗಮಾಗಿರ್ಪುದು । ಮಿಕ್ಕೆರಡುಂ ಯೋಗಂ ಗಳತ್ತಣಿಂ ಭಕ್ತಿಯೋಗಮೆ ಉತ್ತಮಂ । ಇದೈಶ್ವರ್ಯಕೈವಲ್ಯಂಗಳ್ಗೆ ಸಾಧನಮಾಗಿರ್ದೊಡಮಿದಱಿಂ ಮುಕ್ತಿಯಂ ಸಾಧಿಪುದೇ ಚಾತುರ್ಯಂ । ಇಂತು ಮೋಕ್ಷಾರ್ಥಿಯಾದ ಭಕ್ತಂ ತನ್ನ ಶರೀರಸ್ಥಿತಿ ಮುಂತಾದ ಯೋಗಕ್ಷೇಮದೊಳಂ ತನಗಾಸಕ್ತಿಯಿಲ್ಲದೆ ಸ್ವಾಮಿ ಕಟ್ಟುಮಾಡಿದಂ ತಿರ್ಪುದೆಂದು ಪರಮಾತ್ಮಾಧೀನಂಗೆಯ್ದು ತನಗೆ ಪರಮಾತ್ಮನ ಸೇವೆ ದೊರಕಿದುದೇ ಸುಖಮುಂ ಅದಿಲ್ಲದುದೇ ದುಃಖಮುಮಾಗಿರ್ಪದಱಿಂ ದಾವಗಂ ಸ್ವಾಮಿಯ ಧ್ಯಾನಮುಂ ವಂದನಮುಂ ಕೀರ್ತನಮುಮೇ ಯಾತ್ರೆಯಾಗಿರ್ಪಂ । ಇರ್ಪ ಕಾಲಮೆಲ್ಲಮುಂ ತನ್ನ ವರ್ಣಾಶ್ರಮೋಚಿತ ಮಾದ ಸದಾಚಾರಮನಾಚರಿಸುವೆಡೆಯೊಳ್ ಸಾಧನಬುದ್ಧಿಯಂ ಬಿಟ್ಟು ಸ್ವಾಮಿಯ ಸೇವೆಯೆಂದು ನಡಿಸುತ್ತೆ ನಿರ್ಭರನಾಗಿರ್ದು ಮೋಕ್ಷಮಂ ಪಡೆವಂ—ಎಂದು ಗೀತಾತಾತ್ಪರ್ಯಂ.

ಎಂದಿಂತಳಹಿಯ ಸಿಂಗರಾರ್ಯರೊರೆದ ಸಮುದಾಯಾರ್ಥಮಂ ಷಟ್ಕಾರ್ಥಂಗಳನಧ್ಯಾಯಾರ್ಥಂಗಳಂ ತಾತ್ಪರ್ಯಾರ್ಥಮುಮಂ ಬಗೆ ಯೊಳ್ ಕುಱುಪುಗೊಂಡು ಸಂತಸಂಗೊಂಡು ರಾಯಂ ತನ್ನುಳ್ಳ ದೇಶ ಕೋಶಮನಿತುಂ ಎರವಿಲ್ಲದೆ ತನಗಮಿವರ್ಗಂ ಪುದುವಾಗಿರ್ದೊಡಂ ಕುಡುವುದುಂ ಕೊಳ್ವುದುಮೆಂಬ ತಮ್ಮಿರ್ವರ ಕುಲಧರ್ಮಮಂ ಪೆರ್ಮೆ ಗೊಳಿಸಲ್ಕೆಂದು ಉಡೆತೊಡವುಗಳಂ ಪೊನ್ನಳುಮನಗರಂಗಳುಮನಿತ್ತು ಮನ್ನಿಸಿ ಬೞಿಕ್ಕೃತಾರ್ಥರದೊಳ್ ನೆಱೆದಿರ್ಪ ಋತ್ವಿಕ್ಪುರೋಹಿತ ನಾಕ್ಷತ್ರಿಕ

ಪ್ರಭೃತಿ ನಿಜಾಶ್ರಿತವರ್ಗಕ್ಕಂ ಸ್ವಪರದೇಶದಿಂದೇಟ್ಟಂದ ಪಲವುಂ ಶ್ರೋತ್ರಿಯ ವರ್ಗಕ್ಕಂ ನಿತ್ಯನೈಮಿತ್ತಿಕಾದಿದಾನಂಗಳಂ ಮತ್ತಮವರ್ಬೇಟ್ಪ ವಸ್ತುಗಳನಿತ್ತು ಬೀಟಿಕ್ಕೊಟ್ಟು ರಹಸ್ಯದೊಳ್ಸುಳ್ಳಿರ್ದು ಇಷ್ಟಾಲಾಪಂಗೆಯ್ವೆಡೆಯೊಳ್-ನಮಗೆ ಯಾದವಗಿರಿನಾರಾಯಣನ ಕರುಣಾಕಟಾಕ್ಷದಿಂ ಸರ್ವಾಭೀಷ್ಟಮುಂ ಕೈಸಾರ್ದಿರ್ಕುಂ. ಎನ್ನ ತಮ್ಮಂದಿರಪ್ಪ **ದೇವರಾಜರಸ ಮುಱ' ದೇವರಾಜರಸ**ರನಾಂ ಕುವರರ್ಗ್ಗಿತ್ತಿರ್ಪುದಱಿಂ ಪುತ್ರವಂತನುಮಾಗಿರ್ಪೆಂ. ಆದೊಡಂ ಸಿಸುವಂ ಬಯಸುವ ರಾಣಿಯುಂ ನೋಂಪಿಗೆಯ್ಯುವ ನೆವದಿಂ ಭೂಲೋಕವೈಕುಂಠಮುಂ ಜ್ಞಾನಮಂಟಪಮುಮೆನಿಪ **ಮೇಲ್ಕೋಂಟೆ**ಗೆ ಪೋಪೆನೆಂದು ಎಣಿಸಿರ್ಪೆಂ—ಎಂಬುದುಂ ;

ಈ ಮಾರಾಯನ ನುಡಿಗೇಳ್ದಿವರುಮತ್ಯಂತಸಂತೋಷದಿಂದೆ—ಈಗಳಾಯಾದವಗಿರಿಯೊಳ್ ಚೈತ್ರಮಾಸದಾರ್ದ್ರಾನಕ್ಷತ್ರದೊಳ್ ತಿರುನಕ್ಷತ್ರಮೆಂಬ ಪಿರಿಯುಕ್ಕೆವಂ ನೆಗಟ್ಟುಂ. ಅದರ್ಕೆ ಪಲವುಂ ದಿವ್ಯದೇಶಂಗಳಿಂದೆಯ್ತರ್ಪ ದೇಶಿಕಸಾರ್ಥದರ್ಶನದಿಂ ಕೃತಾರ್ಥರಪ್ಪೆವೆಂದೊರೆವುದುಂ ;

ರಾಯನುಮತಿಹರ್ಷದಿಂ ಮೌಹೂರ್ತಿಕರ್ ಕೊರ್ತ ಸುಮುಹೂರ್ತದೊಳಾನೆಕುದುರೆಕಾಲಾಳ್ಗಳೊಗ್ಗಿನಗ್ಗಳದ ಕಳಕಳಮನೊಳಕೊಂಡು ಮೊಟಿಗುವ ಪಟಹಕಾಹಳಾದಿವಾದ್ಯಘೋಷತೋಷಿತನಾಗಿ ಪಯಣಗತಿಯೊಳಂತವುರಂಬೆರಸು **ಯಾದವಾಚಲ**ದ ತಪ್ಪಲಂ ಸಾರ್ದಲ್ಲಿ ಬಲ್ಪಡೆಯುನಿಟಿಪಿ ಮಿತಪರಿಜನಂಬೆರಸು ಮುಂತಣ್ಗೆ ನಡೆಯುತ್ತೆ—

— ಯಾದವಾಚಲದ ದಾರಿಯ ವರ್ಣನೆ —

ಅಲ್ಲಿ ನೆಟ್ಟನೆ ಬೆಳೆದು ಬಾಂಬಟ್ಟೆಯಂ ಕಟ್ಟೆ ಮುಡಿಯೊಳ್ನೇಸರ್ವಟ್ಟುದಳೆದಿರ್ಪುದಱಿಂ ಸಿರಿಯರಸನಡಿದೊಳೆಯುಲ್ಕೆ ಕಂದದೊಳ್ಮಜ್ಜನದ ಪೊಂದಂಬಿಗೆಯಾಂತೆಸೆವ ದಂತಾವಳದಂತಿರ್ಪ ಕದಳಿಗಳುಂ। ಇತ್ತಲುಮತ್ತಲುಂ ಬೆಳೆದ ಪಲವುಂ ಕೊಂಬುಗಳೊಳ್ಪೂತಿರ್ಪುದಱಿಂ ತತ್ತದುಚಿತಸ್ಥಾನದೊಳ್ ಪನ್ನಿರಟ್ನಾಮಮನಾಂತ ದೇಶಿಕರಂತಿರ್ಪ ಕೇದಗೆಗಳುಂ।

ಫಲಭರಮಂ ಪೊಱಲಾಱದೆ ಪೊಡವಿವರೆಗಂ ಬಾಗಿರ್ಪುದಱಿಂ ಪರಮಪುರುಷನಡಿದಾವರೆಗೆಱಗುವ ಪರಮಭಾಗವತರಂ ದೊರೆಗೊಳ್ವ ಬಾೞೆಗಳುಂ। ಎತ್ತರದೊಳ್ಬೆಳೆದ ನೆತ್ತಿಗೊಂಬಿನೊಳರೆವಿರಿದ ತಳಿರ್ಗೊಂಚಲಂ ತಾಳ್ದಿಸೆವುದಱಿಂ ಪುರುಷೋತ್ತಮಂಗೆ ಮಸ್ತಕದೊಳ್ ಕೆಯ್ಯೆತ್ತಿ ಮುಗಿವ ಭಕ್ತರಂತಿರ್ಪ ಮಾವುಗಳುಂ। ಎಡೆವಿಡದೊಂದೆ ಸೂೞೊಳ್ ಕಿಱುನನೆಯಾಂತಿರ್ಪುದಱಿಂ ಮಾಧವನ ಮಾನಸಾರಾಧನವಿಧಿಯೊಳ್ ನವಿರ್ವಡೆದ ಯೋಗಿಗಳಂ ಪಡಿಗೊಂಬ ಕಡವುಗಳುಂ। ಮೆಲ್ಲೆಲರ ಫಲ್ಲಣೆಗೆ ತಲ್ಲಣಂಗೊಂಡೊಳ್ಪಲರಂ ಚೆಲ್ಲುವ ಬಳ್ಳಿಗೊಂಬುಗೊಂಡಿರ್ಪುದಱಿಂದಚ್ಯುತನಡಿದಾವರೆಯನರ್ಚಿಸುವರ್ಚಕರಂತೆಸೆವ ಸೋಗೆಗಳುಂ। ನಿಡುದೋಳ್ಗೊನೆಯಿಂದುಕ್ಕಿ ಪರಿವ ತಿಳಿನೀರ್ವೊನಲನನುಗೆಯ್ವುದಱಿಂ ಶಾರ್ಙ್ಗಿಯ ಪೂಜೆಗೆ ಭೃಂಗಾರೋದಕಮಂ ಕೆಯ್ನೆಗಪಿ ಸೂಸುವ ಸೂರಿಗಳಂತೆ ಸೊಗಯಿಪ ಕಿಱುವೆಟ್ಟುಗಳುಂ। ಮೀಱಿ ಮುಂತಣ್ಗೆ ನಡೆವ ನಿಡುಗೊಂಬಿನೊಳಿರುಳೆಳವೆಱೆಯಂ ತಳೆದಿರ್ಪುದಱಿಂ ಪುಂಡರೀಕಾಕ್ಷನ ಗಂಡೂಷೋದಕಮನಾನಲ್ಕೆ ಪಳಿಕುಗಾಳಾಂಜಿದಳೆದ ಪೞಿಲೂೞಿಗದವರಂ ಬೞಿಸಲ್ವ ಪೊನ್ನೆಗಳುಂ। ಕೊಂಬುಗಳೆಡೆಯೊಳ್ ಪ್ರಲಂಬಮಾದ ಪಲವುಂ ಪೆರ್ಗಾಯ್ಗಳಂ ತಳೆದಿರ್ಪುದಱಿಂ ವನಮಾಲಿಗೆ ಧರಿಸಲ್ಕೆಂದು ಸಮೆದ ಮಾಲೆಗಳನೊಳಕೊಂಡಲರ್ಗೊಡೆಗಳನಾಂತು ಸನ್ನದಮಾದ ಮಾಲೆಗಾಱರಂತಿರ್ಪ ಪಲಸುಗಳುಂ। ತಾಳಿಂ ತುದಿವರೆಗಂ ಪೂತು ಪೊದೞ್ದೊಂದು ಕೊಂಬನಡರ್ದು ಪಡಲ್ವಟ್ಟು ಜೋಲ್ವ ಕಾಟ್ಮಲ್ಲಿಗೆಯುಂ ಪೊತ್ತಿರ್ಪುದಱಿಂ ದೈತ್ಯಾರಿಗೆ ಧರಿಸಲ್ಕೆ ಕಮ್ಮಲರ್ದೊಳಚಿವೆರಸು ಸಮೆದ ದುಂಡದಂಡೆಯುಂ ನೆಗಪಿ ನೀಡುವ ಪರಿಚಾರಕರಂ ನೆರಂಗೊಂಬ ಸುರಗಿಗಳುಂ। ಬಿರಿದ ಪೆರ್ಗಾಯಿವಡೆದಿರ್ಪುದಱಿಂ ಶೌರಿಗಲಂಕರಿಸಲ್ಕೆ ಬಣ್ಣಗರಡಿಗೆಯುಂ ಮುಚ್ಚುಳ್ದೆಗೆದು ರನ್ನಸರಮಂ ನೆಗೞ್ಚುವ ಭಂಡಾರಿಗರಂತೆ ಬಗೆವಡೆದ ದಾಡಿಮಂಗಳುಂ। ಪೊನ್ಮಪೊಗರೇಱಿದ ಪೊಂಬಾಳೆಗಳಂ ಪೊತ್ತಿರ್ಪುದಱಿಂ ಹರಿಗೆ ಬೆಳ್ಳ

ವರಂಬೀಸುವ ಹರಿದಾಸರ ಪಾಂಗಿನೊಳಿರ್ಪ ತೆಂಗುಗಳುಂ। ಕುಕಿಲುತ್ತ ಗಳಪಿ ಪಾಡಿ ಕೇಗುವಿಡಿವುದಱಿಂ ತಱುವಾಯಿಂ ಋಗ್ಯಜುಸ್ಸಾಮಂಗಳುಮಂ ದ್ರಾವಿಡಪ್ರಬಂಧಂಗಳುಮನನುಸಂಧಿಪಧ್ಯಾಪಕರನನುಕರಿಸುವ ಕೋಗಿಲೆ ಗಿಳಿ ತುಂಬಿ ಸೋಗೆಗಳುಂ ಮನಂಗೊಳೆ—ಮೆಱೆವ ನೆಲಗಾಡಂ ನಿರವಿಸುತ್ತೆ

— ನೆಲಗಾಡ ವರ್ಣನೆ —

ಮುಂತಣ್ಗೆ ನಡೆದಾಯೆಡೆಯೊಳ್ ಮುಂ ದತ್ತಾತ್ರೇಯನುತ್ತಮಾಶ್ರಮಂಗೊಳಲ್ಕೆ ಮುಕ್ಕೋಲೊಗ್ಗಂಡ ಸುತ್ತುವೇಲಿಯ ಬಿದಿರ್ವಿಂಡುಗಳಂ। ಆನಡುವೆ ರಘುಪುಂಗವಂ ಮಲಂಗಲೆಂದು ಸೌಮಿತ್ರಿ ಸಮೆದ ನುಣ್ಬಾಸರೆಗಳಂ। ಸತ್ಯಭಾಮೆಯಂತಃಪುರದಂಗಳದೊಳ್ ಪಣ್ತುದಿರ್ದ ಬಿತ್ತುಗಳಿಂ ಮೊಳೆತೆಳಸಸಿಗಳಂ ತಂದು ಮುಕುಂದನುಂ ತಾನುಂ ದೇವಿಯರುಂ ತಮ್ಮ ಸಿರಿಗೆಯ್ಗಳಿಂದಗೆದು ನಟ್ಟು ನೀರೆಱೆದು ಬೆಳೆಯಿಸಿದ ಪಲವುಮಭಿಜಾತಪಾರಿಜಾತಂಗಳಂ। ಮತ್ತಮಾವಗಂ ತಳಿರ್ತು ನನೆಯೇಱಿ ಪೂತು ಕಾಯುತ್ತ ಪಣ್ತಿರ್ಪ ಪಲವುಂ ಪೂವಳ್ಳಿಗಿಡುಮರಂಗಳಿಂ ಸಿಂಗರಂಬಡೆದ ಪೂದೋಟಂಗಳ ಪಾಂಗಂ ನಿಟ್ಟಿಸಿ ಕಟ್ಟುಚ್ಚರಿವಟ್ಟು ನಿಂದು ಅಲ್ಲಿ ಕೊನೆಗೇಱಿ ತಿಱಿವ ಪೂವಡಿಗರ ಕೆಯ್ಗೆ ನಿಲ್ಕದಲದೊರ್ಂಬೆಗಳ್ ಕೈಪಡುವಂತೆ ನಿಡುಗೊಂಬುಗಳಂ ಬಾಗಿಸಿ ಕುಡುವ ಕೋಡಗಂಗಳಂ। ಅಂತಿರ್ಪ ಪಣ್ಗಳಂ ಕರ್ದುಂಕದೆ ಕಾಲಿಂ ಸೋಂಕದೆ ಮೀಸಲಟಿಯದಂತೆ ತೊಟ್ಟಂ ಕಟಿಲ್ಚಿ ಕೆಡಪಿ ಕೈಗೊಳಿಸುವ ಪುರುಳಿಗಳಂ। ಎಳದೊಳಚಿಸಸಿಗಳಂ ಬಳಸಿಯುಗೆದಾಲವಾಲಂಗೆಯ್ದು ಬಟಲ್ದು ತೋಂಟಿಗರ್ಗೆ ನೆರವಾಗಿ ತಮ್ಮ ಬಾಗಿದ ಕೂರ್ಗೋಱುಗುದ್ದಲಿಗಳಿಂದಗೆವ ಕಾಟ್ಪಂದಿಯ ಮಂದೆಗಳಂ।. ಅವಂ ಕಡೆಗಣ್ಚಿ ತಮ್ಮ ಕವಡುಗೋಡುಗಳಿಂದಿರ್ಮಡಿಸಿ ತೋಡುವ ಕಡವೆಸಾರಂಗಂಗಳಂ। ಆಪೆರ್ಗುಟಿಗಳೊತ್ತೆಂಟಿಗೆಯ್ಮೆಯೊಳೆಱೆವ ಕಿಱುಗುಂಬದ ನೀರಿಂ ತುಂಬದಿರೆ ತಮ್ಮ ಪೊಡೆ

ಗೊಂಡ ನೀರಂ ಸೊಂಡಿಲೊಳ್ಕೊಗೆವೊಗೆದು ಸುಱಿವ ಸೊರ್ಕಾನೆಗಳಂ। ಎತ್ತಾನುಮಿವನಿಂತು ಸಸಿಗಳಂ ಮೇದಪುವೆಂಬ ಬಱುಸಂದೆಯದಿಂ ಕಾಪುಗೊಂಡಿರ್ಪ ಪೆರ್ಬುಲಿಗಳಂ। ಅವರ ಮಱಿಗಳ್ತಾಯನಗಲ್ದಿರ್ಪುದಱಿಂ ಪಸಿದು ಬಸವೞಿಯೆ ಕಂಡು ಮಱುಕದಿಂ ತೊಱಿಯಿಟುಪಿ ಮೊಲೆಯೂಡುವ ಪೆಣ್ಬುಲ್ಲೆಗಳುಮಂ ಕಣ್ಗೊಳಿಸಿ ಮನಂಗರಗುತ್ತೆ,

ಮತ್ತಂ ಕಿಱಿದುಂ ದೂರಂ ನಡೆದಾಯೆಡೆಯೊಳ್ ಸಮಿತ್ಕುಶಕುಸುಮಂಗಳಂ ಸಂಗ್ರಹಿಸುವೆಡೆಯೊಳಮುೞಿಯದಂತುಪಾಧ್ಯಾಯರೊಡನೋದುತ್ತೆ ಬರ್ಪ ಪಟುವಟುಗಳ ವೇದಘೋಷಮೆಂಬ ಮಂಗಳತೂರ್ಯರವಂಬೆರಸು ಗಿರಿಯೇಱಿ ಶ್ರೀ**ನಾರಾಯಣಪುರ**ದ್ವಾರಮಂ ಸಾರ್ದು

— ಮೇಲ್ಕೋಟೆಯ ಪ್ರವೇಶ —

ಅಲ್ಲಿ ಮಹಾರಾಜಂ ಬಂದನೆಂದು ಕೇಳ್ದಿಟ್ದೆತ್ತರದೊಳ್ಬಿತ್ತರದಿಂ ಪಱ್ತುಗೊಂಡು ನಿಂದು ವಂದನಂಗೆಯ್ವ ಪೆರ್ಬಾಗಿಲ ಕಾಪಿನ ಕೂರಾಳ್ಗಳೊಗ್ಗುಗಳ ಗುಱಿನಾನಿಸರ್ಪೆಸಗೊರ್ಂಡು ಉಗ್ಗಡಿಪ ಕೈನಾರಿಗಳ ಕೈನಾರಮನಾಲಿಸುತ್ತೆ ಆ ಆ ಪಡೆವಳರೊಳ್ಕಡೆಗಣ್ಬೆಳಗಂ ಕವಿಸಿ ಮನ್ನಿಸಿ ಒಳಪೊಕ್ಕು ನಡೆಯುತ್ತೆ

ಅಲ್ಲಿ ತಮ್ಮ ಸಿರಿಗಣ್ಗಳ ತಣ್ಗದಿರ್ಗಳಿಂದಲರ್ವೞಿಗಱಿವಂತೆಯುಂ, ಪರಕೆವೆರಸಿದೊಳ್ಮಾತುಗಳಿಂದಿನಿರಸದ ಸರಿಯುಂ ಸುರಿವಂತೆಯುಂ, ಆಟ್ಕಿರ್ವೆರಸು ಯೋಗಕ್ಷೇಮಂಗಳಂ ಬೆಸಗೊಳ್ವ ಸೈಪಿಂ ಸಂತಸಗಡಲ್ದೆರೆಗಳಂ ತಿಂತಿಣಿಗೊಳಿಸುವಂತೆಯುಂ ಪತ್ತೆಸಾರ್ವ ಸಾತ್ವಿಕರವೊತ್ತಮನಡಿಗಡಿಗೆ ಪೊಡೆಮಡುತ್ತುಂ, ತಡೆದು ತಡೆದೊಂದೊಂದಡಿಯಿಡುತ್ತುಂ, ಸಿರಿಯರಸನುಕ್ಕೆವದೊಳ್ಪಲವರ್ಪ ಸಿರಿವೀದಿಯಂ ಸಾರ್ದು,

— ಸಿರಿವೀಧಿಯಲ್ಲಿ ವಾಸಮಾಡುವ ಶ್ರೀವೈಷ್ಣವರ ವರ್ಣನೆ —

ಅಲ್ಲಿ ಶ್ರೀನಾರಾಯಣನ ಸಿರಿಯಡಿಯೊೞಗಕ್ಕೆ ತಕ್ಕರನೀರೇೞುಂ ಜಗದೊಳಗಱಸಿ ತಂದೊಂದುಗೊಳಿಸಿದಂತೆಯುಂ, ಪರಮಪದದೊಳರಿದಪ್ಪ ಸೌಲಭ್ಯಗುಣಮನರ್ಚಾವತಾರದೊಳನುಭವಿಸಲ್ವೆಂದು ಬಂದು ನಿತ್ಯಸೂರಿಗಳ್ನೆರೆದಂತೆಯುಂ, ರಾಜಸನೆನಿಸುವಲರಿಚನನೆಡೆಯೊಳ್ನಿಲಿಸದೆ ವಾಸುದೇವಂ ತಾನೆ ಸಮೆದ ಸತ್ವಮಯಮಾದ ಸೃಷ್ಟಿ ಬೆಟ್ಟಿತ್ತಾದಂತೆಯುಂ, ಕಲಿಯುಗಂ ಪುಗದ ನೆಲನೆಂಬ ನಂಬುಗೆಯಿಂ ಪಲವುಂ ನಾಡ ಸಿರಿಯುರ್ಕೈತಂದು ಸಂದಣಿಸಿದಂತೆಯುಂ, ಐವತ್ತಾಱುಂ ನಾಡೊಳಿಡಿದ ಪರವಾದಿಗಳಂ ಗೆಲಲ್ಕೆ ಪೂಣ್ದು ಯತಿರಾಜಂಗೆ ಬೆಂಬಲಮಾಗಿ ವಿಷ್ವಕ್ಸೇನರ ಸೇನೆ ಸನ್ನಿದಮಾದಂತೆಯುಂ, ಬೆಳ್ದೀವಿಯ ಸಿರಿ ಪೆಂಪುವಡೆದಂತೆಯುಂ, ಪರಮಪದದೈಸಿರಿ ಪಸರಿಸಿದಂತೆಯುಂ ತಿಂತಿಣಿಸಿ, ತಮ್ಮ ಬಗೆಗೊಂಡ ಬಿನ್ನಣದ ಬೆಳಗು ಪೊಱಪೊಣ್ಮಿದಂತೆ ಮಿಸುಪ ಮೊಗಸಿರಿಯಿಂ ದೆಸೆಗಳಂ ತೊಳಗಿಸುತ್ತುಂ, ಮರ್ಬನೆಟ್ಬಿಟ್ಟುತ್ತುಂ, ಸತ್ವದಿಂ ಸಮೆದಂತೆಯುಂ, ನೇಮದಿಂ ನೆಗೞ್ಚಿದಂತೆಯುಂ, ಬಿನಯದಿಂ ಬಿತ್ತರಿಸಿದಂತೆಯುಂ, ಬಿನ್ನಣದಿಂ ಬಣ್ಣವಿಟ್ಟಂತೆಯುಂ, ಒಳ್ನಡತೆಯಿಂದೊಪ್ಪಂಬಡಿಸಿದಂತೆಯುಂ, ತಾಳ್ಮೆಯಿಂ ನಿಮಿರ್ಚಿದಂತೆಯುಂ, ಓಜೆಯಿಂದೊಡರಿಸಿದಂತೆಯುಂ, ಪುಣ್ಯದಿಂ ಪೊಣ್ಮಿಸಿದಂತೆಯುಂ, ಜಸದಿಂ ಜನಿಯಿಸಿದಂತೆಯುಂ, ಧರ್ಮಮಯಮೆನಿಸಿ, ದಯಾಮಯಮೆನಿಸಿ, ದಾಕ್ಷಿಣ್ಯಮಯಮೆನಿಸಿ, ಸತ್ವಮಯಮೆನಿಸಿ, ಶಾಂತಿಮಯಮೆನಿಸಿ ಪರಭಕ್ತಿನಿಷ್ಣಾತರಪ್ಪ ಶ್ರೀವೈಷ್ಣವರಂ ನಿರವಿಸಿದಂ.

ಮತ್ತಮವರ್ಗೆಲ್ಲಿಯುಂ ರಾಗದ್ವೇಷಮಿಲ್ಲದುದಱಿಂದಾವಗಂ ಪೊಗರೇಱಿ ತಣ್ಪುವಡೆದಿರ್ಪ ಸಿರಿಮೊಗಂಗಳಿಂದೆ ಒರ್ಮೆಯುಂ ಬೆಂಕಿಯುಂ ನೇಸಱುಂ ಸೋಂಕದ ಪೊಸವಗೆಯ ಪಲಸಾಸಿರ್ಸಂಕೆಯ ಸಸಿವಟ್ಟುಗಳಂ, ನುಣ್ಬಣೆಯೊಳೆಸೆವ ಸಿರಿವಣ್ಬೆಳಗುಗಳಿಂದೆ ಪೂತು ಪೊದೞ್ದ ಬೆಳ್ದಾವರೆಗಳಂ, ಎಡೆವಿಡದೆ ದಿವ್ಯಪ್ರಬಂಧಂಗಳನನುಸಂಧಿಪನ್ನಂ ಪೊಱಸೂ

ಸುವ ದಂತಕಾಂತಿಗಳಿಂ ಚಿತ್ತದೊಳ್ಪ್ರೀತಿ ಬಿತ್ತರಂಬೆತ್ತ ಸತ್ವಗುಣಮುಂ, ಸಿರಿಗೊರಲ್ಗೆ ಧರಿಸಿದ ತೊಳಚಿತಾವರೆಮಣಿಸರಂಗಳಿಂ ದಿವ್ಯಾಂಗದೊಳ ಗಜಾಂಡಮಂಡಳಕೋಟಿಯುಂ ಪೊತ್ತ ಪುರುಷೋತ್ತಮನ ಸಾರೂಪ್ಯಮುಂ, ಪೊದೆದ ದುಗುಲದ ತೆರೆಗಳಿಂದೆರ್ದೆಗೊಂಡ ಪುಂಡರೀಕಾಕ್ಷನಂ ತೊಡರ್ದ ಪಾಲ್ಗಡಲ ಪಡಿನೆಟಿಲಂ ಬಗೆಗೊಳಿಸಿದರ್.

ಮತ್ತಮವರ್ಗೆ ವರ್ಣಾಶ್ರಮಧರ್ಮಾಚರಣದೊಳ್ಭಾವಮುಮುಂ, ಆದರಿಂದಾನುಷಂಗಿಕಮಾಗಿ ಬರ್ಪ ತ್ರೈವರ್ಗಿಕಫಲದೊಳ್ನಿರ್ವೇಧಮುಂ, ಅದರಿಂದೊಗೆವ ಭಗವನ್ಮುಖೋಲ್ಲಾಸದೊಳ್ ಲೋಭಮುಂ, ತದನುಭವಜನಿತ ಪ್ರೀತಿಯೊಳ್ಮೋಹಮುಂ, ಪ್ರೀತಿಕಾರಿತ ಕೈಂಕರ್ಯಲಾಭದೊಳ್ಮದಮುಂ, ಮದಜನಿತಕೈಂಕರ್ಯವಿಘ್ನದೊಳ್ಮಾತ್ಸರ್ಯಮುಂ, ಪೂರ್ವಪಕ್ಷೋಪನ್ಯಾಸದೊಳ್ ಮಿಥ್ಯಾವಾದಮುಂ, ಸ್ತೋಭದೊಳನರ್ಥಕವಚನಮುಂ, ಇಂದ್ರಿಯನಿಗ್ರಹದೊಳಾಗ್ರಹಮುಂ, ಬುದ್ಧಿಯೊಳ್ತೈಕ್ಷ್ಣ್ಯಮುಂ ಸಮನಿಸಿರ್ಕುಂ। ಮತ್ತಂ ಬಿಜ್ಜೆಯೆ ರಾಜ್ಯಮುಂ, ಬಿನಯಮೆ ಧನಮುಂ, ವೈರಾಗ್ಯಮೆ ಭಾಗ್ಯಮುಂ, ಸೈರಣೆಯೆ ಬೀರಮುಂ. ಸತ್ಯಮೆ ನೆರವುಂ, ಬಿನ್ನಣಮೆ ಬೆಂಬಲಮುಂ, ವಿವೇಕಮೆ ಕಾಪುಂ, ನೇಮಮೆ ಸೇಮಮುಂ, ಒಳ್ಪೆ ಬಲ್ಪುಂ, ಸಂತಸಮೆ ಸಾಮ್ರಾಜ್ಯಮುಮಾಗಿರ್ಕುಂ। ನಿಚ್ಚಲುಂ ಭಗವನ್ನಿವೇದನದ್ರವ್ಯೋಪಾದಾನಕಾಲದೊಳ್ ಬೆಳೆ ಕಟಿದ ಬೆಳೆಗೆಯ್ಯೊಳುದಿರ್ದ ಧಾನ್ಯಕಣಂಗಳನಂದದಿಂಗೆ ತಕ್ಕುದನಲ್ಲದೆ ಮಿಕ್ಕೊಂದು ಕಾಳನಾದೊಡಮಾಯ್ದುಕೊಳ್ವುದು ಕಟ್ಟಾಸೆಯೆನಿಪುದು। ಇಜ್ಯಾಕಾಲದೊಳ್ ಪ್ರಸಾದಪ್ರತಿಪತ್ತಿಗೆಯ್ಯುತ್ತೆ ಸವಿಭಾವಿಪುದು ವಿಷಯಾಭಿಲಾಷೆಯೆನಿಪುದು। ಉಭಯವೇದಾಂತಂಗಳನೋದುವೆಡೆಯೊಳ್ ಪೆಱತೊರ್ವರ್ ಕೇಳ್ದು ಅರ್ಥನಿಶ್ಚಯಂಗೆಯ್ವುದು ಬುದ್ಧಿಮಾಂದ್ಯಮೆನಿಪುದು। ಸ್ವಯಂಪ್ರಯೋಜನಮಾಗಿ ತಾಮೆಸಗುವ ಕರ್ಮಜ್ಞಾನಭಕ್ತ್ಯಾದಿಗಳೊಳ್ ಸಾಧನಬುದ್ಧಿಗೆಯ್ವುದು ವೈಶಿಕಮುಪ್ಪುದು। ನಿಷೇಧಿಸುವುದ

ರ್ಕವೂವೆನ್ನದೆಂದನುವದಿಪುದವಾಚ್ಯವಾದವೆನಿಪುದು । ಭಗವದ್ಗುಣಗಣನೆಯೊಳಂ ಗೃಹಕ್ಷೇತ್ರಪುತ್ರಪಶ್ವಾದಿಕ್ಷುದ್ರಫಲಂಗಳನೀವನೆಂದು ಪೊಗಟ್ಟುದು ಲಜ್ಜಾವಹವುಪ್ಪುದು। ಅನ್ಯೋನ್ಯವಂದನದೊಳೊಂದಿನಿಸು ಪಿಂಚುವುದುಂ ಗರ್ವವೆನಿಸಿ ನಿರ್ವೇದಕಾರಣವುಪ್ಪುದು। ಅರ್ಥಿಸಿ ಬಂದ ಶಿಷ್ಯಸಾರ್ಥವನೊಂದೆರಟ್ಪೊಟ್ಟೊಳ್ ಕಡೆಗಣಿಸದೆ ದಯೆಯಿಂದಂಗೀಕರಿಪುದು ಖ್ಯಾತಿಲಾಭಪೂಜಾರ್ಥವೆನಿಪುದು। ಸಚ್ಛಿಷ್ಯನಂ ಪರವು ಭಾಗವತನೆಂದುಂ ಶ್ರೀವೈಷ್ಣವನೆಂದುಂ ಸಿರಿವೆಸಗೊರ್ಳ್ಳದೆ ತನ್ನ ಶಿಷ್ಯನೆಂದುಸಿರ್ವುದು ವಾಕ್ಪಾರುಷ್ಯವುಪ್ಪುದು । ಮತ್ತಮವರ್ ತಮ್ಮ ಮನೆಯನವನ ದೇಗುಲವೆಂದುಂ, ಮಡದಿಮಕ್ಕಳನವನೂಳಿಗದವರೆಂದುಂ, ಪುರುಳನವನೊಡವೆಯೆಂದುಂ, ಗೃಹೋಪಕರಣಮನವನ ಪೂಜೋಪಕರಣವೆಂದುಂ, ತಮ್ಮನವನ ಪೂಜಕರೆಂದುಂ, ತಮ್ಮ ಮನೋವೃತ್ತಿಯನಿತುಮವನ ನೆನಪೆಂದುಂ, ತಮ್ಮ ನುಡಿಯನಿತುಮವನ ಪೊಗಟ್ತೆಯೆಂದುಂ, ತಮ್ಮಗೆಯ್ಮೆಯನಿತುಮವನೂಳಿಗವೆಂದುಂ, ಅವನೊಲ್ಮೆ ತಮಗೆ ಧಾರಕವೆಂದುಂ, ಅವನ ಗುಣಾನುಭವವೆ ತಮಗೆ ಪೋಷಕವೆಂದುಂ, ಅವನ ಸೇವೆಯೆ ತಮಗೆ ಭೋಗ್ಯವೆಂದುಮೆಣಿಸಿರ್ಪರ್.

ಇಂತಿರ್ಪ ದೇಶಿಕರ ನೆಜವಿವೆರಸು ಶ್ರೀಗೋಪುರದ್ವಾರವಂ ಸಾರ್ದು ಸಾಷ್ಟಾಂಗಪ್ರಣಾಮಂಗೆಯ್ದೊಳಪೊಕ್ಕು ನಡೆದು ಅಲ್ಲಿ ಸಿರಿ ಬಲ್ಲಹನೂಳಿಗದೊಳ್, ತವಕಿಗರ್ ತಮ್ಮೊಳ್ತಾಂ ನುಡಿವ ಸಿರಿವಾತುಗಳಂ ಕೇಳ್ದನದಂತೆನೆ :—

— ದೇವಸ್ಥಾನದ ಗೋಪುರದ್ವಾರದಲ್ಲಿ ಸೇವಾತವಕಿಗಳ ಸಿರಿವಾತುಗಳು ಮತ್ತು ಅಷ್ಟತೀರ್ಥಗಳ ವರ್ಣನೆ —

ಶ್ರೀಮಜ್ಜನವುಂ ತರಲ್ಕೆಂದು ತನ್ನಿಂ ತಾನೆ ಮಿಂದು ಬಂದ ಕಾಡಾನೆಯು ಮೊಗದೊಳ್ಸಿರಿವಣ್ಣಂ ಸಮನಿಸೆಂದುಂ, ಶ್ರೀಕಲ್ಯಾಣೀತೀರ್ಥದೊಳ್ಮಂ ಸುಚರಿತಂ ಸುರಸರಿತ್ಪೂರದಿಂದೆಟ್ಟು ಪೊಜವುಟ್ಟ ನೀರ್ವಟ್ಟೆಯ

ಬಾಯ್ವರೆಗಂ ಮುೞುಂಗಿ ನೆಗಪಿ ನೀಡುವ ನೀರಾನೆಯ ಬಱಿಕೆಯ್ಯೊಳಿಸೆವ ಪೊಂದಂಬಿಗೆಯ ತೀರ್ಥಮನೆ ತರ್ಪುದೆಂದುಂ, ದರ್ಭತೀರ್ಥದ ತೀರದೊಳುದ್ಭವಿಸಿದ ದರ್ಭೆಗಳಿಂ ಸಮೆದ ಸಿರಿವಜಲ್ಗಳಿಂ ಸಿರಿಯಂಗಳದ ಮೇಲ್ಕಟ್ಟಿನ ಲಂಬಣಸರಂಗಗಳಿಂದುದಿರ್ದ ಪರಮಭಾಗವತರಡಿದೂಳ್ಗಳಿಂ ಬಳೆದಲರ್ವುಡಿಯುಂ ಗುಡಿಸಿ ಬೈತಿಡುವುದೆಂದುಂ, ಅಂದು ಸನಕಾದಿಗಳ್ ಮಂದಾಕಿನಿಯೊಳ್ಕಱಿಗೞಿದು ತಂದ ಪೊಂದುಗುಲಂಗಳಂ ಜಡೆಗಾಡಂ ಪೊಡೆಯೊಡೆಯುಂ ಬೂದಿವೆಟ್ಟಂ ಮುಟ್ಟಿ ಮೀಸಲೞಿಯದ ವೈಕುಂಠಗಂಗೆಯೊಳ್ಮಡಿಮಾೞ್ಪುದೆಂದುಂ, ಸಿರಿವಣ್ಗಣಿಯೊಳ್ಮಂ ತಾರ್ಕ್ಷ್ಯನಿಂ ತಂದು ನಿಕ್ಷೇಪಿಸಿದ ತಾಯ್ವಣ್ಣನೆ ತಂದನುಗೆಯ್ವುದೆಂದುಂ, ನಯನ ನಾರಾಹ ಸೀತಾರಣ್ಯಾದಿ ಪುಣ್ಯಕ್ಷೇತ್ರಂಗಳೊಳ್ಬೆಳೆದೆಳದೆನೆದಳೆದ ತುಳಸಿಯ ಪೊಸಗೊನೆಗಳನೆ ಸಾಸಿರ್ವೆಸರ ಪೂಜೆಗೆ ಮೀಸಲಿಡಿಸುವುದೆಂದುಂ, ನೇಮಂಬೆರಸು ತಿಱಿವ ಭಾಗವತರನುಸಂಧಿಪ ದಿವ್ಯಪ್ರಬಂಧಗಂಧಬಂಧುರಮಪ್ಪ ಮಲರ್ಗಳನೆ ತರವೇೞ್ಪುದೆಂದುಂ, ಮುಂ ಪ್ರಹ್ಲಾದಂ ಬಿತ್ತಿದ ನೃಸಿಂಹಶೃಂಗದೊತ್ತಿನ ಬಾವನ್ನಗಾಡ ಪೞಿವರದೊಣಗೊಂಬಿನ ಚೀಗಿನೊಳಣ್ಪಂ ಸಂಪಾದಿಪುದೆಂದುಂ, ಅಂದು ವನವಾಸದಶೆಯ ಬೇಸಗೆಯೊಳ್ನೀರೆಳಸಿದ ತನ್ನಿರವನಾರಯ್ದು ರಘುವೀರಂ ಬಿಲ್ಗೊಂಬಿನಿಂದಿಱಿದಱಿಯೊಳ್ಪೊಣ್ಮಿದ ತಿಳಿನೀರ್ಸರಿಯೊಳ್ಮಿಂದ ಸೀತಾದೇವಿಯ ಸಿರಿಯೊಡಲ ಕುಂಕುಮದಿಂ ಪೊಂಬಣ್ಣಮಾದ ಧನುಷ್ಕೋಟಿತೀರ್ಥೋದಕದಿಂ ಸಿರಿರಾಣಿಗರಿಸಿನದಣ್ಪಂ ಬಣ್ಣಂಬಡಿಪುದೆಂದುಂ, ಅತ್ರಿಕುಮಾರಂ ದತ್ತಮುನಿಯುತ್ತಮಾಶ್ರಮದೊಳ್ಪೊತ್ತ ಪೊಸಗಾವಿಯುಡೆಯನೞ್ದಿದುದಱಿಂ ಕೆಱುಗೆಂಪಾದ ವೇದಪುಷ್ಕರಣಿಯುದಕದಿಂ ರಾಮಾನುಜಾಚಾರ್ಯರ ದುಗುಲಮಂ ತಳಿರ್ಗಾವಿಗೆಯ್ವುದೆಂದುಂ, ಪದ್ಮತೀರ್ಥದ ಮಧ್ಯದೊಳ್ಪೊದೞ್ದಿ ಪೊಂದಾವರೆಯ ಪೊಸದಂಟುಗಳ ಎಸೞ್ಗಳಿಂದಾಲತಿವತ್ತಿಯಂ ಬಿತ್ತರಿಪುದೆಂದುಂ, ಮುನ್ನಂಬರೀಷಾದಿಗಳ್ಪೈವಭಾಗವತರ್ ಅಡಿದೊಳೆದ

ತೀರ್ಥದೊಳೀಟಿಕ್ಕುವಡೆದ ಬಿನ್ನಣದ ಅರಳಿವರದೊಳಿ ನಿತ್ಯಹೋಮ ಸವಿತ್ಸಂಗ್ರಹಣಂಗೆಯ್ವುದೆಂದುಂ, ಯದುಶೇಖರ ಶೂರ ವಸುದೇವ ರಾಮ ಕೃಷ್ಣಾದಿಗಳ್ಪಲರ್ಮೆ ಬಂದು ಮಿಂದಿರ್ಡಡಿಯೊಳ್ಪಲವುಂ ಜನ್ಮಂಗಳುಂ ಪದಿನಾಱುಂ ದಾನಂಗಳನೆಸಗಿದುದಱಿಂದದೆ ನಿರೂಪಕಮಾದ ಯಾದವತೀರ್ಥದ ಪರಿಕಾಲ್ಗಳಿಂ ಬೆಳೆದ ಕಟಿವೆಯುಂ ಪತ್ತುಂ ಸೂಟಿಕೊಳ್ಮಿತ್ತು ಅಡಿಗೆ ವನೆಯೊಳಾಯುತ್ತಂಗೆಯ್ವುದೆಂದುಂ, ವ್ಯೆತ್ರೆಯೊತ್ತಿನ ತೀರ್ಥಸಂಗ್ರಹಣ ವ್ಯತ್ತಿನೊಳೊಡರ್ಚಿದ ಕೋಶಂಗಳೊಳ್ ನಾರಾಯಣತೀರ್ಥೋದಕವ ನೆಸರೆತ್ತುವುದೆಂದುಂ, ಹೀರೆ ಸೋರೆ ಮುಂತಾದುವಂ ಬಿತ್ತಿದ ಕಾಯ್ದೋಂಟದೊಳ್ಬೆಳೆದ ಪಡಲ ಹಾಗಲಂ ಮೊದಲಾದೊಳ್ಗಯ್ಗಳುಮಂ ಕಳೆವುದೆಂದುಂ, ಸಂಕುಸಾಱುಂಬಳೆಗಳಿಂದಂಕಿತಮಾಗದ ಬಱುದುಱುಗಳಂ ಕಱಿಯದುಟುಪುದೆಂದುಂ, ಕಱುವುಂಡ ಮೊಲೆಯುಂ ಪಲರ್ಮೆ ತೊಳೆದು ಕಪಿಲೆಯುಂ ಕಱಿವುದೆಂದುಂ, ಎಳಸಿಸುತನದೊಳೆಸೆವ ಮುಂಗಾರ ಮುಗಿಲ ವಣ್ಣನ ಬಣ್ಣನಾಡಂ ಪಾಡದ ಕಾಟಿಸ್ವಂಡಿರ್ ಕಡೆದ ಬೆಣ್ಣೆಯುಂ ಕಡೆಗಣಿಪುದೆಂದುಂ, ಎನಿತಾನುಮೊಳ್ಪುವಡೆದುಪಕರಣಂಗಳುಮಂ ವೇಳೆವೇಳೆಗಂ ಮೂಲಮಂತ್ರಸಂಹಾರನ್ಯಾಸತಂತ್ರದಿಂ ಪ್ರಾಕೃತರೂಪಮಂ ಕಳೆದು ಸೃಷ್ಟಿನ್ಯಾಸದೊಳ್ಪೊಸವುಟ್ಟುಗೊಳಿಪುದೆಂದುಂ, ಪಲನುಡಿಗಳಿಂ ಫಲಮೇನವನ ಭಕ್ತಿಯೊಂದಱೊಳಿ ಪಲವುಂ ವಸ್ತುಗಳುಮಂಗಿನಿದೆನಿಪುದೆಂದುಂ—ಇಂತು •ನುಡಿವ ಪಲವುಮೊಳ್ನುಡಿಗಳಂ ಕೇಳುತೊತ್ತಳ ಪಾಗಲಂ ಬಲವರುತ್ತೆ—

— ದೇವಸ್ಥಾನದ ವರ್ಣನೆ —

—ದೇವಸ್ಥಾನದ ಒಳಪಾಗಲಂ ಬಲವರುತ್ತೆ ದರ್ಶನಮಾಡಿದ

೧—ಶ್ರೀವತ್ಸಾಂಕರ ವರ್ಣನೆ—

ಅಲ್ಲಿ ತೇಜೋವಿಶೇಷದಿಂ ನೆಲದೊಳುದಿಸಿದ ನೇಸಱಂತೆಯುಂ, ಮೆಯ್ವೆತ್ತ ಸಪ್ತಾರ್ಚಿಯಂತೆಯುಂ, ಕಾಂತಿಯಿಂ ತುಂಬುವೆಱಿಯಂತೆ

ಯುಂ ಮೆಱೆವ ವಾದಾಹವನಿಶ್ಶಂಕರಪ್ಪ **ಶ್ರೀವತ್ಸಾಂಕರಂ** ಪೊಡೆಮಟ್ಟು ನಿಟ್ಟಿಸಿ ಮನದೊಳೆಣಿಸಿದಂ:—ಈದೇಶಿಕರಾಣ್ಮರ್ ತಾಳ್ಮೆಯೊಳ್ಪೊಡವಿಯು ಮಾಱದೊಳ್ಮೃಸ್ನೀರಂ ನಿಸ್ಸಂಗದೊಳೆಲರಂ ನಿರ್ಲೇಪತೆಯೊಳಾಗಸಮಂ ಸಮಂಗೊಂಡಿರ್ಪರ್. ಮತ್ತಮಿವನ ಗರ್ವದೇೞ್ಗೆ ದುರ್ಜ್ಞೇಯಮಪ್ಪುದು. ಮುಂ ಬಾಸೆವತ್ತೞೆಯಂ ಬರೆಯಿಸಲೆಳಸಿದ ಚೋೞನ ಗರ್ವದೊಡನೆ ಶರ್ವನೊಳ್ಪತ್ತಿಸುವ ಪರತ್ವಮನಿೞಕೆಗೆಯ್ದಂ. ಮತ್ತಮೀಕೂರಕುಲವಲ್ಲಭನೆಲ್ಲಾಪುರುಳ್ಗಳನಂಗೆಯ್ಯ ನೆಲ್ಲಿಯುವೋಲ್ತಿಳಿದಿರ್ಕುಂ. ಅಲ್ಲ**ದೊಡಾಭಾಷ್ಯಕಾರಂ** ಶ್ರೀಭಾಷ್ಯರಚನೆಯೊಳ್ ಇವನನೇತರ್ಕೆ ನೆರಂಗೊಂಡಂ!--ಎಂದೆಣಿಸಿ ದಂಡಪ್ರಣಾಮಂಗೆಯ್ದು ಮುಂತಣ್ಗೆ ನಡೆಯುತ್ತೆ,

೨— ಪನ್ನಿರಾೞ್ವಾರ ವರ್ಣನೆ —

ಅಲ್ಲಿ ಮುಂ ಸಿರಿಗೋವಲೂರೊಳ್ ಭಾಗವತನೊರ್ವನ ಕಿಱುವನೆಯೊಳಿಟ್ಟೆಣಿಸಿ ನಿಂದಂ ತಂತಮ್ಮ ನಿರ್ಬನ್ಧಮಂ ಬಗೆಗೊಳಿಸದೆ ಸಂತಸಮಿರ್ಪ ಸೌಜನ್ಯಮಂ ತಾನುಮನುಭವಿಸಲ್ಬೆಳಸಿ ಕತ್ತಲೆಯೊಳ್ ಬಂದು ಪೊಕ್ಕ ಮುಕುಂದಂಗೆ ನೇಸಱಂ ಜ್ಞಾನಮಂ ಸೊಡರ್ಗೆಯ್ದು ಸಿರಿಮೆಯ್ಯಂ ಕಣ್ಗೊಳಿಸಿ ಜಸಂಬೆತ್ತ ಮೊತ್ತಮೊದಲ ಮೂಱುಂ **ಸೂರಿ**ಗಳುಂ। ಸೂಜಿಯಂ ಬೞಿವಿಡಿದು ದಾರಂ ಬರ್ಪಂತೆ ಕರುಣಿಪುದೆಂದು ವರವಂ ಬೇಡಿ ಮೃಡನಂ ವಿಡಂಬಿಸಿ ಕಡೆಗಣಿಸಿದ ವೈರಾಗ್ಯಸಾರಂಬೆತ್ತ **ಭಕ್ತಿಸಾರ**ನುಂ। ಪುಟ್ಟಿದಂದುಮೊದಲ್ ತಾಯ ಮೊಲೆವಾಲಂ ಮುಟ್ಟದೆ ಭಗದ್ಗುಣಾನುಭವಮೆ ತನಗೆ ಧಾರಕಪೋಷಕಭೋಗ್ಯಮಾಗಿ ಬಳೆದೇೞ್ಗೆವಡೆದ **ಶಠಕೋಪ**ನುಂ। ಶ್ರೀವೈಷ್ಣವರ್ ಕಳವುಗೊಂಬರಲ್ತೆಂಬ ನಂಬುಗೆಯಿಂ ಪಾವುಗೊಡದೊಳ್ ಕೆಯ್ಯಿಟ್ಟು ಗೆಲ್ದು ಭಾಗವತಕುಲಶೇಖರನೆನಿಸಿದ **ಕುಲಶೇಖರ**ನುಂ। ಪಾಂಡ್ಯಸಭೆಯೊಳ್ ಪರವಾದಿಗಳಂ ಜಯಿಸಿ ಹರಿಯೇ ಪರತತ್ತ್ವಮೆಂದು ನೆಲೆಗೊಳಿಸಿ ಪೆರ್ಮೆವೆತ್ತ **ವಿಷ್ಣುಚಿತ್ತ**ನುಂ। ಪಸಿದು ಬಸವೞಿದಿರ್ಪ ದೆಸೆಯೊಳ್ ಶ್ರೀರಂಗನಾಥಂ ವಟುರೂಪದೊಳ್ಪೊತ್ತು

ತಂದಿತ್ತ ನೈವೇದ್ಯದ ಪೊಂದಟ್ಟೆಯಮೃತಾನ್ನಮಂ ಸವಿದು ಸತ್ವಶುದ್ಧಿವೆತ್ತ **ಭಕ್ತಾಂಘ್ರಿರೇಣು**ವುಂ। ಸಿರಿಯರಸನಡಿವಿಡಿದು ಮುಡಿವರೆಗಂ ನಿರವಿಸಿ ನಿಟ್ಟಿಸಿದ ಕಣ್ಗಳಿಂ ಪೆಱತೊಂದುಮಂ ನಿಟ್ಟಿಸೆನೆಂದು ನುಡಿದಂತೆ ನಿರ್ವಹಿಸಿದ **ಮುನಿವಾಹನ**ನುಂ। ತನ್ನ ವಲ್ಲಭೆಯಪ್ಪ **ಕುಮುದವಲ್ಲಿ**ಯಾಣತಿಯಿಂ ಗೆಯ್ವ ತದೀಯಾರಾಧನಕ್ಕೆ ತಕ್ಕ ಪೊನ್ನೊಡಖಂಡಯುದ ಬಲ್ಪಿಂದವೆ ಮೂಲಮಂತ್ರಮಂ ಕೊಂಡೆಸೆವ **ಪರಕಾಲ**ನುಂ। ಎಳವೆಯ್ಯೊಳೆ ಬಿನ್ನಣಂ ಪಣ್ತದಱಿಂದರ್ಚಾವತಾರದೊಳಾಸಕ್ತಿ ಪುಟ್ಟೆ ಮುಂ ವಿಭವಾನುರಕ್ತೆಯರಪ್ಪ ಗೋಪಿಯರಂ ಕೀೞ್ಪಡಿಸಿ ನೆಗೞ್ದ **ಗೋದಾದೇವಿ**ಯುಂ। ತೆಂಕಲ್ಪೊಣ್ಮಿದ ನೇಸಱಂತೆ ತೋಱಿ ತನ್ನಂ ಬಸಂಗೆಯ್ದಾಳ್ದ **ಶಠಕೋಪರ** ಸಿರಿಯಡಿಗಳನುೞಿದು ಪೆಱತೊಂದನಱಿಯೆನೆಂದು ಆಚಾರ್ಯನಿಷ್ಠೆಯೊಳ್ ನೆಲಸಿ ನಿಂದ **ಮಧುರಕವಿಯು**ಮೆಂಬೀಪನ್ನಿರ್ವರುಂ ದಿವ್ಯಸೂರಿಗಳಾವಗಮನಿತೂೞಿಗಂಗಳಂ ಗೆಯ್ವುದಱಿಂ ನಿರ್ಭರರಾಗಿ ತಾಮವನ ಗುಣಾನುಭವಂಗಳೊಳ್ಮಗ್ನರೆನಿಸಿ ಮೆಯ್ಮಱೆದಿರ್ಪ **ಪಾವು ಪಕ್ಕಿ ಪಡೆಯೆೞೆಯ**ರುಂ। ಮತ್ತಮೆಡಬಲದೊತ್ತಿನೊಳ್ಕುಳ್ಳಿರ್ದ ಉಳ್ಳ ಪೊೞ್ತೆಲ್ಲಮುಂ ತನ್ನ ಸ್ವರೂಪರೂಪಗುಣಂಗಳನನುಭವಿಸುತ್ತುಂ ತಣಿಯದೆ ಪೊಸಪೊಸತೆನಿಸಿ ಸವಿವ **ಸಿರಿ ಪೊಡವಿ ನೀಳೆ**ವಡದಿಯರುಂ ಬೆರಸು ಪಿರಿಯೋಲಗಂಗೊಂಬ **ಪರವಾಸುದೇವ**ರ ಠೀವಿಯಂ ನಿರವಿಸಿ ಕವಿವಾಸೆಯುಚ್ಚರಿಮುಱಿವೆಯೆಟ್ಟಿಱಿಕ್ಕಿಱಾನಂದಂಗಳ ತೆರೆಗಳೊಳ್ ತೇಲ್ವ ಬಗೆಯಂ ಪದುಳಂಗೊಳಿಸಿ ಸಾಷ್ಟಾಂಗಮೆಱಗಿ ಕಿಱಿದುಂ ದೂರಂ ನಡೆದು —

೩— ಸುದರ್ಶನ, ಕಾಂಚೀಪೂರ್ಣರ ವರ್ಣನೆ —

ಅಲ್ಲಿ ಚಂಚಲತೆಯನುೞಿದು ಮಿಂಚುವಳ್ಳಿಗಳ್ ಪುಂಜಮಾದಂತೆಯುಂ, ನಟ್ಟನಡುವಗಲ್ಗೆ ಬಂದ ಬೇಸಗೆಯ ನೇಸರ್ವಟ್ಟನಂತೆಯುಂ ನಿಟ್ಟಿಸಲರಿದೆನಿಸಿದ ಅಪ್ರಾಕೃತತೇಜೋಮಯಮಾದ **ಸುದರ್ಶನ**ರಂ

ದರ್ಶನಂಗೆಯ್ದು ಮಣಿದು ಆವೊತ್ತಿನೊಳ್ಸಕಲಕಲ್ಯಾಣಗುಣರಪ್ಪ **ಕಾಂಚೀಪೂರ್ಣ**ರಂ ನಮಿಸಿ, ಮುಂತಣ್ಗೆ ನಡೆದು —

ಳ— ಯದುಗಿರಿ ನಾಯಕಿಯ ವರ್ಣನೆ —

ಅಲ್ಲಿ ಮುಂ ಪಾಲ್ಗಡಲಿಂ ಪೊಱಮಡುವೆಡೆಯೊಳಡಿದೊಡರ್ದ ಪವಳಗುಡಿಗಳ ಪಾಂಗನಂಗೀಕರಿಸಿದ ಕೆಂಬರಲ್ಗಳುಂ, ಅವಱ ಕವಡು ಗೊನೆಯೊಳ್ಸಲ್ಕಿದ ಮುತ್ತುಗಳ ಬಿಡಯಮಂ ಬಿತ್ತರಿಪ ಬಟ್ಟುಗುರ್ಗಳುಂ, ಕೆಂದಾವರೆವನೆಯೊಳ್ ಬಂಡುಗೆಸಱಿಱೊಳ್ಪತ್ತಿದ ಪೊಸಎಸಟಿಱಂಬ ಸಂದೆ ಯಮಂ ಸಮನಿಸಿರ್ಪ ಕೆಂದಳಮುಂ, ಸಿರಿಯಡಿಯಲರ್ದಾವರೆಯಂ ಸುತ್ತಿಮುತ್ತಿದ ಬಂಡುಣಿವಿಂಡನಂಡಲೆವ ನೀಲದ ಪೆಂಡೆಯಮುಂ, ಬೆನ್ನೊಳ್ಬಂದ ಚಂದಿರನ ಬೆಳ್ಗದಿರ್ಮೆಯ್ಯೊಳ್ಪುದುಗಿದ ಸೊಗಸಂ ಬಗೆ ಗೊಳಿಪ ದುಗುಲಮುಂ, ಪೊಂಜೆಳೆಮೆಯ್ಯ ಕಿಱುಗುಡಿಗಳಲರ್ವಿಡಿ ದಳೆದು ಪರ್ಬಿ ಪಡಲ್ವಟ್ಟಂತಿರ್ಪ ಕಿಱುಗಂಟಿಗೆಜ್ಜೆಗಳಂ ತಳೆದ ಪೊಂಬಲೆ ಯುಡೆನೂಲುಂ, ಆಡಿಯುಮಂತಮುಮಿಲ್ಲೆಂಬ ವೇದದಂತೆ ಮಧ್ಯಮು ಮಿಲ್ಲೆಂಬೆಮ್ಮವಂದಿಗರ ನುಡಿಯಂ ನನ್ನಿಗೆಯ್ವ ಪುಯ್ಯಡುವುಂ, ಸರ್ವ ಲೋಕಮಾತೆಯಪ್ಪ ತನ್ನ ಮಕ್ಕಳಂ ಪೊರೆಯಲ್ಕೆ ತಕ್ಕ ಪೆರ್ಮೊಲೆಯುಂ, ಪೊರ್ದುಗೆಗೊಳಿಸಲ್ಕೆ ಚೇತನೇಶ್ವರರಿರ್ವರಂ ತಿರ್ದುವ ಪುರುಷಕಾರ ಕೃತ್ಯಮೆರಡಱೊಳಟ್ಟುಂ ತೀರ್ಚಿ ಬೇಳ್ಪು ಬಿನ್ನಣಂ ಮೊದಲಾದುವನಿತುಂ ಭಕ್ತರನನುಗೊಳಿಪುದರ್ಕೆ ಭಯಮರದಂಗಳೆರಡುಂ, ಕೋಪಮಂ ತಣ್ಪು ಗೊಳಿಸಿ ಕೃಪೆಯನೆಟ್ಟಱಿಸಿ ಈಶ್ವರನನನುಗೊಳಿಪುದರ್ಕೆ ತಕ್ಕ ಲೀಲಾ ಕಮಲವಹಂಗಳೆರಡುಮಾಗಿ ಪಚ್ಚುಗೊಂಡು ನಿರ್ವಹಿಪ ನಾಲ್ಕುಂ ಶ್ರೀಹಸ್ತಂಗಳುಂ, ತನ್ನ ಮಾಯಾಲೇಶದಿಂ ಮೂಱುಂ ಜಗಮಂ ಮೋ ಸಂಗೊಳಿಪ ಮುಕುಂದಂಗೆ ಮೋಹರಸಮಂ ಮುಳುಕುನೀರೆನಿಪ ಮುಗು ಳ್ನಗೆಯುಂ, ಸೊರ್ಕಿ ಪಕ್ಕದೊಳಿರ್ಪಿನಿಯನೊಳಂ ಬೆದಱುಗೊಂಡಿದಿರೊ ಳಿರ್ಪ ತನಯರೊಳಂ ತಱುನಾಯಿಂ ಪ್ರಣಯಕರುಣಾರಸಂಗಳ್ ಕರೆ

ಗಣ್ಮೆ ಕೊಂಕಿ ಕೂರ್ತು ಕುಡಿವರಿದುಂ ಕವಿದು ಕರಗಿ ಕದುಬುಗೊಂಡುಂ ತಣಿಯದ ನೋಟಂಗಳುಂ, ಪೆಣ್ತನದ ಸಾಜದಿಂದಮೆ ಆದೊಡಂ ಪುರುಷೋತ್ತಮನ ಚಿತ್ತಮನುನ್ಮತ್ತಂಗೆಯ್ದು ತನ್ನ ವೈಸಿರಿಯಂ ನಿಟ್ಟಿಸಲ್ಕೆಂಬಂತೆ ನಸುಮಣಿದ ಸಿರಿಮೊಗಮುಮಾದ **ಯದುಗಿರಿನಾಯಕಿಯ** ಸನ್ನಿಧಿಯಂ ಸಾರ್ದು ಸಾಷ್ಟಾಂಗಪ್ರಣಾಮಂಗೆಯ್ದಿಣಿಸಿದಂ :—

ಇವಳ್ಗಡ ! ಪಾಲ್ಗಡಲನೇೞ್ ನೋಂಪಿಯ ಸಂಪದಮುಂ, ಕಮಲವನದೊಳ್ಗಂಪಿನ ಗುಂಪುಂ, ವನಮಾಲಿಯೆರ್ದೆವನೆಯೊಳ್ತೊಳಪ ಮಂಗಳರತ್ನದೀಪಮುಂ, ಪಟ್ಟನುಡಿವೆಂಡಿರ ಬೈತಲೆಮಣಿಯುಂ, ಎಲ್ಲಾ ಲೋಗರುಕ್ಕೆವದ ಪಕ್ಕೆಯುಂ, ಎಮ್ಮ ಭಾಗ್ಯದೇೞ್ಗೆಯುಂ, ಮತ್ತಂ ಶೀಲದ ನೆಲೆವೀಡುಂ, ದಯೆಯ ತಾಯ್ವನೆಯುಂ, ಚಾಗದಾಗರಮುಂ, ಬಿನ್ನಣದ ಬೆಳಗೆಯ್ಯುಂ, ಸೌಲಭ್ಯದ ಶಾಲೆಯುಂ, ಒಳ್ಪಿನೋದುವೞ್ಯುಂ, ಒಳ್ನುಡಿಯ ಗುಡಿಯುಂ, ಮುಱುಕದ ಕರುನಾಡಮುಂ, ಪಸದನದ ಪಸರಮುಂ, ಗೆಲ್ಲದ ಗರುಡಿಯುಂ, ಚದುರ ಚೌಕಿಯುಂ, ಐಸಿರಿಯರಮನೆಯುಂ, ಸಂತಸದಂತವುರಮುಂ, ಸಕಲ ಸದ್ಗುಣಂಗಳ ಕಣಿಯುಮಾಗಿರ್ಪುದಱಿಂ ಎಱೆಯನ ಸಿರಿಯೆರ್ದೆಯಂ ಸೆಱೆಗೊಂಡುದಲ್ಲದೆ ಬಗೆಯುಮಂ ಬಂದಿವಿಡಿದಿರ್ಕುಂ. ಆ ಮಾಧವನುಮಿವಳ ತವರ್ಮನೆಯಂ ಮನಂಬುಗೆ ಪಾಲ್ಗಡಲನೊಳ್ಪುವಡಿಸಿರ್ಕುಂ. ಎಡೆವಿಡದಿವಳಂ ನಿಟ್ಟಿಸಿ ದಿಟ್ಟಿಯೊಳ್ಕೊಂಡಿರ್ಪುದಱಿಂ ಪದ್ಮಾಕ್ಷನೆನಿಸುಗುಂ. ಇವಳೊಡವುಟ್ಟೆಂದು ಚಂದಿರನಂ ಬಗೆದಂದಿರ್ಕುಂ. ಮಿಕ್ಕುದೇಂ ? ಆವಗಂ ಜಗಮನೊಗಯಿಪ ಬಿಟ್ಟಿಗೆಯ್ಮೆ ಇವಳೊಲ್ದು ನಿಟ್ಟಿಪ ದಿಟ್ಟಿಯಿಂ ಸಫಲಮೆಂದೆನಿಸಿರ್ಕುಂ. ಅಱಿಯದಂ ಅಱಿವಂ ಆಱಂ ಆರ್ಪಂ ನಲ್ಲಂ ಪೊಲ್ಲಂ, ಬಡವಂ ಬಲ್ಲಿದನಾಳರಸನೆಂದು ಕಿಱಿದು ಪಿರಿದೆನಿಸಿ ಸೃಜಿಸುವಾಗಳಿವಳ ಕಟಾಕ್ಷತಾರತಮ್ಯಮನೀಕ್ಷಿಸುತ್ತೆ ಸೃಜಿಸುವಂ. ದೇವರೊಳ್ ಪಿರಿಯರನಱಿಯದಱಿಸುವ ಪೊಸಯೋಗಿಗಳ್ಗೆ ತನ್ನೆರ್ದೆಯೊಳಿವಳಡಿಯಲತಿ

ಗೆಗುಱುಪಂ ತೋಱಿ ಪರತ್ವಮಂ ಪ್ರಕಟಿಸುವಂ. ಸಡಿಲ್ವ ಮುಡಿಯುಂ ಸಡಿವ ಉಡೆತೊಡಿಗೆಗಳುಂ ಬೆಮರ್ವರಂಗಮುಂ ಪೆರ್ಚುವ ಸುಯ್ಯೆಲರು ಮಾಗಿ ಕಡಲಂ ಕಡೆವಾಗಳ್ತಾಂ ಪಟ್ಟ ಪಾಡನಿತುಮಂ ಇವಳಂ ಪಡೆದ ಸಂತಸಗಡಲ ಸೀರ್ಪನಿಯೊಳೆ ಕಳೆದಂ. ಪಾಲ್ಗಡಲ ನಡುಮಡುವಿನತ್ತಣಿಂ ಗಮ್ಮನೆ ಪೊಣ್ಮುವಾಗಳಿವಳ ಮೊಗಸಿರಿಯುಂ ತೋಳ್ಬಾಂಬಳ್ಳಿಗಳಂ ಮೊಲೆಸೊದೆಗೊಡಂಗಳಂ ಕಣ್ಗೊಳಿಸಿ ಮುನ್ನೊಗೆದ ಸಸಿ ಬಾಂಬಳ್ಳಿ ಸೊದೆಗೊಡಂಗಳನಿವರ್ಕೆ ದಿಟ್ಟಿದೋಸಂ ತಟ್ಟದಂತೆ ನಿವಾಳಿಸಿ ಕಳೆದು ವೆಂದು ಕಡೆಗಣಿಸಿರ್ಪಂ. ಈ ಜಗಮನಿತುಮನಿವಳ್ ಪೊಟ್ಟುಗಳೆವ ಬಿನದ ದಾಟದ ಪುರುಳೆನಿಸಿಯುಂ, ಪರಮಪದಮನಿವಳ ನೆಲೆವಾಟ್ಕೆಯರಮನೆ ಯೆನಿಸಿಯುಂ, ನಿತ್ಯಮುಕ್ತರನಿಬರನಿವಳೂೞಿಗದವರೆನಿಸಿಯುಂ, ತನ್ನು ಳ್ಳೊಡವೆಯನಿವಳೊಡವೆಯೆನಿಸಿಯುಂ, ತಣಿಯದೆ ತಾನುಮಿವಳ ಬೞಿಸಂದಿರ್ಕುಂ. ಸಾಸಿರ್ವೊಗಕ್ಕೈಕಾಲ್ವೆತ್ತ ವಿಶ್ವರೂಪಮಂ ಪೊತ್ತುಂ ಇವಳ ಲೀಲೆಗಳಂ ಕಡೆಗಾಣಲಾಱದೆ ಪೊಸಪೊಸತನನುಭವಿಸುತ್ತಾ ನಂದಮಯನೆನಿಸಿರ್ಕುಂ. ಮುಂ ಸೀತಾವತಾರದೊಳ್ ಸಿರಿಗೈಕಾಲ್ಮೊಗ ದಾವರೆಗಳುಂ ಕಣ್ನೆಯ್ದಿಲೆಗಳುಂ ನಾಸಾಚಂಪಕಮುಂ ಬಾಯ್ದೊಱೆ ಬಂದುಗೆಯುಂ ಪಲ್ಮೊಲ್ಲೆಗಳುಮೆಂಬ ಪಲವುಂ ತೆಱದ ಕಮ್ಮಲರ್ಗಳಂ ತಳೆದೆಸೆವ ಪೊಸವಗೆಯ ಪೂಜಳೆಯಂತೆ ರಂಜಿಪ ಮೆಯ್ಯ ಸಿರಿಯೊಳಂ ಒಳ್ಗುಣಂಗಳೊಳ್ಗನೊಳಂ ಮಗ್ನನೆನಿಸಿ ಅವಳ್ಬೆಸಸಿದೊಡನೊಡಂಬಟ್ಟು ಸರ್ವಜ್ಞತೆಯನುೞಿದು ಮೇಗಣ್ಗೆ ಬರ್ಪುದನಱಿಯದೆ ಕದುಬು ಗೊಂಡು ಬಿಲ್ಲಂಬುಗೊಂಡು ಪೊಮ್ಮಿಗಮಂ ಬೞಿಸಂದಂ. ಇಂತು ಕಾಂತ ನಂ ತನ್ನ ಗುಣಂಗಳಿಂ ಬಸಂಗೆಯ್ದಿರ್ಪ ಇವಳಡಿದಾವರೆಯ ಪೊರ್ದುಗೆ ಯೊಂದುಂಟೆಂಬ ಬಲ್ಪಿಂದೈಸೆ ಆವೆಮ್ಮ ಪಿಂತಣ ಕರ್ಮಕ್ಕಂಜದೆ ದಿಟ ವಿಡಿದಿರ್ಪುದು !—ಎಂದು ಪಲವುಂ ವ್ಯೆಮೊಗಳಂ ಭಾವಿಸುತ್ತೆ ಮತ್ತಮರೆ ಮುಗಿದ ಕಣ್ಮಲರ್ಗಳುಂ, ಸುರಿವ ಸೊಗದಾಲಿನೀರುಂ, ಸೆರೆಬಿಗಿದ

ಕೊರಲೊಳ್ಸಲ್ಕಿದ ತಡವಡುವ ಅಸಿದನಿಯುಂ, ಕಡಬಂ ಪೂಶಂತೆ
ಮೆಯ್ಯೊಳ್ಪೊಣ್ಮಿದ ನವಿರುಮಾಗಿ ನುತಿಗೆಯ್ದನದೆಂತೆನೆ :—

—ಸ್ತುತಿ—

ಜಗನ್ಮಾತೆ ! ನೀಂ ಪಾಲ್ಗಡಲೊಳ್ಪುಟ್ಟಿ ತಾವರೆಯೊಳ್ದಟ್ಟಡಿ
ಯಿಟ್ಟು ಬಿಡುಗಣ್ಣರ ಮುಡಿದಂಡೆಗಳೊಳ್ನಡೆಗಲ್ತು ನಾರಾಯಣನೆ
ರ್ದೆಯ ಎಳದೊಳಚಿಸರಂಗಳೊಳುಯ್ಯಾಲಾಡುತ್ತಿರ್ಪ ನಿನ್ನ ಮೆಲ್ಪನಾರ್ಬ
ಣ್ಣಿಸುವರ್ ? ನೀಂ ಪುಟ್ಟಿದುದಱಿಂ ಪಾಲ್ಗಡಲೊಳ್ಪೆಂಪುಂ, ನೆಲಸಿದು
ದಱಿಂ ತಾವರೆಯೊಳ್ಕಂಪುಂ, ಸೋದರಮಾದುದಱಿಂದಮರ್ದಿನೊಳಿಂಪುಂ,
ಚಂದಿರನೊಳ್ತಣ್ಪುಂ ಸಮನಿಸಿರ್ಕುಂ. ಜಗನ್ಮಂಗಲಮೆನಿಪ ಶಾಱ್ಙ್ಗ
ಯಂಗಮುಂ ನಿನ್ನ ಸಂಗತಿಯಿಂ ಮಂಗಲಮೆನಿಪುದು. ಅಲರ್ಗಂಪುಗಳುಂ
ರನ್ನಗದಿರ್ಗಳುಂ ಪುದುಗಿದಂತೆ ಪುದುಗಿರ್ಪುದಱಿಂ ನೀನುಮಿನಿಯನು
ಮೊಂದೆ ಪುರುಳೆಂಬರ್. ಮಱುಕಮುಳ್ಳೊಡಂ ಮುಂತಣ ಹಿತಮನೆಳಸಿ
ಮಕ್ಕಳಂ ಶಿಕ್ಷಿಪುದು ತಂದೆಗೆ ಸಾಜಮಾದುದಱಿಂದೆತ್ತಾನುಮೊರ್ಮೆ
ಕನಲ್ವಿನಿಯನ ಕನಲ್ಕೆಬಿಸುಪಂ ತಣ್ಪಿಸಿ ಎಮ್ಮಂ ಕಾಪಿಡವೇೞ್ಪುದು.
ಮುಂ ಲಂಕೆಯೊಳ್ಸಿಂಗರದೋಂಟದೊಳ್ನಿಮ್ಮಡಿಗಳಂ ಜರೆದು ನುಡಿದದ್ದರಿಸಿ
ಬೆದಱಿಸಿ ಕಾಡಿ ಕೈದುವಂ ನೆಗಪಿ ಕಕ್ಕಸಂಗೊಂಡ ರಕ್ಕಸನ ಪೆಂಡಿರಂ
ಕಡಿಕಂಡಂಗೆಯ್ವೆನೆಂಬ ರಾಮದೂತನ ಬಿಗಿದ ಮುಷ್ಟಿಯುಂ
ಬಿರ್ಚಿಸಿದ ನಿನಗೆ ನೀಂ ಬೆಸಸಿದುದಂ ಹಸಾದಮೆಂದೆಸಗುವ ಮುಕುಂ
ದನಂ ತಣ್ಪುಗೊಳಿಪುದರಿದಲ್ತೈಸೆ ! ಕಡುನೇಹದಿಂ ತೊರೆದ ಬಗೆ
ಮೊಲೆಯ ಮಱುಕವಾಲಂ ಕೊರಲ್ವರೆಗಂ ತುಂಬುವನ್ನಮೀಂಟಿ ಸವಿಯೆ
ಸೊರ್ಕೇಱಿ ಸೊದೆಯನುಪ್ಪೆಸರ್ಗೆತ್ತು ಸೊದೆಯುಣಿಗಳಂ ಗಣಿಸದಿರ್ಪೆಂ.
ಪರಿವ ಪಾವು ಉರಿವ ಕಿರ್ಚು ಮೊದಲಾದುವನಱಿಯದೆಳಸುವೆಳಸಿ
ಸುವಂ ತಡೆದು ಕಾಪಿಡುವಂತೆ ದುರ್ವಿಷಯಕ್ಕೆಱಗದಂತೆವೊಲೆಮ್ಮಂ
ಪದುಳಂಗೊಳಿಪುದೆ ಲೇಸು. ಅಂತಲ್ಲದೊಡೆ ಮುಂತಣ್ಗೆ ಜಗದೀಶಂ

ಎನ್ನಾಣತಿಯಂ ಮೀಱಿದನೆಂದು ಕಡುಗನಲಿ ಕೈದುವಿಡಿದು ಖತಿಗೊ
ಳ್ವಿನಮಾನುಮೆನ್ನ ಕೀೞ್ಗಯ್ಮೆಗಳಂ ನೆನೆದು ನಡನಡುಗಿ ಕಾತರಿಸಿ
ಕಣ್ಗೆಡುವಿನಮೆಮ್ಮಿರ್ವರುಮಂ ನಿಟ್ಟಿಸಿ ದೆಸೆಗೆಟ್ಟು ಅವನನೊಡಂಬಡಿಪು
ದರ್ಕೆ ನೀನಾವ ಬಗೆಯ ಸೊಗಸುನೋಟಂಗಳನಾವ ತೆಱದ ಮೆಲ್ನುಡಿ
ಗಳನಾವ ಪಾಂಗಿನ ಶೃಂಗಾರಲೀಲೆಗಳನೆಸಗುವೆಯೋ ಏಂ ಕೋಟಲೆಗೊ
ಳ್ವೆಯೋ ! ಅಱಿತಱಿತಡಿಗಡಿಗಾನೆಸಗಿದ ದುಷ್ಕೃತಂಗಳನೆಣಿಸಿ ಕಾದೆಣ್ಣೆ
ಸೋಂಕಿನೊಳ್ತಣ್ಣೀರ್ ಪರಿವಂತೆ ತಣ್ಣಗೆ ಬಿಸುಪೇಱಿ ಮುಪ್ಪುರಿಗೊಂಡ
ಪುರ್ಬುಮಗಿವ ಬಾಯ್ದೆಱೆಯುಂ ಕಡಿವ ಪಲ್ಗಳುಂ ಕೆಂಪಡರ್ದ ಕಡೆ
ಗಣ್ಣುಂ ಕಿಡಿಸೂಸುವ ನಟ್ಟಾಲಿಯುಂ ಕೆತ್ತುವ ಮೀಸೆಯುಮುಬ್ಬ
ಸಂಗೊಳ್ವ ಸುಯ್ಯೆಲರುಂ ನಸುನಡುಗುವ ಕೈಕಾಲ್ಗಳುಮಾಗಿ ನೆಗಪಿದ
ಪೊಂಬೆತ್ತದಿಂ ಪೂಣ್ದು ನಡೆವೆಡೆಯೊಳ್ ಬಿಱುಗಾಳಿಯೊಳ್ತೆರೆಮಸಗೆ
ಮಿತಿಮೀಱಿಯುರ್ಕಿಯುರ್ಕಿ ಕವಿದು ಬರ್ಪ ಕಡಲ ಕಡುಪಂ ತಡೆವ
ವೇಲೆಯಂತೆ ನೀನುಮವನೊಳ್ಪಡಿಬರಿಸಿ ಅಸ್ತ್ರಪ್ರತ್ಯಸ್ತ್ರನ್ಯಾಯದಿಂ ಭಯ
ಪ್ರಣಯಂಗಳೊಂದುವೆರಸಿ ನಸುಮಣಿದ ಮೊಗಮುಂ ಬೆರ್ಚುವ ಮನ
ಮುಂ ಬೆದಱುನೋಟಮುಮಾಗಿ ನಿಂದವನ ಕೋಪಮನಿನಿಸಿನಿಸುಂ
ತಣ್ಪುಗೊಂಡಿೞಿತರ್ಪುದಂ ಕಂಡು “ಏನಿದೀಯಱಿಯದ ಮಕ್ಕಳೊಳೀ
ಪರಿಯ ಕೋಪಾಟೋಪಮುಚಿತಮಲ್ತು ಸಾಲ್ಗುಂ, ಇಂದು ಮೊದಲೆಂ
ದೆಂದುಮಿವರ್ತಪ್ಪುಗಳನೆಸಗರ್, ಪಿಂತಣ ತಪ್ಪಂ ಮಱೆತು ಸಲಪುವು
ದೆಂದು” ನಲ್ವಾತುಗಳಂ ನುಡಿಯುತ್ತೆ ಮೆಲ್ಲಮೆಲ್ಲನೆ ಪತ್ತೆಸಾರ್ದವನ
ನೆಗಪಿದ ಕೆಯ್ಯನೊರ್ಕೆಯ್ಯೊಳಾರಯ್ಯುತ್ತೆ ಪೆಱತೊರ್ಕೆಯ್ಯಿಂದೆನ್ನಂ
ಪಿಡಿದೆೞೆದವನಡಿದಾವರೆಯೊಳ್ ಕೆಡಪಿ ಪುರ್ಬುಗಂಟಂ ಬಿರ್ಚಿಸಿ ದಿಟ್ಟಿ
ಯಂ ತಣ್ಪುಗೊಳಿಸಿ ನಗೆಯಂ ಮೊಳೆಯಿಸಿ ಬಗೆವನೆಯೊಳಗೋಣೆಯೊಳ್
ಮಲಗಿದ ದಯೆಯನೆಚ್ಚಱಿಸಿ ಕೃತಾರ್ಥೆಯಪ್ಪೆ. ನೀನೊಡತಿಯುಂ
ತಾಯುಂ ದಯಾಳುವುಮಾದುದಱಿಂದೆಮ್ಮವರೆನ್ನಂ ನಿನ್ನ ಕೆಯ್ಯೆಡೆಗೆ

ಯ್ದುರ್. ಎನ್ನ ಗುಣದೋಷಂಗಳನೆಣಿಸದೆ ಸಲಪುವೇಟ್ಟುದೆಂದು ಸಾ ಷ್ಟಾಂಗವೆಱಗಿ ತೀರ್ಥಪ್ರಸಾದಂಗೊಂಡು ಮುಂತಣ್ಗೆ ನಡೆದು—

೫—ಗಜೇಂದ್ರವರದರು—

ಅಲ್ಲಿ ಪೊಂಬೆಟ್ಟುಗೊಂಡೇಱು ಅಮರ್ದುಂಡ ಕಾರ್ಮುಗಿಲಂ ಪೋಲ್ವ ಗರುಡಾರೂಢನಪ್ಪ **ಗಜೇಂದ್ರವರದ**ನಂ ವಂದಿಸಿ ಕಿಱಿದುಂ ನೆಲನಂ ಕಟಿದು—

೬—ಶ್ರೀರಾಮಾನುಜಾಚಾರ್ಯರ ವರ್ಣನೆ—

ಅಲ್ಲಿ ಮನುಜಾವತಾರಕ್ಕಮನುಗುಣಮಾಗಿ ಸಾಸಿರ್ವೆಡೆಯುಂ ಮಱಸುವೆಡೆಯೊಳ್ ಮಱೆದುಟಿಸಿದ ಪಾಶೇಷನ ಕೆಲವುಂ ಬೆಳ್ವೆಡೆ ಗಳಂತೆಯುಂ, ಒಳಗಿಟ್ಟಣಿಸಿದ ಸತ್ವಶುದ್ಧಿ ಪೊಱಸೂಸಿದಂತೆಯುಮೆಸೆವ ವಿಮಲೋರ್ಧ್ವಪುಂಡ್ರಂಗಳುಂ। ಶ್ರೀಮನ್ನಾರಾಯಣಂಗೆ ಭಕ್ತರೊಳ್ಪುಟ್ಟಿ ದನುರಾಗಮೀಭಕ್ತೋತ್ತಮರೊಳ್ ಸಾಕಾರಮಾಗಿ ಮೆಯ್ಯಂ ಪತ್ತಿದಂ ತಿರ್ಪ ಸಿರಿಗಾವಿಯುಡೆಯುಂ। ಸತ್ವಗುಣಂ ಮುಪ್ಪುರಿಗೊಂಡಂತೆ ತೋರ್ಪ ಯಜ್ಞೋಪವೀತಮುಂ। ಭಗವದ್ವಿಷಯಮನುಟಿದು ಕೆಲಕ್ಕೆ ತೊಲಗ ದಂತೆ ತನ್ನ ಶಿಷ್ಯರ ಕರಣತ್ರಯಮಂ ನಿಗ್ರಹಿಪುದರ್ಕಂ, ಮತ್ತಮೊಂದ ಱೊಳೊಂದುವರೆದಿರ್ಪ ಮೂಱುಂ ಗುಣಂಗಳಂ ದಂಡಿಪುದರ್ಕಂ, ಮೋಕ್ಷ ವಿರೋಧಿಯಪ್ಪ ತ್ರಿವರ್ಗಮಂ ತಱುಬುವುದರ್ಕಂ ಕೊಂಡಂತೆಸೆವ ತ್ರಿದಂಡಮುಮಾಗಿ—ವೈಯ್ವೆತ್ತ ವಿಷ್ಣುಶಕ್ತಿಯಂತೆಯುಂ, ಪ್ರಾಣಂಬೆತ್ತ ಸೇನೇಶನಾಣತಿಯಂತೆಯುಂ, ವ್ಯಕ್ತಿವಡೆದ ಶಠಾರಿಯ ಭಕ್ತಿಯಂತೆಯುಂ, ಸನ್ನದಮಾದ ನಾಥಮುನಿಯ ಬಿನ್ನಣದಂತೆಯುಂ, ಸಾಕಾರಮಾದ ಯಾ ಮುನಾರ್ಯರೆಣಿಕೆಯಂತೆಯುಂ, ಮತ್ತಂ ಶಮೆಯ ಸೀಮೆಯಂತೆಯುಂ, ದಮೆಯ ಭೂಮಿಯಂತೆಯುಂ, ದಯದ ಕಣದಂತೆಯುಂ, ವೈರಾಗ್ಯ ದೇಟಿಕ್ಕೆಯಂತೆಯುಂ, ಶ್ರೀವೈಷ್ಣವರ ಭಾಗ್ಯದಂತೆಯುಂ ತೋರ್ಪ **ಶ್ರೀ ರಾಮಾನುಜ**ರಡಿಗೆಱಗಿ ನೇಸಱ ತೇಜದೊಳ್ಬಸಿಯದ ತಣ್ಪಂ ಬೆರಸಿದಂತಿ

ಮೆಯ್ವೊಗರುಂ, ಪಲವುಂ ಬಿಜ್ಜೆಗಳ ಪಡಿನೆಟಿಲಂ ತನ್ನೊಳೊಳಕೊಂಡ ರನ್ನಗನ್ನಡಿಯಂತಿರ್ಪ ಮೊಗಸಿರಿಯುಂ, ತೆರೆನೊರೆಯನುಟಿದಿರ್ಪ ಮುದ್ದುಗಡಲ ಮಡುವಂ ಪಡಿಗೊಳ್ವ ಗಾಂಭೀರ್ಯಮುಂ, ಕರೆಗಣ್ಮಿ ಕವಿವ ಕರುಣಾಮೃತಾಬ್ಧಿಕಲ್ಲೋಲಂಗಳಂ ಪೋಲ್ವ ಕುಳಿನೋಟಮುಂ, ಬೆಳ್ವಲ್ವೆಳಗಿನ ಬಿತ್ತರದಂತೆಸೆವ ನಸುನಗೆಯುಂ, ಶ್ರೀನಾರಾಯಣನ ಸೇವಾಸಮಯದೊಳ್ ಕೊರಲ್ಗೆ ಧರಿಸಿದ ಸಂಪಗೆಯ ದಂಡಿಗೆಯಂ ಪೋಲ್ವ ಸಿರಿದೋಳ್ಗಳುಂ, ಅವಱ ಕೊನೆಯೊಳ್ಬಿಗಿದ ಎರಡುಂ ತಾವರೆಗಳನೆಣೆಗೂಡಿಸಿದಂತೆ ಮುಗಿದ ಕೆಯ್ಗಳುಂ, ಪಟುನುಡಿವೆಂಡಿರ ಕುರುಳ ಸಿಕ್ಕುವಿಡಿಸಲ್ಕೊಂಡ ಸಿಕ್ಕಟಿಗೆಯಂ ಪೋಲ್ವ ಮುಕ್ಕೋಲುಂ, ಎಳವಿಸಿಲ ಸೋಂಕಿನೊಳೆಸೆವ ಕೆಂದಾವರೆಗಳಂತೆಳಗಾವಿಯುಡೆವಡೆದ ಸಿರಿಯುಡಿಯುಮಾಗಿ ಪದ್ಮಾಸನದೊಳಿರ್ಪಂದಮಂ ತನ್ನ ಮನದೊಳ್ ಬಂದಿವಿಡಿದೆಣಿಸಿದಂ :—

ಮುಂ ಮಹಾಶೇಷಂ ಪರಮಪದದೊಳ್ ವೈಕುಂಠನಾಥನ ಸೇನಾಸಾಮ್ರಾಜ್ಯದೊಳ್ನೆಡಿದಿರ್ದುಂ ಭಗವತ್ಸಂಕಲ್ಪಾನುಗುಣಮಾಗಿ ಕಲಿದೋಷದೂಷಿತರಪ್ಪ ಜನರ ಕಾಲುಷ್ಯಮಂ ಕಳೆದು ಭಗವಚ್ಛೇಷತ್ವಮನೆಟ್ಟಿಱಿಸಿ ಸಲಪುವದರ್ಕವತರಿಸಿದಂ । ಶ್ರೀರಂಗನಾಥಂಗೆ ನಿತ್ಯ ಪಕ್ಷ ಮಾಸ ಸಂವತ್ಸರೋತ್ಸವಂಗಳಂ ಸಾಂಗಮಾಗಿ ನಡೆಸಿದಂ । ಶ್ರೀಕಾಂಚೀಪೂರ್ಣರ ಮುಖದೊಳ್ಕಾಂಚೀನಾಥನತ್ತಣಿಂ ತತ್ವಹಿತಪುರುಷಾರ್ಥಂಗಳ ನೆಲೆಯಂ ತಿಳಿದಂ । ಶ್ರೀವೆಂಕಟೇಶಂಗೆ ಶಂಖಚಕ್ರಲಾಂಛನಂಗಳಂ ಸಮರ್ಪಿಸಿದಂ । ಸಿದ್ಧಾಶ್ರಮದೊಳ್ ಪೂರ್ಣನಡಿಗೆ ಮೂಲಮಂತ್ರಾರ್ಥಮಂ ಬಿನ್ನವಿಸಿದಂ । ಶ್ರೀಧನ್ವಿನೂತನಪುರದೊಳ್ ಶ್ರೀ**ಗೋದಾದೇವಿ**ಯಗ್ರೋಡವುಟ್ಟಿದನೆನಿಸಿದಂ । ಅಂತಲ್ಲದೆ ಎಮ್ಮ್ಯಾಯಾದನಾಚಲದೊಳ್ಕುಲದೇವತೆಯೆನಿಪ ನಾರಾಯಣಂಗೆ ಪಡಿನೆಟಿಲೆನಿಸಿ ಉಕ್ಕೆವಮೊಳ್ ಸಲ್ವ **ಚೆಲ್ವರಾಯಂ** ಡಿಳ್ಳೀಶ್ವರತನುಜೆ **ವರನಂದಿ**ಗೊಲ್ದು ಮೆಯ್ಮಱದಿರೆ ಹಿತೋಪದೇಶಂಗೆಯ್ದು ಕರೆದು ತಂದು ತಂದೆಯೆನಿಸಿದಂ । ಅದಱಿಂದೀಯತೀಂದ್ರ

ರೆಮ್ಮ ಯಾದವರ್ಗೆ ಕುಲಗುರುವೆನಿಸಿದರೆಂದು ಸಂಬಂಧಮನನುವದಿಸಿ ಮತ್ತಂ ನುತಿಗೆಯ್ವನದೆಂತೆನೆ :—

ಪರತತ್ವಮಂ ನಿರ್ಣಯಂಗೆಯ್ವುದರ್ಕೆ ಕೆಲವುಮನುವಾಕಂಗಳೊಳನಾದೊಡಂ ಪುರುಷಸೂಕ್ತಮೊಂದೆ ಪ್ರಧಾನಂ ಮಿಕ್ಕೆಲ್ಲಮುಮಿದರ್ಕನುಗುಣಮಾಗಿರ್ಕುಮೆಂಬ ನೆಲೆಯಂ, ಒರ್ವಳುಟಿಯದೆ ಮೂವತ್ತೆರಡುಮುಪನಿಷದ್ವಧುಗಳೊರ್ಕೊರಲಾಗಿ ಪುರುಷೋತ್ತಮನ ಪಾಣಿಗ್ರಹಣಂಗೆಯ್ದು ಪತಿವ್ರತೆಯರಾಗಿರ್ಪಿನಂ ದೇವತಾಂತರ ಸಂಬಂಧದಿಂದಿವರನಟಿಸಲ್ಕೆ ಪೂಣ್ದು ಬಲಾತ್ಕರಿಸುವ ಶೈವ ಪಾಶುಪತಾದಿ ದುರ್ವಾದಿಗಳಂ ನ್ಯಾಯಮಾರ್ಗದೊಳೆ ಖಂಡಿಸಿ ತಱಬಿ ಆ ಹದಿಬದೆಯರನಾವಗಂ ಕಾಪಿಡಲ್ಕೆ ಶ್ರೀಭಾಷ್ಯ ವೇದಾಂತದೀಪ ವೇದಾಂತಸಾರ ಗೀತಾಭಾಷ್ಯಾದಿ ಗ್ರಂಥಂಗಳಂ ನಿಯಮಿಸಿ ಪದುಳಂಗೊಳಿಸಿದೈ ಗಡ ! ನಿನ್ನ ಭಗವದ್ವಿಷಯಾಭಿಯೋಗಮೆಂತುಟೋ ! ಮತ್ತಮಾಜಗದೀಶ್ವರನ ವಿಭೂತಿಯೆನಿಪ ಪದಿನಾಲ್ಕುಂ ಲೋಕಂಗಳನವನ ರಾಜಧಾನಿಯುಪ್ಪ ವೈಕುಂಠಮನವನ ರಮನೆಯುಂ ಛತ್ರಚಾಮರಾದಿಚಿಹ್ನಂಗಳುಮಂ ಮಿಕ್ಕುದೇನವನ ದಿವ್ಯಾಂಗಮುಮನಪಹರಿಸಿ ಪುಸಿಯೆಂಬ ಚಾರ್ವಾಕ ಬೌದ್ಧ ಜೈನ ಮಾಯಾವಾದಿಗಳ್ ಮುಂತಾದ ಸಾಸಿಗರಂ ಸದೆದುಳ್ಕೊಡಮೆಗಳೊಳೆಳ್ಳನಿತುಂ ಪೋಗದಂತೆ ಪರಿಪಾಲನಂಗೆಯ್ದೆ ಗಡ ! ನಿನ್ನ ಭಗವದ್ದ್ರವ್ಯಾಭಿಮಾನಮೆಂತುಟೋ ! ನಿಚ್ಚಲುಮೆಮ್ಮ **ಚೆಲ್ವರಾಯಂ** ತನ್ನುಳ್ಳ ಸಾಸಿರ್ವೆಸರ್ಗಳಂ ಕಿವಿಗೊಳಿಸದೆ ಯತಿರಾಜಕುಮಾರನೆಂದು ಪೊಸವೆಸರನಾಲಿಸಿ ಮೆಯ್ಯನವಿರೇಱ ಮೊಗಸಿರಿವಡೆಗುಂ : ಈಮಹಿಮೆಯನಾರ್ಬಣ್ಣಿಪರ್ ?—

ಎಂದೆಱಗಿ ಹೃದ್ಯಮೆನೆ ಪಾದ್ಯಮನಾಸ್ವಾದಿಸಿ ಮುಂತಣ್ಗೆ ನಡೆದು ಪೊನ್ನಬಟಿಯಿಂಗೆಗಂಬಮಂ ಬಲವಂದಲ್ಲಿ ಒಳವಾಗಿಲೊಳ್ ರನ್ನವಚ್ಚಂಗಳಂ ಪೊನ್ನುಡೆಗಳಂ ಪಣಂಗಳಂ ಪಣ್ಕಾಯ್ಗಳಂ ಕಾಣ್ಕೆಗೊಂಡು ಭಕ್ತಿಭರದಿಂ ಪುಗುವ ನಾಡುಬೀಡುಗರುಂ, ಮತ್ತಂ ಸಪಿಸಪಿಯೆ ತಣಿವು

ದೋಱುವವುರ್ದಂ ಪೇೞ್ವ **ಚೆಲ್ವನಾರಾಯಣನ** ಮೆಯ್ಸಿರಿಯಂ ನಿಟ್ಟಿಸಿ ಮನಂಗೊಳಿಸಿ ಮೊಗದೊಳ್ಪೊಸಪೊಗರುಂ, ಕಣ್ಗಳೊಳ್ಸಗದಾಲಿನೀರುಂ ಕೊರಲೊಳ್ಗದ್ಗದಮುಂ ಕಂಠದೊಳ್ಪ್ರಸಾದಪ್ರಸರಮುಂ ಕೆಯ್ಯೊಳಾಸ್ಸಿ ವರ್ಸಸರ ಪೂಜೆಯ ತೊಳಚಿಯುಂ ಮೆಯ್ಯೊಳ್ನವಿರುಮಾಗಿ ಪೊಱಮಡುವವರುಮೋರೊರ್ವರಿದಿರ್ಚುವ ನೂಕುತಾಕಂ ಸಿರವಿಸಿ ಕಿಱಿದುಂ ಪೊೞ್ತು ನಿಂದು ಅಲ್ಲಿಯ ಸಂದಣಿ ನಸುಪರೆವುದುಂ ;

— ರಂಗಮಂಟಪದ ವರ್ಣನೆ —

ಇದಿರೊಳ್ಕವಿದು ಪಾಯ್ವ ಜಗದೀಶ್ವರನ ಕಟಾಕ್ಷಾಮೃತ ಪ್ರವಾಹಮನಿದಿರೀಸುತ್ತೆ ಪೊಂಬಾಗಿಲನೊಳಪೊಕ್ಕು ಅಲ್ಲಿ ಪಱ್ತುಗೊಂಡಿರ್ಕೆಲದೊಳ್ದಿವ್ಯಪ್ರಬಂಧಾನುಸಂಧಾನಂಗೆಯ್ವ ಶ್ರೀವೈಷ್ಣವರ ಸಿರಿಗೊರಲುಲಿಯಿಂ ಶಬ್ದಮಯಮುಂ। ಮೇಲ್ಕಟ್ಟಿನ ಲಂಬಣದ ಪ್ರಸರಂಗಳಿಂ ಸುರಿವ ಜೇನ ಸರಿಯಿಂ ರಸಮಯಮುಂ। ಬಳಸಿದ ರನ್ನ ಗೋಡೆಗಳ್ಗೆ ಲೇಪಿಸಿದ ಪಚ್ಚೆಗಪ್ಪುರದ ತಣ್ಪಿನಿಂ ಗಂಧಮಯಮುಂ। ಪರಮಭಾಗವತರ ಸಿರಿಮೆಯ್ಯೊಳ್ತೊಳಪ ವಿಮಲೋರ್ಧ್ವಪುಂಡ್ರಚ್ಛಾಯೆಯಿಂ ಸತ್ವಮಯಮುಂ। ಮಣಿವ ಮನಗರಗುವ ಏೞ್ವ ನಿಲ್ವ ನೆಲೆಗೊಳ್ವ ಕೆಯ್ಮುಗಿವ ಕವಿವ ನಿಟ್ಟಿಸುವ ನಿರವಿಸುವ ಭಾವಿಸುವ ಬಗೆಗೊಳಿಸುವ ನಲಿವ ನವಿರೇಱುವ ಅಚ್ಚರಿವಡುವ ಆಲಿನೀರ್ಗಱೆವ ಸೊರ್ಕುವ ಸೊಗಂಬಡುವ ಭಕ್ತರನುಗೆಯ್ತಂಗಳಿಂ ಭಕ್ತಿಮಯಮುಂ। ಒರೊರ್ವರ್ಗೆಱಗುವ ಇನಿವಾತುನುಡಿವ ಒತ್ತಿಗೆಬರಿಸುವ ಒಳ್ಪುದೋಱುವ ಒಡೆಯನೂೞಿಗಂಗೆಯಿಸುವ ಉಚಿತೋಪಚಾರದಿಂ ಸೌಜನ್ಯಮಯಮುಂ। ಪಿಡಿದ ಸೀಗುರಿ ಬೀಸಣಿಗೆಗಳನಿತ್ತು ತಾಂ ಪೊತ್ತಿರ್ಪ ಭೃಂಗಾರಪತದ್ಗ್ರಹಂಗಳಂ ಪಲ್ಲಟಂಗೆಯ್ವಮಾನವರ ಸೇವಾರಸಕ್ಕೊಲ್ಮೆಗೆಯ್ವ ನಾಳ್ಮೊಗಂ ಮೊದಲಾದ ದೇವನಿವಹದ ವಿನಯದಿಂ ಸೌಶೀಲ್ಯಮಯಮುಂ। ಇಟ್ಟಣಿಸಿ ಸಾಷ್ಟಾಂಗವೆಱಗಿ ನೆಟ್ಟನೇೞ್ವನಸಂ ಬಜ್ಜರಮಗುಡದ ಸೊಸಕದ ಮೊಳೆಗಳೊಳ್ಸ

ಲ್ಕಿದ ವಿರಕ್ತರ ಸ್ವಚ್ಛತರಪಟಚ್ಚರೋತ್ತರೀಯಶಕಲಮಂ ಪೊಸರಂಗೆತ್ತು ಸುತ್ತಮಿಂದ್ರಾದಿ ದೇವತೆಗಳೆಸಕದಿಂ ವೈರಾಗ್ಯಮುಮುಂ। ಭಗವತ್ಸೌಂದರ್ಯಾತಿಶಯದಿಂದೆಮೆಯಾಟಮುಱದಿರ್ಪುದೊಂದೆ ತೆಱನಾದೊಡಂ ದೇವಲೋಕದೊಳೆಂದೆಂದುಂ ಕಾಣದರ್ಚಾವತಾರಸೌಲಭ್ಯದೊಳಚ್ಚರಿವಡುವರ್ ದೇವರೆಂದು ತಿಳಿವುದಱಿಂ ವಿವೇಕಮುಮುಂ। ತತ್ತದವಸರದೊಳ್ತಱದೆಗೆದು ತೊಳಗುವಾಲತಿಯ ಪಲವುಂ ದೀವಿಗೆಗುಡಿಗಳ್ ಪಲವುಂ ರನ್ನಗಂಬಂಗಳೊಳ್ಪಡಿನೆೞಲ್ಗೊಂಬುದಱಿಂ ತೇಜೋಮಯಮುಂ। ಮುಂ ಭರದ್ವಾಜಾಶ್ರಮದೊಳಂ ಶಬರಿಯೆಲೆವನೆಯೊಳಂ ನಂದಮಂದಿರದೊಳಂ ಗೊಲ್ಲವಳ್ಳಿಯ ಗುಡಿಲ್ಗಳೊಳಂ ಗೋವರ್ಧನಾಗ್ರದೊಳಂ ಯತಿಪತ್ನಿಯರೊತ್ತಿನೊಳಂ ಸವಿದ ಶಾಕಶಾಲ್ಯೋದನ ಸೂಪಾಪೂಪ ಪಾಯಸ ಪರಮಾನ್ನ ಫಲ ಮೂಲ ದಧಿ ದುಗ್ಧ ನವನೀತಂ ಮೊದಲಾದುವನಿತುಮನೊಂದೊಂದವಸರದೊಳ್ ತನ್ನ ಮಹಿಶೂರನಗರದರಸರ್ ನಿವೇದನಂಗೆಯ್ಯುದನಾರೋಗಿಸಿ ಆ ಅಮೃತಾನ್ನಮಂ ತನ್ನ ಭಕ್ತರ್ಗೆ ಸವಿದೋರ್ಪುದಱಿಂದಮೃತಾಸ್ವಾದಮಯಮುಮಾಗಿರ್ಪ **ರಂಗಮಂಟಪ**ದೊಳ್ ಸಾಷ್ಟಾಂಗ ಪ್ರಣಾಮಂಗೆಯ್ದೆಟ್ಟು ಮುಗಿದ ಕೆಯ್ಯುಂ ಮಣಿದೊಡಲುಮಾಗಿ ಭಕ್ತಿಭರದೊಳ್ ಗಬ್ಬಗರವಾಗಿಲೊಳ್ನಿಂದು,

— ತಿರುನಾರಾಯಣರ ದಿವ್ಯಾಂಗ ಸಮುದಾಯ ಶೋಭೆಯ ವರ್ಣನೆ—

ಒಂದೆ ಸಮಯದೊಳುದಿಸಿದ ಸಾಸಿರ್ನೇಸರ್ಗಳ ಕಾಂತಿಯುಂ ಕರ್ಗಟ್ಟಲೆಯೆನಿಸಿ ಮೆಱೆವ ದಿವ್ಯಾದ್ಭುತಕಾಂತಿ-ಅಮರ್ದುಗಡಲೊಳ್ತೊಳೆದು ಜೊನ್ನದೊಳ್ತಣ್ಪುಗೊಳಿಸಿ ಚೆಂಬೊನ್ನ ಕರ್ವಣೆಯ ಪೊಗರ್ಗಳಿಂ ಬಣ್ಣಿಗೆಗೊಳಿಸಿ ಸಿರಿವಚ್ಚದ ಪಚ್ಚವಣಿಗಳ ಬೆಳಗಿನೊಳ್ಬೆರಸಿ ಮತ್ತಮತ್ತೆ ಬಿತ್ತರಂಬಡೆಯುತ್ತೆ ಸುತ್ತಲುಂ ಪಚ್ಚೆಯ ಗೋಡೆಯಂತೆಯುಂ ಕೆಳಗಣ್ಗೆ ನೀಲದ ನೆಲಗಟ್ಟಿನಂತೆಯುಂ ಮೇಗಣ್ಗೆ ರಾಜಾವರ್ತದ ಮುಚ್ಚುಳ್ಪಲಗೆಯಂತೆಯುಂ ಇದಿಱೊಳ್ನಿಂದು ನಿಟ್ಟಿಸಪರ ದಿಟ್ಟಿಗಳ್ಗೆ ತಣ್ಗಡಿಗೆಯುಂ

ತೆಯುಂ ಮೆಯ್ಗೆ ಕತ್ತುರಿಯಣ್ಪಿನಂತೆಯುಂ ಕರ್ಬಟ್ಟೆಯೆಡೆಯಂತೆಯುಂ ಕಾರಗಿಲ್ವೊಗೆಯಂತೆಯುಂ ಕವಿಯುತ್ತಿದೆ । ಮತ್ತಂ ಬಾವನ್ನದ ಕಪ್ಪುರದ ಕುಂಕುಮದ ಕತ್ತುರಿಯ ಪಲವುಂ ಕಮ್ಮಲರ್ಗಳೊಳೆ ಪಾಲಸಂ ಕಳೆದು ಒಳ್ಗಂಪನೊಂದುಗೂಳಿಸಿದಂತೆಸೆವ ಸಿರಿಮೆಯ್ಯ ತನಿಗಂಪು—ಬೆಟ್ಟಿತಾದು ದಱಿಂ ಲೇಪಿಸುವಂತೆಯುಂ ತುಂಬುವಂತೆಯುಂ ಘ್ರಾಣಮಂ ತಣಿಯಿ ಸುತ್ತಿದೆ । ಎಂದಿಂತು ಕಾಂತಿಸೌಗಂಧ್ಯಂಗಳೊಳ್ಮಿಱುಂಗಿ ತೇಲ್ದು ದಿವ್ಯಾಂಗ ಸಮುದಾಯಶೋಭೆಯಂ ನಿಟ್ಟಿಸುತ್ತೆ ನಿರವಿಸಿದಂ :—

ಇಂದೀವಸ್ತುವೀತೆಱನೆಂದು ತಿಳಿವುದರ್ಕೆ ಯೋಗಿಗಳ ಬಗೆಗಂ ಪಱಿನುಡಿಗಮಡಕಮಾಗದಿರ್ಪುದಱಿಂದಪ್ರಮೇಯಮೆಂದುಂ, ಕಿಱಿದ ರ್ಕಂ ಕಿಱಿದೆಂದುಂ ಪಿರಿದರ್ಕಂ ಪಿರಿದೆಂದುಂ, ಎಲ್ಲಾಪುರುಳ್ಗಳೊಳಿರ್ಕು ಮೆಂದುಂ, ಎಲ್ಲಾ ಪುರುಳ್ಗಳನೊಳಕೊಂಡಿರ್ಕುಮೆಂದುಂ, ಜಗಮಂ ಪಡೆವ ಪೊರೆವ ಅಱಿಪುವ ಬಿನದಗೆಯ್ಮೆಯೊಳ್ ಪೊಱುತ್ತಗಳೆಗುಮೆಂದುಂ ಪೇಟ್ವರ್ । ಮತ್ತಂ ಸಿರಿರಾಣಿಯುಲತಗೆಗುಱುಪುಗೊಂಡಿರ್ಪುದಱಿಂ ಪರ ತತ್ವಮೆಂದುಂ, ಪರಂಜ್ಯೋತಿಯೆಂದುಂ, ಪರಮಾತ್ಮನೆಂದುಂ, ಪರಬ್ರಹ್ಮ ಮೆಂದುಂ, ಪರಮಪದನಾಸನೆಂದುಂ, ಪರವಾಸುದೇವನೆಂದುಂ, ಶ್ರೀಮ ನ್ನಾರಾಯಣನೆಂದುಂ ಪೊಗೞ್ತವಡೆದಿರ್ಕುಂ । ಅಕಟಕಟ ! ನಿಟ್ಟಿಸಲುಂ ಮುಟ್ಟಲುಮಾಘ್ರಾಣಿಸಲುಂ ಸವಿಯಲುಂ ಕೇಳಲುಂ ಪೇೞಲುಂ ತಿಳಿ ಯಲುಂ ಜಾನಿಸಲುಂ ಕುಱುಪುಗೊಳಲುಂ ಸಾಕ್ಷಾತ್ಕರಿಸಲುಮಾಳ್ಗೆಯ್ಯ ಲುಂ ಅತ್ಯಂತದುರ್ಲಭಮಾದ ವಸ್ತು—ಎಮ್ಮ ಭಾಗ್ಯೋದಯದಿಂ ಮುಂ ಬ್ರಹ್ಮಲೋಕದೊಳ್ಪಲವುಂ ಕಾಲಮಿರ್ದು ಸನತ್ಕುಮಾರಂಗೊಲ್ದು ಅವ ನೊಡನುತ್ತರಬದರಿಕಾಶ್ರಮಮಂ ಸಾರ್ದು ಅಲ್ಲಿ ನರಸಖನಪ್ಪ ನಾರಾ ಯಣಮುನಿಯಿಂ ಪೂಜೆಗೊಂಡು ತಣಿದು ಅತ್ತಣಿಂ ಕಲಿದೋಷಂ ಸೋಂ ಕದ ತಾಣಮಂ ಕೂರ್ತೈತರ್ಪ ಮುನಿಗಳ್ಗೆ ಮೊದಲಿಗರಪ್ಪ ಸನತ್ಕುಮಾರ ರೊಡನೆ ಯಾದವಾಚಲಕ್ಕೆ ಬಂದು ಪರಬ್ರಹ್ಮಗರ್ಭಮಾಗಿ ವೇದಾಂತ

ದಂತೆ ದುರ್ವಿಭಾವ್ಯವಾದೊಡಮಲ್ಲಿ ರಾಮಾನುಜಾರ್ಯರಿಂ ಪರಿಚರ್ಯೆ ವಡೆದು ಸರ್ವಾತ್ಮಸೇವ್ಯಮೆನಿಸಿದ **ಆನಂದಮಯ** ವಿಮಾನದೊಳ್ ಸುಲಭ ಮಾಗಿಯುಂ ಸುವ್ಯಕ್ತಮಾಗಿಯುಂ ತೋಱುತಿದೆ। ಮತ್ತಮೀವಸ್ತುವಂ ಭಾವಿಸೆ ಎರ್ದೆಯೊಳಿರ್ಪ ಸಿರಿರಾಣಿಯ ಮೆಯ್ಯೊಗರ್ಪೊಣ್ಮಿದಂತೆಸೆವ ಪಳದಿಯುಡೆಯ ಪೊನ್ನೊಳ್ಪುದುಗಿಸಿ ಪಚ್ಚೆವಣಿಯೊಳ್ಸವೆದ ಪಟಿನುಡಿ ಪೆಂಡಿರ ತೊಂಡಿಲ್ವಚ್ಚದಂತೆಯುಂ, ಪೊಡವಿನೀಳೆಯರ ಸಿರಿಮೆಯ್ಯ ಕತ್ತು ರಿಯಣ್ಪಿನಿಂ ಪೊಗರ್ವಡೆದ ಯಾದವಾದ್ರಿಯ ಮುಡಿಯ ಕನ್ನೆಯ್ದಿಲ ಬಾಸಿಗದಂತೆಯುಂ, ಕೆಂಬರಲ್ವಳಿರ್ಗಳಿಂ ದಿವ್ಯಾಯುಧಂಗಳೆಂಬ ಪೂದೊಂ ಬೆಗಳಂ ತಳೆದು ಕೆಳಗಣ್ಗಂ ಮೇಗಣ್ಗಮಿದಿರ್ಗಂ ಪಾಯ್ದುಸೆವ ನಿಡುದೋ ಳ್ಕೊಂಬುಗಳಿಂ ಪೊದಟ್ದ ಪಾರಿಜಾತದಂತೆಯುಂ, ಸಿರಿಯಡಿಕೈಕಣ್ಮೊಗದಾ ವರೆಗಳಿಂದೆಯುಂ ಸಿರಿಪೊಡವಿಯಂಚೆಗಳಿಂದೆಯುಂ ಚೆಲ್ವುವಡೆದಮೃತ ತಟಾಕದಂತೆಯುಂ, ರಸವಚ್ಚಂಗಳ ಬಣ್ಣಿಗೆವೆಳಗಿನಿಂದೆ ಇಂದ್ರಧನುವಂ ಸಿರಿರಾಣಿಯ ಪೊಂಜೆಳೆಮೆಯ್ಯಿಂ ಮಿಂಚುವಳ್ಳಿಯನೊಳಕೊಂಡೆಸೆವಮು ದ್ಗಂಡ ಕಮುಗಿಲಂತೆಯುಂ ತೋರ್ಕುಂ। ಮತ್ತಮೀವಸ್ತುವಂ ನಿಟ್ಟಿಪಿ ನಂ ಎನ್ನಂ ಎನ್ನ ಪೊನ್ನಂ ಎನ್ನೊಡಮೆಯುಂ ಎನ್ನೈಸಿರಿಯುಂ ಎನ್ನರಮನೆ ಯುಂ ಎನ್ನಾಳ್ದನಂ ಎನ್ನ ತಾಯುಂ ಎನ್ನ ತಂದೆಯುಂ ಎನ್ನ ಪುಣ್ಯೋದ ಯಮುಂ ಎನ್ನ ಭಾಗ್ಯದ ಫಲಮುಂ ಎನ್ನಿಷ್ಟಾರ್ಥಮುಂ ಎನ್ನೊಡಲುಂ ಎನ್ನ ಹರಣಮುಂ ಎನ್ನಾತ್ಮಮುಂ ಎನ್ನ ದೇಶಿಕನುಂ ಎನ್ನ ಕುಲದೇವತೆಯುಂ ಕಂಡಂತೆ ಎನ್ನ ಮನದೊಳಾನಂದದ ಪೊನಲ್ ಪೊಣ್ಮಿಯಿರ್ತಡಿಯುಂ ಮೀಱಿ ಪಾಯ್ದುನ್ನಂತೇಲಿಸುತ್ತುಂ ತೆರೆಗಳಿಂದುಯ್ಯಲಾಡಿಸುತ್ತುಂ ಪರ ವಶಂಗೊಳಿಸುತ್ತಿದೆ। ಮತ್ತಂ ಮತ್ತಂ ಭಾವಿಸೆ ಪುರುಳ್ಗೆ ಪುರುಳುಂ, ಆಭರ ಣಕ್ಕೆ ಆಭರಣಮುಂ, ಹರಣಕ್ಕೆ ಹರಣಮುಂ ಚೈತನ್ಯಕ್ಕೆ ಚೈತನ್ಯಮುಂ, ಆತ್ಮಂಗಾತ್ಮನುಮಾಗಿರ್ಕುಂ। ಮತ್ತಮೊಂದೊಂದವಯವದ ಸೌಂದರ್ಯ ಮುಂ ನಿರವಿಸುವಿನಂ ಸಾಸುವೆಯುಂ ಕೊರೆದು ಕಡಲಂ ತುಂಬಲಡಂಗದೆ

ಪೊಱಮಡುವಂತೆ ಬಗೆಗಳವಡದೆ ಪೊಱಸೂಸುವ ಆನಂದರಸಪ್ರವಾಹಮೆನೆ ನುತಿಗೆಯ್ವನದೆಂತೆನೆ :—

— ಸ್ತುತಿ —

ಈ ಸಿರಿಯಡಿಯೈಸೆ ಮುಂ ಜಗಮನಳೆವಾಗಳ್ ಬೊಮ್ಮಂ ಮೊದಲಾಗಿ ಪುೞುಗಳ್ವರೆಗಂ ಪಿರಿದು ಕಿಱಿದೆಂದೆಣಿಸದೆ ಅನಿಬರ ಸಿರದೊಳಮಲರ್ದಾವರೆಯಂತೆಸೆದುದು ! ಇದಱಂಗುಟದುಗುರ್ಗೊನೆಯಿಂ ಪರಿದ ಅಜಾಂಡದ ಪೊಱವಳಯದ ಪೊಸನೀರೊಳ್ಬೆರಸಿ ನಾಲ್ಮೊಗಂ ತನ್ನ ಕೈಗಿಂಡಿಯ ನೀರೊಳ್ತೊಳೆಯಲಾತೀರ್ಥದಿಂದೈಸೆ ಶಿವಂ ಶಿವನೆನಿಸಿದಂ ; ಮೂಜಗಮುಂ ಪಾವನಮೆನಿಸಿದುದು ! ಇದನೈಸೆ ಸುರರ್ ಮುಡಿಯೊಳಂ ಯೋಗಿಗಳ್ಬಗೆದಾವರೆಯೊಳಮಾಂತು ಸಂತಸಂಗೊಂಬರ್ ! ಇದಱ ಸೋಂಕಿನಿಂದೈಸೆ ಕಲ್ಲಱೆ ಕಣ್ದೆಱೆದುದು ; ಸೀದ ಕಂಡಂ ಸಿಸುವಾದುದು ! ಇದೈಸೆ ಕರ್ಮಜ್ಞಾನಕಭಕ್ತಿಗಳಂ ಕಡೆಗಣಿಸಿ ತನ್ನಂ ನೆರೆ ನಂಬಿದರ್ಗೆ ಸಾಕ್ಷಾನ್ಮೋಕ್ಷೋಪಾಯಮಾದುದು ! ಇದೈಸೆ ಸನಕಾದಿಗಳೆರ್ದೆಯೊಳ್ಚಂಚಲಮಾಗಿಯುಮೆನ್ನಿದಿರೊಳೀಪದ್ಮಪೀಠದೊಳ್ ಪದುಳಂಗೊಂಡಿರ್ಪುದಱಿಂ ತನ್ನ ಸೌಲಭ್ಯಮನುದ್ವ್ಯಾಪಿಸಿದುದು ! ಈ ಜಂಘಗಳೈಸೆ ಶ್ರೀಭೂಮಿಕರಕಮಲಲಾಲಿತಂಗಳಾಗಿಯುಂ ಕುರುಪುರಿಗೆ ದೂದುನಡೆದು ತನ್ನ ಭಕ್ತವಶ್ಯತೆಯಂ ಮೆಱೆದುವು ! ಈ ದುಂಡುದೊಡೆಗಳೈಸೆ ನೀಳೆಗೆ ಲೀಲೋಪಧಾನಮಾಗಿಯುಂ ಮಧುಕೈಟಭರೆಂಬ ಕೀಟಂಗಳಂ ತೊತ್ತುೞಿಂದುೞಿದು ತನ್ನ ದುಷ್ಟನಿಗ್ರಹಮಂ ಪ್ರಕಟಿಸಿದುವು ! ಈಬಲಮುರಿವೊಕ್ಕುೞ್ಗೊಳನೈಸೆ ತನ್ನೊಳ್ಬೆಳೆದ ತಾವರೆಯಿಂ ನಾಲ್ಮೊಗನಂ ನಿರ್ಮಿಸಿ ಜಗತ್ಕಾರಣತ್ವಮಂ ನೆಲೆಗೆಯ್ದುದು ! ಈತೆಳ್ವಸಿಱೈಸೆ ಪದಿನಾಲ್ಕುಂ ಲೋಕಂಗಳನೊಳಕೊಂಡುಂ ತುಂಬದೆ ಗೊಲ್ಲವಳ್ಳಿಯ ಗುಡಿಲ್ಗಳೊಳ್ ಕಳವುಗೊಂಡ ಪಾಲ್ಮೊಸರ್ಬೆಣ್ಣೆಗಳಿಂದೆಯುಂ ಸುಚೇತಸುತನ ಭಿಕ್ಷಾನ್ನದಿಂದೆಯುಂ ತಣಿದು ಭಕ್ತಸಂಸ್ಪೃಷ್ಟವಸ್ತುಪ್ರೀತಿಯಂ ಪ್ರಕಟಿಸಿದುದು! ಈ ಪೇರೆರ್ದೆ

ಯ್ಯೆಸೆ ಲಕ್ಷ್ಮೀಕೌಸ್ತುಭವನಮಾಲೆಗಳನಿನಿಸಿನಿಸುಂ ಕೆಲಕ್ಕೆ ತೊಲಗಿ ಯಿಂಬುಗೊಳಿಸಿ ಭೃಗುಮುನಿಯಡಿಗುಱುಪನಂಗೀಕರಿಸಿ ತನ್ನ ಸತ್ವಗುಣಮಂ ಬಿತ್ತರಿಸಿದುದು ! ಈ ನಿಡುದೋಳ್ಗಳ್ಪೆಸೆ ದಿವ್ಯಮಹಿಷೀಸಂಶ್ಲೇಷದೊಳ್ಸಾಜನಮಾಗಿರ್ದುಂ ನರೆತೆರೆಸೆರೆಗಳಿಂ ನಿಚಿತನಾದ ಕುಚೇಲನೊಲಂ ತಕ್ಕವಿಸಿ ಪೆರ್ಕಳಂಗೊಂಡು ತನ್ನ ವಾತ್ಸಲ್ಯಮಂ ಪೊಗಟ್ಟುದು ಈ ಸಿರಿಮೊಗಮ್ಪೆಸೆ ಯೋಗಿಗಳ ಬಗೆಗೆ ಸುಟುವುದೋಱದಿರ್ದು ಎನ್ನಿದಿರೊಳ್ಮೊಳೆನಗೆಯುಂ ಕುಳಿರ್ನೋಟಮುಮಾಗಿ ನೆಲಸಿ ತನ್ನ ಸೌಶೀಲ್ಯಮಂ ಸೊಲ್ಲಿಸಿದುದು ! ಈ ಸಿರಿಮುಡಿಯ್ಯೆಸೆ ಉಭಯ ವಿಭೂತಿಯೊಳ್ ತನಕ್ಕೆ ತಕ್ಕ ರನ್ನಮುಗುಡಮಂ ಧರಿಸಿಯುಂ ತಿರುಕುಳಿಪಾರ್ವರಡಿಗೆಱಗಿ ತನ್ನ ಸ್ವಾತಂತ್ರ್ಯಮಂ ತೋಱದುದು !

ಎಂದಿಂತು ದಿವ್ಯಾವಯವಂಗಳ ಚರಿತ್ರಮಂ ಸಿರವಿಸಿ ಸೌಂದರ್ಯಮನೆರ್ದೆಯೊಳ್ಬಂದಿಗೊಳಿಸಿ ಬಣ್ಣಿಸಿದನದೆಂತೆನೆ :—

— ಚೆಲ್ವರಾಯನ ಸೌಂದರ್ಯ —

ಸಿರಿಮೊಗದಾವರೆಯೊಳ್ಗಳೆಯಿಂದಮೋ ಕುರುಳ್ಗಟ್ಟಲೆಯೊಳ್ ಕೆಣದಿಂದಮೋ ತನ್ನ ತಾಯ್ವನೆಯೆನಿಪ ಸಿರಿಗಣ್ಣೊಳ್ ಪ್ರಣಯದಿಂದಮೋ ಏತಱಿಂದಾದೊಡಂ ಸೂರ್ಯನೆಯ್ತಂದಿರ್ಪುದೆ ದಿಟಂ ; ಆದೊಡಂ ಕಿರೀಟರತ್ನಂಗಳ್ ಕೀರ್ತಿವಡೆದುವು । ಪಣೆವಟ್ಟದ ರನ್ನವೆಳಗಿಂಗಳ್ಕಿ ಕೇಗಣ್ಗ ನಡೆದಲ್ಲಿ ಎಳನಗೆಯು ಜೊನ್ನಮೊಟ್ಟೆಟ್ಟುವಿನಂ ಮೇಗಣ್ಗ ಪಾಯ್ದು ಸುಟುಗೊಂಡು ನಟ್ಟನಡುವೆ ನೆಗೆವ ಸಿರಿವಣ್ಪೆಳಗಿನಬ್ಬರಕ್ಕೆರ್ಬಗಿಯಾಗಿರ್ಕೆಲಕ್ಕೆ ಸರಿಯುತ್ತಲ್ಲಿಯುಂ ಸಿರಿಗೆಯ್ಗಳಿಂ ನೆಗಪಿದ ಸಂಕು ಪಾಱುವ ಬಳೆಗಳೆಂಬ ಸಸಿನೇಸರ್ಗಳಂ ಕಂಡು ಕಾತರಿಸಿ ಕುರುಳ್ಗಟ್ಟಲೆ ನುಣ್ಬಣಯಂ ಪತ್ತಿ ಪದುಳದ್ದೊಳಿರ್ಕುಂ ; ಆದೊಡಂ ಸಿರಿಮೊಗಸಸಿ ಜಸಂಬಡೆದುದು । ಸಿರಿಮೆಯ್ಯ ತನಿವೊಗರೆಂಬ ಪನ್ನೀರ್ಪೊನಲುಂ ಸಿರಿದೋಳ್ಗಳೆಂಬ ಪೆರ್ದೆರೆಗಳುಂ ಕೊರಲೊಳ್ಧರಿಸಿದ ಮುತ್ತಿನ ಕಂಠಸರದ ನೆವದಿಂ ಪರಿದು

ವರ್ಪ ಬಾಂಬೊಟ್ಟಿಯುಂ ಕೆಂಪುವಚ್ಚದ ಕದಿರ್ಗಳೆಂಬ ಪವಳಗುಡಿಗಳುಂ ಕೊರಲ್ಗೊಂಕುವಾಗಿ ತೋರ್ಪ ಪೇರೆರ್ದೆಯುಂ ಕಡಲ್ಗಿತ್ತ ಕೌಸ್ತುಭಮುಂ ಸಿರಿಯರಸಿಯುಂ ನೆಲಸಿರ್ಕುಂ; ಆದೊಡಂ ಬಗೆಯೊಳೊಗೆದ ಸಸಿಯ ಸೋದರಸ್ನೇಹಂ ನೆಗಟ್ಟಿತ್ತವಡೆದುದು। ಒಳಗಿಡಿದ ಮೂಜಗದ ಭಾರದಿಂ ಸರಿಯದಂತೆ ರನ್ನದ ಪೊಡೆಗಟ್ಟುಗಟ್ಟಿರ್ಪುದು ; ಆದೊಡಂ ಬೆಣ್ಣೆಗಳವಿನೊಳ್ಗೊಪಿ ಕಟ್ಟಿದ ಕಡೆದಾವು ಪೊಗಟ್ಟಿತ್ತವಡೆದುದು। ಎರ್ದೆಯೊಳಿರ್ಪ ರಾಣಿಯ ಮೆಯ್ವೊಗರಿಂದಮೆ ಪೊದೆದ ದುಗುಲಂ ಪೊಂಬಣ್ಣಮಾದುದು; ಆದೊಡಂ ಪೀತಾಂಬರಂ ಪೆರ್ಮೆವೆತ್ತುದು। ಉಡೆನೂಲ ಕೆಂಬರಲ್ಗಳ ಪೊಗರ್ಗಳಿಂದಮೆ ತೊಡೆಗಳ್ಕೆಂಪಡರ್ದುವು ; ಆದೊಡಂ ಮುಂ ಪತ್ತಿದ ಮಧುಕೈಟಭರ ನೆತ್ತರ್ ನೆವಮಾದುದು। ಅಶರಣ್ಯಶರಣ್ಯಮೆನಿಪ ದಿವ್ಯ ಪಾದಾಂಬುಜಂಗಳ ಸೋಂಕಿನಿಂದಮೆ ಕಿಱುದೊಡೆಗಳ್ ನವಿರ್ದಳೆದುವು ; ಆದೊಡಂ ಪಾದಪೀಠದೊಳಿರ್ಪ ಪೊಡವಿವಡದಿಯ ಮೆಯ್ಸೋಂಕು ನ್ಯೆಮೆವೆತ್ತುದು। ಮತ್ತಂ ಪಾದಂಗಳೆಂಬ ಕಲ್ಪಪಾದಪಂಗಳ ಬೆರಲ್ಗೊಂಬುಗಳ ಪೂದೊಂಬೆಗಳೆಂಬ ನೆನಪಂ ನೆಗಟ್ಟುತ್ತಿ ಸಕಲಜಗಮನೇಕವೇಳೆಯೊಳ್ ಪಾವನಂಗೆಯ್ವ ತವಕದೊಳ್ಪೆತ್ತುಂ ಮೆಯ್ವೆತ್ತು ಪಾಯ್ವ ನಖರುಚಿಗಂಗಾಪ್ರವಾಹದೊಳ್ಮಿಂದೆನ್ನ ಕಂದುಗಳಂ ಕಳೆವೆಂ। ಪರಿಮಳಕ್ಕೆಳಸಿ ಕಾಲಿನೆಡೆಯೊಳ್ಸುತ್ತುಂ ಮುತ್ತಿದ ತುಂಬಿಗಳಿಂದೆಸೆವ ಸಾಸಿರ್ಪೆಸರ ಪೂಜೆಯ ತಾವರೆಯೊಳ್ಸರಸಿ ನೀಲದ ಪೆಂಡೆಯಂಗಳಂ ಧರಿಸಿದ ಸಿರಿಯಡಿಗಳನಱಿಸಿ ಕುಱುಪುಗಂಡೆಱಗಿ ಕೃತಾರ್ಥನಪ್ಪೆಂ। ಪೊಡವಿವಡದಿಯ ಕೆಯ್ಸೋಂಕಿನೊಳ್ ಕಂಟಕಿತಮಾಗಿರ್ಪುದಱಿಂದಡಿದಾವರೆಯ ಪೇರ್ದಂಟೆನಿಪ ಜಂಘೆಗಳಂ ಕಂಡೆನ್ನ ಭವಪಥಜಾಂಘಿಕತ್ವಮುಂ ಕಳೆವೆಂ। ಓರಡಿಯ ಪೊರ್ದುಗೆಯಿಂ ನೆಗಟ್ಟಿತ್ತವೆತ್ತ ಗಂಗೆಯಂ ಕೀೞ್ವಡಿಸಲೆಂದಿರ್ಮೆಯ್ದುಳಿದ ಎರಡುಂ ಸಿರಿಯಡಿಗಳ್ಗೆ ಪಾಯ್ವ ಜಗುನೆಯಂತಿರ್ಪ ತೋಱದೊಡೆಗಳಂ ಸೇಱಿಯೆನ್ನ ಬಗೆಯ ಬಡತನಮಂ ಪರಿಹರಿಸುವೆಂ। ವಲಿಗಳೆಂಬ ತೆರೆಗಳುಂ

ನಾಭಿಯೆಂಬ ಸುೞಿಯುಮಾಗಿ ಪಾಯ್ವ ಶರೀರಕಾಂತಿಪ್ರವಾಹದೊಳ್ ಮುೞುಂಗಿ ಎನ್ನ ತಾಪತ್ರಯಮಂ ತಱುಬುವೆಂ। ಪೊದೆದ ದುಗುಲದ ತೆರೆಗಳುಂ ಮುತ್ತಿನ ಸರಂಗಳೆಂಬ ನೊರೆಗಳುಂ ಪೊಣ್ಮಿದ ಕೌಸ್ತುಭಮುಂ ಸಿರಿಯುಮಾಗಿರ್ಪುದಱಿಂ ಕಡಲ ತಡಿಯಂ ಪೋಲ್ವ ಪೇರೆರ್ದೆಯೊಳ್ ನೆಲಸಿ ಅನಿಮಿಷತ್ವಮಂ ಪಡೆದೆನ್ನ ಕಣ್ಗಳಿಂದಮುರ್ದುಂಡು ತಣಿವೆಂ। ಶ್ವೇತೋರ್ಧ್ವಪುಂಡ್ರದ ನೆವದೊಳ್ ನೆಗೆದ ಕೇದಗೆಯ ಕೊನೆಯೆಸಳ್ಗಳುಂ ನಿಡುಗಣ್ದಾವರೆಗಳುಂ ನಾಸಿಗೆಯೆಂಬ ಸಂಪಗೆಯುಂ ಬಾಯ್ದೆಱೆಯೆಂಬ ಬಂದುಗೆಯುಂ ಪಲ್ಮೊಲ್ಲೆಗಳುಮುಮರ್ದಿರೆ ಸಿರಿರಾಣಿಯ ಕೆಯ್ಯೊಳ್ ಪಿಡಿದಾಡಲ್ಕೆಂದು ಕೊರಲ್ಗಾವಿನೊಳ್ ಕಟ್ಟಿದ ಪೊಸವಗೆಯ ಪೂಸೆಂಡಂ ಪೋಲ್ವ ಮೊಗದ ಸೌಗಂಧ್ಯಮನಾಘ್ರಾಣಿಸಿ ಮನದ ಜಾಡ್ಯಮಂ ಜಾಱಿಸುವೆಂ। ಮತ್ತಂ ಪೊಸಪೊಸಪೊಗರ್ಗಳಿಂ ಪೊಂಗುವ ಮಗುಡಮುಂ ಪೊಳೆವ ಪಣೆಯುಂ ಪೆಱೆಗೆಱೆನಾಮಮುಂ ನಿಮಿರ್ದ ಪುರ್ಬುಂ ನೀಳ್ದ ಕಣ್ಣುಂ ಪೆಂಪುವಡೆದ ನಾಸಾಚಂಪಕಮುಂ ತೊಳಪ ಕದಂಪುಂ ತೊಂಡೆ ವಾಯ್ದೆಱೆಯುಂ ಮುದ್ದುನಗೆಯುಂ ಮೊನೆವಲ್ಲುಂ ಒಳ್ಗಿವಿಯುಂ ಒಲೆವ ಕುಂಡಲಮುಂ ದುಂಡುಗೊರಲುಂ ತೋಱುಗಂದಮುಂ ತಟ್ಟ ತೋಳುಂ ತಾವರೆಗೆಯ್ಯುಂ ಬಲಮುರಿಸಂಕುಂ ಪಾಱುಂಬಳೆಕ್ಕೈದುಂ ಪೇರೆರ್ದೆಯುಂ ಕಣ್ಮಸರಂಗಳುಂ ಕೌಸ್ತುಭಮಣಿಯುಂ ಸಿರಿವಚ್ಚ ಗುಱುಪುಂ ಸಿರಿರಾಣಿಯುಂ ಪೊಸದೊಳಚಿಸರಮುಂ ಪೊನ್ನುಡೆಯುಂ ಬೆಳ್ಜನ್ನನೂಲುಂ ರನ್ನವಚ್ಚಂಗಳುಂ ರಂಜಿಪ ಪೊಡೆಗಟ್ಟುಂ ತೆಳ್ವಸಿಱುಂ ತಿವಳಿಯುಂ ಬಡನಡುವುಂ ಬಣ್ಣವುಡೆಯುಂ ಪೊನ್ನುಡೆನೂಲುಂ ಪೊದಟ್ಟ ಕಾಂಚಿಯುಂ ಬಲ್ದೊಡೆಯುಂ ಬಟ್ಟ ಮೊೞಕಾಲುಂ ಸ್ನಿಗ್ಧಜಂಘೆಯುಂ ಸಿರಿಯಡಿಗಳುಮಾದ ದಿವ್ಯಮಂಗಳವಿಗ್ರಹಮಂ ನಿಟ್ಟಿಸಿ ತಣಿಯದೆ ಕಟ್ಟಾಸೆಯಿಂ ದಕ್ಕುಗೊಳಲ್ಕೆಳಸಿ ದಿಟ್ಟಿವಾಗಿಲಿಂದೊಳಪುಗಿಸಿ ಬಗೆವನೆಯೊಳಿರಿಸಿ ಭಾವಿಸುವಿನಂ—ಕನಸಿನಂತೆಯುಂ ಯೋಗಸಾಕ್ಷಾತ್ಕಾರದಂತೆಯು

ಮಲ್ಲದೆ ಪ್ರತ್ಯಕ್ಷಮಾಗಿ ಮುದ್ದುಮೊಗಮುಂ ಮೊಳೆನಗೆಯುಂ ಒಲ್ಮೆ ನೋಟಮುಂ ಒಳ್ಪಾತುಮಾಗಿ ನೆಲೆನಿಂದು—"ಎಲೆಯರಸ! ನಿನ್ನ ಭಕ್ತಿಗೆ ಮೆಚ್ಚಿ ದಶರಥನಂತೆಯುಂ ವಸುದೇವನಂತೆಯುಂ ನಿನ್ನಂ ತಂದೆ ಗೆತ್ತು ನಿನ್ನೆರ್ದೆಯೊಳ್ ನೆಲಸಿದೆಂ. ನಿನಗೌರಸಪುತ್ರನಾಗಿ ಜನಿಸುವೆಂ. ನೀನುಮಂಜದೆ ಅಚ್ಚರಿವಡೆಯದೆ ಎನ್ನಂ ಎನ್ನ ವಾತ್ಸಲ್ಯಮುಮಂ ನೆನೆದು ಪದುಳಂಗೊಂಡು ನಿನ್ನೊಳ್ಗೆಳೆಯಂ ಅಳಹಿಯ ಸಿಂಗರಾರ್ಯರ್ಗಂ ನಿನ್ನ ಮನದನ್ನಳ್ ಅಮೃತಾಂಬೆಗಮಲ್ಲದೆ ಪೆಱರೊರ್ವರ್ಗಮುಱುಪದೆ ಮೌನದೊಳಿರ್ಪುದು. ಆನುಂ ನಿನ್ನರಮನೆಯ ಕೃಷ್ಣಾವತಾರದ ಚಾತು ರ್ಯಮನೊಂದುಮೆರಸಿ ಒಳ್ಪುಗೊಳಿಸಿ ಪಲವುಂ ದಿವ್ಯಾದ್ಭುತಚರಿತಂಗಳ ನೆಸಗಿ ದುಷ್ಟರನಿಬರಂ ಮೆಟ್ಟಿ ಶಿಷ್ಟರಂ ನಟ್ಟುನೆಲೆಗೊಳಿಸಿ ಸಾತ್ವಿಕ ಧರ್ಮಂಗಳಂ ಸ್ಥಾಪಿಸುವೆಂ. ಕಲಿದೋಷಮಂ ಕಳೆದು ಕೃತಯುಗದೊ ಳಂತಂತು ಸಕಲವರ್ಣಾಶ್ರಮಧರ್ಮಂಗಳಂ ಸಂಗತಿಗೊಳಿಸುವೆಂ" ಎಂದು ಸಿರ್ಪುದುಂ; ಅರಸಂ ಹಸಾದವೆಂದಾಣತಿಯಂ ಸಿರದೊಳಾಂತು ಕಣ್ದೆಱೆ ವುದುಂ; ಅರ್ಚಕರ್ಕಳರಲ್ಗೆ ದುಂಡಮಲ್ಲಿಗೆದಂಡೆಯುಂ ತಲೆಯೆರ್ದೆಭುಜಂ ಗಳ್ಗೆ ಶಠಕೋಪಮಂ ಕೆಯ್ಗೆ ತೀರ್ಥಮಂ ಬಱಿಕ್ಕಭಯಹಸ್ತಮಂ ಕುಡೆ, ಅಂಗೀಕರಿಸಿ ಕೃತಾರ್ಥತೆವೆತ್ತು ಅತ್ತಣಿಂ ಪೊಱಮಟ್ಟು **ಚೆಲ್ವರ** ಸನ್ನಿಧಿ ಯೊಳ್ ನಿಂದು ಕೆಯ್ಮುಗಿದೆಣಿಸಿದಂ :—

— ಚೆಲ್ವರಾಯನನ್ನು ದರ್ಶನಮಾಡಿ ಎಣಿಸಿದ ಪ್ರಕಾರ —

ಶ್ರೀಮನ್ನಾರಾಯಣಂ ತನ್ನ ಸನ್ನಿಧಿವರೆಗಮೆಯ್ತಂದು ವಂದನಂ ಗೆಯ್ವುದರ್ಕಾಱದ ಮುದುಪರುಂ ಮಕ್ಕಳುಂ ಪೆಟಿವರುಂ ಬೇನೆಯುಡ ಸಿದರುಂ ದರ್ಶನಂಗೆಯ್ದು ಬರ್ದುಂಕಲೆಂದು ಉಕ್ಕೆವದೊಳ್ಬೀದಿಯಂ ಬಲ ವರ್ಪುದರ್ಕೆ ಪೊತ್ತು ಪೊಸವರಿಜಿದ್ರೈಸೆ! ನೀಳ್ದ ಮಗುಡಮುಂ ನಸುಗವಿದ ನೊಸಲ್ವಟ್ಟಮುಂ ಸಿರಿಗುರುಳುಂ ನುಣ್ಬಣೆಯುಂ ಪೊಳೆವ ಕತ್ತುರಿಯ ತಿಳಕಮುಂ ಕುಡುವುರ್ಪುಂ ಬಗಸೆಗಣ್ಣುಂ ಅರೆವಿರಿದ ಸಂಪಗೆನನೆಯುಂ

ಪೞಿವ ಮೂಗುಂ ಎಳನಗೆಯುಂ ಚೆಂಬಾಯ್ದೞಿಯುಂ ಗೆಱಿಗೊರಲುಂ ನೀಳ್ದ ತೋಳುಂ ನೆಗಪಿದ ಶಂಕಚಕ್ರಂಗಳುಂ ಒಯ್ಯ್ಯರದೊಳೂಱಿದ ಗದೆಯುಂ ನಸುವುಂಬರಿಸಿದ ಅಭಯಹಸ್ತಮುಂ ಬಡನಡುವಿನೊಳ್ ಬಿಗಿದು ಕಟ್ಟಿದ ಪೊಂಬಟ್ಟೆದಟ್ಟಿಯುಂ ಪದ್ಮಪೀಠದೊಳ್ನೆಲಸಿದ ಪಾದ ಪದ್ಮಮುಮಾದ ನೆಲೆಯಂ ನಿಟ್ಟಿಸೆ—ಇರ್ಕೆಲದೊಳ್ ಭುಜಮಂ ಭುಜಂ ಸೋಂಕೆ ನಿಂದಿರ್ಪ ರಾಣಿಯರೊಡವೆರಸಿ ಕುಣಿಯುತೆಳಸಿದಂತೆಯುಂ ನಗುತ್ತೆ ನುಡಿಸುತ್ತೆ ವಂದು ಎನ್ನೊಡವೆರೆದಂತೆಯುಂ ಒಳಪುಗುವಂತೆಯುಂ ತೋಱುತಿದೆ। ಮತ್ತಂ ಕಿರೀಟದೊಳೊಡೆತನಮುಂ ದಿಟ್ಟಿಯೊಳ್ಕಾರುಣ್ಯಮುಂ ನಸುನಗೆಯೊಳ್ ವಾತ್ಸಲ್ಯಮುಂ ಕೆಯ್ಗಳೊಳಭಯಪ್ರದಾನಮುಂ ಎರ್ದೆಯೊಳ್ಸಿರಿಯುಂ ಪೊಡೆಗಟ್ಟಿನೊಳ್ ಸೌಲಭ್ಯಮುಂ ಪೊರ್ಕುೞೊಳ್ ಜಗತ್ಕಾರಣತ್ವಮುಂ ಸಿರಿಯಡಿಯೊಳುಪಾಯಮುಂ ಇರ್ಕೆಲದ ರಾಣಿಯರೊಳ್ ಪುರುಷಕಾರತ್ವಮುಂ ಪ್ರತ್ಯಕ್ಷಮಾಗಿ ತೋಱುತಿದೆ। ಮತ್ತಮೀವಸ್ತು ನಿಟ್ಟಿಸಿದೊಡನೆ ಕಣ್ಮನಂಗಳಂ ಕವರ್ದುಕೊಳುತಿದೆ। ಬಿಡುಗಣ್ಣರ್ ಕುಡಿವಮರ್ದಿನಂತೆ ಬೆಡಗುದೋಱದೆ ಏಪೊೞ್ತುಮೊಡವಿಡದೆ ಸವಿದೊಡಂ ತಣಿವುಗುಡದೆ ಸವಿಯೋಱುತಿದೆ। ಈವಸ್ತುವಂ ನಿಟ್ಟಿಪೆನ್ನ ಕಣ್ಗಳ್ ಪಲವಕ್ಕೆ, ಜಾನಿಪ ಮನಮುಂ ವಿಭುವಕ್ಕೆ, ಆಳ್ಗೆಯ್ವ ಮೆಯ್ಯುಮಿರ್ಮಡಿಯ್ಯುಂ ನೂರ್ಮಡಿಯ್ಯುಂ ಸಾಸಿರ್ಮಡಿಯ್ಯುಮಕ್ಕೆ ; ಆದೊಡಂ ತಣಿವುದೋಪ್ಪುದರಿದು। ಒಂದೊಂದವಯವದ ಸೌಂದರ್ಯಮೆ ಮೂಜಗಮಂ ಬೆಲೆಗೆಯ್ದುಕೊಳಲೆಳಸುತ್ತಿದೆ। ಸರ್ವಾವಯವಸೌಂದರ್ಯಮಂ ಭಾವಿಸಲಾನೆನಿತರವಂ ? ಆದೊಡಂ ಕಡಲಂ ಕಱುಗೊರಿಗುವಳ್ಳದೊಳಡಕಂಗೆಯ್ವ ಅಘಟಿತಘಟನಾಸಮರ್ಥನಪ್ಪ ಜಗತ್ಪತಿಯೆ ಸರ್ವಮುಂ ನಿರ್ವಹಿಸುಗೆ। ತನ್ನಂ ನಂಬಿದರ ತಮಮಂ ತೞ್ಗಿಸಿ ಸತ್ವಮನೇೞ್ತರಂಗೊಳಿಸಿ ಬುದ್ಧಿಯಂ ಪ್ರಬುದ್ಧಮೆನಿಸಿ ಪಿರಿಯರೊಳ್ ಬೆರಕೆಗೊಳಿಸಿ ಸದಾಚಾರ್ಯಸಮಾಶ್ರಯಣಂಗೆಯಿಸಿ ಮುಕ್ತಿವರೆಗಮೆಸಗಲ್ಕುಪಕಾರಂಗಳನೆಸಗಿ ಸಲಪುಗುಂ। ತಾ

ನೊಡೆಯುನುಮಾನೊಡವೆುಯುುಮೆುಂಬುುದನಱುಯದಿರ್ದೊಡಮನಾದಿಕಾಲ ದಿಂದೀವರೆಗಮೆನ್ನನುೞಿಪಿ ಈಜನ್ಮದೊಳ್ ಯದುವಂಶದೊಳ್ ತನ್ನ ಭಕ್ತರೆಂದು ನೆಗಟ್ದ ಮಹಿಶೂರಪುರದರಸುಗಳೊಳ್ ರಾಜಋುಷಿಯೆನಿಪ ದೇವರಾಜರಸನ ಬಸಿಱೊಳ್ ಬರಿಸಿ ಆಚಾರ್ಯವರ್ಯರೆನಿಪ ರಾಮಾನುಜ ರಡಿಗಳಂ ಸೇರಿಸಿ ತನ್ನವನೆಂದಭಿಮಾನಿಸಿದಂ। ಈಮೇಲೆನ್ನ ಸಲಪುವುದಚ್ಚರಿ ಯುಲ್ತು ; ಆದೊಡಮೆನ್ನ ಚಾಪಲ್ಯದಿಂ ಬಿನ್ನವಿಪೆಂ। ಎನ್ನೊಳ್ ತಪ್ಪೆನಿ ತಾನುಮುಳ್ಳೊಡನಿತುಮಂ ಸೈರಿಸಿ ದಯೆಯಿಂದೆನ್ನಂ ಸಲಪುವುದು—

ಎಂದು ವಂದನಂಗೆಯ್ದು ತೀರ್ಥಪ್ರಸಾದಮಂ ಸ್ವೀಕರಿಸಿ ಪೊಱ ಗಣ್ಗೆ ವಂದು, ಪಲವುಂ ವಾದ್ಯಘೋಷಂಗಳುಮನುಗ್ಗಡಿಪ ಕೈವಾರಿ ಗಳ ಕೈವಾರದ ದನಿಯುುಮಂ ತಂತಮ್ಮ ಸಿರಿವಾಳಿಗೆಗಳ ಬಾಗಿಲೊಳ್ ನಿಂದು ಪರಸುವ ಹದಿಬದೆಯರ ಪರಕೆದನಿಯುುಮನಾಲಿಸುತ್ತೆ ಸಂತಸ ದಿಂದರಮನೆಯುಂ ಪೊಕ್ಕು ಒಳವಾಗಿಲೊಳ್ ನಿಂದು, ಅಲ್ಲಿ ಸಾಮಂತ ರಾಯರಂ ಪುರೋಹಿತಾಮಾತ್ಯಸೇನಾಪತಿಭೃತ್ಯವರ್ಗಮುುಮಂ ಕಳುಪಿ, ಅಳಹಿಯಸಿಂಗಾರಾರ್ಯರೊಡನೊಳಚೌಕಿಯ ಪೊಂಜಗಲಿಯೊಳ್ ಕುಳ್ಳಿ ರ್ದುಂ ;

ಅರಸನ ಮನದ ಗೆಲ್ಲಮಂ ಕಳಕಳಿಪ ಮೊಗಸಿರಿಯುುಮಂ ಕಂ ಡಳಹಿಯಸಿಂಗರಾರ್ಯಂ ನುಡಿದನದೆಂತೆನೆ :—

ದೇವ ! ಚಿತ್ತವಿಪುದು. ಈಗಳ್ ದೇವರಂ ನಿರವಿಸೆ ದೇವಲೋ ಕದಿಂದಿೞಿದಂತೆಯುುಮಭೀಷ್ಟವರಮಂ ಪಡೆದಂತೆಯುಂ ಅಮೃತಪಾನಂ ಗೆಯ್ದಂತೆಯುಂ ದಿವ್ಯಶಕ್ತ್ಯಾವಿಷ್ಟನಾದಂತೆಯುಂ ದೇವತೆಯಂ ಬಸಂಗೆ ಯ್ದಂತೆಯುಂ ಸಾಕ್ಷಾದ್ದೇವತೆಯಂತೆಯುಂ ತೋಱುತಿದೆ. ಇದರ್ಕೆ ಕಾರಣಮುಲ್ಪಮಾಗಿರದು. ಎಂತಪ್ಪ ಸಂತಸದೊಳಂ ಕದುಬುಗೊಳದೆ ಕಡಲ ಮಡುವಿನಂತಿರ್ಪ ದೇವರ ಚಿತ್ತದೊಳ್ ಪೊಣ್ಮುವ ಸಂತಸದೆರೆಗಳ್

ಮೊಗಸಿರಿಯೊಳ್ ಪಡಿನೆಬಲ್ಗೊಳುತ್ತಿದೆ. ಇದಂ ತಿಳುಪವೇಳ್ಪುದು, ಎಂಬುದುಂ ;

ಈಬೆಸಗೊಳ್ವ ಕಜ್ಜದ ಬಲ್ಪನಾರಯ್ದು ಬಳಸಿದೂಳಿಗದವರ್ ಪಿಂದೆಗೆದು ದೂರದೊಳ್ ನಿಶ್ಶಬ್ದವಾಗಿ ನಿಂದಿರೆ ರಾಯನಿವನಂ ಪತ್ತೆ ಬರಿಸಿ ಕಿವಿಯೊಳಾವೃತ್ತಾಂತಮನಿತುಮಂ ಪೇಳ್ದುದುಂ ; ಇವನುಂ ಕಿವಿವಟ್ಟೆಯೊಳ್ಪಾಯ್ದು ಬಗೆಗೆಱೆಯಂ ತುಂಬಿದ ಸಂತಸದ ಪೊನಲಂ ಕೋಡಿಗೊಳಿಸುವಂತೆ ನಲ್ನುಡಿಗಳಂ ನುಡಿದನದೆಂತೆನೆ :—

" ಇಂದೈಸೆ ಜಗಂ ಸನಾಥಮಾದುದು ; ಯದುಕುಲಮೇೞ್ಗೆವಡೆದುದು; ಸಂಸಾರಂ ಸಾರಮೆನಿಸಿದುದು ; ರಾಜಧರ್ಮಂ ಪೆರ್ಮೆವೆತ್ತುದು ; ಕನ್ನಡನಾಡುನ್ನತಿದಾಳ್ದುದು ; ಪ್ರಜೆಯ ಸೌಖ್ಯಂ ಪ್ರಬಲಮಾಯ್ತು ; ಸೇವರೇೞ್ಗೆ ದಿಟಂಗೊಂಡುದು ; ಪಾರ್ವರಾಸೆ ಪಣ್ದೆಳೆದುದು ; ಎನ್ನಿಷ್ಟಾರ್ಥಮೀಡೇಱಿದುದು " ಎಂದು ನುಡಿದು ಪರಸಿ ಮನೆಗೆ ಪೋಪುದುಂ ;

ಅರಸನುಮಂತಪುರಮಂ ಸಾರ್ದು ಅಲ್ಲಿ ಇದಿರ್ವರ್ಪ ರಾಣಿಯ ಕೈಲಾಗಿನೊಳ್ ಸಜ್ಜೆವನೆಯುಂ ಸೇರಿ, ಕಾಂಚನಮಯಮಂಚದೊಳ್ ಕುಳ್ಳಿರ್ದು ನಗುತ್ತೆ—" ಎಲೆಯರಸಿ, ನಿನಗೊಂದೊಸಗೆಯಂ ಪೇೞ್ವೆಂ. ಎನಗೀವ ಉಚಿತಮಾವುದು ? " ಎನೆ ; ರಾಣಿಯುಮೊಡನೆ ನಿಟ್ಟಿಸಿ ಮಣಿದ ದಿಟ್ಟಿಯುಂ ನಸುಬಾಗಿದ ಶಿರಮುಂ ಮೊಳೆವ ನಗೆಯುಂ ಮೊಗದೋರ್ಪ ವಿನಯಮುಮಾಗಿ ಬಿನ್ನವಿಸಿದಳ್ :—

" ರಾಯ ! ಚಿತ್ತವಿಪುದು. ಆನುಂ ದೇವರೊಡನೆಯಾದುದಱಿಂ ದೇವರೊಡೆತನದೊಳಡಕಮಾದುದಲ್ಲದೆ ಎನಗೆಂದು ಪೆಱತೊಂದೊಡವೆಯುಂ ಪೆಱತೊಂದೊಡೆತನಮುಮಿಲ್ಲದೆ ಆನೀವುದೆತ್ತಣದು ? ದೇವರ್ ನಿರವಿಸಿದುದನಾಲಿಸಿ ಎನ್ನ ಮನದೊಳ್ ಪೊಣ್ಮಿದ ಸಂತಸದಿಂ ದೇವರ ಸಂತಸಮನಿರ್ಮಡಿಗೊಳಿಸುವೆಂ " ಎಂಬುದುಂ ;

ಬಿನದಕ್ಕಂ ಬಿನಯಕ್ಕಂ ಬಿನ್ನಣಕ್ಕಂ ತಕ್ಕ ನುಡಿಯಂ ಕೇಳ್ದು ಪೆರ್ಗಳಿಸಿ ಪೇಳ್ದಂ:—“ ಎಲೆ ರಾಣಿ! ಶ್ರೀಮನ್ನಾರಾಯಣನ ಕೃಪೆಗೆ ನೆಮಮುಮೆಲ್ಲೆಯುಮಿಲ್ಲದಿರ್ಪುದಱಿಂದೆಯುಂ ಎಮ್ಮ ಯಾದವಕುಲದೊಳ್ ಪ್ರೀತ್ಯತಿಶಯದಿಂದೆಯುಂ ರಾಜರಸದೇವರಾಜರಸರ ಭಕ್ತಿಪ್ರಕರ್ಷದಿಂದೆಯುಂ ಎಮ್ಮ ಭಾಗ್ಯೋದಯದಿಂದೆಯುಂ ಮುಂ ಪೃಶ್ನಿಸುತಪರೊಳಂ ಅದಿತಿಕಶ್ಯಪರೊಳಂ ದೇವಕೀವಸುದೇವರೊಳಂ ಆವಿರ್ಭವಿಸಿದಂತೆಮ್ಮ ಬಸಿಱೊಳ್ ಬಂದು ಜಗಮಂ ಸಲಪುವೆನೆಂದು ತನ್ನರ್ಚಾವತಾರ ಮರ್ಯಾದೆಯಂ ಮೀಱಿ ಸಿರಿನಾಯ್ದೆಱಿದು ನಿರವಿಸಿ ಎನ್ನೆರ್ದೆಯೊಳ್ ಬಂದು ನಿಂದಂ.” ಎಂಬುದುಂ ;

ರಾಣಿಯುಂ ನವಿರ್ದಳೆದು ಆಲಿಸೀಗರ್ಱಿದು ಕೊರಲ್ಸರಿಗಳಿಂ ಬಿಕ್ಕುತೆ ಬಿನ್ನವಿಸಿದಳ್:—“ ಜಗದೀಶ್ವರಂ ಸರ್ವತಂತ್ರಸ್ವತಂತ್ರನಾದುದಱಿಂದೆಂತೆಸಗಿದೊಡಂ ತವಿಪರಾರ್? ಕಿಱಿದಂ ಪಿರಿದೆನಿಸಿದೊಡಂ ಬೇಡೆಂದು ತಡೆವರಾರ್? ತಮ್ಮೊಳ್ ತಮಗೆ ತಾರತಮ್ಯಮುಂಟಾದೊಡಂ ನೇಸಱ್ ಮೂಡಿದೊಡನೆ ಬಿದುವುಂ ಬೆಳ್ಮುಗಿಲುಮೊಂದೆನಿಸುವಂತೆ ಅವನ ಮೈಮೆಯುಂ ನಿರವಿಸೆ ಪುಟುವುಂ ಬೊಮ್ಮನುಮೊಂದೇ ತೆಱನೈಸೆ! ಆಸ್ವಾಮಿಯ ಕೃಪೆಯಿಂದೆಮ್ಮ ಜನ್ಮಂ ಸಫಲಮಾದುದು.” ಎಂದೋರೊರ್ವರೀವಗೆಯ ಸಂತಸವಾತುಗಳಂ ಬಳೆಯಿಸುತ್ತಿರುಳಂ ಕಳೆದರ್.

ಪೊಟ್ಟಿಱಿಯೊಳೆಟ್ಟರಸಂ ಮಿಂದು ಮಡಿಯುಟ್ಟು ಸಂಧ್ಯಾವಂದನಮನಾಚರಿಸಿ ನಾಮತೀರ್ಥದ ಚೌಕಿಗೆ ಬಂದು ದೇವತಾಸನ್ನಿಧಿಯೊಳ್ ಕುಳ್ಳಿರ್ದು ಅಳಹಿಯಸಿಂಗರಾರ್ಯರಂ ಬರವೇಟ್ಟು ಭರದಿಂ ಪಡಿಯಱರಂ ಕಳುಪಿವಿನಂ ;

— ಅಳಹಿಯ ಸಿಂಗರಾರ್ಯರ ಮನೆ, ಮತ್ತು ಅವರ ಶರೀರ
ಮುಂತಾದುವುಗಳ ವರ್ಣನೆ —

ಅವರ್ ಅಳ್ದನಾಣತಿವಿಡಿದು ಕಡುವೇಗದಿಂ ನಡೆತರುತ್ತೆ ಚೆಲ್ಲಿದ

ನೀರಂ, ಬರೆದ ರಂಗವಲ್ಲಿಯ ಗೆಱೆಗಳಂ, ಸಿರಿವೀಧಿಯ ಸಿಂಗರಮಂ ನಿಟ್ಟಿಸು ತುಂ ಬರೆ—ಪೊಱನಾಗಿಲ ಇರ್ಕೆಲದ ಪೆರ್ಜಗಲಿಗಳೊಳ್ ಪಿಡಿದ ಪಲಾ ಶದಂಡಮುಂ, ಉಟ್ಟ ಬೆಳ್ವಟ್ಟೆಯ ಮೇಲೆ ಮೂಱುಂ ಬಳಸುಂ ಸುತ್ತಿದ ಮೌಂಜಿಯುಂ ವಿಮಲಯಜ್ಞೋಪವೀತಮುಂ ಪೊದೆದ ಕೃಷ್ಣಾಜಿನಮುಂ ಧವಳೋರ್ಧ್ವಪುಂಡ್ರಮುಮಾಗಿ ಸತ್ವದ ಬಿತ್ತುಂ ಸತ್ಕರ್ಮದ ಮೊಳೆಯು ಮೆನಿಪ ಎಳವಕ್ಕಳೋದುವ ವೇದಂಗಳ ಪಾವನಧ್ವನಿಯುಂ। ಒಂದೆಡೆಯೊಳ್ ತಳತಳನೆ ಪಳಂಚುವ ಪನ್ನೆರಬ್ಬಾಮುಮುಂ ಪೊದೆದುಟ್ಟ ತಳಿರ್ಗಾವಿ ಯುಡೆಗಳುಂ ಧರಿಸಿದ ತುಳಸಿತಾವರೆಮಣಿಗಳಮುಳ್ಸರಂಗಳುಂ ಶಾಂತಿ ರಸಂ ತುಂಬಿ ತುಱುಂಕುವ ಮೊಗಸಿರಿಯುಮಾದ ಎಡೆವರೆಯದ ಕುವರ ರೋದುವ ದಿವ್ಯಪ್ರಬಂಧದ ಬಂಧುರಧ್ವನಿಯುಂ। ಒಂದುಮೆರಸಿ ಕಿವಿಗಾನಂ ದಂಬಡೆಯೆ ಕೇಳುತ್ತೆಱೆ ಬಾಗಿಲನೊಳಪೊಕ್ಕಾತೊಟ್ಟಿಯ ನಾಲ್ಕುಂ ದೆಸೆಯ ಜಗಲಿಗಳೊಳಮೊಂದೆಸೆಯೊಳ್ ಕಾವ್ಯಮನೋದುವರುಂ ಒಂದೆ ಡೆಯೊಳ್ ಕರ್ಕಶತರ್ಕಪ್ರವಚನಂಗಳಿಂ ತರ್ಕಿಸುವರುಂ ಒಂದೆಸೆಯೊಳ್ ಧರ್ಮಸಂಶಯಂಗಳಂ ನ್ಯಾಯಾನುಗೃಹೀತಧರ್ಮಶಾಸ್ತ್ರವಚನಂಗಳಿಂ ತೀರ್ಚುವರುಂ ಒಂದೆಡೆಯೊಳ್ ಶ್ರೀಪಾಂಚರಾತ್ರೋದಿತಪಾಂಚಕಾಲಿಕ ಕ್ರಿಯಾಲಾಪಂಗಳನುಪನ್ಯಾಸಂಗೆಯ್ವರುಮಾಗಿರೆ ಅವರ್ಗೆ ಕೆಯ್ಮುಗಿ ದಾಲೋಚಿಸಿದರ್ :— ಕಾಮನೀತಾವನೊರ್ಮೆಯುಂ ಪೊಕ್ಕನಲ್ತು, ಕ್ರೋಧಮೀಧರೆಯೊಳಡಿಯಿಟ್ಟುದಲ್ತು, ಮೋಹಮೀಮಹಿಯಂ ನಿಟ್ಟಿಸಿ ದುದಲ್ತು, ದಮುಮೀದೆಸೆಯುಂ ಪೆಸರ್ಗೊಂಡುದಲ್ತು, ಮತ್ಸರಮೀಯು ತ್ಸಂಗಮಂ ನೆನೆದುದಲ್ತು, ಶಮದಮಾದಿಗುಣಂಗಳನಿತುಂ ಇಲ್ಲಿ ಗುರು ಕುಲವಾಸದಿಂದೊಳ್ಪುವೆತ್ತು ಜಗದೊಳ್ ಪೊಗೞ್ತೆವಡೆದುವು. ಮತ್ತಮಿದು ಕಲಿಯುಗಂಯದ ನೆಲನುಂ, ಕೇಣಂ ಕಾಣದ ಠಾಣಮುಂ, ಹಿಂಸೆ ಸಂಚರಿ ಸದ ಮನೆಯುಂ, ಹಿಸುಣ್ ಸುೞಿಯದ ಬಾಗಿಲುಂ, ಪುಸಿ ಪುಗದ ಅಗರ ಮುಂ, ಪೋರಟೆ ಪೊರ್ದದೆಡೆಯುಂ, ಠಕ್ಕುಂಯದ ಠಾವುಂ, ಬೆಕ್ಕಸಂ

ಬೆಱಸಿಯದಿಕ್ಕೆಯುಂ, ಸಾಸವಿಲ್ಲದ ದೇಶವುಂ, ಮೋಸಂ ಸಲ್ಲದೆಲ್ಲೆಯು ಮೆನಿಸುಗುಂ. ಮತ್ತಮೀಸಾತ್ವಿಕರ್ಗೆ ತೈಕ್ಷ್ಣ್ಯಂ ಬುದ್ಧಿಯೊಳಲ್ಲದೆ ಸ್ವಭಾವಮಂ ಭಜಿಸದು. ಭ್ರಮಣಂ ದೇಗುಲಮಂ ಬಲವರ್ಪುದಱೊ ಳಲ್ಲದೆ ಅಱಿವನನುಸರಿಸದು. ಮಾಲಿನ್ಯಂ ಹೋಮಧೂಮದೊಳಲ್ಲದೆ ಚಿತ್ತಮಂ ಪತ್ತದು. ದೂಷಣಂ ಪೂರ್ವಪಕ್ಷವಿಷಯದೊಳಲ್ಲದೆ ಪರ ಗುಣಂಗಳೊಳ್ ಪಸರಿಸದು. ಮುಖವಿಕಾರಂ ಮುದುಪತನದಿಂದಲ್ಲದೆ ವಿದ್ಯಾಧನಮದಂಗಳಿಂದೊದವದು. ದಂಡಗ್ರಹಣಮಾಶ್ರಮಧರ್ಮಮಪ್ಪು ದಲ್ಲದೆ ನಿಗ್ರಹಮಂ ನೆಗೞ್ದು. ಮತ್ತಂ ಇವರ್ ತರ್ಕದೊಳ್ ಗೌತ ಮಕಣಾದರಂ, ಶಬ್ದದೊಳ್ ಪಾಣಿನಿಪತಂಜಲಿಗಳಂ, ಮೀಮಾಂಸೆಯೊಳ್ ಜೈಮಿನಿಶಬರರಂ, ವೇದಾಂತದೊಳ್ ವ್ಯಾಸಬೋಧಾಯನರಂ ದೊರೆ ಗೊಂಡಿರ್ಪರೆಂದವರ್ಗೆ ವಂದಿಸಿ ಒಳವಾಗಿಲಂ ಪೊಕ್ಕು ಪೋಪಿನಂ ;

ಅಲ್ಲಿ ಸುಧಾಧವಳಿತಮಪ್ಪ ಪೆರ್ಜಗಲಿಯೊಳ್ ಬಳಸಿ ಪಾಸಿದ ರನ್ನಗಂಬಳಿಗಳ ನಡುವೆ ಪೊಂಬಲಗೆಯೊಳ್ ತಾರಗೆಗಳ ನಡುವಣ ಪೊಂ ಬೆಟ್ಟನಂತೆಯುಂ, ಬೊಮ್ಮರ ನಡುವಣ ಪೊಂಬಸಿಱನಂತೆಯುಂ, ದೇವತೆ ಗಳ ನಡುವಣ ವಾಸುದೇವನಂತೆಯುಂ ಬಳಸಿ ಕುಳ್ಳಿರ್ದ ಭಕ್ತಿವಿನಯ ವಿಶ್ವಾಸಂಗಳ ಒತ್ತಂಬದಿಂದೇಕಾಗ್ರಚಿತ್ತನಾಗಿ ಪುಸ್ತಕಂಬಿಡಿದು ವಾಚಿ ಪಾಚಾರಸಂಪನ್ನರೆನಿಪ ಪಲವುಂ ಶಿಷ್ಯರ ನಡುವೆ ಶ್ರೀಭಾಷ್ಯಮಂ ಶ್ರುತ ಪ್ರಕಾಶಿಕಾವ್ಯಾಖ್ಯಾನರೀತಿಯಿಂದುಪನ್ಯಾಸಮನೆಸಗುತುಪದೇಶಂಗೆಯ್ವ ವೈಖರಿಯಂ ನಿಟ್ಟಿಸಿ ಮನದೊಳಾಳೋಚಿಸಿದರ್ :—ಈಮಹಾನುಭಾವಂ ಪುಣ್ಣಿಮೆಯ ಚಂದಿರನಂತೆ ತಣ್ಪುವೆತ್ತಿರ್ದೊಡಂ ಮೆಯ್ವೊಗರ್ ಮುಂಗಾರ ಮಿಂಚಿನಂತೆ ಪಳಂಚುತಿದೆ. ಈವೈಷ್ಣವರೇಂ ಧನ್ಯರೋ ! ಆವಾಗಮಿವ ನೊಡನಿರ್ದವನೂಟಿಗಂಗೆಯ್ದುವನುಪದೇಶಂಗೇಳ್ವರ್. ಈಊರುಗರೇಂ ಸುಕೃತಶಾಲಿಗಳೋ ! ಮುಪ್ಪೊಬ್ಬುಂ ಬಂದು ವಂದನಂಗೆಯ್ದುವನಿಂ ಪರ ಕೆಗೊಳ್ವರ್. ಈನಾಡುಗರೇಂ ಭಾಗ್ಯವಂತರೋ ! ತತ್ತದುತ್ಸವಂಗಳೊಳ್

ಚೆಲ್ವನಾರಣ ರಾಮಾನುಜರೊಡನಿವನುಮಂ ದರ್ಶನಂಗೆಯ್ವರ್. ಮತ್ತಂ ಸರಸ್ವತಿಯುಮೇಂ ಪುಣ್ಯವತಿಯೋ! ಆವಗಂ ಪ್ರಸನ್ನಮಾಗಿ ಕರುಣಾಮೃತರಸದಿಂ ತುಂಬಿ ಮಾನಸಸರೋವರಮಂ ಪೋಲ್ತಿರ್ಪ ಮೊಗದಾವರೆಯೊಳ್ ನಲಿಯುತಿರ್ಕುಂ. ಈಯೆಡೆಯೊಳ್ ಧರ್ಮಂ ನಾಲ್ಕುಂ ಚರಣಂಗಳಿಂ ಪೂರ್ಣಮಾಗಿರ್ಪುದಱಿಂದಾವಗಂ ಕೃತಯುಗಮಲ್ಲದೆ ಯುಗಾಂತರಂಗಳ ನೆನಸಿಲ್ಲದಿರ್ಕುಂ. ನೆಲದೊಳೀಮಹಾನುಭಾವನುದಿಸಿರ್ಪುದಱಿಂ ನೇಸಱಿಂ ಪೊತ್ತಾಗಸದ ಗರ್ವಂ ಕಿಱಿದಕ್ಕುಂ. ಇವನ ಬಲ್ಮೆಯಿಂ ಧರೆ ಚಲಿಸದಿರ್ಕುಂ. ಮತ್ತಮಿವನಿರವಂ ಭಾವಿಸೆ ಕೃಪೆಯ ಪೊನಲುಂ, ಸಂಸಾರಮೆಂಬ ಕಡಲ ತಡಿಗಾಣಿಪ ಸೇತುವುಂ, ಆಸೆಯೆಂಬ ಬಿಸವಳ್ಳಿಗೆ ನಡುವೇಸಗೆಯುಂ, ಸಂತಸಮೆಂಬ ಅಮರ್ದಿಗೆ ಪೆರ್ಗಡಲುಂ, ಸಿದ್ಧಮಂತ್ರಂಗಳ್ಗೆ ಮಹಿಷಿಯುಂ, ಶಾಂತಿಯೆಂಬ ಪೆರ್ಮರಕ್ಕೆ ತಾಯ್ವೇರುಂ, ಆಚಾರಂಗಳ ನೆಲೆವೀಡುಂ, ಧರ್ಮಮೆಂಬ ಪಱಿಯಿಗೆಗೆ ಬಲ್ಗಾವುಂ, ಶಾಸ್ತ್ರಮೆಂಬ ಪೊನ್ಗೆ ಒರೆಗಲ್ಲುಂ, ಮುಳಿಸೆಂಬ ಪಾವಿಗೆ ಗರುಡನುಂ, ಮೋಹಮೆಂಬ ಕರ್ಗತ್ತಲೆಗಾದಿತ್ಯನುಂ, ಮಂಗಳದಂಗಳಮುಂ, ಸತ್ವಕ್ಕಾಶ್ರಯಮುಂ, ತಪಕ್ಕೆ ತಾಣಮುಂ, ನೇಮಕ್ಕೆ ನೆರವುಂ, ಸತ್ಯಕ್ಕೆ ಸಂಗಾತಿಯುಮೆನಿಸಿರ್ಕುಂ. ಮತ್ತಮಾಚಾರ್ಯಾಧಿರಾಜ್ಯಸೂಚಕಮಾದ ಪೊನ್ನಕಿರೀಟಮಂ ಪೋಲ್ವ ಪೀತಾಂಬರೋಷ್ಣೀಷಮುಂ, ಮಾನಸಪೂಜಾಸಮಯದೊಳ್ ಭಾವಿಸಿದಾತ್ರಿವಿಕ್ರಮನ ಪಾದದುಂಗುಟದತ್ತಣಿಂ ಮುಡಿವಣಿಯ ಮೇಲೆ ಬಿದ್ದು ಗಂಗೆ ಯಿರ್ಪೊನಲೊಂಡು ಪರಿವಂತೆ ತೋರ್ಪ ವಿಮಲೋರ್ಧ್ವಪುಂಡ್ರಮುಂ, ಕರುಣಾರಸದ ಕೆಱೆಗಳೆನಿಪ ಕಣ್ಗಳುಂ, ಅವಱ ಕರ್ಮಣಿಗಟ್ಟೆಗಳಂ ಪೋಲ್ವ ಪುರ್ಬುಗಳುಂ, ನಾಲ್ಮಡಿಸಿದಷ್ಟಾಕ್ಷರವರ್ಣಂಗಳಂ ಪೋಲ್ವ ಬೆಳ್ವಲ್ಗಳ ಬೆಳಕಿನಿಂ ಬಳೆದ ಸಸುನಗೆಯುಂ, ಶಿಷ್ಯರೆರ್ದೆಯೊಳ್ ಬಿತ್ತಲ್ಕೆಂದು ಸಂಗ್ರಹಿಸಿದ ಸತ್ವಗುಣದ ಬಿತ್ತುಗಳಂತಿರ್ಪ ಮುತ್ತಿನ ಕಂಠಸರಂಗಳುಂ, ದುಗಲಂಗಳುಮಾದ ದಿವ್ಯಾಕೃತಿಯಿಂ ಸಿಟ್ಟೆ

ಸುವಿನಂ ತವುಂ ತಟ್ಟುಗ್ಗತ್ತಿದೆ, ಸತ್ವಂ ಬಿತ್ತರಿಸುತ್ತಿದೆ ಎಂದು ಅಚ್ಚರಿ ಗೊಳುತ್ತೆ ಭಕ್ತಿವಿನಯಂಗಳೊಡಗೂಡಿ ಪತ್ತಿಸಾರ್ದು ಸಾಷ್ಟಾಂಗ ಪ್ರಣಾಮಂಗೆಯ್ದು ಕೆಲದೊಳ್ನಿಂದು ಬಿನ್ನವಿಸಿದರ್:--''ಸ್ವಾಮೀ,ದೇವರಂ ಬರವೇಟ್ಟು ಆಳ್ವವರಾಣತಿಗೆಯ್ದೆಮ್ಮಂ ಕಳುಪಿದರ್;'' ಎಂಬುದುಂ

ಅಳಹಿಯಸಿಂಗರಾರ್ಯರ್ ತವಕದಿಂದೆಟ್ಟು ಶಿಷ್ಯವರ್ಗರಸು ಸಿರಿವಾಳಿಗೆ ವಾಗಿಲಂ ಪೊಱಮಟ್ಟಂದಳವನೇಱಿ ಅರಮನೆಗೆಯ್ದಿ ಮುದದಿಂ ರಾಯನ ಸಮುಖಮಂ ಸಾರ್ದನಂ ;

ರಾಯಂ ಸಾಜದಿಂ ನಿರ್ಮಲಮಾಗಿ ನೇಹದಿಂ ಕರಗಿ ಕವಿವ ದಿಟ್ಟಿಗಳಿಂದೀಯಳಹಿಯ ಸಿಂಗರಾರ್ಯರಂ ದಯಾರಸದಿಂದಭಿಷೇಕಂಗೆಯ್ವಂ ತೆಯುಂ, ಸಂತಸಮನೊಡಲೊಳ್ ತುಂಬುವಂತೆಯುಂ, ತಣ್ಪುಗೊಳಿಪಂತೆ ಯುಂ, ಪೆಂಪುವಡಿಪಂತೆಯುಂ ನಿಟ್ಟಿಸಿ ಸನಿಯುಕ್ಕೆ ಬರಿಸುವುದುಂ ;

ಅವರ್ : — '' ಎಲೆ ಮಾರಾಯ, ನಿನಗೆ ಧನಕನಕವಸ್ತುವಾಹ ನಾದಿ ಸಮೃದ್ಧಿಯುಂ ಕಳತ್ರಮಿತ್ರಬಂಧುಸಮೃದ್ಧಿಯುಂ ಆಯುರಾರೋ ಗ್ಯಮುಮುಂಟಾಗಿರ್ಪುದಱಿಂ ತಾಂ ಪರಸತಕ್ಕುದನಿತುಂ ಸಮೃದ್ಧಿಯಾಗಿ ರ್ಪುದು. ಆದೊಡಂ ನಿನ್ನಂತೆ ರೂಪಮುಂ ಗುಣಮುಮುಳ್ಳ ಕುಮಾರನಂ ಪಡೆದು ಜಗಮಂ ಸನಾಥಮೆನಿಸುವುದು. '' ಎಂಬುದುಂ ;

ರಾಯಂ ಅಲರ್ದ ಮೊಗಮುಂ ನಗೆವೊಳೆವ ಬಾಯ್ದೆಱೆಯು ಮಾಗಿ ಪರಕೆಯನೊಪ್ಪುಗೊಂಡು ಅವರಂ ಗದ್ದುಗೆಯೊತ್ತಿನೊಳ್ ಕುಳ್ಳಿ ರಿಸಿ ನಿರವಿಸಿದಂ :— '' ಅಯ್ಯಾ, ನೀವೆಸಗಿದ ಪರಕೆಗಳುಂ ತಿರುನಾರಾ ಯಣಸ್ವಾಮಿಯುವರಾಣತಿಯುಮೊಂದೆ ತೆಱತೊಳಿರ್ಪುದು '' ಎಂದು ಸನ್ನಿಧಿಯೊಳ್ ನಡೆದವೃತ್ತಾಂತಮನಿತುಮಂ ಬಿತ್ತರಮಾಗಿ ಪೇಟ್ಟುದುಂ ;

ಇವರ್ ಅಮೃತಾಸ್ವಾದನಗೆಯ್ವಂತೆ ಸಂತಸದೊಳ್ ಕಱಿನಾಲಿ ನೀರುಂ ಕವಿವ ನವಿರುಮಾಗಿ ನುಡಿದರ್ : — '' ಅಕಟಕಟ ! ಈಯೆಮ್ಮ ಮಹೀಶೂರರಸುಗಳೊಳೀಸಿರಿಯರಸಂಗೆ ಎನಿತಭಿಮಾನಮೋ ! ಎನಿತು

ಪಕ್ಷಪಾತಮೋ ! ಎನಿತು ಬಹುಮಾನಮೋ ! ಎನಿತು ಮಱುಕಮೋ ! ಎನಿತು ಮನ್ನಣೆಯೋ ! ಊರೊಳಂ ಮನೆಯೊಳಂ ಎರ್ದೆಯೊಳಂ ನೆಲೆಗೊಂಡು ಭಕ್ತರ ಮುಖದೊಳಂ ಅರ್ಚಕರ ಮುಖದೊಳಂ ಮಾತನಾಡಿಸಿ ಮನ್ನಿಸಿ ವರಂಗಳನಿತ್ತು ತಣಿಯದೆ ಸಾಕಾರಮಾಗಿ ನಿಮ್ಮೆರ್ದೆಯೊಳ್ ನಿಂದು ಔರಸಪುತ್ರನಾಗಿ ಪುಟ್ಟುವನೆಂದು ಪೂಣ್ದಂ. ಪ್ರಜೆಯನಿತುಂ ಕಲಿದೋಷದೂಷಿತಮಾಗಿ ತಂತಮ್ಮ ವರ್ಣಧರ್ಮಂಗಳನಾಚರಿಸದೆ ತಮ್ಮ ಇಚ್ಛೆವಂದಂತೆ ನಡೆಯುತ್ತಿರೆ ಕಂಡು ಮಱುಗಿ ಇವರೊಳ್ ಪೇಟ್ದಂತೆ ಕೇಳ್ವರನನುಗ್ರಹಿಸಿ ಕೇಳದ ದುರಾಗ್ರಹಿಗಳಂ ನಿಗ್ರಹಿಸಿ ಮೋಕ್ಷಧರ್ಮಮಂ ನೆಲೆಗೊಳಿಸಲ್ಕವತರಿಸುವಂ. ಕೃಷ್ಣಾವತಾರದೊಳ್ ಸಾಂದೀಪಂಗೆ ಬಂದ ಮೈಮೆ ಈಯವತಾರದೊಳೆನಗಂ ಬಂದಪುದು. ಈಯರ್ಥದೊಳಾಂ ಕಂಡುದೊಂದು ಕನಸಂ ಪೇೞ್ವೆಂ ಆಲಿಪುದು. ನೀಮುಮಾನುಮಿರ್ವರುಂ ತಿರುನಾರಾಯಣನ ಸನ್ನಿಧಿಯೊಳ್ ನಿಂದು ಸೇವೆಗೆಯ್ಯುತ್ತಿರ್ಪನಂ, ತನ್ನ ದಿವ್ಯಾಂಗದತ್ತಣಿಂ ತನ್ನ ಪಡಿನೆೞಲೆನಿಸಿದ ಚೆಲ್ವರಾಯನಂ ಪೋಲ್ವ ಅದೊಂದು ಮಗುವಂ ತೆಗೆದು ಎನ್ನ ಕೆಯ್ಯೊಳೀವುದುಂ ; ಆನುಂ ನಿಮಗಿತ್ತೆಂ. ಆನಿತಱೊಳ್ ಅಪರರಾತ್ರಿಯೊಳೇೞ್ವ ಮಕ್ಕಳ ನಿಗಮಧ್ವನಿಯಿಂದೆಚ್ಚತ್ತು ಕಣ್ದೆಱೆದು ಅಚ್ಚರಿವಟ್ಟೆಂ. ” ಎಂಬುದುಂ ;

ರಾಯನುಮುಱ್ತೆಯಿಂ ಕೆಯ್ಮುಗಿದು — “ ಮುಂ ಸ್ವಾಮಿ ತಾನೆ ಬಂದೆನ್ನೆರ್ದೆಯೊಳ್ ನಿಂದುದಱಿಂ ಸ್ವತಂತ್ರನಪ್ಪೆನೆಂಬ ಸಂದೆಯಂ ಸಮನಿಸಿರ್ದುದು. ಈಗಳ್ ವೇದಾಂತವಿತ್ತುಗಳಾದ ನಿಮ್ಮ ಕೈಮೊಕ್ಕು ಎನ್ನ ಕೆಯ್ಗೆ ವಂದುದಱಿಂದೆನಗೆ ವಿಧೇಯನಾಗಿರ್ಪಂ. ಭಗವತ್ಪ್ರಸಾದಮುಂ ಭಾಗವತಪ್ರಸಾದಮೂಲಕಮಾಗಿ ಬಂದೊಡೆ ನಿರುಪಾಧಿಕಮಕ್ಕುಂ. ” ಎಂದು ಪೆರ್ಚಳಿಸುತ್ತೆ, ತಾಂ ಪೊದೆದಿರ್ದ ಪೊಂದುಗುಲಮನಿವರ್ಗೆ ಪೊದಿಸಿ ತೊಟ್ಟಿರ್ದ ರನ್ನದೊಡವುಗಳಂ ತುಡಿಸಿ, ಮುದದಿಂದಿವರಿತ್ತೆ ಘರಕೆಗೆ ಹರಿಸಂಧದಳೆಧು, ನಿತ್ಯನಿಯಮಮಾದ ಗೀತಾಧ್ಯಾಯಾರ್ಥಮ

ನಿವರಿಂ ಭಕ್ತಿಯುಕ್ತನಾಗಿ ಚಿತ್ತದೊಳ್ ನೆಲೆಗೊಳಿಸಿ, ದೇವಪೂಜೆಯಂ ರಚಿಸಿ, ತೀರ್ಥಮಂ ಸ್ವೀಕರಿಸಿ, ಆಬಟುಕ್ಕಿವರಂ ಶ್ರೀಮಂದಿರಕ್ಕೆ ಕಳುಪಿ, ತಾನುಮಂತಪುರಮನೆಯ್ದಿ, ಅಮೃತಾನ್ನಮನಾಸ್ವಾದಿಸಿ, ನಲವಿಂ ರಾಣಿಗೆ ಅಳಹಿಯ ಸಿಂಗರಾರ್ಯರ್ಕಂಡ ಕನಸಿನ ವೃತ್ತಾಂತಮಂ ತಿಳುಪಿ ಸಂತಸಮಂ ಪರ್ಚುಗೊಟ್ಟು, ಬಟುಕ್ಕೆ ಪೊಱಗಣ್ಗೆ ವಂದು ಅಳಹಿಯ ಸಿಂಗರಾರ್ಯರಂ ಬರಿಸಿ ಶ್ರೀರಾಮಾಯಣಭಾರತಾದೀತಿಹಾಸಪುರಾಣ ರಹಸ್ಯಾರ್ಥಂಗಳಂ ಕೇಳ್ದು, ಮತ್ತಮಾಸ್ವಪ್ನವೃತ್ತಾಂತಮನೆ ಪೇೞ್ವಿನಂ ; ಇದರ್ಕಿವರ್ "ಮುಂ ತಾನೆ ಪ್ರಸನ್ನನಾದುದಱಿಂದೀಯವತಾರದೊಳ್ ದುಷ್ಟನಿಗ್ರಹಶಿಷ್ಟಪರಿಪಾಲನಂಗೆಯ್ವನೆಂದು ನಿಶ್ಚಯಿಸಿದೆಂ. ಮತ್ತಮೀಗಳಾರ್ಯಮುಖದೊಳ್ ಪ್ರಸನ್ನನಾದುದಱಿಂ ಮೋಕ್ಷಧರ್ಮಮಂ ನೆಲೆಗೊಳಿಸುವುದರ್ಕೆ ಸಂದೆಯಮಿಲ್ಲಂ" ಇವು ಮುಂತಾದ ಸಂತಸವಾತುಗಳಿಂದೀರ್ವರುಮನ್ಯೋನ್ಯಾಲಾಪಮನೆಸಗುತ್ತೆ ಪಲವುಂ ಪೊೞ್ತುಗಳೆದು--ನಾಳೆ ಪೊೞ್ತಱ ಪಟ್ಟಣಕ್ಕೆ ಪಯಣಮೆಂದು ದಳವಾಯಿಗೆ ತಿಳುಪಿ, ಸೇನಾಪ್ರಯಾಣಸಂಜ್ಞಾಪಟಹನಾದನಮನಾಜ್ಞಾಪಿಸಿ, ತಾಮುಂ ಸಾಯಂಸಂಧ್ಯಾವಂದನಾದಿ ರಾತ್ರಿಕರ್ಮಂಗಳಂ ನಿರ್ವರ್ತಿಸಿ, ರಾತ್ರಿಯಂ ಸುಖದೊಳ್ ಕಳೆದು, ಉದಯಕಾಲದೊಳ್ ಮಂಗಳಪಾಠಕರ ವೇಣುವೀಣಾಮಿಶ್ರಿತಮಾದ ಉಪ್ಪವಡದ ಬಣ್ಣನಾಡುಗಳನಾಲಿಸುತ್ತೆೞ್ಚತ್ತು ನಿತ್ಯಕರ್ಮಂಗಳನಾಚರಿಸುವನ್ನಂ; ಪಯಣಸನ್ನದಮಾಗಿ ಬಂದ ಅಳಹಿಯ ಸಿಂಗರಾರ್ಯರಂ ಸನಿಯಕ್ಕೆ ಬರಿಸಿ, ನುಡಿದಂ — " ಶುಭಕಾಲದೊಳ್ ಸಂತಸದ ಮೇಲೆ ಸಂತಸಮುಪ್ಪುದೆಂಬ ಲೋಕವಾರ್ತೆ ನಿಶ್ಚಿತಮಾದುದು. ಇಂದಿನಿರುಳ್ ಕನಸಿನೊಳಾಂ ತಿರುನಾರಾಯಣನಡಿಗೆಱಗಿ ಕೆಯ್ಮುಗಿದು ನಿಲ್ವಿನಂ —'ಎಲೆ ಅರಸ, ನಿನಗಿನ್ನೊಂದು ವರಮನೀವೆಂ; ನಿನಗಭೀಷ್ಟಮಂ ಪೇೞ್ವುದು.' ಎಂದಾಣತಿಯೀವುದುಂ ; ಆನುಂ ವಿನಯಾವನತನಾಗಿ ತನ್ನ ಕೆಳೆಯಳಹಿಯ ಸಿಂಗರಾರ್ಯಂಗೊಳ್ಗವರನಿತ್ತು ಮನ್ನಿಪುದೆಂದು

ಬಿನ್ನತಿಗೆಯ್ದಂ. ಅದರ್ಕೆ ನಸುನಗುತೆ—' ಎಲೆ ಅರಸ, ಕೇಳಾನವತರಿಸಿ ದೊಡೆನ್ನಂ ಬೞಿಸಲಲ್ಕೆನ್ನೊಡನಾಡಿ—ಈಸನ್ನೆಯುಂ ನಿನ್ನ ಮನದೊಳ್ ತಿಳಿದಿರ್ಪುದು. ' ಎಂದು ತನ್ನ ಸಿರಿನಾಯ್ದೞಿದು ನಿರವಿಸಿದಂ. '' ಎಂದು ಪೇೞ್ದು ರಾಯನೊಡನಿವನುಂ— '' ಆದೊಡಾಲಿಪುದು ಮಹಾರಾಜ. ನೀಂ ಇನ್ನೆವರಂ ನರಪತಿಯಾಗಿರ್ದುದಱಿಂ ನಿನ್ನಪರಶರೀರಮೆನಿಸಿದೆನಗೆ ನರರನಿಬರುಂ ವಿಧೇಯರಾಗಿರ್ಪರ್. ಈಗಳೀನಾರಾಯಣಂ ನಿನ್ನ ದೇವ ರಾಜವೆಸರನನ್ವರ್ಥಂಗೆಯ್ದು ತಾನೇ ನಿನ್ನ ಕುವರನಪ್ಪುದಱಿಂದವನ ಪರಿ ಜನಮೆನ್ನಂ ಬೞಿಸಲ್ವುದಚ್ಚರಿಯಲ್ತು. '' ಎಂದು ಬಿನ್ನವಿಸಿದಂ.

ಅನಿತಱೊಳ್ ಮೌಹೂರ್ತಿಕರ್ ಪ್ರಯಾಣಮುಹೂರ್ತಮೆಂಬುದುಂ, ರಾಯನುಂ ಯಾತ್ರಾದಾನಾದಿಗಳನಿತ್ತು ಸಕಲಬಲಂಬೆರಸು ಪಯಣಗತಿಯೊಳ್ ಶ್ರೀರಂಗಪಟ್ಟಣಮಂ ಸಾರ್ದು, ಅಲ್ಲಿ ರಾಜಧಾನಿ ಯೊಳರಸುಗೆಯ್ಯುತ್ತೆ ಸುಖದೊಳಿರ್ದಂ.

—ಚಿಕದೇವರಾಯನ ಜನನ—

ಶ್ರೀಮನ್ನಾರಾಯಣನ ಪರಿಪೂರ್ಣಕೃಪೆಯಂ ಪಡೆದು, ದೊಡ ದೇವಮಹಾರಾಯಂ ಶ್ರೀರಂಗಪಟ್ಟಣರಾಜಧಾನಿಯೊಳ್ ರತ್ನಸಿಂಹಾಸ ನಾರೂಢನಾಗಿ ಸಾಮ್ರಾಜ್ಯಂಗೆಯ್ಯುತ್ತಿರೆ ;

ಪ್ರಜೆಗಳ್ವೀರರೆನಿಸಿಯುಂ ವಿನಯವಂತರುಂ। ನಲ್ವಾತುಗರಾಗಿ ಯುಂ ನನ್ನಿಗರುಂ। 'ಚೆಲ್ವರಾಗಿಯುಂ ಪರದಾರವಿಮುಖರುಂ। ತಿರು ಕುಳಿಗಳ ಬರವಂ ಬಯಸಿಯುಂ ಪೆಱರಂ ಬಯಸದರುಂ। ಬಯಸಿದೊಡ ವೆಗಳಂ ಪುರುಳಂ ಪಡೆದುಂ ಧರ್ಮಪರರುಂ। ಅಳವಿಗರಾಗಿಯುಂ ಪಾಪ ಭೀರುಗಳೆನಿಸಿರ್ಪರ್. ಮತ್ತಮೆಲ್ಲರೊಳಂ ಬಲ್ಲರೆನಿಸಿ ಎಲ್ಲಾನಾಡೊಳಂ ಪೊಗೞ್ತೆವಡೆದು ಮೆಲ್ನುಡಿಗರ್ ಆಱುವರ್ ಆರ್ಪರ್ ಒಳ್ನುಡಿದೊಡವು ಗರ್ ಓಜಗಾಱರಕ್ಕರಿಗರೋದುಗಾರರ್ ಸಂಗೀತಸಾಹಿತ್ಯನಿಪುಣರ್ ಭಾರತಧಾವಘಾಯಣ ಭಾಗವತ ವಿಷ್ಣುಪುರಾಣಾದಿ ಶ್ರವಣಪರರಾಗಿರ್ಪರ್,

ಮುತ್ತುಂ ಬಿಲ್ಲುಗಳಂತೆ ಕೋಟಿಸಾರರುಂ। ಸರಲ್ಗಳಂತೆ ಲಕ್ಷ್ಯದಾನಾ ಸಕ್ತರುಂ। ವೈನಾಕದಂತೆ ಪಕ್ಷಪಾತವರಿದರುಂ। ಧರ್ಮಶಾಸ್ತ್ರದಂತೆ ದೇಗುಲಂಗಳಂ ಪರಿಕಾಲ್ಗಳಂ ಕೆಱಿಗಳಂ ಕಟ್ಟೆಗಳಂ ಕೊಳಂಗಳಂ ಬಾವಿಗಳನಾರವೆಗಳನಱವಟ್ಟಿಗೆಗಳಂ ನೆಗಟ್ಟುವರುಂ। ತೆಂಗಾಳಿಯುಂ ತಾವಗಂ ದಾಕ್ಷಿಣ್ಯಶಾಲಿಗಳುಂ। ಪಗಲಂತೆ ಮಿತ್ರಾನುವರ್ತಿಗಳುಮಾಗಿ ರ್ಪರ್. ಮತ್ತಂ ದೀಪದೊಳ್ ಸ್ನೇಹಹಾನಿಯುಂ। ಜಕ್ಕವಕ್ಕಿಯೊಳಗಲ್ಕೆ ಯುಂ। ರನ್ನದೊಳ್ ಪರೀಕ್ಷೆಯುಂ। ನೈದಿಲೊಳ್ ಮಿತ್ರದ್ವೇಷಮುಂ। ತಾವರೆಯೊಳ್ ರಾಜದ್ವೇಷಮುಂ। ಅಸಿಯೊಳ್ ಕೋಶಾಸಕ್ತಿಯುಂ। ಕೈಪಿಡಿಯೊಳ್ ಕರೆಯುಂ। ಅಲರೊಳ್ ಕಟ್ಟುಂ। ನಾರ್ಥಿಕದೊಳ್ ದಂಡ ಗ್ರಹಣಮುಂ। ಗಾರುಡದೊಳ್ ದ್ವಿಜಸಿಗ್ರಹಣಮುಮಲ್ಲದೆ ಇವರೊಳ್ ತೋಱದು. ಇಂತು ಧರ್ಮದೊಳ್ ಪ್ರಜಾಪರಿಪಾಲನಂಗೆಯ್ಯುತ್ತುಂ ತನ್ನ ಪ್ರಜೆಯೆನಿಸಲೆಳಸಿದ ತಿರುನಾರಾಯಣನ ಕಲ್ಯಾಣಗುಣಂಗಳನೆಣಿ ಸುತ್ತಿರೆ ;

— ಅಮೃತಾಂಬೆಯ ದೌಹೃದದ ವರ್ಣನೆ —

ಕೆಲವುದುಂ ದಿನದೊಳರಸಿ ಸತ್ಕರ್ಮವುಂ ಗರ್ಭದೊಳ್ ಪೊತ್ತ ಶ್ರುತಿಯುಂತೆಯುಂ, ಜಸಮಂ ಪೊತ್ತ ರಾಜನೀತಿಯುಂತೆಯುಂ, ಬಿನಯಮಂ ಪೊತ್ತ ಬಿಜ್ಜೆಯುಂತೆಯುಂ, ನೇಸಱಂ ಪೊತ್ತ ಮುಂಬಗ ಲಂತೆಯುಂ, ತುಂಬುವೆಱೆಯುಂ ಪೊತ್ತ ಪುಣ್ಣಿಮೆಯ ಸಂಜೆಯುಂ ತೆಯುಂ ಪೊಡೆಯೊಳ್ ಶ್ರೀಮನ್ನಾರಾಯಣನಂ ಪೊತ್ತು ಪೊಗರೇಱಿ ದಳ್. ಕೆಲವುದಾದೊಡಂ ಪೆಱಪೊಱೆಯುಂ ಪೊಱಲರಿಯದ ಬಳ್ಳಿ ತನ್ನ ಪೆರ್ಗಾಯುಂ ಪೊಱುವಂತೆ ರನ್ನದೊಡವುಗಳಂ ಪೊಱಲರಿಯದಿರ್ದುಂ ಜಗದ್ಗುರುವನುದರದೊಳ್ ಪೊತ್ತಿರ್ಪಳ್. ದಿನದಿನದೊಳ್ ಬಳೆವ ಗರ್ಭ ಭರದಿಂ ಮುನ್ನೀರ ನೀರುಂಡ ಮುಗಿಲಂತೆ ಮೆಲ್ಲಮೆಲ್ಲನೆ ನಡೆಯುತ್ತೆ ಬಱಿ ವರುವರಸಂಚಿಗಳ ಬಿಡಯುಮಂ ಬಿಡಿಸುವಳ್. ಒಳಗಿರ್ಪ ನಾರಾಯಣನ

ಸಿರಿಗಯ್ಯ ಶಂಕಿನ ಬೆಳ್ಗದಿರ್ ಪೊಱಪೊಣ್ಮಿದುದೋ, ಬಗೆಯೊಳ್ ಪುಟ್ಟಿದ ಚಂದಿರನ ದೀಪ್ತಿ ವ್ಯಾಪ್ತಮಾದುದೋ, ಪಾಸಿನ ಪಾವೆಱಯನ ಕಾಂತಿ ಕರೆಗಣ್ಮಿದುದೋ, ಪಾಲ್ಗಡಲ ತೆರೆ ಪಸರಿದುದೋ, ಸತ್ವಗುಣಂ ಬಿತ್ತರಮಾದುದೋ ಎನೆ-ಮೆಯ್ಯೊಳ್ ಬೆಳ್ಗದಿರ್ವಡೆದಳ್. ಮತ್ತಮುದರದೊಳಿರ್ಪ ಸಿಸುವಿನ ಮೈಮೆಗನುಗುಣವಾಗಿ ಬಯಸುವಳ್. ಎಲೆ ಕೆಳದಿ, ಮುತ್ತುಗಳೆನಿತಂ ಪೊತ್ತೊಡಂ ತಣ್ಪುದೋಱದು, ಕೊಳುಗುಳದೊಳ್ ಕಡಿವಡೆದ ಪಗೆರಾಯರ ಪಟ್ಟದಾನೆಯ ಕುಂಭದಿಂದುದಿರ್ವ ಪೆರ್ಮುತ್ತುಗಳಿಂ ಕೋದ ತಾರಹಾರಂಗಳಂ ತಂದು ಧರಿಸೆಂಬಳ್. ಪತ್ತಿಸಾರ್ದು ಊೞಿಗಂಗೆಯ್ವ ಪೆಱನಾಡ ರಾಣಿಯರ ಕೆಯ್ಯ ಕೈಪಿಡಿಯಂ ಕಡೆಗಣಿಸಿ ಅವರ ಪೊಳಪುವೆತ್ತ ಕದಂಪಿನೊಳ್ ತನ್ನ ಮೊಗಸಿರಿಯಂ ನಿಟ್ಟಿಸುವಳ್. ಪಂಜರದ ಗಿಳಿವಱಿಗೊಂದೆರಡ್ದಾಳಿಂಬದ ಬಿತ್ತನಿಕ್ಕುತೞಲ್ದಂ ಸಕಲ ಜನಕ್ಕಮಭೀಷ್ಟಫಲಂಗಳಂ ಕುಡಲೆಳಸುವಳ್. ಅಲರ್ವಾಸಿನೊಳೊಱದೊಡಂ ಕಂದುವ ಚೆನ್ನಡಿಗಳಿಂ ಪಗೆರಾಯರ ಪಟ್ಟದರಸಿಯರ ಬೈತಲೆವಣಿಗಳಂ ಮೆಟ್ಟಲೆಳಸುವಳ್. ಪರಿಜನದೊಳ್ ನೆವಮಿಲ್ಲದೆ ದಯೆಗೆಯ್ವಳ್, ಎನಿತಾನುಂ ತಪ್ಪಂ ಸೈರಿಪಳ್. ಜಗಮನಿತುಮುಜ್ಜೀವಿಪ ಕಜ್ಜಂಗಳಂ ನಿರವಿಪಳ್. ಇಂತು ದೌಹೃದಮಂ ಪರಿಪಾಲಿಸುತ್ತೆ ನವಮಾಸಂಗಳಂ ಕಳೆದು, ಜನನಮಾಗಳಾಗಳೆಂದಿರ್ಪಿನಂ ;

ಅರಸಿ ರಾಯನ ಪದಸರಸಿಜಂಗಳಂ ನಿಟ್ಟಿಸಲೆಳಸಿ ಕರೆಯಿಸೆ ವಂದ ರಾಯನುಂ ತನಗಿದಿರೇೞ್ವುದಂ ಮಾಣಿಸಿ ತಾನುಮಾಮೆಲ್ವಾಸಿನೊಳ್ ಕುಳ್ಳಿರ್ದು ನುಡಿದಂ:— "ಎಲೆ ಅರಸಿ ! ನಿನ್ನ ಮೊಗಸಿರಿ ಬೆಳ್ಪೇಱಿದನ್ನಂ ಪಗೆರಾಣಿಯರ ಮೋರೆಗಳ್ ಕರ್ಪೇಱಿದುವು. ನಿನ್ನ ಸುಯ್ಯೆಲರಿನಿಸುಂ ಪಿರಿದಪ್ಪನ್ನಂ ಅವರ ಸುಯ್ಯೆಲರೆಡೆವರಿದುದು. ಪಲವುಂ ಜೋಯಿಸರುಮೊಂದುವೆರಸಿ ಬಂದು—ನಿನ್ನ ಗರ್ಭದೊಳೊಗೆದ ಸಿಸು ಕಿಱಿದುಂ ದಿವಸದೊಳೇೞ್ಗವಡೆದು ಪೊಡವಿಯ ಪೊಲ್ಲದರೆಲ್ಲರಂ ಪೊಯ್ಯು

ಕೆಡಪಿ ತಕ್ಕರಂ ಪೆರ್ಕಳಂಗೊಳಿಸಿ ನೂಱುಂಬರಿಸಂ ಸೊಗನಾಳ್ಗೆಂದು ಪೇೞ್ವಿರ್"—ಎಂದಿನಿತುಂ ಸಂತಸವಾತುಗಳಂ ನುಡಿಯುತ್ತಿರೆ ;

ಪಡಿಯಱನೆಣ್ಣೊರ್ವಳ್ ಪಡಗರದೊಳ್ ಬಂದು ತನ್ನ ಕೆಯ್ಯ ಪೊಂಬೆತ್ತದಿಂ ನೆಲಗಟ್ಟಿನ ಪಳಿಕಿನಱೆಯನೊಯ್ಯನೆ ಪೊಯ್ದು ದನಿಗೆಯ್ದೆಱಗಿ ಕೆಯ್ಮುಗಿದು ಪೆಂಪೇಱಿದ ಸೊಗಸಿರಿಯುಂ ನಿಡುಗಣ್ಣಮೂದ ಸಂತಸಗದುಬಿನೊಳ್—"ಜೀಯ ! ಪರಾಕು, ಚಿತ್ತವಿಸುವುದು ಪಿರಿಯೊಸಗೆಯೊಸಗೆ !" ಎನೆ; ರಾಯನುಂ-"ಎಲೆ ಪೆಣ್ಣೆ, ಕದಲದೆ ಬಿನ್ನವಿಸು ಇದಱ ಬಿತ್ತರವಮಂ"—ಎಂಬುದುಮವಳುಂ—"ದೇವ, ಚಿತ್ತವಿಪುದು. ದೇವರ ಕೆಳೆಯಳಹಿಯ ಸಿಂಗರಾರ್ಯರ ಧರ್ಮಪತ್ನಿ ಸಿಂಗಮ್ಮಂಗೆ ಸುಮುಹೂರ್ತದೊಳ್ ಗಂಡುಗುವರನಾದಂ" ಎಂದು ಬಿನ್ನವಿಸಿದಳ್.

ಆದರ್ಕೆ ರಾಯನುಂ ರಾಣಿಯುಮತಿಹರ್ಷಿತರಾಗಿ ತಾಂ ತೊಟ್ಟ ತೊಡವುಗಳಮವಳ್ಗುಚಿತಮಿತ್ತು, ಮೇಲೆ ಬರ್ಪ ರಾಜಕುಮಾರಸೂರ್ಯೋದಯಕ್ಕೆ ಇದರುಣೋದಯಮೆಂದು ನಿರವಿಸಿ, ರಾಯನುಮೀಯುತ್ಸವಮಂ ಪರಿಪಾಲಿಸಲ್ಕೆಂದು ಪೊಱಗಣ್ಗೆ ವಂದಳಹಿಯಸಿಂಗರಾರ್ಯರಂ ಕರೆಯಿಸಿ ಸಂತಸಮಿರ್ವರ್ಗಂ ಸಮಾನವಾಗಿರ್ಪುದಱಿಂದೋರೊರ್ವರ್ಗೋರೊರ್ವರೊಸಗೆವೇೞ್ದು ಪಲವುಂ ಪೊೞ್ತುಷ್ಟಾಲಾಪದೊಳಿರ್ಪಿನಂ ;

— ಕುಮಾರೋದಯ ಮತ್ತು ಪುತ್ರಜನ್ಮಮಹೋತ್ಸವ ವರ್ಣನೆ —

ದಾನಕ್ಕಮುತ್ಸವಕ್ಕಂ ಪೊನ್ನುಡೆತೊಡವುಗಳನಿತ್ತು ಅಳಹಿಯ ಸಿಂಗರಾರ್ಯರಂ ಕಳುಪಿ, ರಾಯನುಮಂತಃಪುರಕ್ಕೆ ಪೋಪನೆಂದೆಣಿಸುವನಿತಱೊಳೆ ಮುಂ ತಾಂ ಕಳುಪಿದ ಒಳಳೂಱಿಗದ ಕುವರನೊರ್ವನೆಯ್ತಂದು ಕೆಯ್ಮುಗಿದು ಕೆಲದೊಳ್ ನಿಂದು ರಾಯನಿರವನಾರಯ್ದು, ಸೊಗಸಿರಿಯಿಂದನುಮತಿಯನೂಹಿಸಿ ಪತ್ತಸಾರ್ದು ವಿನಯದಿಂ ಬಿನ್ನವಿಸಿದಂ :— "ರಾಯ, ಚಿತ್ತವಿಪುದು. ಅಂತಃಪುರದೊಳ್ ಬರ್ದೆ

ಯರುಂ ದಾದಿಯರುಂ ಬೀದಿವನೆಯಿಂ ಬಂದ ಐದೆಯರ್ಕಳ ಮಾಗಿ ಪಿರಿದುಂ ಕಿಱಿದುಮಲ್ಲದೊಂದು ನಲ್ವಗೆಯೊಳ್ ಬಳಸಿದ ಭಿತ್ತಿಗಳ್ಗೆ ನವಸುಧಾಲೇಪಮುಂ, ಮೇಗಣ್ಗೆ ಬೆಳ್ವಟ್ಟೆಯ ಮೇಲ್ಕಟ್ಟುಂ ಮುತ್ತಿನ ಸರದ ಲಂಬಣಮುಂ, ನೆಲಕ್ಕೆ ತಾವರೆಯಂಚೆ ಗಿಳ ಸತ್ತಿಗೆ ಸೀಗುರಿ ಮೊದಲಾದ ಪಲವುಂ ತೆಱದ ರಂಗವಲ್ಲಿಯುಮಾಗಿ ಅಲಂ ಕರಿಸಿ, ಮಂಜುವೆಟ್ಟಿನ ಗವಿಯ ಪಳಿಕಿನ ಪಾಸಱೆಯನೆ ಬಿತ್ತರಮಾಗಿ ಪಾಸಿದ ಮೆಲ್ಪಾಸಿನೊಳ್ ಮುಂ ಕಡೆವಾಗಳ್ ಪಾಲ್ಗಡಲ ತೆರೆನೊರೆ ಯೊಳ್ ತೇಲ್ವ ಸಿರಿಯರಸಿಯರಂ ಪೋಲ್ವ ರಾಣಿಯಂ ಬಳಸಿಯುಚ್ಚರಿಸಿ ಯರಂತೆ ಕುಳ್ಳಿರ್ದು, ಮುಂ ದಶರಥರಾಣಿ ಕೌಸಲ್ಯೆ ರಾಮಚಂದ್ರನಂ ಪಡೆವಾಗಳ್ ನಡೆಯುಂ ನುಡಿಯುಮಾಗಿಂತಿರ್ದಳ್ ; ವಸುದೇವನರಸಿ ದೇವಕಿಯುಮಿಂತಿರ್ದಳ್ ; ಮತ್ತಂ ಎಮ್ಮರಮನೆಯ ದೇವರಾಜರಸರ ಮುದುಪ ದೇವರಾಜರಸರ ರಾಣಿಯರುಮಿಂತಿರ್ದರ್—ಎಂದು ಸಂತಸ ನಾತುಗಳಿಂ ಪೊಟ್ಟುಗಳೆಯುತಿರ್ದರ್. ಊಳಿಗವೆಣ್ಗಳುಂ ಭಯಭಕ್ತಿ ಗಳಿಂ ಪುಟ್ಟಿದ ತವಕದೊಳ್—'' ಎಲೆಗೆ ಬೆಳ್ಳಿಲರಂ ಬಿಳಿಯ ಸಾಸುವೆಯುಂ ಕಬಿವೆಯರಳ್ಗಳೊಳ್ ಬೆರಸಿ ಮನೆಯೊಳಮಂಗಳದೊಳಂ ಚಲ್ಲೆಂದುಂ। ಪಾವಿನ ಸೋಲೆಯುಂ ಪಸುವಿನ ತುಪ್ಪಮುಂ ಸಾಮ್ರಾಣಿಯೊಳ್ ಬೆರಸಿ ಪೊಗೆಗೊಳಿಪುದೆಂದುಂ। ಅಡಿಯುಂ ತೊಳೆದಗ್ನಿಯುಂ ಮುಟ್ಟದಲ್ಲದೀಮನೆ ಯುಂ ಪುಗವೇಡೆಂದುಂ। ಮಾವುಬೇವಿನೆಲೆಗಳಿಂ ಪಚ್ಚದೋರಣಮುಂ ದೊರೆಕೊಳಿಪುದೆಂದುಂ। ಬಾಗಿಲಿರ್ಕೆಲದ ಗೋಡೆಗಳೊಳ್ ಸಂಕು ಪಾಱುಂಬಳೆಗಳಂ ಬರೆಯಿಸೆಂದುಂ। ಜೋಯಿಸರ್ ಗಳಿಗೆವಟ್ಟಲನೆಟ್ಟಱ ದೊಳ್ ಕಾದಿರ್ಪುದೆಂದು ಪೇಳಿಂದುಂ। ಬಣ್ಣಗೊರಲ್ಗೆದೆಯರ್ ಸೋಬನವಾಡಂ ಪಾಡುಗೆಂದುಂ। ಒದಾಳಿಗಳಿಂ ಸಾಸಿರ್ವೆಸರನೋದಿಪು ದೆಂದುಂ। ಪೊಸಂತಿಲ ಪೊಱಗಣಿರ್ಕೆಲದೊಳ್ ಪಲ್ಲವದೂರ್ವಾಲಂಕೃತ ಮಾದ ಕುಂಭಂಗಳನಿರಿಸುವುದೆಂದುಂ। ರಕ್ಷೆಗೆಯ್ವುದರ್ಕೆ ಶ್ರೀಮನ್ನಾ

ರಾಯಣನ ಕಪ್ಪುರದ ಸಿರಿಯುಡಿವುಡಿಯುಂ ತಪ್ಪುದೆಂದುಂ। ಅರಸಿಯು ಕಡುನೇಹದ ಕೆಳದಿ ರಾಯನಡಿಯೆಡೆಗೆ ಪರಿದೊಸಗೆವೇಟ್ಟುವದೆಂದುಂ— ನುಡಿಯುತ್ತುಮತ್ತುಲುಮಿತ್ತುಲುಂ ಪರಿಯುತ್ತಿರ್ದಪರ್.'' ಎಂದು ಬಿನ್ನವಿಪುದುಂ ;

ರಾಯನುಮಾಪ್ತಸಾಮಾಜಿಕರಂ ಜ್ಯೋತಿರ್ವಿದರಂ ಪುರೋಹಿತ ರುಮಂ ಬರಿಸಿ ಅವರೊಡನೆ—'' ಈವೇಳೆಯು ಪಂಚಾಂಗಶುದ್ಧಿಯಿರ ವೆಂತು ? ಲಗ್ನಮಾವುದು ? ಗ್ರಹಾನುಕೂಲ್ಯಮೇತೆಜಂ ? '' ಎಂದು ವಿಚಾರಿಸುತ್ತಿರೆ ;

ರಾಣಿಯು ಸಂಚಿಯಯೋಗದ ಕೆಳದಿಯೊರ್ವಳ್ ಸಂತಸ ದೊಳಿಯ್ದುಂದು ವಂದನಂಗೆಯ್ದು ಮಹಾರಾಯಂಗೆ ಪಟ್ಟದ ಕುವರಂ ಪುಟ್ಟಿದನೆಂದು ಬಿನ್ನವಿಪುದುಂ ;

ಈಯಮುರ್ದುನುಡಿ ರಾಯನ ಕಿವಿಯಂ ಪೊಕ್ಕು ಬಗೆಯೊಳ್ ಪಸ ರಿಸೆ ತಾಂ ದೇವನೆಂದುಂ ಮತ್ತಮಾನಾಲ್ಕೊಗನೆಂದುಂ ಎಣಿಸಿ ಪೆರ್ಕಳಂ ಗೊಂಡು ಆಭಂಡಾರದೊಳಿರ್ಪ ಪೆರ್ಬೊತ್ತದ ಪೊನ್ನ ರನ್ನದ ತೊಡವು ಗಳನಾಕೆಳದಿಗಿತ್ತು ಕಳುಪಿ ಜಾತಕದಿರವನಾರಯ್ವುದುಂ ;

ಅತಿಹರ್ಷದಿಂ ಜೋಯಿಸರ್ — '' ದೇವ, ಚಿತ್ತವಿಪುದು. ಲಗ್ನ ಹೋರಾದ್ರೇಕ್ಕಾಣಾದಿಭೇದಭಿನ್ನ ಸೂಕ್ಷ್ಮಕಾಲದ ಸ್ವರೂಪಂಗಳೊಳಿರ್ಪ ಗ್ರಹಾನುಕೂಲ್ಯಂಗಳೊಳ್ಪುಮಂ ಭಾವಿಸೆ, ಸಂಹಿತಾಭೇದಂಗಳ ರಾಜ ಯೋಗಾಧ್ಯಾಯಂಗಳ ಶ್ಲೋಕಂಗಳನಿತರ್ಕಂ ಈಜಾತಕನೊಂದೆ ಉದಾ ಹರಣೆಯಾಗಿರ್ಕುಂ. ಆವೊನಿತುಂ ಪೊಗಟ್ಟುವು !'' ವಂದು ಬಿನ್ನವಿಪುದುಂ;

ಆಳಹಿಯಸಿಂಗರಾರ್ಯರುಂ—'' ಈಜೋಯಿಸದಿರವಿಂತಿರ್ಕೆ ! ಸಾಹಿ ತ್ಯಪರಿಪಾಟಿಯಿಂದಾನೊಂದು ಜಾತಕಫಲಂಗಳಂ ಪೇಟ್ವೆಂ. ಈರಾಯ ಗುವರಂ ತನ್ನ ಜಾತಕದೊಳ್ ಪಾರ್ಥಿವವರ್ಷದಿಂ ಸಕಲಪಾರ್ಥಿವೋ ತ್ತಮನುಂ, ದಕ್ಷಿಣಾಯನದಿಂ ದಕ್ಷಿಣದಿಕ್ಚಕ್ರವರ್ತಿಯುಂ, ಆಶ್ವ

ಯುಜ ಮಾಸದಿಂದಸಂಖ್ಯಾತಾಶ್ವಸೇನಾಧೀಶ್ವರನುಂ, ಶುದ್ಧಪಕ್ಷದಿಂದಂತ ರ್ಬಾಹ್ಯಪರಿಶುದ್ಧನುಂ, ವೈಷ್ಣವಭದ್ರತಿಥಿಯಿಂ ಸಕಲವೈಷ್ಣವಕುಲೋ ದ್ಧಾರಕನುಂ, ಚಂದ್ರನಾಸರದಿಂದಖಿಲಸಜ್ಜನಚಿತ್ತಾಹ್ಲಾದಕನುಮೆನಿಸು ಗುಂ. ಮತ್ತಮೀಕುವರಂ ಅಪರಿಮಿತಕನ್ಯಾದಾನಂಗೆಯ್ವುದಱಿಂ ತಾನುಂ ದಾನಮಂ ಕೊಳಲ್ಬೆಳಸಿದಂತೆ ಸೂರ್ಯಂ ಕನ್ಯೆಗೆ ಬಂದಿರ್ದಂ. ಮುಂ ತನ್ನ ವಂಶದ ಪುರೂರವ, ನಹುಷ ಯಯಾತಿ ರಂತಿ ಶಶಿಬಿಂದು ಮುಂತಾದವರಂತೀಗಳುಮಖಂಡಭೂಮಂಡಲಾಧಿಪತಿಯಕ್ಕುಂ, ಆದರ್ಕಾ ನೆ ಸಾಮ್ರಾಜ್ಯಪದಾಭಿಷೇಕಂಗೆಯ್ವೆನೆಂದು ಪೂಣ್ದಂತೆ ಚಂದಿರಂ ಮೆ ಯ್ಸಿರಿವಡೆದು ಕುಂಭಮಂ ಕೊಂಡಿರ್ದಂ. ಮತ್ತಮಿವಂ ತಾಂ ಪಲವುಂ ಷೋಡಶಮಹಾದಾನಂಗೆಯ್ವುದಲ್ಲದೆ ತನ್ನ ಸೇರಿದ ವಿದ್ವತ್ಕವಿಗಳಿಂ ತುಲಾದಿದಾನಂಗಳಂ ಗೆಯ್ಸುವನೆಂಬುದಂ ತಿಳಿಪುವಂತೆ ಬುಧ ಕವಿಗಳ್ ಮಂಗಳಂಬೆರಸು ತುಲಾರೂಢರಾದರ್. ಈಕುವರಂ ಅರಸುಗೆಯ್ವೊಡೆಯೊ ಳಧ್ಯಯನಾಧ್ಯಾಪಕಂಗನುಱದು ಮಿಥುನಭಾವದೊಳಿರೆ, ಗೌರವಂ ದಕ್ಕದೆಂದಳ್ಕಿದಂತೆ ಬೃಹಸ್ಪತಿಯುಂ ವಿಷಕರ್ಕಟಮಧ್ಯದೊಳ್ ಬೆದಱು ಗೊಂಡಿರ್ದಂ. ಇಂತಪ್ಪ ತೇಜಸ್ವಿ ಸುತನಾದೊಡಮಿವನ ಅರಸುಗೆಯ್ತ ದೊಳ್ ಮಂದಂಗೆ ಮಂದಾಧಿಕಾರಮಿಲ್ಲದೆ ಮುಖ್ಯಾಧಿಕಾರಮಿಲ್ಲೆಂಬುದಂ ತೋರ್ಪಂತೆ ಶನೈಶ್ಚರಂ ಮೇಷಾಧಿಷ್ಠಿತನಾದಂ. ಈದಿನದೊಳ್ ತಾವು ಸರ್ಗೆ ಹಾನಿಯೆಂಬುದಂ ಕಾಣಿಪಂತೆ ರಾಹುಕೇತುಗಳ್ ಕರ್ಕಟಮಕರ ಗ್ರಸ್ತರಾದರ್.'' —ಎಂದು ನುಡಿದ ಅಳಹಿಯಸಿಂಗರಾರ್ಯರ ಮಾತಂ ಕೇಳ್ದು ಸಂತಸಂಗೊರೆಡು ರಾಯನುಂ ಕಳುಪತಕ್ಕವರಂ ಕಳುಪಿ, ತಾನುಂ ತನ್ನೆಳಗುವರನ ಮುದ್ದುಮೊಗಮಂ ನೋಡಿ ದಾನಂಗಳನಿತ್ತು ಪಿತೃ ಋಣಮಂ ತೀರ್ಚಿದನೆಂದು ಪುರೋಹಿತಪರಿಜನಂಬೆರಸು ಮುಂದೆ ನಡೆವ ಪಲವುಂ ಕಮ್ಮೆಣ್ಣೆಯ ಕೈದೀವಿಗೆಗಳ ಬೆಳಕಿನೊಳ್ ನಡೆದು, ಸೂತಿಕಾ ಗೃಹದ ಬಾಗಿಲ ಪೊಱಗಣ ಪೆರ್ಜಗಲಿಯೊಳ್ ರನ್ನವಣೆಯೊಳ್

ಕುಳ್ಳಿರ್ದು, ಅಲ್ಲಿ ಪೊಸಂತಿಲ ಸನಿಯದೊಳ್ ಸಾವಧಾನದೊಳ್ ಕುಳ್ಳಿರ್ದ ಪಾರ್ವತಿ ಮುತ್ತೈದೆಯೊರ್ವಳ ಉತ್ಸಂಗದೊಳ್ ತನ್ನ ಮೆಯ್ಯೊಗರಿಂ ಬಳಸಿದ ದೀವಿಗೆಗುಡಿಗಳನಿಱುಕೆಗೆಯ್ಯುತ್ತೆ, ಮೆಯ್ ಕೆಂಪಡದಿರ್ಪುದಱಿಂ ಪೊಟ್ಟಱ ಕೆಂಗದಿರ್ಗೊಂಡ ನೇಸಱಂತೆಯುಂ ಸಂಜೆಯೊಳ್ ಕೆಂಬೊಗರ್ವೆತ್ತುದಿಸುವ ಚಂದಿರನಂತೆಯುಂ ಮೆಲ್ಪುವಡೆದ ಕಲ್ಪದ್ರುಮದ ಚೆಂದಳಿರ್ದೊಂಬೆಯಂತೆಯುಂ ಆಗಳಲರ್ದ ಕೆಂದಾವರೆಯ ಬಿಂದದಂತೆಯುಂ ಪೊಣ್ಮಿದ ಪೊಡರ್ದ ಪೊಸವಗೆಯ ಲೋಹಿತಾಂಗನಂತೆಯುಂ ತೋರ್ಪ ಮೆಯ್ಯಂ ಎಳವಿಸಿಲಿಂದೆ ಮೇಣ್ ಪವಳಗುಡಿಗಳಿಂದೆ ಅಲ್ಲದೊಡೆ ಕೆಂಬರಲ್ಗಳಿಂದಾದೊಡಂ ಸಮೆದಂತಿರ್ಪ ಕೆಯ್ಕಾಲ್ಬೆರಲ್ಗಳುಮಾಗಿ ತನ್ನುಳ್ಳ ನಾಲ್ದೋಳ್ಗಳಂ ತೋಱದೆ ಯಶೋದೆಯುತ್ಸಂಗದೊಳ್ ಇರ್ದೋಳ್ಪೆತ್ತಿರ್ದಾ ಶ್ರೀಕೃಷ್ಣನಂತೆಯುಂ ಪಲವುಂ ಮಹಾಪುರುಷಲಕ್ಷಣಂಗಳಿಂ ದೆಸೆವ ಎಳಸಿಸುವಂ ನಿಟ್ಟಿಸುವೆಡೆಯೊಳಾಡದೆಮೆಯುಮಡಿಗಡಿಗೆ ತೊಡೆದೊಡಂ ತೊರೆವ ಸೊಗದಾಲಿನೀರಿಂ ನನೆದ ನಟ್ಟಾಲಿಯುಮಾಗಿ ನೇಹರಸದಿಂ ನುಡಿಸುವಂತೆಯುಂ ತಕ್ಕವಿಸುವಂತೆಯುಂ ಈಂಟುವಂತೆಯುಂ ನಿಟ್ಟಿಸಿ ನಿಟ್ಟಿಸಿ ಸಂತಸಂಬಡೆದಂ.

ಅಳಹಿಯಸಿಂಗರಾರ್ಯನೀರಾಯಗುವರನ ಅಂಗಪ್ರತ್ಯಂಗಚಕ್ರವರ್ತಿಲಕ್ಷಣಂಗಳಂ ನಿರವಿಸಿ ಪೇಳ್ದಂ—“ಚಿತ್ತವಿಪುದು ಮಹಾರಾಯಂ. ಅರೆವಿರಿದ ಕೆಂದಾವರೆಯಂ ಪೋಲ್ವ ಮುದ್ದುಮೊಗದೊಳ್ ಕಱಿದಾಗಿ ಸಣ್ಣನೆನಿಸಿದೆವೆ ಸಾಲ್ಗೊಂಡು ಕಿವಿವರೆಗಂ ನೀಳ್ದ ಬಗಸೆಗಣ್ಗಳ್ ತಳತಳಿಸುತ್ತಿದೆ. ಕಪ್ಪುರದ ತಾವರೆಯ ಪರಿಮಳಂಗಳಂ ಬೆರಸಿದಂತೆಸೆವ ಚೆಂಬಾಯ ತನಿಗಂಪಂ ಸವಿಯಲ್ಕೆಂಬಂತೆ ನೀಳ್ದು ನಸುಬಾಗಿದ ಮೂಗು ಮಿಗೆ ಸೊಗಸುತ್ತಿದೆ. ಸರಿಗೆಯ ಪಟಿವಿಗೆಯ ತಾವರೆಯ ಗೆಱಗೊಂಡ ಮೆಲ್ಲಡಿಗಳೆಲ್ಲಾರಾಯರ ಮುಡಿವಣಿಗಳ ಸೋಂಕಿಂಗುಚಿತಮಾಗಿದೆ. ಮುಗಿಲ ಮೊಳಗಿನಂತೆಯುಂ ಭೇರೀನಾದದಂತೆಯುಂ ಸಿರಿದನಿ ಪೆಂಪುವಡೆದಿದೆ.

ಇದೆಲ್ಲಮುಂ ಚಕ್ರವರ್ತಿಲಕ್ಷಣಂಗಳ್. ಇಂತಿರ್ಪ ಕುವರನವತಾರದೊಳ್ ದೇವರುಮಂತಃಪುರಮುಮಾಮುಂ ಊರುಗರುಂ ನಾಡುಬೀಡುಗರುಂ ಸಂತಸಂಗೊಳ್ವುದು ಸಾಜಮ್ಮೈಸೆ! ಚೇತನಾಚೇತನವಿಭಾಗಮಿಲ್ಲದೆ ಸಕಲಲೋಕಸಂತಸಮಂ ನಿರವಿಪುದು ದೇವರ್. ಪಿಂತಣ ರಾಯರುಡಿಸಿದ ಜಸವೆಂಬ ದುಗುಲಂ ಪಳದಾಗಿ ಮಾಸಿದುದು, ಈಗಳೀಕುವರಂ ಪೊಸಜಸದ ದುಗುಲಮನೀವನೆಂಬ ಸಂತಸದಿನೆಂಬಂತೆ ಪತ್ತುಂ ದಿಕ್ಕುಗಳುಂ ಪ್ರಸನ್ನಮಾದುವು. ಈಕುವರಂ ದಾೞಿಡುವೆಡೆಯೊಳ್ ಪಗೆರಾಯರ ಪುರಂಗಳನೆನಗಾಹುತಿಗುಡುವನೆಂಬ ನಂಬುಗೆಯಿಂದಗ್ನಿ ಬಲಮುರಿಗೊಂಡು ಪೊಗೆಗಳೆದು ತೊಳಗಿದುದು. ಸಕಲಸಜ್ಜನರ ಮನದ ಕಾಲುಷ್ಯಮಂ ಕಳೆದು ಸುಪ್ರಸನ್ನಮಾದುದನಭಿನಯಿಪಂತೆ ಪಲವುಂ ಪೊೞಕೊಳನೀರ್ಗಳ್ ಕದಡುಗಳೆದು ತಿಳಿದುವು. ತಮಂ ತೞ್ಗ ಸತ್ವಮೆಚ್ಚರಮಾದಪುದೆಂಬುದಂ ತೋರ್ಪಂತಾಗಸದೊಳ್ ಕೞ್ತಲೆಗಳೆದು ಪೆಱಯುಱುಲ್ಗಳ್ ಪೆಂಪುವಡೆದುವು. ಅನಿತುಂ ಜನಕ್ಕಮುಱವುರಳ್ಬಯಕೆಗಳನುಗೊಳಿಸುವುದೆಂಬುದನೆೞ್ಚಱಪಂತೆ ಸಕಲಸಸ್ಯಂಗಳುಂ ಫಲಭರಿತಂಗಳಾದುವು. ತೆಂಕಲ್ನಾಡು ತೇಜಂಬಡೆದುದಂ ತಿಳಿಪುವಂತಗ್ಗಳಿಕೆ ವೆಗ್ಗಳಮಾದುದು. ಭಗವದವತಾರಮೆಂಬುದಂ ಪ್ರಕಟಿಸುವಂತೆ ದುಷ್ಟಜನಂ ದೂಳ್ಗೊಂಡು ಶಿಷ್ಟಜನಂ ಸಿರಿವೆತ್ತುದು. '' ಎಂದಿಂತು ಪೊಗೞ್ದು ಪರಕೆಗೆಯ್ವುದುಂ ;

ರಾಯನುಮತಿಹರ್ಷದಿಂದೆೞ್ದುವರೊಡನೆ ಪೊಱಗಣ್ಗೆ ವಂದಲ್ಲಿ ಸಂಮೊಗದ ಬಿಜ್ಜೆವಳರ್ಗಮೂರುಗರ್ಗಂ ನಾಡುಬೀಡುಗರ್ಗಂ ಮಿಕ್ಕುದೇಂ ಪಾರ್ವರೆಂಬ ಪೆಸರುಳ್ಳರನಿಬರ್ಗಂ ಅವರವರಂತವರವಱಿದು ಅಗರಂಗಳಂ ಬೆಳೆಗೆಯ್ಗಳನಾರವೆಗಳಂ ಆನೆಕುದುರೆಗಳನುಡೆತೊಡವುಗಳಂ ಪೊನ್ಗಳಸಿತ್ತು ಮನ್ನಿಸಿ ತಣಿಯಿಸಿ ಕಳುಪಿ ಸುಖದಿಂ ಪುತ್ರಜನ್ಮಮಹೋತ್ಸವಮಂ ಪರಿಪಾಲಿಸುತ್ತುಮಿರೆ ;

ಸೂತಕಮಂ ಕಳೆದು ಸುಮುಹೂರ್ತದೊಳ್ ನಾಮಕರಣಮಹೋ

ತ್ಸವಮನಾರಂಭಿಸಿ ಮುಂ ತನ್ನ ಮೇಲೆ ಪಿತೃಋಣಂ ಪ್ರವೃದ್ಧಮಾಗಿರ್ದು ದಱಿಂ ತತ್ತದುತ್ಸವಂಗಳೊಳಾನೆಸಗುವಾಭ್ಯುದಯಕಂಗಳನಿತುಮಾಸಾಲದ ಬಟ್ಟೆಗೆ ಸಾಲದಿರ್ಪುದು. ಈಗಳಾಋಣಂ ನಿಶ್ಶೇಷಮಾಗಿ ತೀರ್ಚಿ ಪೋದುದಱಿಂದೀಯೆಸಗುವಾಭ್ಯುದಯಕಮನ್ವರ್ಥಮಾದುದೆಂದು ಸಂತಸದೊಳೆಸಗಿ ಸುಮುಹೂರ್ತದೊಳ್ **ಶ್ರೀಚಿಕದೇವರಾಯ**ನೆಂಬೊಳ್ಪೆಸರನಿಟ್ಟಂ. ಆಪೆಸರ ಪುರುಳಂ ಪರಿಕಿಸೆ ಸಕಲಲೋಕರಂಜಕನಾದುದಱಿಂ ರಾಯನೆಂದುಂ, ಆವಗಂ ಲೀಲೆಯುಂ ಗೆಲ್ಲಮುಮೊಳ್ನಡತೆಯುಂ ಪೊಗಟೆತ್ತೆಯುಂ ಸಂತಸಮುಂ ಸೊರ್ಕುಂ ಕಳೆಯುಮುಂಟಾಗಿರ್ಪುದಱಿಂ ದೇವನೆಂದುಂ, ಇವನಿತುಂ ಚಿಕ್ಕಂದಿನೊಳ್ ಅನುಗೂಡುವುದಱಿಂ ಚಿಕದೇವರಾಯನೆನಿಸುಗುಮೆಂದುಂ, ಉಪೇಂದ್ರನವತಾರಮಪ್ಪುದಱಿಂ ಸಾಜಮಾದ ಪೆಸರೆಂದುಂ ಬಿಜ್ಜೆವಳರ್ ಪೆರ್ಕಳಂಗೊಳ್ವರ್. ಬಟಿಕ್ಕೆ ಪೇರುಕ್ಕೆವದೊಡನಳಹಿಯಸಿಂಗರಾರ್ಯರ ಕುವರಂಗಂ ರಾಯಗುವರನ ಕೆಳೆತನಕ್ಕೆ ತಕ್ಕಾಪುರ್ಮಳವುಂ ದೊರೆಕೊಂಡಿರ್ಪುದಱಿಂದನ್ವರ್ಥಮಾದ **ತಿರುಮಲೆಯಾರ್ಯ**ನೆಂಬ ನಲ್ಪೆಸರನಿಟ್ಟು ಪಲವುಂ ರನ್ನ ಪೊನ್ನ ತೊಡವುಗಳನೊಳ್ಪುಡೆಗಳುಮನಿತ್ತು ಮನ್ನಣೆಗೆಯ್ದು ಸಂತಸದೊಳಿರೆ ;

—ಚಿಕದೇವರಾಯನ ಬಾಲಲೀಲೆ.—

ದಿನಕ್ರಮದೊಳ್ ಕುಮಾರನುಂ ಚಂದಿರನಂತೆ ಬಳೆಯುತ್ತೆ ಪೊಂಜರಪಣಿಯೊಳ್ ಕಟ್ಟಿದ ರನ್ನದೊಟ್ಟಿಲೊಳ್ ದಿಟ್ಟಿದೋಸಂ ತಟ್ಟದಂತೆ ಎರಡುಂ ಮೆಲ್ಗದಂಪುಗಳೊಳಿಟ್ಟ ಕಾಡಿಗೆಯ ಬಟ್ಟುಂ, ಕೊರಲೊಳ್ ಕಟ್ಟಿದ ಪಂಚಾಯುಧಮುದ್ರಾಂಕಿತಮಾದ ಕಿಱುದಾಲಿಯುಂ, ಪಣೆಯೊಳ್ ಕಾಪುಗೊಳಿಸಿದ ನಾರಾಯಣನ ಕಪ್ಪುರದ ಪಾದರೇಣುಬಿಂದುವುಮಂದಂಬಡೆಯೆ ತನ್ನೊಳ್ ತಾಂ ನೆವಮಿಲ್ಲದೆ ನಗುತ್ತುಂ ಮೆಯ್ಕೈಕಾಲ್ಗಳಂ ನೀಡುತ್ತುಂ ಮಲಂಗಿರುವ ಪಾಂಗಂ। ತನ್ನ ಕುಲವರ್ಧನನಪ್ಪ ಕುವರನಂ ಕಾಪಿಡಲ್ಕೆಂದು ರಾಗಾವಿಲನಪ್ಪ ಚಂದಿರನೆಯ್ತಂದನೆಂಬ ಸಂದೆಯಮಂ ಸಮನಿ

ಸುತ್ತೆ ನಿಲುಕಿಯುಂ ನಿಲುಕದಂತೆ ಜೋಲ್ವ ರನ್ನಸೆಂಡನಂಡಲೆವುದರ್ಕೆಳವಳ್ಳಿದೋಳ್ಗಳನಡಿಗಡಿಗೆ ನೆಗಪುವುದಱಿಂದುದಯಾಚಲಶೃಂಗದೊಳ್ ಪತಂಗಮಂಡಲಕ್ಕೆ ಕೈನೀಡುತ್ತುಂಗವಿಪ ಮಱಿಸಿಂಗಮಂ ಪೋಲ್ವ ಚಲಮಂ । ಅಂತಃಪುರದ ಕಾಂತೆಯರೊರ್ವರ ಕೈಯಿಂದೊರೊರ್ವರಾಂತೊಕ್ವಣಿಯಂತೆರ್ದೆಯೊಳಿಂಬುಗೊಳಿಸಿ ಸಂತಸದೊಳ್ ನುಡಿಸುವಿನಮಲರ್ದಬಿಸಜದಂತೆಸೆವ ಚೆಂಬಾಯಿಂದಿನ್ನಿರಸದಂತೆ ನಸುಜೊಲ್ಲುಸುರಿಯೆ ತೊದಳ್ನುಡಿವ ಸೊಗಸಂ। ಪಳಿಕಿನೆಡೆಗೋಡೆಯ ಮಱೆಯೊಳಿರ್ಪ ಅರಸಂಚೆವಱಿಯುಂ ಪಿಡಿಯಲ್ಕೆ ನೀಡಿದ ಕೆಯ್ ಸೋಂಕದೊಡಂ ಪಡಿನೆೞಲಂ ಕಂಡಂಜಿಯುದಿತ್ತಲುಮತ್ತಲುಂ ಪರಿಯುತ್ತಿರೆ ತಾನುಂ ಪರಿಪರಿದು ಬೆಂಬಿಡದೆ ಮೊಗಸಾಲೆಯ ಪೊಂಜಗಲಿಯ ಪಚ್ಚೆಗಂಬದ ಮುಂಬಾಗದೊಳ್ ಬಜ್ಜರಂಗಳಿಂ ಕವೆದಂಚೆವಱಿಯುಂ ಪಿಡಿದೆೞ್ದೆೞ್ದು ಕೋಟಲೆಗೊಳ್ವ ಸಂಭ್ರಮಮುಂ ! ಬೆದಱುಗಣ್ಗಳುಂ ನುಣ್ಮೆಯ್ಯುಂ ಸಣ್ಣಗಾಲ್ಗಳುಮಾಗಿ ತನ್ನ ಕೊರಲ ಕಿಱುಗಂಟೆಯ ದನಿಗೆ ಬೆರ್ಚಿದಂತೆಡೆಯೊಳ್ ನಿಲ್ಲದೆ ನೆಗೆವೆರಳೆಯ ಮಱಿಯ ಪಿಂತಣೆರಡುಂ ಕಾಲ್ಗಳಂ ಪಿಡಿದು ಎೞ್ವದಟಂ ಕಂಡು ದಾದಿ ಕದುಬಿನೊಳ್—ಬೇಡಬೇಡಲೆ ಕಂದ ! ಬೇಡ ಬೇಡೆನ್ನಾನೆ ! ಬೇಡ ಬೇಡೆನ್ನ ಮಱಿಸಿಂಗವೆ ! ಬೇಡ ಬೇಡ—ಎನುತ್ತೆ ಬೞಿವಿಡಿದು ತಱುಬಿದೊಡಮವಳ ಕೆಯ್ಗೆ ಸಿಲ್ಕದಂಗಳದೊಳ್ ಬಳಬಳಿಸಿ ಬವಣಿಗೊಳಿಸಿ ಬೞಲಿಸುವ ಬಲ್ಪಂ। ಎರಡುಂ ನಿಡುದೋಳ್ಗಳಂ ನೀಡಿ ಕರೆವ ಪಲವುಂ ರಾಯರಸಾಲ್ಗಳಂ ಕಡೆಗಣ್ಗಳಿಂ ಕಡೆಗಣಿಸಿ ಕೌತುಕದಿಂದೊಂದೆ ಸೂೞೊಳ್ ಕವಿವ ದಿವ್ಯಾಸ್ಥಾನದ ಪಲವುಂ ಜನದ ನೇಹದಿಟ್ಟಿಗಳೆನಿಪ ಮಾವೞಯೊಳ್ ನನೆದೊಯ್ಯರದೊಳ್ತನ್ನ ರನ್ನದ ಸಿಂಗವಣೆಯುಂ ಸೇರಿ ನಿಲ್ವಂದಮುಮಂ ನಿರವಿಸಿ ರಾಯುಂ ವಿಭವದೊಳಿಂದ್ರನಂ ದೊರೆಕೊಣ್ವಿದುರ್ಗಂಕಣ್ಗಳಿಂದೆಯುಂ ದೊರೆಕೊಳಲೆಳಸಿದಂ.

ಇಂತು ಸಂತಸದೊಳ್ ಬಳೆವ ರಾಯಗುವರನೊಡನಳಹಿಯಸಿಂಗ

ರಾರ್ಯನ ಕುವರಂ ತಿರುಮಲೆಯಾರ್ಯನೆಣೆದೊಟ್ಟಿಲೊಳ್ ಬಳೆದು ತಳರ್ನಡೆಯೊಳಂ ತೊದಳ್ನುಡಿಯೊಳಂ ಬಟ್ಟಿಸಂದು ಪಲವುಂ ಬಾಲಲೀಲೆಯೊಳಂ ಪಡಿನೆಟಿಲಂತಿರ್ಕುಂ.

— ಚಿಕದೇವರಾಯನ ವಿದ್ಯಾಭ್ಯಾಸ —

— ಲಿಪಿಗ್ರಹಣ —

ಕ್ರಮದೊಳ್ ಚಿಕದೇವರಾಯನುಪನಯನಾದಿ ವರ್ಣಧರ್ಮ ಪರಿಕರ್ಮಿತನಾಗಿ ಬಿಜ್ಜೆಗಳ್ವೆಡೆಯೊಳ್ ಬುದ್ಧಿಕೌಶಲವುಂ ಕಂಡತಿಹರ್ಷದೊಳ್ ಕಲಿಸುವುಪಾಧ್ಯಾಯರ ಬಿಜ್ಜೆಗಳನಿತುಮಂ ಕಱಿಗಳೆದ ಕೈಪಿಡಿಯಂ ಪೋಲ್ವ ತನ್ನ ಚಿತ್ತದೊಳ್ಕೊಂಡು ಪೊಸಪೊಗರಂ ಪೊಣ್ಮಿಸಿದಂ. ಪಲವುಂ ಬಿಜ್ಜೆಗಲಿಸುವುಪಾಧ್ಯಾಯರ್ಕಳೊಳ್ಗಬ್ಬಂಗಲಿಸುವರ್ ಮಹಾರಾಯನ ಸನ್ನಿಧಿಗೆ ಬಂದು, ಸಂತಸದೊಳ್—"ದೇವ ಚಿತ್ತವಿಪುದು; ಕುಮಾರ ಚಿಕದೇವರಾಯನೋದುವೆಡೆಯೊಳ್ ಶ್ವಾಸ ನಾದ ಘೋಷಾಲ್ಪಪ್ರಾಣತ್ವ ಮಹಾಪ್ರಾಣತ್ವಂಗಳ್ತೋರ್ಪಡುವಂತಕ್ಕರಂಗಳಂ ತತ್ತದುಚಿತಸ್ಥಾನಪ್ರಯತ್ನಂಗಳಿಂದುಚ್ಚರಿಪ ವಾಕ್ಪಟುತ್ವಮುಂ, ಅಕ್ಕರಂಗಳೊಂದಱಿಳೊಂದು ಬೆರಸಿ ಸಂಕರಮಾಗದಂತೆಯುಂ ಒಂದಕ್ಕೊಂದಗಲಿ ಯಸಂಗತಮಾಗದಂತೆಯುಂ ಅತಿವೇಗಮಂ ವಿಳಂಬಮುಮನುೞಿದು ಮಧ್ಯವೇಗದೊಳೋದುವ ವಾಚಕಶಕ್ತಿಯುಂ, ನುಡಿಯೊಳ್ ಪುದಿದರ್ಥಮಂ ಕೆಯ್ಯ ನೆಲ್ಲಿಯು ಕಾಯಂತೆ ತೋರ್ಪವೋಲ್ ಪದವಾಕ್ಯದ ವಿಚ್ಛಿತ್ತಿಯೊಳ್ ನಿಲಿಸುವ ನೆಟ್ಟನೋದುವ ಅರ್ಥಾನುಗುಣವಾಗಿ ಧ್ವನಿಯೊಳ್ ಮೆಲ್ಪು ಬಲ್ಪು ನುಣ್ಪು ಬಿಣ್ಪುಗಳಂ ಸುಮೆನಿಸುವೋದಾಳಿತನದೋಜೆಯುಂ, ಕೇಳ್ದ ಪುರುಳಂ ಬಗೆಗೊಳಿಸಿ ಊಹಾಪೋಹಂಗೆಯ್ದೀ ಪ್ರಕರಣಕ್ಕಿದು ತಾತ್ಪರ್ಯಮೆಂಬುದಂ ನಿಶ್ಚಯಿಸಿ ಕುಱುಪುಗೊಂಡು ಮಱಿಯದೆ ನೆನೆದಿರ್ಪ ಧಾರಣಾಶಕ್ತಿಯುಂ, ಪೆಱರ್ಗೆ ತಿಳಿಪುವೆಡೆಯೊಳ್ ಪದಪದಕ್ಕರ್ಥಮಂ ಬೇರ್ಪಡಿಸಿ ಬಿತ್ತರಿಸಿ ಪೆಂಪುಗೊಳಸಿಯುಂ ತಾತ್ಪರ್ಯಮನಿ

ತನಿತುಮನೊಂದುಗೊಳಿಸಿ ಒಂದೆಱಬ್ಬುಡಿಯೊಳಡಕಂಗೆಯ್ದು ತಿಳಿಯೆ ಪೇೞ್ವರ್ಥಾಪಾದನಸಾಮರ್ಥ್ಯಮುಮತ್ಯದ್ಭುತಮಾಗಿರ್ಕುಂ. ಈ ಬುದ್ಧಿ ಕೌಶಲಮೆಲ್ಲಿಯುಂ ಕಂಡು ಕೇಳ್ದುದುಮಲ್ತು!" ಎಂದು ಪೊಗೞ್ದರ್

— ವಾಚನಾರ್ಥಗ್ರಹಣ —

ಪದವಾಕ್ಯಪ್ರಮಾಣಂಗಳನೋದಿಸುವರುಂ—" ಚಿತ್ತವಿಪುದು ಮಹಾರಾಯಂ. ಈರಾಯುಗುವರಮೋದಿದೊಂದೊಂದುಂ ಪ್ರಕರಣಂಗಳೊಳ್ ಪೂರ್ವಪಕ್ಷಸಿದ್ಧಾಂತದ ಯುಕ್ತಿಗಳನಿತುಮಂ ಕ್ರೋಡೀಕರಿಸಿ ಅವಱೊಳ್ ಪೊಟ್ಟುಗಳಂ ಕಳೆದು ಸಾರಂಗಳಂ ಸಂಗ್ರಹಿಸಿ ಅವಱೊಳವಿದು ಪ್ರಬಲವಿದು ದುರ್ಬಲಮೆಂಬ ತಾರತಮ್ಯಮನಾರಯ್ದು ಮೂಲಯುಕ್ತಿಗಳನೆ ಕಱುಪುಗೊಂಡಿರ್ಪ ಪಾಂಡಿತ್ಯಮುಂ, ವಾದಕಥಾವಿನೋದದೊಳ್ ಪ್ರತಿವಾದದೊಳೆಸಗುವುಪನ್ಯಾಸಮನಾಲಿಸಿ ಅದಱೊಳ್ ಪ್ರಕೃತೋಪಯೋಗಮಿಲ್ಲದ ಯುಕ್ತಿಗಳಂ ಬೇರ್ಪಡಿಸಿ ಕಳೆದು ಉಪಯುಕ್ತಮಾದುದಱೊಳಂ ಸಾಧ್ಯಸಾಧನಸಮರ್ಥಂಗಳಲ್ಲಿ ಯುಕ್ತ್ಯಾಭಾಸಂಗಳಂ ಕಡೆಗಣಿಸಿ ಮೂಲಯುಕ್ತಿಯಂ ಕುಱುಪುಗೊಂಡದಂ ಪ್ರತಿಯುಕ್ತಿಯಿಂ ಜಯಿಸುವ ಕೌಶಲಮುಂ, ಸ್ವಪಕ್ಷೋಪನ್ಯಾಸಂಗೆಯ್ವೆಡೆಯೊಳ್ ಪ್ರಕೃತ ಸಾಧ್ಯಸಾಧನದೊಳ್ ಪೆರ್ಚುಕುಂದುಮಿಲ್ಲದೆ ಸಮರ್ಥಮಾದ ಮೂಲಯುಕ್ತಿಗಳನೆ ಪವಣ್ಗೆಯ್ದು ವಾದಿಯುಂ ನಿರುತ್ತರಂಗೆಯ್ವ ನೈಪುಣ್ಯಮುಮುಂತಾದ ಪಲವುಂ ವಾದಚಾತುರ್ಯಂಗಳಂ ಪೊಗೞ್ವೊಡೆನಿತಾನುಮೊಳವು. ಅವಂತಿರ್ಕೆ. ಮುಂಬಗಲಾಮೋದಿಸಿದುದಂ ಮಱುವಗಲ್ ಕೇಳ್ವಿನಮವಱೊಳೂಹಾಪೋಹಂಗೆಯ್ದು ತಾತ್ಪರ್ಯಮುಂ ಗ್ರಹಿಸಿಯೊಳ್ಪುವಡಿಸಿ ತಿಳಿಯೆ ಪೇೞ್ವುದಱಿಂ ಅಧ್ಯಾಪಕಾಧ್ಯೇತೃಕಭಾವಂ ಪಲ್ಲಟಮಾಗಿ ತೋರ್ಕುಂ" ಎಂದು ಪೇೞ್ದು ಪೇರಚ್ಚರಿವಡಿಸಿದರ್.

— ಪುರಾಣಪರಿಶ್ರಮ —

ಪೌರಾಣಿಕರುಂ—" ಆಮೋದುಗಲ್ತಂದುಮೊದಲಿಂದುವರೆಗಂ

ಪಲವುಂ ಪುರಾಣಂಗಳಂ ಪಲವರ್ಗೆ ತಾಳಿಂ ತುದಿವರೆಗಮಾದ ಪಲವುಂ ವ್ಯಾಖ್ಯಾನಂಗಳಿಂದರ್ಥನಿಶ್ಚಯಂಗೆಯ್ದು ಪೇೞರ್ಗೆ ಪಲವುಮಾವೃತ್ತಿಯೊಳ್ ಪೇೞ್ದಿರ್ಪನಾದೊಡಂ ಮಹದಾದಿಚತುರ್ಮುಖಾಂತಮಾದ ಸಮಷ್ಟಿಸೃಷ್ಟಿಯುಂ, ಅವನೊಡರ್ಚುವ ವ್ಯಷ್ಟಿಸೃಷ್ಟಿಯುಂ, ಮನ್ವಂತರಂಗಳಂ, ದೇವಮನುಷ್ಯಾದಿವಂಶಂಗಳಂ, ಆ ವಂಶದೊಳ್ ಪ್ರಸಿದ್ಧರಾದವರ ಪೆಸರ್ಗಳಂ, ಚರಿತಂಗಳಂ ತಿಳಿದಿರ್ಪುದಲ್ಲದೆ ಬಿತ್ತರದೊಳ್ ನೆನಪು ತೋಱದು. ಈ ಕುವರಂ ಸೃಷ್ಟಿಗೆಯ್ವ ನಾರಾಯಣನೆನಿಪ ಪರಬ್ರಹ್ಮದಿರವಂ, ಸೃಜಿಸಿದ ಪ್ರಕೃತಿಮಹದಹಂಕಾರಂಗಳುಂ ಪಂಚತನ್ಮಾತ್ರಗಳುಮೆಂಬೆಣ್ಟುಂ ಪ್ರಕೃತಿಗಳುಂ ಏಕಾದಶೇಂದ್ರಿಯಂಗಳುಂ ಪಂಚಮಹಾಭೂತಂಗಳುಮೆಂಬ ಪದಿನಾಱುಂ ವಿಕಾರಂಗಳುಮೆಂಬಿರ್ಪತ್ತುನಾಲ್ಕುಂ ತತ್ವಂಗಳ ಕ್ರಮಂಗಳಂ, ಅವಱ ಗುಣಭೇದಂಗಳಂ, ಇವಱಿಂ ಸಮೆದ ಅಜಾಂಡಮಂ, ಅದಱೊಳೊಗೆದ ನಾಲ್ಮೊಗನ ತೆಱನಂ, ಆವಂ ಪೊಣ್ಮಿಸಿದ ಮಾನಸಾಂಗಿಕಸೃಷ್ಟಿಭೇದಂಗಳಂ, ಅಲ್ಲಿ ಪುಟ್ಟಿದ ಸತ್ವರಜಸ್ತಮೋರೂಪಗುಣಭೇದಭಿನ್ನಂಗಳಾದ ದೇವಮನುಷ್ಯತಿರ್ಯಕ್ಸ್ಥಾವರರೂಪ ಪ್ರಾಣಿಗಳಂ, ಅವಱೊಳ್ ನವಪ್ರಜೇಶಮನ್ವಾದಿಗಳ ಮಿಥುನಸೃಷ್ಟಿಯಿಂದೊಗೆದ ವಂಶಭೇದಂಗಳಂ, ಅವಱೊಳುದಿಸಿದ ದೇವತೆಗಳ ಋಷಿಗಳ ರಾಯರ ಪೆಸರ್ಗಳಂ, ಅವರವರೀಕಾಲದೊಳೀದೇಶದೊಳೀವೂರುಗಳೊಳಿರ್ದೀಚರಿತ್ರಂಗಳನೆಸಗಿದರೆಂಬುದಂ, ಅವನಿತರ್ಕಂ ಆಧಾರಮಾದ ಪದಿನಾಲ್ಕುಂ ಲೋಕಂಗಳ ವಿಸ್ತಾರಮಂ, ಅದಱೊಳ್ ಭೂಲೋಕದ ಪಲವುಂ ದೀವಿಗಳೊಳಿರ್ಪ ಭೋಗಭೂಮಿಗಳಂ, ಪೊಱವೆಟ್ಟುಗಳೊಳಂ ಮಂಜುವೆಟ್ಟನಿಂ ತೆಂಕಣ ಕಡಲ್ವರೆಗಮಗಲಮಾಗಿ ಮೂಡ ಪಡುವಣ ಮುನ್ನೀರ್ವರೆಗಂ ನೀಳ್ದ ಭಾರತವರ್ಷದೊಳೀ ಯೆಡೆಯೊಳೀಗಟ್ಟಮೀಬೆಟ್ಟುಗಳೀ ಪೊೞಗಳ್ ಪೊೞಲ್ಗಳಿವನಾಳ್ದ ದೊರೆಗಳ ಪೆಸರಿದಿವರ ಸಾಸಮಿದು ಇವರಾಳ್ದ ಕಾಲಮಿನಿತು ಈ ಗಟ್ಟಬೆಟ್ಟುಪಟ್ಟಣ ಪೊೞಗಳೊಂದರ್ಕೊಂ

ವಿನಿತಿನಿತು ಗಾವುದದೊಳಿರ್ಕುಮೆಂದಿವು ಮುಂತಾದ ವಿಶೇಷಂಗಳನಿತುಮಂ। ತತ್ತತ್ಪುರಾಣಂಗಳ ಸೂಕ್ಷ್ಮಾರ್ಥಗ್ರಹಣದಿಂದೆಯುಮಾಯಾನೆಲೆಗಳಂ ಬಲ್ಲವರಿಂದೆಯುಂ ತಿಳಿದು ಬಗೆಯೊಳ್ ಬಂದಿವಿಡಿದುಮುದಱಿಕೊಳೀನಾನು ನೊಂದು ಸಂದೆಯುಂ ತೋಱಿ ಬಂದೆಮ್ಮಂ ಬೆಸಗೊಳ್ವಿನಂ ಎಮಗೆ ನೆನೆಪಿಲ್ಲ ವಿರ್ದೊಡಂ ಪೆರ್ಮೆಯಿಂದೊಳಗುಗುಡದೆ ಇದಂ ಪಿಂತಣ್ಗೆ ಪೇೞ್ದುವೆಂದುಂ ಮುಂತಣ್ಗೆ ಪೇೞ್ವುವೆಂದುಂ ,ಈತೆಱದ ಬೞಿಸಂದೆಯುಮಂ ಕೇಳಲಾಗ ದೆಂದುಂ ಕೆಕ್ಕರಿಸಿ ನೋಡಿಯುಂ ಬೆದಱಿಸಿ ನುಡಿದುಂ ದಂಧನಂಗೆಯ್ದುಂ ಕಾಲಮಂ ಕಳೆವೆವು, ಎಮಗಿನ್ನು ತೆಱನಾವುದು ?" ಎಂದೊರೆದಾನಂದಂ ಬಡಿಸಿದರ್.

— ವೀಣಾಪರಿಶ್ರಮ —

ವೈಣಿಕರುಂ—" ತಮ್ಮ ಜನ್ಮಂಗಳಿಂದು ಸಫಲಮಾದುವು, ವೀಣಾವಾದ್ಯಮನವದ್ಯಮೆಂಬುದಿಂದು ನಿಶ್ಚಿತಮಾದುದು. ಗಾನಂ ಮನೋಹಾರಿಯೆಂಬುದನುಭವಕ್ಕೆ ಬಂದುದು. ರೈವತಕರಾಯುಂ ಬ್ರಹ್ಮ ಸಭೆಯೊಳ್ ಗಾಂಧರ್ವಮನಾಲಿಸುತ್ತೆ ಪೋದ ಪೊೞ್ತಱಿಯದಾದೆನೆಂ ಬುದುಂ ಯುಕ್ತಮೆನಿಸಿರ್ಪುದು. ಗೋಕುಲದೊಳ್ ಕೃಷ್ಣಂ ಕೊಳಲ್ಗೊಳ್ವಿ ನಮಾದನಿಯುಂ ಸವಿದು ಮೆಯ್ಮಱಿದು ಪಸುಪುಲಿಗಳಾನೆಸಿಂಗಂಗಳ್ಮೊದ ಲಾದುವು ತಂತಮ್ಮ ಬಿಗುರ್ಪು ಬೇರಂಗಳನುೞಿದೊಂದುವೆರಸಿರ್ಪುವು ! ಅಚ್ಚರಸಿಯರುಮಚ್ಚರಿವಡೆದು ಗೋವಳಗನ್ನೆಯರೊಡನೆೞ್ಚಱಿಕೊಳಿ ರ್ಪರ್ । ಮರಂಗಳುಂ ಮಾನಸರಂತೆ ನವಿರ್ದಳೆದಿರ್ಪುವೆಂಬಿವುಂ ಕರಬದರ ಸದೃಶಮಾದುವು. 'ಈ ಯತಿಶಯಮೆನಿತೆಂದು ಬಣ್ಣಿಪೆವು ? ಬಿಜ್ಜೆವನೆ ಯೊಳ್ ಕುವರಂ ಬೀಣೆಗೊಳ್ವಿನಮನಿತುಂ ತಂತಿಗಳೊಳಂ ಕೊರಲೊಳ ಮೊಂದೆ ನುಣ್ದನಿ ಪೊಣ್ಮಿತೆಂಬಂತೆ ಕೂಡಿದ ಶ್ರುತಿಯ ಸೊಬಗುಂ ಕತ್ತ ರಿಯ ವೀಣೆಯುಂ ಬಿರ್ಚಿದೊಡನುಣ್ಮುವ ತನಿಗಂಪಿನಂತೆ ಗಮ್ಮನೆ ಕವಿವ ನಾದಮುಂ, ಗಿಳಿಮೂಗಂ ಪೋಲ್ವ ಬಲಗೆಯ್ಯುಗುರ್ಗಳಿಂ ತಂತಿಗಳಂ

ಪಿಡಿವ ಮಿಾಂಟುವ ಸೈಪಿನಿಂದೆಯುಂ ಪೆಱಗೆಯ್ವೆರಲ್ಗಳೊಳಾಹತ ಪ್ರತ್ಯಾಹತ ಸ್ಫುರಿತ ಕಂಪಿತಾದಿ ಗಮಕಂಗಳಂ ಪವಣ್ಗೆಯ್ವ ಚಾತುರ್ಯದಿಂದೆಯುಂ ಸ್ವರಂಗಳ್ ತಕ್ಕತಕ್ಕೆಡೆಯೊಳ್ ಮೆಲ್ಪಂ ಬಲ್ಪಂ ನುಣ್ಪಂ ಬಿಣ್ಪಂ ಪಡೆದು ಒಳ್ಪಡದಿಯೊಡಲಂತೆಲ್ಲೆಡೆಯೊಳಂ ಚೆಲ್ವುವೆತ್ತು ಮನಂಗೊಳಿಸುವುವು. ಕ್ರಮದೊಳೊಂದಕೊರ್ಂದು ಪೆರ್ಚುಗೆವಡೆದು ಬಳೆವ ತಾನಂಗಳ್ ತತ್ತದುಚಿತಸ್ಥಾನಂಗಳೊಳ್ ಬಿಗುಪೇಱುವ ತೂಗುವ ತೊನೆವ ನಯಂಬಡೆವ ನಿಡಿದೆನಿಸುವ ಸೊಂಪುಗೊಳ್ವ ಪೆಂಪುವಡೆವ ಜೀವಸ್ವರಂಗಳೊಳ್ ನಿಂದು ನಿಂದು ನಲವೇಱುವ ಸೊಗಸು ನಿರವಿಸಲರಿದು. ಮತ್ತಮಾನಾದಂ ಬಿಜ್ಜೆವನೆಯೊಳ್ ಬಂದು ನಲಿದು ನರ್ತಿಸುವ ಸರಸತಿಯ ಕಾಲಂದುಗೆಯ ಕಿಱುಗೆಜ್ಜೆಗಳಿನಿದನಿಯುಮವಳ ಮುಂಗೆಯ್ಯೊಳಿರ್ದ ನುಡಿವರಗಿಳಿಯ ಮುದ್ದುದನಿಯುಂ, ಕನ್ನವುರದ ಚೆನ್ನೆಯ್ದಿಲಿಂದೊಸರ್ವಿನಿರಸಕ್ಕೆ ಮುಸುರ್ವ ಪೆಣ್ದುಂಬಿಗಳ ನುಣ್ದನಿಯುಮೊಂದುವೆರೆದು ಮುಪ್ಪುರಿಗೊಂಡಂತೆ ಮೋಹರಂಬಡೆದಿರ್ಕುಂ : ಅದೇಂ ವಿಚಿತ್ರಮೋ ! ತಂತಿಯನಲೆಗೆಯ್ದ ಬೆರಲ್ಗಳ್ ಅಂದು ಹೃದಯದಾನಂದದ ನಾಡಿಗಳೊಳಾಡುವಂತೆ ಮನಮಂ ಸೋಲಿಸಿ ಸೊರಗಿಸಿ ಸೋರ್ಕೇಱಿಸಿ ಸೊಗಂಬಡಿಸೆ ಆಮುಮುಲುಗದಂಗಮುಮ್ಮಾಡದೆಮೆಯುಮಾಗಿ ಚಿತ್ರಿಸಿದಂತಿರ್ದುಂ ಪೊಣ್ಮುವ ನವಿರಿಂದೆಯುಂ ಪೊನಲಿಡುವಾಲಿನೀರಿಂದೆಯುಂ ಬಿಗಿವ ಕೊರಲ ಸೆರೆಗಳಿಂದೆಯುಂ ಬಿಡದೆ ಕಿವಿವಾಯೊಳ್ಕಾಪುಗೊಂಡಿರ್ಪ ಮನೋವೃತ್ತಿಯಿಂದೆಯುಂ ಚೇತನರೆನಿಸಿರ್ಪವು. ಕಿವಿಪೊಡೆಯೊಳ್ ತುಂಬಿದಾನಂದಂ ಎರ್ದೆಗಿೞಿದು ಹೃತ್ಕಮಲಮಂ ವ್ಯಾಪಿಸೆ ಚೈತನ್ಯಂ ತದಾತ್ಮಕಮಾಗಿ ಪರಿಣತಮಾದುದಱಿಂ ಪ್ರಪಂಚಮನಿತುಂ ನಾದಮಯಮಾಗಿ ತೋರ್ಪುದು. ಬೇರಂತುದಿಯುಂ ಬಿರಿದುದಂ ಬೆಂಡಾದುದಂ ಕಳೆದಾಯ್ದು ಪೊರೆಯೆತ್ತಿದೊಳ್ಗಬ್ಬಿನ ಸೀಯುಂ, ಪಿರಿದುಂ ಕಾಸಿ ಸಕ್ಕರೆವೆರಸಿದ ಚಿನಿವಾಲ ಸವಿಯುಂ, ಆಗಳೞಿದು ತಂದು ಪಿೞಿದ ಪೊಸಜೇನ ಸರಿಯಿಂಪುಂ, ಕಾಳ್ದೊಳ್

ಮೋಹಂಸಿ ಬೆಳೆದು ಪದದೊಳ್ಪಣ್ತಿನಿದೆನಿಸಿ ನೆಗಟ್ದ ಮಾವಣ್ಣಿನ ಮಾಧುರ್ಯ ಮುಂ ಇದಱ ಸಾಸಿರದ ಸಾಸಿರದೊಳೊಂದುಂ ಪಾಲಿಂಗೆ ಬಾರದು. ನಾದಮಾಗಿಯುಂ ಕಿವಿಯೊಂದಱೊಳೆ ಸಂದಿರ್ಪುದಲ್ತು, ಸಕಲೇಂದ್ರಿಯಂ ಗಳನೊಂದೆ ವೇಳೆಯೊಳಾನಂದಸಾಗರದೊಳ್ ಮುಳುಂಗಿಪುದು. ಸುಗ್ಗಿ ಯೊಳ್ ಪುತ ಮಲ್ಲಿಗೆಯ ಪೊಸಪೂದೊಂಬೆಯೊಳ್ ಪೊದಟ್ದ ಪೊಣ್ಮುವ ತನಿಗಂಪಿನಂತೆಯುಂ, ಆಕಂಪಂ ಕವರ್ದು ಸೊರ್ಕಿ ಸುತ್ತುಂ ಪರಿವ ತುಂಬಿಗಳೆಱಂಕೆವೊಯ್ಲುಂ ಮುಂ ಬಾವನ್ನಗಾಡೊಳ್ ಪಾವುಗಳ್ ನುಂಗಿದುದಱಿಂ ಬಂದ ಬಡತನಮಂ ಕಳೆದು ಬಳೆದು ಮಾಂದೋಪಿ ನೊಳ್ ಸುರಿವ ಪೂಜೇನ ಸರಿಯೊಳ್ ನನೆದೊಯ್ಯನೆ ತೀಡುವ ತೆಂಗಾಳಿಯ ಸೋಂಕಿನಂತೆಯುಂ, ಆ ಸೋಂಕಿನಿಂ ಮುಂ ಬಗೆಯೊಳೊಗೆದ ಮದನಾಗ್ನಿ ದಳ್ಳುರಿಗೊಂಡು ಪೊಱಪೊಣ್ಮುವಿನಮದರ್ಕೆ ತಳಿರ್ದೊಂಬೆಗಳಂ ತಾವರೆ ದಂಟುಗಳಂ ಪೊತ್ತುಂ ಪನ್ನೀರೊಳ್ ನನೆದುಂ ಮಲರ್ವಾಸಿನೊಳ್ ಪೊರಳ್ದುಂ ತಣ್ಪುಗಾಣದ ಬಿರಯಿಂಗಳಾವಿರಹಂ ಕಟುದೊಡಗೂಡುವಾಗಳ್ ತಂತಮ್ಮ ಮೆಯ್ಪುಸುಪಡಂಗಿ ತಣ್ಪುಗೊಳ್ವವರೆಗಂ ತಂತಮ್ಮ ತೋಳ್ಗ ಳ್ತಣಿವ ವರೆಗಂ ಮಿಕ್ಕುದೇಂ ಪೊಟ್ಟಱವರೆಗಮುಟ್ಕಱಿಂದೆಸಗುವ ತಟಕ್ಕೆಯೊಳ್ ಮತ್ತೆಮತ್ತೆೞುವ ಬಿಗುಪಿನಂತೆಯುಂ ಸೊಗೆಮಂ ಸೂಱ ಗುಡುತಿರ್ಪುದು. ಎಂತಪ್ಪ ಕಲ್ಲೆರ್ದೆಯವರಾದೊಡಂ ಈತಾನಮನಾಲಿಸು ವಿನಂ ಪಗಲಂ ಕಂಡ ಜಕ್ಕವಕ್ಕಿಯಂತೆಯುಂ, ಜೊನ್ನಮನೀಂಟುವ ಚಕೋರದಂತೆಯುಂ, ಕಾರ್ಗಾಲದ ಸೋಗೆಯಂತೆಯುಂ, ಮುಂಬನಿ ಯುಂಡ ಚಾದಗೆಯಂತೆಯುಂ, ನಿಧಿಯಂ ಕಂಡ ಬಡವನಂತೆಯುಂ, ವರಮಂ ಪಡೆದ ತವಸಿಯಂತೆಯುಂ, ಸಿದ್ಧಿಯಂ ಪಡೆದ ಯೋಗಿಯಂತೆ ಯುಂ, ಇಷ್ಟದೇವತಾಸಾಕ್ಷಾತ್ಕಾರಮಂ ಪಡೆದುಪಾಸಕನಂತೆಯುಂ, ನಲಿದು ನಲವೇಱ ಪಿಟ್ಗಿ ಪೆರ್ಕಳಂಗೊಂಡು ಸೊರ್ಕಿ ಸೊರಗುವರ್. ಮೆಲ್ಲೆರ್ದೆಯವರಾಲಿಸಿದೊಡಾಲಿಸುವ ಮುನ್ನಮೆ ಮನಂ ಕರಗಿ ಹರವಸಗೊಂ

ಡೆಸೆಗತಕ್ಕುದಿದು ಮಿಕ್ಕುದಿದೆಂಬ ವಿವೇಕಮನುೞಿದು ರಸಾವೇಶದಿಂದೀತಾನದ ಸವಿಯಂ ಸೇಱಿಯೊಳ್ ಮೊಗೆಮೊಗೆದೀಂಟಲುಂ ಮೆಯ್ಗೆಲ್ಲಮನಣ್ಪುಗೊಳಲುಂ ಮುಡಿಗೆ ಸೂಡಲುಂ ಕಿವಿವೊಡೆಯೊಳ್ ತುಂಬಿಕೊಳಲುಮೆಳಸಿದಂತೆ ಪಲವುಂ ಕೋಟಲೆಗೊಳ್ವರ್. ಅದವರ ತಪ್ಪಲ್ತು. ಬೆಳ್ಪುಮಾಸದ ಪೊಚ್ಚಪೊಸಪೂಗಳಂ ಪವಣ್ಗೊಳಿಸಿ ಕೋದೆತ್ತಿದ ವಕುಳಸರದಂತೆಯುಂ, ಸವಣದೊಳೀಟ್ಟ ಪೊಸಮಿಸುನಿಯ ಸಲಗೆಯಂತೆಯುಂ, ಎಡವಱಿಯದೊಂದೆ ತೆಱದೊಳ್ ಸುರಿವ ಪೊಸಜೇನ ಪೊನಲಂತೆಯುಮಾದ್ಯಂತದೊಳೇಕನಾದಮೆನಿಸುವ ತಾನದ ಸವಿಯ ಬಲ್ಪಿನ ತಪ್ಪೆಂದು ತಿಳಿಯವೇಟ್ಟುದು. ಈಗಳೀಮಾನವಲೋಕದೊಳ್ ನೆಗೞ್ತೆವೆತ್ತ ಬೀಣೆಗಾಱರುಂ ಮುನ್ನಿರ್ದವರುಮಿಾತೆಱದೊಳ್ ಬಿಗುಪಂ ಒಲವಂ ಕಳೆಯಂ ನಾದಮಂ ಪೊಸವಗೆಯ ತಾನಂಗಳಂ ಸಂದರ್ಭಿಸಿದುದಿಲ್ಲೆಂಬುದು ವಿದಿತಮೈಸೆ। ಕಿನ್ನರರುಂ ಗಂಧರ್ವರುಮವರೊಳ್ ಪೊಗೞ್ತೆವೆತ್ತ ಹಾಹಾಹೂಹೂಪ್ರಭೃತಿಗಳುಂ ತುಂಬುರು ನಾರದರುಂ ಆಸರಸ್ವತಿ ತಾನುಂ ಪವಣಿಸಿದುದಿಲ್ಲೆಂಬುದುಂ ನಿಕ್ಕುವಂ. ಮೇಣುಂಟಾದೊಡೆ ನಾಡೊಳ್ ನೆಗೞ್ತೆವಡೆಯದಿರ್ಕುಮೆ ? ಅನಾದಿಕಾಲದೊಳಿಲ್ಲದ ಸಾಹಿತ್ಯದ ರಕ್ತಿವಿಶೇಷಂ ವಾಲ್ಮೀಕಿಯಿಂ ಪುಟ್ಟಿದಂತೆ, ಸಂಗೀತದ ರಕ್ತಿವಿಶೇಷಮುಮಿಾಗಳೀರಾಯಗುವರನಿಂ ಪೊಣ್ಮಿದುದು. ಮುಂ ಸ್ವರಭೇದಮಂ ಲಯಭೇದಮಂ ರಾಗಭೇದಮನಱಿಯದ ಪಸುಗಳುಂ ಪೊಮ್ಮಱಿಯುಂ ಮೋಸಂಗೊಂಡುದು ಬಿಜ್ಜೆಯ ಬಿನ್ನಣಮಲ್ತೆಂದಾಕೃಷ್ಣಂ ಈಗಳೀಪೊಸವರಿಜಿನೊಳ್ ಬಿಜ್ಜೆವಳರನಿಬರುಮಚ್ಚರಿವಡುವಂತೆ ಆನಂದಲತಾಪ್ರತಾನಂಗಳೆನಿಪ ತಾನಂಗಳಂ ಬಿತ್ತರಿಸಿದಂ : ಅಲ್ಲದೊಡಿವು ಗಾಂಧರ್ವಾಸ್ತ್ರಮಂತ್ರದಂತನಿಬರಂ ಮಱವಡಿಸಿ ಮೆಯ್ಮಱಿಯಿಸುವ ತೆಱನಾವುದು ? ಈ ಜಗನ್ಮೋಹನಮಾದ ತಾನದಿರವಿಂತಿರ್ಕೆ. ಈರಾಯಗುವರಂ ವೀಣೆಯಂ ಬಾಜಿಸಲ್ ಪೂಣ್ದಾ ತಾಣಕಮುಮಾಮೆಯ್ಸಿರಿಯುಮಾಮೊಗರಸಮುಮೆನ್ನಯ ನಯನಾನಂ

ದವಾಗಿರ್ಪುದು. ಸಂತಸದೊಳೊಯ್ಯನೆ ಕೆಯ್ಯೊಳ್ ಪಿಡಿದೊತ್ತಿಗೆ ಬರಿಸಿ ತೊಡೆಯ ಮೇಲಿರಿಸಿ ಪೇರೆರ್ದೆಯಿಂ ಸಾರ್ಚಿ ಸ್ನೇಹಂಬೆರಸು ಮೆಯ್ದುಡಹಿ ರಾಗಾಲಾಪನಂಗೆಯ್ಸಿ ಆಲಿಸುತ್ತಿ ಅಲರ್ವ ಮೊಗಮುಂ ಅಲೆವ ಕಣ್ಣುಂ ಸುರಿವಾಲಿನೀರುಮಾಗಿ ತಕ್ಕೆಡೆಗಳನುಗುರ್ಗಳಿಂದೊತ್ತುವ ಸೈಪುಂ **ಆ ಕಲಾವತಿವೀಣೆ** ಜಯಲಕ್ಷ್ಮಿಯಂತಿವನ ಭುಜಸಂಗದಿಂ ಸೊರ್ಕಿ ಕಳರವೋದಾರಮಾದ ನಾದಂಗಳನೊದವಿಪ ಸೊಗಸುಮಂ ನಿರವಿಸಿ, ಸಾಕ್ಷಾತ್ಕೃಷ್ಣಾವತಾರಮೆಂಬುದೇ ನಿಶ್ಚಿತಂ'' ಎಂದು ಬಿನ್ನವಿಸಿ ಆನಂದಂಬಡಿಸಿದರ್.

— ಖುರಳೀಪರಿಶ್ರಮ —

ಗರುಡಿಯೊಳ್ ಸಾದಕಮಂ ಕಲಿಸುವ ಜಟ್ಟಿಗರ್—'' ಚಿತ್ತವಿಪುದು ಮಹಾರಾಯಂ. ಗರುಡಿಯೊಳನಿಬರುಂ ತಾಂತಾಮೆಸಗುವ ಸಾದಕಂಗಳನುಳಿದು ಚಿತ್ರದ ಬೊಂಬೆಗಳಂತೆ ನಟ್ಟಾಲಿಯಲುಗದೆ ನಿಟ್ಟಿಸುತ್ತಿರೆ—ಈರಾಯುಗುವರಂ ಕಂಬಕೊಣತಂಗಳಂ ಲಾಗಿಸುವ ಚಳಕಮುಂ, ಆನೆಯ ಸೊಂಡಿಲಂತೆಯುಂ ಪೆಬ್ಬಾವಿನಂತೆಯುಂ ಪತ್ತಿಸುತ್ತಿ ಬಿಗುಪೇಱುವ ತೋಳ್ತೊಡೆಗಳ ದೇಸೆಯುಂ ಮತ್ತಂ ಸಂಗರಣಂಗಳನೆತ್ತುವೆಡೆಯೊಳ್ ಗೋವರ್ಧನಮನೆತ್ತಿ ನಿಂದಾಗೋಪಾಲನ ಪಾಂಗಿನೊಳೊಪ್ಪ ಮೊಗಮುಂ ತೋರ್ಪ ಪೇರೆರ್ದೆಯುಂ ಒಯ್ಯರದೊಳೂಱುದ ಸಿರಿಯಡಿಗಳುಮಾಗಿ ನಿಂದ ನೆಲೆಯೊಳೊಂದೊಂದು ತೋಳ್ಗಳಂ ತಿರುಗಿಸಿ ನೆಗಪುವ ಸೈಪಿನಿಂದೆ ಎಡಬಲದೊಳಿನಿಸಿನಿಸುಂ ಮುಱಿಗೊಳ್ವ ಅಸಿನಡುವುಂ, ಓಸರಿಸುವ ಮೆಯ್ಯುಂ,˚ ಒಲಿವ ಕೊರಲುಮಾದ ಮೆಯ್ಸಿರಿ ಜಟ್ಟಿಗರುಡಿಗಳೊಳಂ ನಟ್ಟುವ ಗರುಡಿಗಳೊಳಂ ಕಂಡುದಲ್ತು; ನಿಟ್ಟಿಪರ ದಿಟ್ಟಿಗಳಲ್ಲಿಯೆ ನಟ್ಟಂತೆ ನೆಲೆಗೊಳ್ವುವು. ಆರೇಖೆಯುಮಾತಾಣಕಮುಂ ಜಗನ್ಮೋಹನಮಾಗಿರ್ಪುದು. ಅದೊಡಮವಱಿಂ ಕಾಳೆಗಕ್ಕುಪಕಾರವಿಲ್ಲೆಂಬುಧಱಿಂಧದಮಂ ಬಿತ್ತರಿಸಧುಳುಪಿ ಬಳೆವ ಮೆಯ್ಯ ಬಲ್ಪಂ ದಿಟ್ಟಿಯ ಸು

ಯ್ದಾನವಮಂ ಗೆಯ್ಮೆಯ ಚಳಕವಮಂ ನಿರವಿಸಲ್ಕವು ಲೋಕಾತೀತವಾಗಿ ರ್ಪುವು. ಇನ್ನುಱಡಿ ಬಲ್ಮೆಗಾಱರುಂ ಕಱಿದು ಕೀೞ್ಗೆಯ್ವುದಱಿಂ ಹೊಂತಕಾಱಿಗಳನಿಬರುಂ ಪಿಂದೆಗೆಯೆ, ರೋಸದಿಂದೊರ್ವ್ವ ಜಗಜಟ್ಟಿ ಇದಿರ್ಚಿ ಮುಂ ಮಧುರೆಯೊಳ್ ಕುವಲಯಾಪೀಡಕ್ಕಂ ಚಾಣೂರಂಗಂ ಮಾರ್ಮಲೆತಂತೆ ದಂಡೆಯಂ ಪೂಡಿ ಸಾದಕದೊದವಂ ಮೆಱೆಯುತ್ತೆ ಎಡಕ್ಕಂ ಬಲಕ್ಕಂ ಪಿಂತಣ್ಗಂ ಒಯ್ಯನೊಂದೊಂದು ಪೆಜ್ಜೆಯಂ ತೆಗೆದಾಸೆ ಯಂ ಕೊಟ್ಟು, ಮೇಣವಂ ಕವಿದು ಬರ್ಪುದುಂ, ಇದಿರ್ಚಿ ನಿಂದು ಚಳಕ ದೊಳ್ ಪುಸಿಗೆಯ್ಯಂ ತೋಱಿ, ಆದರ್ಕವಂ ತನ್ನುಳ್ಳ ಬಲ್ಪಿನಿತಱೊಳಂ ಮುಂತಣ್ಗೆ ನಿಂತು ತುಂಬುಗೆಯ್ಯಿಕ್ಕುವಿನಂ, ಮುಂ ಕುವಲಯಾಪೀಡದ ಕೋಡಂ ಪೊಱತಟ್ಟಿದಂತೆ ತಪ್ಪಿಸಿ ತನ್ನ ಕೆಯ್ದಳವಮಂ ಅವನ ಮೊಗಕ್ಕೆ ಸಾರ್ಚುವಿನಮವನ ಬಲ್ಮೆ ಅವಂಗೆ ಪಗೆಯಾಗಿ ಮೂಗಿನ ಸೆರೆಯೊಡೆದು ಪೊಸನೆತ್ತರ್ ಪೊನಲಿಡೆ ಢಂಢಣಿಸಿ ಪಿಂತಣ್ಗೆ ಸರಿದು ಗೋಡೆಯಂ ನೆಮ್ಮಿ ನಿಂದು ಬವಣಿಗಳೆದು ಅಚ್ಚರಿವಟ್ಟು ಕೆಯ್ಮುಗಿದು ಕಾಲ್ಗೆಱಗಿ ಸಾಕ್ಷಾತ್ ಕೃಷ್ಣನೆಂದು ನಿರವಿಸಿ ನಾಣ್ಚದೆ ನಲವೇಱಿದಂ. ಮತ್ತಮೊರ್ವ್ವ ನಡುಗರುಡಿಯ ಪೂಜೆಯ ಬಿರುದಿನ ಕೈಮೆಗಾಱನೊರ್ವ್ವಂ ತನ್ನೊಡಲ ಪೆರ್ಮೆಯಂ ಕೈಮೆಯ ಬಲ್ಪಂ ನಂಬಿ ಪೆಣಗಲ್ಕೆಂದು ಕೆಮ್ಮಣ್ಣ ಕಳನಂ ಪೊಕ್ಕುಸರಿಬಿತ್ತರದೊಳ್‌ನಿಲ್ವಿನಂ, ಪಾರುಗಟ್ಟೆಗೆಯವನುರ್ಬಿನೊಳೆಱಗುವ ಸೊರ್ಕಾನೆಯ ನಿಗ್ಗವಕ್ಕೆ ಎರ್ದೆಯೊಡ್ಡಿ ಸೋಂಕದ ಮುನ್ನಮೆ ಒರ್ವ್ವ ಯ್ಯೊಳೊಲೆದು ತಪ್ಪಿಸಿ ಎಡೆಗೆಡಪುವಂತೆ ಕೆಡಪಿ ಬೆನ್ನೇಱಿಯುರಾಟದೊ ಳ್ಬಿಗಿದು ತನ್ನ ಸಾದಕದ ಚಳಕವಮಂ ಮೆಱೆಯಲ್ಕೆ ಸಡಿಲವಿತ್ತದನವಂ ನೂಂಕುವನಿತಱೊಳೆ ಪೆಱತೊಂದಱಿಂ ಪೆಱತೊಂದೀತೆಱದೊಳೊಂದೆರ ಟ್ಗಳಿಗೆವರೆಗಂ ಪತ್ತಿದ ಮೆಯ್ ಬಿರ್ಚದೆ ಬಟಲ್ಚಿ ಬಸವಱಿಸಿ ಕಡೆಯೊಳ್ ಡೊಕ್ಕರದೊಳ್ ಬಿಗುಪೇಱಿಸುವುದುಂ ; ಅವನುಂ ಕವಿವ ಕಣ್ಗತ್ತಲೆ ಯುಂ ಸಡಿಲ್ವ ಕೈಕಾಲ್ಗಳುಮಾಗಿಯೆ ಮಱತೊಱಗಿದಂ. ಇದನೀ

ಗರುಡಿ ಪೊಕ್ಕರನಿಬರುಮಱಿತಿರ್ಪರ್. ಈನುಡಿಗಳೊಳೇನಾನುಂ ಇಚ್ಛಕಂ ಬೆರಸಿರ್ಪುದೆಂದು ತಿಳಿಯಲ್ಕಕ್ಕುದಲ್ತು. ಈಯರ್ಥದೊಳೆಮ್ಮ ಕುಲದೇವತೆ ನಿಂಬಜೆಯಡಿಗಳುಮೆಮ್ಮ ಗರುಡಿ ಕೃಷ್ಣನಡಿಗಳುಮೆ ಸಾಕ್ಷಿ !" ಎಂದು ತಿಳುಪಿದರ್.

ಇಂತು ನುಡಿವ ಪಲವುಂ ಬಿಜ್ಜೆವಳರ ನುಡಿಗಳಿಂದುರ್ಕುವ ಸಂತಸದ ಸೊರ್ಕಿನೊಳ್ ಪೆರ್ಕಳಂಗೊಂಡು ಒಡನೆಟ್ಟಜದೊಳಚ್ಚರಿವಡುತ್ತಾಳೋಚಿಸಿದಂ :—ಲೋಗರೊಂದು ವಸ್ತುವನುತ್ತಮವೆಂದು ತಿಳಿದದಱ ಗುಣಂಗಳ್ಗೆ ಸಂತಸಂಬಡುತ್ತಿರ್ದೊಡಂ, ಆವಸ್ತುವಿನೊಳ್ ವಿಶೇಷಸಂಬಂಧಮಾದವರ್ಗೆ ಸಂತಸಮುಮತಿಶಯಮಾಗಿರ್ಪುದೆಂಬುದಪರೋಕ್ಷಮಾದುದು. ಸಸಿನೇಸರ್ಗಳುಂ ಕಾರ್ಮುಗಿಲುಂ ಜಗದಾನಂದಕರಂಗಳಾದೊಡಂ ಎಣೆವಕ್ಕಿಗಂ ತಣ್ಗದಿರ್ವಕ್ಕಿಗಂ ಸೋಗೆಗಂ ಸಂತಸಂ ಪಿರಿದಪ್ಪುದೆಂಬುದುಂ ಯುಕ್ತಮೆನಿಸಿದುದು. ಭಾರ್ಗವರಾಮಂ ದಿಗ್ವಿಜಯಂಗೆಯ್ದನೆನೆ ಪಾರ್ವರುಂ, ರಘುರಾಮಂ ನೆಗೞ್ತೆವೆತ್ತನೆನೆ ಎಮ್ಮರಮಕ್ಕಳುಂ ಪೆರ್ಕಳಂಗೊಳ್ವುದು ತಕ್ಕುದೆನಿಸುದುದು. ರಾವಣಂ ಸೀತಾದೇವಿಯರಂ ಕೊಂಡೊಯ್ದನೆನೆ ಕುಲಶೇಖರಂ ದಂಡೆತ್ತಿದನೆಂಬುದುಮುಪಪನ್ನಮೆನಿಸಿದುದು. ಕೃಷ್ಣಂ ಬೆಣ್ಣೆಗಳವಿನೊಳ್ ಕಡೆದಾವಿಂದೊರಲೊಳ್ಕಟ್ಟುವಡೆದನೆಂಬುದನೆರ್ದೆಗೊಳಿಸಿ ಪರಾಂಕುಶಂ ಮೋಹಂಬಡೆದನೆಂಬುದುಚಿತಮಾದುದು. ಶ್ರೀಮನ್ನಾರಾಯಣಂ ಸರ್ವಜ್ಞಂ ಸರ್ವಶಕ್ತಂ ಸಕಲವಿದ್ಯಾಪ್ರವರ್ತಕನೆಂಬುದಂ ತಿಳಿದಿರ್ದೊಡಂ ಈಯವತಾರದೊಳ್ ಬಿಜ್ಜೆಗಲ್ತಂ ವಿನಯಂಬಡೆದಂ ಬೀರನೆನಿಸಿದಂ ಪೆಂಪುವಡೆದನೆಂದು ಪೇೞ್ದೊಡಮಚ್ಚರಿಯುಮಾನಂದಮುಂ ಸಂದಣಿಸುತ್ತಿದೆ. ರಕ್ಷ್ಯರಕ್ಷಕಭಾವಂ ಮೊದಲಾದ ಪಲವುಮದೃಷ್ಟಸಂಬಂಧಂಗಳತ್ತಣಿಂದೀಪಿತೃಪುತ್ರಭಾವರೂಪಮಾದ ದೃಷ್ಟಸಂಬಂಧಮೆ ಪ್ರೀತಿವಿಶೇಷಹೇತುವಾದುದಱಿಂ ಶ್ಲಾಘ್ಯಮಾದುದು. ಅದಱಿಂದೈಸೆ ! ಶುಕವ್ಯಾಸಪರಾಶರಾದಿಗಳುಂ ತಮ್ಮ ಋಷಿ

ಜನ್ಮಮುಂ ಕಡೆಗಣಿಸಿ ಕುಂದ ಕದಂಬ ಗೋಪಿಕಾದಿಜನ್ಮಂಗಳನೆಳಸಿದರ್. ಆದಱಿಂದಾನುಮೆನ್ನ ಕುಲದೇವತೆಯೆಂಬುದಂ ಕೂಱದೆ ಕುವರನೆಂದೇ ಕೊಂಡಾಡುವೆನೆಂದು ನಿಶ್ಚಯಂಗೆಯ್ದು ನಂದನಂತಾನಂದದೊಳಿರ್ಪಂ.

ಮತ್ತಮಾರಾಯಗುವರಂ ಧರ್ಮಶಾಸ್ತ್ರದೊಳಂ ರಾಜನೀತಿಯೊಳಂ ಬಿಲ್ಕತ್ತಿಮೊದಲಾದ ಪಲವುಂ ಕೈದುಗೆಯ್ಮೆಯೊಳಂ, ಆನೆಕುದುರೆಗಳೇಱಾಟದೊಳಂ ಸಂಗೀತಶಾಸ್ತ್ರದೊಳಂ ನಾಟಕಾಲಂಕಾರಂಗಳೊಳಂ, ಪಲವುಂ ದೇಶಭಾಷೆಗಳೊಳಂ, ಪಲವುಂ ಕಲಾವಿದ್ಯೆಗಳೊಳಂ ಪ್ರವೀಣನೆನಿಸಿದಂ. ತಿರುಮಲೆಯಾರ್ಯನುಮವನ ಪಡಿನೆೞಲಂತೆ ಎಲ್ಲಾ ವಿದ್ಯೆಗಳೊಳಂ ಬೞಿಸಂದು ಬಣ್ಣಂಬಡೆದಂ. ಬೞಿಕ್ಕೆ ರಾಯಗುವರನೊಡಲೊಳೆಳವೆ ಇನಿಸಿನಿಸುಂ ಪಿಂದೆಗೆಯೆ ಜೌವನಮುಡಿಯಿಟ್ಟುದದೆಂತೆನೆ :—

— ಯೌವನೋದಯ —

ತನ್ನ ಕೆಳೆಗಾವಂಗಿನ್ನೇೞ್ಗೆಯುಪ್ಪುದೆಂದು ಬಗೆದು ಮೊಗಸಸಿ ಪೊಗರೇಱಿದುದು. ಮೊಗದೊಳ್ಸೆಲೆಗೊಂಡ ಸರಸತಿಯು ಕನ್ನವುರದ ಕನ್ನೈದಿಲ್ ಪಡಿನೆೞಲ್ಗೊಂಡಂತೆಸೆವೆಳಬವರಿಯೊಳ್ ತನಗಿದಿರಾದುದೆಂದು ಮುನಿದಂತೆ ಕಣ್ಗಡೆ ಕೆಂಗೆಱಿಗೊಂಡುದು. ಸವಿನುಡಿಯಿಂಚರಿಯುಂ ಸುರಿವ ಚೆಂಬಾಯ್ದೆಱೆಗಳಂ ಬಂದುಗೆಗೆತ್ತು ಬಳಸಿ ಮುಸುಱಿದ ಪರಮೊವಱಿಗಳೆನೆ ಮೀಸೆ ಮೊಯ್ಸಿರಿವೆತ್ತುದು. ಇವಂ ಕಿಱಿದು ದಿನದೊಳೆ ಪಗೆರಾಯರ ಪೊೞಲ ಪೆರ್ಬಾಗಿಲಂ ಮುರಿವನೆಂದಳ್ಕಿಯುದಱ ಪೆರ್ಮೆ ಸಾರ್ದುದೆಂಬಂತೆರ್ದೆ ಬಿತ್ತರವಾದುದು. ಅಲ್ಲಿಯ ಪೇರಗುೞಿಯು ದುಂಡುದೊಲೆಗಳ ಬಲ್ಪು ಬೞಿಸಂದಂತೆ ತೋಳ್ಗಳ್ತೋರಮಾದುದು. ನಾಲ್ದೆಸೆಯುಂ ಗೆಲಲೆಳಸಿದೊಡೆನ್ನಂ ಬಿಗಿದು ಕಟ್ಟುವನೆಂಬ ಚಿಂತೆಯೊಳ್ ನಡು ಬಡನಾದುದು. ಎಂತಪ್ಪ ನೆಱೆರಾವುತರುಮೇಱಲರಿದೆನಿಪ ಕಡುಪಿನ ವಾರುವಂಗಳೆಮಗೊಳಗಪ್ಪುವೆಂಬ ಗರ್ವದಿಂ ತೊಡೆಗಳ್ ಪೆಂಪುವಡೆದುವು. ಈತೆಱದೊಳ್ ತೋರದೊಡೆಯುಂ ಬಡನಡುವುಂ ಪೇರೆರ್ದೆಯುಂ

ದುಂಡುದೋಳುಂ ಬಲ್ಗಂದವುಂ ಪವಣ್ಮೀಸೆಯುಂ ಪೊಳೆವ ಮೊಗವುಂ ಪೊಗರೇಱುವ ಮನವುಮಾದ ಪೊಸಜೌವನದಿರವಂ ನಿರವಿಸಿ, ರಾಯಂ ಮನದೊಳಾಲೋಚಿಸಿದಂ :— ಎಮ್ಮ ಕುಲದೊಳ್ ನೆಗೞ್ದ ರಾಯರನಿಬರುಂ ಎಳವೆಯೊಳ್ ಬಿಜ್ಜೆಗಲ್ತು ಜೌವನದೊಳ್ ನಾಲ್ದೆಸೆಯಂ ಗೆಲ್ದು ಪೊರ್ದಿದರಂ ಪೊರೆದು, ದೇವರಂ ಪಾರ್ವರಂ ತೇಜಂಬಡಿಸಿ, ನಾಡಂ ಕಾಪಿಟ್ಟು ಬರ್ದಿನೊಳ್ತಂ ಪೊತ್ತ ಪೊಱೆಯಂ ತಮ್ಮೊಳ್ಗವರೊಳಿೞಿಪಿ ನಿಚ್ಚ ಸಿರಿಯನೆಳಸಿ ನೇಮಂಗೊಳ್ವರ್. ಆನುಮಂತೆಸಗಲ್ವೇೞ್ಪುದೆಂದೆಣಿಸಿ, ಅಳಹಿಯಸಿಂಗರಾರ್ಯನಂ ಬರಿಸಿ ನುಡಿದಂ :— “ ಆನೊಂದು ಕಜ್ಜಮಂ ಪೇೞ್ವೆಂ : ಪಡಿನುಡಿಗುಡದೆಯದನಂಗೀಕರಿಪುದು, ಎನ್ನ ಕೆಳೆಯೆನ್ನೊಡನಾಡಿಯೆನ್ನಪಡಿನೆೞಲ್ ಎನ್ನೊಡಮೆಯೆನ್ನ ಹರಣಮೆಂದೆನಿಸಿದೆನ್ನನಂತರ ಸೋದರಂ ಚಿಕದೇವಯ್ಯರಸಂ ಪರಸಂಪದಮಂ ಪಡೆದ ಬೞಿಕ್ಕೆನ್ನ ಪೊತ್ತ ಪೊಱೆಯನಿೞಿಪಲ್ಕೆಡೆಗಾಣದೆನ್ನ ಮನದ ತಲ್ಲಣಮಂ ಅವಂಗನಂತರಜಾತನಪ್ಪ ದೇವರಾಜನಿಂದು ತೀರ್ಚಿದಂ. ಇವನ ವಿನಯಮುನಿವನ ವಿವೇಕಮುನಿವನ ಪ್ರಜಾನುರಾಗಮಂ ಇವನ ಸೌಭ್ರಾತ್ರಮುನಿವನ ಸ್ಥೈರ್ಯಧೈರ್ಯಶೌರ್ಯಾದಿಗುಣಂಗಳುಮಂ ನಿರವಿಸೆ, ಎಮ್ಮ ಪಿರಿಯ ಚಾಮರಾಜರಸ ನರಸರಾಜರಸ ಮುದುಪ ದೇವರಾಜರಸರ್ಗೆ ಸರಿಮಿಗಿಲೆನಿಸುಗುಂ. ಅದಱಿಂದಿವಂಗೆ ಪಿರಿಯರಸುತನಮನಿತ್ತು, ಇವನ ಮೆಯ್ಗಾಪಿನೊಳ್ ಇವನನುಜಾತನಪ್ಪ ಕುಱಿಯದೇವರಾಜರಸನಂ ನಿಯಮಿಸಿ, ಕಿಱಿಯರಸುತನಮಂ ಕುಮಾರಚಿಕದೇವರಾಯಂಗಮರಿಸಿ, ಇವನನುಜಂ ಕಂಠೀರವಯ್ಯರಸನಂ ಇವನ ಕಾಪಿನೊಳಿರಿಸಿ, ಆನುಂ ತೀರ್ಥಯಾತ್ರಾದಿ ತಪಸ್ಸಾಮ್ರಾಜ್ಯಮನನುಭವಿಸೆಂ.” ಎಂಬುದಂ ಕೇಳ್ದು ಅಳಹಿಯಸಿಂಗರಾರ್ಯಂ ನುಡಿದಂ :—

“ ಎಲೆ ಮಹಾರಾಯ ! ನೀನಿನ್ನುಂ ಪಲವುಂ ಬರಿಸಮರಸುಗೆಯ್ವುದೆ ಲೇಸು. ಆದೊಡಂ ಪಡಿನುಡಿಗುಡದೆ ಸಮ್ಮತಿಪುದೆಂದು ನಿರವಿಸಿ

ದುದಱಿಂದೊಡಂಬಟ್ಟು ನುಡಿವೆಂ. ನಿನ್ನನುಜಂ ದೇವರಾಜಂ ಮಹಾರಾಜಲಕ್ಷಣಸಂಪನ್ನನೆನಿಸಿ ನಳ ನಹುಷ ಯಯಾತಿ ದುಂಧುಮಾರ ಭಗೀರಥರಂ ದೊರೆಕೊಂಡು ಮತಿವಂತನುಮುತ್ಸಾಹಿಯುಂ ನೀತಿಶಾಸ್ತ್ರನಿಪುಣನುಂ ಸಕಲಧರ್ಮಜ್ಞನುಂ ದಯಾಳುವುಂ ದಾಕ್ಷಿಣ್ಯಪರನುಮೆಂದು ಸಕಲ ಪ್ರಜೆಗಳುಮಾನಂದಂಬಡೆವರ್. ಪ್ರಜಾನುರಾಗದಿಂದಮೆ ರಾಯರ್ಗೆ ಜಯಮುಂ ಜಸಮುಂ ಪಸರಿಸುಗುಂ. ಆದಱಿಂದೆ ದೇವರಾಜರಸಂಗೆ ಮಹಾರಾಜಪದಮನೀವುದೆ ಲೇಸು. '' ಎಂಬುದುಂ ;

ರಾಯನುಮತಿಹರ್ಷದಿಂ ಸುಮುಹೂರ್ತದೊಳ್ ಪಟ್ಟಾಭಿಷೇಕಂಗೆಯ್ದು ನುಡಿದಂ:—'' ಎಲೆ ತಮ್ಮ! ಯಾದವಮಹೀಶೂರವಂಶ ಕಲಶಾಂಬುಧಿಯೊಳ್ ಕಲಾಧರನಂತು ಉದಿಸಿದ್ಧೈ. ತಣ್ಗದಿರ್ಗಳಂ ಪೋಲ್ವ ನಿನ್ನ ಗುಣಂಗಳಿಂದೆ ಅಖಿಲಪ್ರಜೆಗಳುಮಾಹ್ಲಾದಂಬಡೆದಿರ್ಪರ್. ಆನುಮೆನ್ನ ಪೊಱೆಯುಂ ನಿನ್ನೊಳಿಱಿಪಿದೆಂ. ಇನ್ನೆವರಮರಸುಗೆಯ್ದುದುಮಿಂದು ಸರಸಮಾದುದು. ಸಕಲಶ್ರೇಯಂಗಳುಂ ಸಾರ್ದುವು. ಪುರಾಕೃತಪುಣ್ಯಫಲಂಗಳುಂ ಪೊಣ್ಮಿದುದು. ಕುಲದೇವತೆಗಳುಂ ಪ್ರಸನ್ನಮಾದುದು. ಅಕಟಕಟ ! ಪ್ರಜೆಗಳೇಂ ಸುಕೃತಶಾಲಿಗಳೋ : ಭದ್ರಗುಣಂಗಳಿಂ ರಾಮಭದ್ರನಂ ಪೋಲ್ವಿನಂ ಪರಿಪಾಲಿಸುವೈ. ಪೊಡವಿಯೇಂ ಪುಣ್ಯವತಿಯೋ : ಪೇರಾವೆಯೆಂಬ ಪಾಸಱೆಯೊಳಂ ದೆಸೆಯಾನೆಗಳ ಕುಂಭಂಗಳೆಂಬ ಗುಂಡುಗಲ್ಗಳೊಳಂ ಪಾವೆಱೆಯನ 'ಪೆಡೆವಣಿಗಳೆನಿಪ ಪೆಡಗಲ್ಲೊಳಂ ಜನ್ನವಂದಿಯ ಕೂಗೋ‍ೞರೆಯೊಳಂ ಕುಳ್ಳಿರ್ಪ ಕೋಟಲೆಯಂ ಮಱೆತು ನಿನ್ನ ದುಂಡುದೋಳೊಳ್ ನೆಲೆನೆಲಸಿ ಸೊಗಂಬಡೆದುದು. ನೀಂ ಸಕಲಶಾಸ್ತ್ರಂಗಳನೋದಿ ತಿಳಿಯುತಕ್ಕುವನಿತುಮಂ ತಿಳಿದಿರ್ಪೆ. ನಿನಗಾನುಪದೇಶಂಗೆಯ್ವುದೇನುಱಿದಿರ್ಪುದು ? ಆದೊಡಂ ಪ್ರೀತಿಯಿಂ ಪುನರುಕ್ತಮೆನಿಸಿ ಪೇೞ್ವೆಂ. ಪಟ್ಟವಣೆಯೇಱಿದುದರ್ಕೆ ಪುರುಳ್ಗೊಂಬುದುಂ ಭೋಗಿಪುದುಮೋ ಫಲಮೆಂದೆಣಿಸದೆ ದೇವರಂ ಪಾರ್ವರಂ ಪೊರೆದವರ

ಸೇವೆಗೆಯ್ವುದುಂ, ಮಕ್ಕಳವೊಲ್ ಮಱುಕದಿಂ ಪ್ರಜೆಯುಂ ಕಾಪಿಡುವುದು ಮದಱಿಂ ಬರ್ಪ ಪುರುಳುಂ ಬಲ್ಪುಂ ಗೆಲ್ಲಮುಮದಱಿಂ ಬಳೆದ ದೇಶ ಕೋಶಂಗಳುಮದಱಿಂ ಬರ್ಪ ಕೀರ್ತಿಸುಕೃತಂಗಳುಮೇ ಫಲಮೆಂದೆಣಿಸು ವುದು.'' ಎಂದು ನಿರವಿಸಿ, ತನ್ನ ಕಿಱಿಯನುಜಂ ಮಱಿಯದೇವರಾಜ ರಸನಂ ತನ್ನಣುಗರಪ್ಪ ಚಿಕದೇವರಾಜ ಕಂಠೀರವರಾಜರುಮಂ ಕೆಯ್ಯೆಡೆ ಗೊಟ್ಟು, ತೆಂಕಣ ನಾಡೊಳ್ ಕೌಂಡಿನಿಯೆಂಬ ಪೊೞೆಯ ತಡಿಯೊಳ್ ಪಲವುಂ ಕಾಲಂ ತಪಂಗೆಯ್ದು ಪರವಾಸುದೇವನ ಪದಮಂ ಸಾರ್ದಂ.

ದೇವರಾಜನ ಚರಿತಂ

ಬೞಿಕೀದೇವರಾಜಂ ಸಾಕ್ಷಾದ್ದೇವರಾಜನಂತೆ ಸುಧರ್ಮಾಧಿಷ್ಠಿತನುಂ। ಪಾವಕನಂತೆ ಶುಚಿಯುಂ ತೇಜಸ್ವಿಯುಂ। ಧರ್ಮರಾಜನಂತೆ ದಂಡಧರನುಂ ಸಮವರ್ತಿಯುಂ। ನಿರಋತಿಯಂತೆ ದೇವತಾಗಣಮಧ್ಯ ಗಣನೀಯನುಂ ಪುಣ್ಯಜನಾನುಯಾತನುಂ। ವರುಣನಂತೆ ಸತತಪ್ರತ್ಯಂ ಗನರ್ತಿತನಿಜಲಕ್ಷ್ಮೀಕನುಂ ಪ್ರಚೇತಸನುಂ। ಮಾರುತನಂತೆ ಜಗತ್ಪ್ರಾಣ ನುಂ ಪವಮಾನನುಂ। ಕುಬೇರನಂತೆ ರಾಜರಾಜನುಂ ಧನದನುಂ। ಈಶಾನ ನಂತೆ ಸರ್ವಜ್ಞನುಂ ಶಂಕರನುಮೆನಿಸಿ ನೆಗೞ್ಗುಂ. ಮತ್ತಂ ಪುರುಷೋ ತ್ತಮನವತರಣದ ಮತ್ಸ್ಯದಂತೆ ಪಟುನುಡಿಗಳಂ ಪದುಳಂಗೊಳಿಸುವಂ। ಕೂರ್ಮನಂತೆ ಗೋತ್ರಮನೆತ್ತಿ ರಂಬಡಿಸುವಂ। ಮಹಾವರಾಹನಂತೆ ಪೊಡ ವಿಯುಂ ಪೊಗರೇಱಿಸುವಂ। ನೃಸಿಂಹನಂತೆ ಬಲ್ವಗೆಗಳ ಎರ್ದೆಯನಿರ್ಬಗಿ ಗೆಯ್ವಂ। ವಾಮನನಂತೇಕಪದದೊಳೆ ಭೂಮಂಡಲಮನಿತುಮನಾಕ್ರಮಿ ಸುವಂ। ಭಾರ್ಗವನಂತೆ ದುಷ್ಟರಾಜನ್ಯರಂ ದೂರೀಕರಿಸುವಂ। ರಾಮ ಚಂದ್ರನಂತೆ ಧರ್ಮದಿಂ ರಾಜ್ಯಮನಾಳ್ವಂ। ಹಲಿಯಂತೆ ಬಲಭದ್ರನೆನಿ

ಸುವಂ। ಕೃಷ್ಣನಂತೆ ಧರ್ಮಪ್ರತಿಷ್ಠಾಪನಂಗೆಯ್ವಂ। ಕಲ್ಕಿಯಂತೆ ಪಾಷಂಡರಂ ಪರಿಹರಿಸುವಂ. ಮತ್ತಂ ತಾಂ ಪಲವುಂ ರಿಪುಪುರಂಗಳಂ ಜಯಿಸಿದುದಱಿಂ ಮುಪ್ಪೊಟಲಂ ಗೆಲ್ದ ಹರನಂ ಪರಿಹಾಸಂಗೆಯ್ವಂ। ತಾಂ ಶಕ್ತಿತ್ರಯಸಂಪನ್ನನಾದುದಱಿನೇಕಶಕ್ತಿಧರನಪ್ಪ ಕುಮಾರನಂ ಕಡೆಗಣಿಸುವಂ। ತಾನನವರತಪ್ರತಾಪಶಾಲಿಯಾದುದಱಿಂ ಪೊೞ್ತಂ ಗೊಂದು ತೆಜನಪ್ಪ ದಿನಾಕರನಂ ಧಿಕ್ಕರಿಸುವಂ। ತಾಂ ಸಕಲರತ್ನಂಗಳಂ ಸಂಗ್ರಹಿಸಿ ಅವಱಿಂ ಕಜ್ಜಂಗೊಳ್ವುದಱಿಂ ಜಡನಪ್ಪ ರತ್ನಾಕರನಂ ಜಱಿವಂ। ತಾಂ ತೇಜಸ್ವಿಯಾಗಿಯುಂ ಸನ್ಮಾರ್ಗಪ್ರವರ್ತಕನಾದುದ ಱಿಂ ಕೃಷ್ಣವರ್ತ್ಮನಪ್ಪಗ್ನಿಯನವಜ್ಞೆಗೆಯ್ವಂ। ತನ್ನವರನಿಬರುಮುಟ್ಟು ತೊಟ್ಟು ತನ್ನಂತಿರ್ಪುದಱಿಂ ಕೆಳೆಯೊರ್ವನಂ ಕಪಾಲಿಯುಂ ಕೃತ್ತಿವಾಸಿ ಯುಮೆನಿಸಿ ತೋಱುಸುವ ಕುಬೇರನಂ ಕುತ್ಸೆಗೆಯ್ವಂ। ತಾಂ ಗೋತ್ರೋ ದ್ಧರಣಂಗೆಯ್ವುದಱಿಂ ಗೋತ್ರಾರಿಯಪ್ಪ ದೇವರಾಜನಂ ತೆಳ್ಪನೆನಿಸು ವಂ। ತಾಂ ವ್ಯಸನಪರಾಙ್ಮುಖನಾದುದಱಿಂ ಪಗಡೆಯೊಳ್ ಪರಿಭವಂ ಬಡೆದ ನಳನನಿಟಿಕೆಗೆಯ್ವಂ। ತಾಂ ಸತ್ಯದೊಳ್ ಸಾರ್ವಭೌಮನಪ್ಪುದ ಱಿಂ ನನ್ನಿಯಿಂದಲುಗಿದ ಹರಿಶ್ಚಂದ್ರನಂ ಹೞಿವಂ। ತಾಂ ಸನಾತನ ಧರ್ಮಮಪ್ಪ ಕೃಷ್ಣನಂ ನಂಬಿ ನೆಲೆಗೊಂಡಿರ್ಪುದಱಿಂ ಧರ್ಮಾಂತರ ತತ್ಪರನಪ್ಪ ಅರ್ಜುನನಂ ತರ್ಜಿಸುವಂ. ಮತ್ತಂ ಶುಚಿಯಾಗಿಯುಂ ಪ್ರಜೆ ಗಳಂ ರಂಜಿಸುವಂ। ನಿರ್ಮಲನಾಗಿಯುಂ ವೈರಿಗಳ ಮುಖದೊಳ್ ಮಾಲಿನ್ಯಮಂ ಮಾಳ್ಪಂ। ನಿರ್ಭಯನಾಗಿಯುಂ ಮಲೆಪರ್ಗೆ ಭಯಮ ನೀವಂ। ಮಹೀಭೃತ್ತಾಗಿಯುಂ ಮೃದುಪ್ರಕೃತಿಯೆನಿಸುವಂ। ದಾನಪತಿ ಯಾಗಿಯುಂ ಮದರಹಿತನೆನಿಸುಗುಂ। ಸನ್ಮಾರ್ಗನಿರತನಾಗಿಯುಂ ಪರ ದುರ್ಗಾಕ್ರಮಣನಿಪುಣನಕ್ಕುಂ। ಘನಮಾಗಿಯುಂ ಅಚಂಚಲನಕ್ಕುಂ। ದೇವರಾಜನಾಗಿಯುಂ ನರಪತಿಯೆನಿಸಿ ನೆಗೞ್ಗಂ.

ಇಂತಿರ್ಪ ಮಹಾರಾಯಂ ಧರೆಯಂ ಧರ್ಮದೊಳ್ ಪಾಲಿಪುದರ್ಕಂ

ಎಣ್ದೆಸೆಗಳಂ ಗೆಲ್ವುದರ್ಕಂ ನೆರವಾಗಿ ಮುಂ ಪಿರಿಯಣ್ಣಂ ಪೇೞ್ದಂತೆ ಚಿಕದೇವರಾಯನಂ ಯೌವರಾಜ್ಯದೊಳಲಂಕರಿಸಿದಂ.

ಯುವರಾಜ ಚಿಕದೇವರಾಯನ ವಿಜಯಯಾತ್ರೆ

ಇವನುಮುಪೇಂದ್ರನಂತೆ ಅರಸುಗೆಯ್ಮೆಯ ಪೊಱೆಯನಿತುಮಂ ಪೊತ್ತು ಜೈತ್ರಯಾತ್ರೋತ್ಸವಂಗಳನೊಡರ್ಚುತಿರೆ; ರಾಯನುಂ ಮಹೇಂದ್ರನಂತೆ ನಿರ್ಭರನಾಗಿ ದಿವ್ಯಭೋಗಂಗಳನನುಭವಿಸುತ್ತಿರೆ;

ಒರ್ಮೆ ಮಾನೋಮಿಯುಕ್ಕೆವದೊಳೆಣ್ದೆಸೆಯ ದೊರೆಗಳನಿಬರುಂ ಕಪ್ಪಕಾಣ್ಕೆಗಳಂ ತಂದೊಪ್ಪಿಸುವೆಡೆಯೊಳ್ ಇಕ್ಕೇರಿಯೊಳ್ ಶಿವಪ್ಪನಾಯಕಂ ತನ್ನಾಳ್ದನಪ್ಪ ವೀರಭದ್ರನಾಯಕನೊಳ್ ದ್ರೋಹಮನೆಣಿಸಿ ಅವನಂ ಕವಡಿನೊಳ್ ಮಡುಪಿ ಆದೊರೆತನಮಂ ಕೊಂಡು ತಾನುಂ ಪಾವುಡಮಂ ಕಾಣ್ಕೆಗಳಂ ಕಳುಪುವಿನಂ, ಆವನ ತಪ್ಪುಗೆಯ್ಮೆಗಳನೆಣಿಸಿ ನೀೞ್ಕರಿಸಿ, ಬಂದ ಗುಱಿಮಾನಸನಂ ಬಂದಂತೆ ಕಳುಪಲೊಡಂ; ಅದರ್ಕಾದೊರೆ ಪಿರಿದುಂ ಬಿಗುರ್ತು ನೆರವನಱಸಿ ಮುಂ ತನ್ನಂತೆ ಬಿಜ್ಜನಗರಿಯ ದೊರೆತನಮನಾಳ್ದ ತೆಲುಂಗರಾಯರ ಬಗೆಯೊಳೊರ್ವಂ ಶ್ರೀರಂಗರಾಯನೆನಿಸುವಂ ತನ್ನ ಬೇಲೂರ್ ಚಂದ್ರಗಿರಿ ಮುಂತಾದ ಕೋಂಟೆದುರ್ಗಂಗಳಂ ತುರುಕರ್ಗೆ ಸೂಱೆಗೊಟ್ಟು ತನ್ನ ಪರಿಜನಂಬೆರಸು ಪಿರಿಯತಿರುಕುಳಿಯೆನಿಸಿ ಚೆಂಜಿ ತಂಜಾವೂರ್ಮಧುರೆಯ ಮನೆಗಳೊಳ್ ಎಱಿದು ಅವರಿತ್ತುದಂ ತುತ್ತಿಯವರಂ ಬೆಸ........ಗಣೆಂದೆಟ್ದಿತ್ತಲುಮತ್ತಲುಂ ಪರಿದು ಎತ್ತಲುಂ ನೆಲೆಗಾಣದಿರೆ ಯವನನಱಸಿ ಕಂಡು ಕಾಲ್ಗೆಱಗಿಯೊಡಗೊಂಡು ಬಂದು ತನ್ನ ಮುಂದಣ ಕಡೆಯ ಗಡಿಯೆನಿಸುವ ಹಾಸನಬೇಲೂರ್ಗಳನಿತ್ತು ನೆಲೆಗೊಳಿಸಿಯವನತ್ತಣಿಂದೆ ಐಗೂರು ತರಿಯಕೆರೆ ಹರಪನಹಳ್ಳಿ ಚಿಂತನಕಲ್ ಮಧಗಿರಿ ಗಿಡುಗ..ಧ ಪಲವುಂ ಹಟ್ಟಿಕೊಟ್ಟದ ಧೊರೆಗಳ ಬಲ

ಮಂ ತನ್ನ ಮೂಲಬಲಮಂ ತನ್ನಂ ಸೇಱಿದ ತುಳುವ ಕೊಂಕಣ ಕೊಡಗು ಮಲಯಾಳಂಗಳ ಮೂಲಬಲಮಂ ಕೊಂಡು ಪಟ್ಟಣಕ್ಕೆ ನಡೆತಂದು, * ....

—————

* ಈಕಡೆ ಮುಗಿದಿಲ್ಲವೆಂದು ತೋರುತ್ತದೆ. ನಮಗೆ ದೊರೆತ ಮಾತೃಕೆಗಳಲ್ಲಿ ಗ್ರಂಥವು ಇಷ್ಟೇ ಇದೆ.